ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ, ದಿನಾಂಕ ೧ನೇ ಮಾರ್ಚಿ ೧೯೮೬, ಫಾಲ್ಗುಣ ೧೦, ೧೯೦೭ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಬೆಳಿಗ್ಗೆ ೯-೦೦ ಗಂಟೆ ೨೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್ ರವರು) ಪೀಠವನ್ನು ಅಲಂಕರಿಸಿದ್ದರು

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಚರ್ಚೆ

ಗೃಹ ಇಲಾಖಾ ಬೇಡಿಕೆಯ ಕ್ರ. ಸಂ. ೨೫

(ಮಂತ್ರಿಯವರಿಂದ ಉತ್ತರ)

೯-೨೦ ಪಿ.ಎಂ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು) —ಸನ್ಮಾನ್ಯ ಸಭಾಧ್ಯಕ್ಷರೇ, ಪೋಲೀಸ್ ಇಲಾಖೆ ಬೇಡಿಕೆಗಳ ಬಗ್ಗೆ ನಿನ್ನೆಯ ದಿವಸ ಸುಮಾರು ೧೧ ಜನ ಮಾನ್ಯ ಶಾಸನ ಸಭಾ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಇಲಾಖೆಯಲ್ಲಿ ನಡೆಯಬಹುದಾದಂಥ ಕೆಲವು ಅಪರಾಧಗಳು ಮತ್ತು ಈ ಇಲಾಖೆಯವರು ಅನುಸರಿಸಬೇಕಾದಂಥ ಸಂಯಮ, ನೀತಿ ನಿಯಮಗಳ ಬಗ್ಗೆ ಮಾತನಾಡಿದ್ದಾರೆ. ಮತ್ತೆ ಈ ಇಲಾಖೆಯಲ್ಲಿ ಹೆಚ್ಚು ಹೊರೆ ಹೊತ್ತಿರುವುದರಿಂದ, ಅವರಿಗೆ ಕೊಡಬೇಕಾಗಿರತಕ್ಕಂಥ ಸೌಲಭ್ಯಗಳು, ಖೂನಿ, ದರೋಡೆ ಮತ್ತು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ಸರಗಳ್ಳತನ ಇವುಗಳ ಮೇಲೆ ವಿವರಗಳನ್ನು ಕೊಡಬೇಕೆಂದು ಹೇಳಿ, ಡಕಾಯಿತರನ್ನು ಹಿಡಿಯುವುದರಲ್ಲಿ ವಿಫಲರಾಗಿದ್ದಾರೆ. ಎಂದು ಹೇಳಿದ್ದಾರೆ. ಮತ್ತು ನಾನಾ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ಕೂಡ ನಾನು, ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹುಶಃ ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುತ್ತಿರತಕ್ಕ ಪಕ್ಷದ ಆಡಳಿತ ವೈಖರಿ, ಲೋಪದೋಷಗಳು ಮತ್ತು ಅವುಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡತಕ್ಕಂಥಾದ್ದು ವಿರೋಧಪಕ್ಷದ ಮಾನ್ಯ ಸದಸ್ಯರುಗಳ ಕರ್ತವ್ಯವಾಗಿದೆ. ಆ ದೃಷ್ಟಿಯಲ್ಲಿ ವಿರೋಧಪಕ್ಷದ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಧರ್ಮಸಿಂಗ್‌ರವರು ಪ್ರಥಮವಾಗಿ ಈ ಬೇಡಿಕೆಗಳ ಮೇಲೆ ಮಾತನಾಡಿ, ಉತ್ತಮವಾಗಿರತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಅಷ್ಟೇ ತೀವ್ರವಾಗಿ, ನಮ್ಮ ಕರ್ತವ್ಯಗಳ ಬಗ್ಗೆ ತಿವಿದು ಹೇಳಿದ್ದಾರೆ. ಆ ದೃಷ್ಟಿಯಿಂದ, ಇಲ್ಲಿ ಸಾಕಷ್ಟು ಪ್ರಸ್ತಾಪ ಮಾಡುತ್ತಾ, ಕೆಲವು ವಿಷಯಗಳ ಬಗ್ಗೆ ಮಾಹಿತಿಗಳನ್ನು ಕೊಡುವುದು ನನ್ನ ಕರ್ತವ್ಯವೆಂದು ಹೇಳಿ, ಈ ದಿವಸ ಈ ಸಮಯವನ್ನು ಉಪಯೋಗಿಸಿಕೊಂಡು, ಅವರಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಕದ್ದಮೆಗಳನ್ನು ನೋಂದಾಯಿಸಿಕೊಳ್ಳತಕ್ಕ ವಿಷಯದಲ್ಲಿ ಈ ವರ್ಷ ಹೆಚ್ಚು ನೊಂದಾವಣೆಗಳಾಗಿವೆ. ಹೋದ ವರ್ಷಕ್ಕೆ ಹೋಲಿಸಿ ನೋಡಿದಾಗ, ೫-೬ ಸಾವಿರ ಮೊಕದ್ದಮೆಗಳು ಜಾಸ್ತಿಯಾಗಿವೆ. ಈ ಅಪರಾಧಗಳು ಸತ್ಯಕ್ಕೆ ದೂರವಾದವು ಎಂದು ಹೇಳಲಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹೊರ ರಾಜ್ಯಗಳಲ್ಲಿ ನಡೆಯುತ್ತಿರತಕ್ಕ, ನಡೆದಿರತಕ್ಕ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರೆ, ಬಹುಶಃ ಅದರಿಂದ ಮಾನ್ಯ

ಸದಸ್ಯರಿಗೆ ಅರ್ಥವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಈ ಅಪರಾಧಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಷ್ಟ್ರದಲ್ಲಿ, ಬೇರೆ ಬೇರೆ ಪ್ರಾಂತಗಳಲ್ಲೂ ಈ ಹೆಚ್ಚಳವನ್ನು ನಾವು ಕಾಣುತ್ತಿದ್ದೇವೆ. ಬಿಹಾರ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತಮಿಳುನಾಡು, ಆಂಧ್ರಪ್ರದೇಶ, ಈ ರಾಜ್ಯಗಳಲ್ಲೂ ಕೂಡ ಅಪರಾಧಗಳ ನೊಂದಾವಣೆ ಸಂಖ್ಯೆ ಹೆಚ್ಚಾಗಿದೆ. ಉತ್ತರ ಪ್ರದೇಶದಲ್ಲಿ ಖೂನಿಗಳು ೫೯೮೩, ಬಿಹಾರದಲ್ಲಿ ೩೦೮೪, ಮಧ್ಯಪ್ರದೇಶದಲ್ಲಿ ೨೬೦೦, ಮಹಾರಾಷ್ಟ್ರದಲ್ಲಿ ೨೧೧೨, ತಮಿಳುನಾಡಿನಲ್ಲಿ ೧೩೩೫, ಆಂಧ್ರಪ್ರದೇಶದಲ್ಲಿ ೧೩೪೭. ಕರ್ನಾಟಕ ರಾಜ್ಯದಲ್ಲಿ ೧೯೮೪ರಲ್ಲಿ ೧೧೧೭, ೧೯೮೫ರಲ್ಲಿ ೧೧೦೨ ಖೂನಿ ಪ್ರಕರಣಗಳ ವರದಿ ಆಗಿವೆ. ಅಪರಾಧಗಳು ಎಂದರೆ, ದರೋಡೆ, ಸುಲಿಗೆ, ಕಳ್ಳತನ, ಮಹಿಳೆಯರ ಮೇಲೆ ಅತ್ಯಾಚಾರ ಇವು ನಮ್ಮ ರಾಜ್ಯದಲ್ಲಷ್ಟೇ ಅಲ್ಲ, ದೇಶದ ಇತರೆ ರಾಜ್ಯಗಳಲ್ಲೂ ಕೂಡ ಈ ಹೆಚ್ಚಳವನ್ನು ಕಾಣುತ್ತೇವೆ. ಅದೇ ರೀತಿಯಲ್ಲಿ ಇಲ್ಲೂ ಕೂಡ ಸ್ವಲ್ಪಮಟ್ಟಿಗೆ, ಈ ಒಂದು ಸಂಖ್ಯೆ ಹೆಚ್ಚಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.— ಕರ್ನಾಟಕದ ಜನರ ಸಂಸ್ಕೃತಿಗೂ, ಬೇರೆ ಬೇರೆ ರಾಜ್ಯಗಳವರ ಸಂಸ್ಕೃತಿಗೂ ಹೆಚ್ಚು ವಿರುಪೇರಾಗುತ್ತದೆ. ಆದ್ದರಿಂದ ಬೇರೆ ರಾಜ್ಯಗಳಿಗೆ ಹೋಲಿಸದೇ ಇಲ್ಲಿ ಆಗಿರುವುದನ್ನು ಹೇಳಿ. ಅಪರಾಧಗಳ ಸಂಖ್ಯೆ ಕಡಿಮೆ ಎಂದು ಬೆನ್ನು ಚಪ್ಪರಿಸಿಕೊಳ್ಳುತ್ತೀರಿ. ನಮ್ಮ ಸಂಸ್ಕೃತಿ, ಬೇರೆ ರಾಜ್ಯಗಳವರ ಸಂಸ್ಕೃತಿಯಂತೆ ಅಲ್ಲ.

ಶ್ರೀ ಬಿ. ರಾಚಯ್ಯ — ನಾನು, ನಮ್ಮ ರಾಜ್ಯದ ಸಂಖ್ಯೆಯ ವಿವರಗಳನ್ನು ಹೇಳಿ, ಸಮರ್ಥಿಸಿಕೊಳ್ಳುತ್ತೇನೆ ಎಂದಲ್ಲ. ಸಾಧ್ಯವಾದ ಮಟ್ಟಿಗೂ ಈ ಹೆಚ್ಚಳ, ಹಿಂದಿನ ವರ್ಷಕ್ಕೆ ಹೋಲಿಸಿ ನೋಡಿದಾಗ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಈ ಕಾರಣಕ್ಕೋಸ್ಕರ ಈ ಸಂಖ್ಯೆಗಳನ್ನು ಕೊಟ್ಟಿದ್ದೇನೆ. ಅಪರಾಧಗಳು ಆಗಿರುವುದು ಸರಿ ಎಂದು ನಾನು ಸಮರ್ಥಿಸಿಕೊಳ್ಳುತ್ತಿಲ್ಲ. ಈ ಹೆಚ್ಚಳ ಸ್ವಲ್ಪಮಟ್ಟಿಗೆ ಹೊರರಾಜ್ಯಗಳಿಗೆ ಹೋಲಿಸಿ ನೋಡಿದಾಗ, ಇಲ್ಲೂ ಕೂಡ ಆಗಿದೆ. ಕರ್ನಾಟಕದ ಸಂಸ್ಕೃತಿಯೇ ಬೇರೆ, ಬೇರೆ ರಾಜ್ಯಗಳ ಸಂಸ್ಕೃತಿಯೇ ಬೇರೆ. ಇಲ್ಲಿ ಶಾಂತಪ್ರಿಯ ಜನ ಇದ್ದಾರೆ. ಇಂತಹ ಸಂದರ್ಭದಲ್ಲಿ ಜನರ ಮನಸ್ಸಿನ ಮೇಲೆ ಆಘಾತವಾಗಿದೆ ಎಂದು ಅರಿತುಕೊಂಡಿದ್ದೇನೆ. ನಗರಗಳಿಗೆ, ಹೊರ ರಾಜ್ಯದಿಂದ ಜನರು ಬಂದು ನೆಲೆಸತಕ್ಕಂಥ ಕಾಲದಲ್ಲಿ, ಅವರ ಗುಣಗಳು, ಇತ್ಯಾದಿಗಳ ಪರಿಣಾಮವಾಗಿ ಈ ಸಂಖ್ಯೆ ಹೆಚ್ಚಾಗಿದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆಗಿರತಕ್ಕಂತಾದ್ದನ್ನು ನಾನು ಸಮರ್ಥಿಸಿಕೊಳ್ಳುತ್ತಿಲ್ಲ. ಇತ್ತೀಚಿಗೆ ಆದ ದರೋಡೆಗಳು ಮತ್ತು ಮಂಗಳೂರಿನಲ್ಲಿ ಆದ ದರೋಡೆ ಪ್ರಕರಣ, ಕರ್ನಾಟಕದ ಜನರ ಮೇಲೆ ಪರಿಣಾಮ ಆಗಿದೆ. ಇವುಗಳು ಅಮಾನುಷವಾಗಿ ನಡೆದುದರಿಂದ, ಪತ್ರಿಕೆಗಳು ಮತ್ತು ಅನೇಕರು ಹೆಚ್ಚು ರೀತಿಯಲ್ಲಿ ಪ್ರತಿಭಟನೆ ಮಾಡಿದುದರಿಂದ, ಜನರ ಮನಸ್ಸಿನಲ್ಲಿ ಒಂದು ರೀತಿಯ ಭೀತಿಯ ವಾತಾವರಣ ಉಂಟಾಗಿದೆ ಎಂಬುದನ್ನು ಅಲ್ಲಗಳೆಯುತ್ತಿಲ್ಲ. ಅದಕ್ಕೋಸ್ಕರವಾಗಿಯೇ ಹೇಳಿದೆ. ಇಂತಹ ಅಪರಾಧಗಳನ್ನು ರಿಜಿಸ್ಟರ್ ಮಾಡಿಕೊಂಡು, ಅಪರಾಧಗಳನ್ನು ಪತ್ತೆ ಹಚ್ಚುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದೇವೆಂದು ಹಿಂದೆ ಕೂಡ ಹೇಳಿದ್ದೇನೆ. ಈ ದೃಷ್ಟಿಯಿಂದ ಅಂಕಿ ಅಂಶಗಳನ್ನು ಕೊಡುವುದರಿಂದ, ನಾನು ಸಮರ್ಥಿಸಿಕೊಳ್ಳುತ್ತೇನೆ ಎಂದಲ್ಲ. ಆದಾಗ್ಯೂ ಸ್ವಲ್ಪಮಟ್ಟಿಗೆ ನಮ್ಮಲ್ಲೂ ಕೂಡ ಈ ಪ್ರಕರಣಗಳು ಹೆಚ್ಚಳವಾಗಿದೆ ಅದಕ್ಕೆ ಎಚ್ಚೆತ್ತುಕೊಂಡು ಕೆಲಸ ಮಾಡಬೇಕಾಗಿದೆ. ಇನ್ನು ಪರಿಶಿಷ್ಟ ಜಾತಿಗೆ ಸಂಬಂಧಪಟ್ಟ ವಿಷಯವನ್ನು ಮಾನ್ಯ ಧರ್ಮಸಿಂಗ್ ಅವರು ಹೇಳಿದರು. ಅವರ ಮೇಲಾಗಿರತಕ್ಕ ಕೆಲವು ಅಪರಾಧ ಪ್ರಕರಣಗಳು ಏನಿವೆ ಅವು, ೧೯೮೨ರಲ್ಲಿ ೩೬೯, ೧೯೮೩ರಲ್ಲಿ ೧೯೬, ಪ್ರಕರಣಗಳು ವರದಿಯಾಗಿವೆ. ೧೯೮೪ರಲ್ಲಿ ೧೭೧. ೧೯೮೫ರಲ್ಲಿ ೨೮೨ ಪ್ರಕರಣಗಳು ವರದಿಯಾಗಿದ್ದು ಶೀಘ್ರವಾಗಿ ತನಿಖೆ ಮಾಡಿ, ನ್ಯಾಯಾಲಯದ ಮುಂದೆ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ. ಅವರಿಗೆ ಹೆಚ್ಚಿನ ರೀತಿಯಲ್ಲಿ ನಷ್ಟ ಉಂಟಾಗಿದ್ದರೆ, ಕೆಲವು ಪರಿಹಾರಗಳನ್ನು ಕೊಡುವುದಕ್ಕೆ ನಾವು ಎಲ್ಲಾ ರೀತಿಯ ಪ್ರಯತ್ನವನ್ನೂ ಮಾಡುತ್ತೇವೆ. ಬಡವರಾಗಿರತಕ್ಕವರಿಗೆ, ದಲಿತರಿಗೆ ಎಲ್ಲಿ ಅತ್ಯಾಚಾರಗಳು ಆಗಿವೆ ಅವುಗಳನ್ನು ನೊಂದಾಯಿಸಿಕೊಳ್ಳುವುದಕ್ಕೋಸ್ಕರ ವಿಶೇಷ ಘಟಕಗಳನ್ನು, ಬೆಂಗಳೂರಿನಲ್ಲಿ ಡಿ. ಐ. ಜಿ. ಅವರ ನೇತೃತ್ವದಲ್ಲಿ ನೇಮಿಸಿದ್ದೇವೆ. ಬೆಂಗಳೂರು ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲೂ ಕೂಡ ಅವರಿಗೆ ಸಹಾಯ ಮಾಡುವುದಕ್ಕೆ ಕೆಲವು ಅಧಿಕಾರಿಗಳನ್ನೂ ಕೂಡ ಈ ಘಟಕಗಳಿಗೆ ನಾವು ನೇಮಿಸಿದ್ದೇವೆ. ಇತ್ತೀಚಿಗೆ ಸಮಾಜದಲ್ಲಿರತಕ್ಕಂಥ ಅನೇಕ ಏರುಪೇರುಗಳು ಏನಿವೆ, ಜಾತೀಯ ಆಧಾರದ ಮೇಲೆ ಇಟ್ಟುಕೊಂಡಿರತಕ್ಕ ಹೋಟೆಲ್‌ಗಳು, ಜಾತೀಯ ಆಧಾರದ ಕೆಲವು ಸಾಮಾಜಿಕ ಕಾರ್ಯಕ್ರಮ

ಗಳು, ಇವುಗಳನ್ನು ಹೋಗಲಾಡಿಸಬೇಕೆಂದು ಕೇಂದ್ರ ಸರ್ಕಾರದವರು ಒಂದು ಮಸೂದೆಯನ್ನು ಜಾರಿಯಲ್ಲಿ ತಂದಿದ್ದರೆ, ಮೊದಲನೇ ಸಾರಿ ಕರ್ನಾಟಕದಲ್ಲಿ ಡಿ. ಐ. ಜಿ. ಅವರನ್ನು ನೇಮಿಸಿ, ೪ ಜಿಲ್ಲೆಗಳಲ್ಲೂ ಕೂಡ ಸಂಬಂಧಪಟ್ಟ ಅಧಿಕಾರಿಗಳನ್ನು ನೇಮಿಸಿ ಘಟಕಗಳನ್ನು ಪ್ರಾರಂಭ ಮಾಡಿದ್ದೇವೆ. ಆದ್ದರಿಂದ ಬಂದಂಥ ಅರ್ಜಿಗಳು ಏನಿವೆ, ದೂರುಗಳು ಏನಿವೆ ಅವುಗಳನ್ನೆಲ್ಲಾ ನೋಂದಾಯಿಸಿಕೊಂಡು, ತನಿಖೆ ಪ್ರಾರಂಭ ಮಾಡುತ್ತಾರೆ. ಈ ಸಂದರ್ಭದಲ್ಲಿ ತನಿಖೆಯಲ್ಲಿ ಬಹುಶಃ ಶಿಕ್ಷೆಗೊಳಗಾಗತಕ್ಕಂಥದು ಬಹಳ ಕಡಿಮೆ. ಸಾಧ್ಯವಾದಮಟ್ಟಿಗೂ ಒಬ್ಬರಿಗೊಬ್ಬರು ಸೌಹಾರ್ದದಿಂದ ನಡೆದುಕೊಂಡು ಹೋಗಬೇಕೆಂದು ಹೋಗಬೇಕೆಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಸಾಮಾಜಿಕ ಬದಲಾವಣೆ ಆಗಬೇಕು, ಸಮಾಜದಲ್ಲಿ ಮೇಲ್ವರ್ಗ ಎಂದು ಯಾರಿದ್ದಾರೆ ಅವರು ಅತ್ಯಂತ ಸಹಾನುಭೂತಿಯಿಂದ ವರ್ತಿಸಬೇಕು. ಅವರಿಗೂ ಒಂದು ರೀತಿಯ ಆತ್ಮಗೌರವ ಇದೆ, ಮಾನವೀಯತೆ ಇದೆ ಅವರನ್ನೂ ನಮ್ಮ ಜೊತೆಯಲ್ಲಿ ಕೊಂಡೊಯ್ಯುವುದು ನಮ್ಮ ಕರ್ತವ್ಯವೆಂದು ಹೇಳಿ, ಪ್ರಯತ್ನ ಮಾಡಬೇಕು. ಅವರಲ್ಲಿರತಕ್ಕ ಮೌಢ್ಯತೆ ಮತ್ತು ಕೆಲವಾರು ದುಷ್ಟ ಚಟಗಳನ್ನು ಹೋಗಲಾಡಿಸುವುದಕ್ಕೆ ಸಮಾಜದ ಕಾರ್ಯಕರ್ತರು ಪ್ರಯತ್ನ ಮಾಡಬೇಕು. ಈ ಕೆಲಸಗಳನ್ನು ಮಾಡುವುದರಿಂದ ಅವರ ಮೇಲೆ ಆಗತಕ್ಕ ಅತ್ಯಾಚಾರಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ. ಇತ್ತೀಚೆಗೆ ಅದರಲ್ಲೂ ಕೂಡ ವಿದ್ಯಾವಂತರು ಮುಂದೆ ಬರುತ್ತಿದ್ದಾರೆ. ತಮ್ಮ ಹಕ್ಕುಬಾಧ್ಯತೆಗಳನ್ನು ಅರಿತುಕೊಳ್ಳುತ್ತಿದ್ದಾರೆ. ಇಂತಹ ಅಪರಾಧಗಳು ಆದ ಕಾಲದಲ್ಲಿ ಸಾರ್ವಜನಿಕರೂ ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಈ ಒಂದು ದೃಷ್ಟಿಯಲ್ಲಿ ನೀವು ಇನ್ನು ಹೆಚ್ಚಿನ ರೀತಿಯಲ್ಲಿ ನೆರವನ್ನು ಕೊಡಬೇಕೆಂದು ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದೇವೆ.

ಬಹುಶ: ಹರಿಜನರು ಅಥವಾ ದಲಿತ ಪಂಗಡದವರು ಎಲ್ಲೆಲ್ಲಿ ಇದ್ದಾರೋ ಅವರು ಪೋಲೀಸ್ ಸ್ಟೇಷನ್‌ಗೆ ಹರಕು ಬಟ್ಟೆಯಲ್ಲಾದರೂ ಹೋಗಲಿ, ಕೊಳಕು ಬಟ್ಟೆಯಲ್ಲಾದರೂ ಹೋಗಲಿ ಅವರನ್ನು ತಿರಸ್ಕಾರದಿಂದ ಕಾಣದೆ ಅವರು ಹೇಳುವುದನ್ನು ಸಮಾಧಾನದಿಂದ ಕೇಳಿ ಅವರ ಕಂಪ್ಲೆಂಟನ್ನು ನೋಂದಾಯಿಸಿಕೊಂಡು ಅವರಿಗೆ ಸೂಕ್ತ ಪರಿಹಾರ ಕೊಡಬೇಕೆಂಬ ಆದೇಶ ಕೊಟ್ಟಿದ್ದೇನೆ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ ಇತ್ತೀಚೆಗೆ ಇದರ ಬಗ್ಗೆ ಅನೇಕ ನಿದರ್ಶನಗಳು ಬಂದಿವೆ. ಬಹುಶ: ಮಂಗಳೂರಿನಲ್ಲಿ ದಲಿತ ವಿದ್ಯಾರ್ಥಿಗಳು ಮತ್ತು ಸವರ್ಣೀಯರ ಮನೆಯಲ್ಲಿ ಊಟ ಮಾಡುವುದಕ್ಕೆ ಹೋದಾಗ ಸವರ್ಣೀಯ ಮುಖಂಡರು ಅವರ ತಲೆ ಬೋಳಿಸಿ ದಂಡವನ್ನು ವಸೂಲಾಡಿರುವುದು ಗೊತ್ತಾದ ಮೇಲೆ ಆ ಕೇಸನ್ನು ನೋಂದಾಯಿಸಿಕೊಂಡು ಅವರ ಮೇಲೆ ಒಂದು ಕೇಸನ್ನು ದಾಖಲುಮಾಡಿಕೊಂಡಿದ್ದೇವೆ. ಈ ವಿಷಯ ಕೇಂದ್ರ ಸರ್ಕಾರದ ಗಮನಕ್ಕೂ ಬಂದಿದೆ. ಇಂಥಾ ಘಟನೆಗಳು ಮುಂದೆ ಆಗದೇ ಇರುವ ರೀತಿಯಲ್ಲಿ, ಯಾವ ಅಪರಾಧಿಗಳು ಪೋಲೀಸ್ ಸ್ಟೇಷನ್‌ಗೆ ಬರುತ್ತಾರೋ ಅವರ ಕಂಪ್ಲೆಂಟನ್ನು ನೋಂದಾಯಿಸಿಕೊಂಡು ಅವರನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳುವ ಹಾಗೆ ಹೇಳಿದ್ದೇನೆ. ಅದಕ್ಕೆ ಸಾಕ್ಷಿ ರುಜುವಾತು ಇಲ್ಲದೇ ಮಾಡುವ ಹಾಗೆ ಇಲ್ಲ. ಇದರಲ್ಲಿ ಸಾಕ್ಷಿ, ರುಜುವಾತು ಬರುವುದು ಬಹಳ ಕಡಿಮೆ ಇದೆ. ಆದುದರಿಂದ ಈ ದೃಷ್ಟಿಯಲ್ಲಿ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಬೇಕಾದರೆ ಸಾರ್ವಜನಿಕರು ವಿಶೇಷವಾಗಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಎಲ್ಲರೂ ಕೂಡ ಇದರ ಬಗ್ಗೆ ಪ್ರಯತ್ನ ಮಾಡಬೇಕು. ಈ ದೃಷ್ಟಿಯಲ್ಲಿ ನಾವು ನೋಂದಾಯಿಸಿರತಕ್ಕಂಥಾ ಪ್ರಕರಣಗಳನ್ನು ನೋಡಿದಾಗ ಈ ಸಂಖ್ಯೆ ಬಹಳ ಕಡಿಮೆ ಇದೆ. ದಾಖಲ್ ಮಾಡಿಕೊಂಡಿರುವ ಕೇಸುಗಳು ಕೆಲವು ಹಾಗೆಯೇ ಇವೆ, ಇನ್ನೂ ಕೆಲವು ಸಂದರ್ಭಗಳಲ್ಲಿ ಸುಳ್ಳು ಇರುತ್ತದೆ. ಅದರಲ್ಲಿ ಕೆಲವು ಪ್ರಕರಣಗಳು ವರದಿಯಾಗಿದೆ. ಈ ದೃಷ್ಟಿಯಲ್ಲಿ ಹೇಳುವ ಪಕ್ಷದಲ್ಲಿ ಈ ಪಿ. ಸಿ. ಆರ್. ಆಕ್ಟ್ ಏನು ಇದೆ ಮತ್ತು ದಲಿತ ಪಂಗಡದವರ ಮೇಲೆ ಬರತಕ್ಕಂಥಾ ಕೇಸು ಏನು ಇದೆ ಅವುಗಳೆಲ್ಲಾ ಪೂರ್ಣವಾಗಿ ಯಶಸ್ವಿಯಾಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದಾಗ್ಯೂ ಕೂಡ ಆ ಬಗ್ಗೆ ಹೆಚ್ಚಿಗೆ ಗಮನ ಕೊಟ್ಟು ಅವರಿಗೆಲ್ಲಾ ರಕ್ಷಣೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಮ್ಮ ಗಮನಕ್ಕೆ ನಾನು ಈ ಒಂದು ವಿಷಯವನ್ನು ತರುತ್ತೇನೆ. ಅದೇನೆಂದರೆ ೧೯೮೫ನೇ ಇಸವಿಯಲ್ಲಿ ೭೭೮೫ ಮೊಖದ್ದಮೆಗಳನ್ನು ನೋಂದಾಯಿಸಿಕೊಂಡಿದ್ದರಲ್ಲಿ ೫೭೬೫ ಕೇಸುಗಳಲ್ಲಿ ಸಜಾ ಆಗಿದೆ. ೧೭೩೦ ಪ್ರಕರಣಗಳಲ್ಲಿ ಅಪರಾಧಿಗಳನ್ನು ಖುಲಾಸೆ ಮಾಡಲಾಗಿದೆ ೧೫೮೬ ಪ್ರಕರಣಗಳಲ್ಲಿ ರಾಜಿ ಆಗಿದೆ. ಅದರಲ್ಲಿ ೩೯೧೯ ಮೊಖದ್ದಮೆಗಳು ನಿಜವಲ್ಲವೆಂದು ಸಾಬೀತಾಗಿದೆ. ಇನ್ನು ೨೯೮೬೭ ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿದೆ. ೨೧೭೩೦ ಪ್ರಕರಣಗಳು ತನಿಖಾ ಹಂತದಲ್ಲಿ ಇವೆ. ಇನ್ನು ೧೯೮೫ರಲ್ಲಿ ದಾಖಲಾದ ೮೫೯೯೧ ಮೊಖದ್ದಮೆಗಳಲ್ಲಿ ೬೦೪೭ ಕೇಸುಗಳಲ್ಲಿ ಅಪರಾಧಿಗಳಿಗೆ

ಶಿಕ್ಷೆಯಾಗಿದೆ. ೧೪೪೦ ಪ್ರಕರಣಗಳಲ್ಲಿ ಅಪರಾಧಿಗಳು ಖುಲಾಸೆ ಆಗಿದೆ, ೧೭೩೫ ಪ್ರಕರಣಗಳಲ್ಲಿ ರಾಜಿ ಆಗಿದೆ. ೫೨೮೪ ಕೇಸುಗಳು ನಿಜವಲ್ಲ ಎಂದು ಆಗಿದೆ. ೩೫೨೪೪ ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿ ಇದೆ. ಇನ್ನು ೧೮೦೭೪ ಕೇಸುಗಳ ತನಿಖೆ ಮುಂದುವರೆಯುತ್ತಾ ಇದೆ. ನಿಮಗೆ ಪತ್ತೆಯಾದ ಮೊಕದ್ದಮೆಗಳ ಬಗ್ಗೆ ಹೇಳಬೇಕಾದರೆ ೧೯೮೨ರಲ್ಲಿ ೬[illegible] ಪರ್ಸೆಂಟ್, ೧೯೮೩ರಲ್ಲಿ ೫೨.೪೧ ಪರ್ಸೆಂಟ್ ೧೯೮೪ರಲ್ಲಿ ೫೧.೯೬ ಪರ್ಸೆಂಟ್, ೧೯೮೫ರಲ್ಲಿ ೫೭.೪೬ ಪರ್ಸೆಂಟ್ ಕೇಸುಗಳು ಪತ್ತೆ ಆಗಿವೆ. ಇದನ್ನು ನೋಡಿದರೆ ಈ ಇಲಾಖೆ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುತ್ತಾ ಇದೆ ಎನ್ನುವುದು ವೇದ್ಯವಾಗುತ್ತದೆ. ಈ ಇಲಾಖೆ ಏನೂ ಮಾಡಲಿಲ್ಲ. ಅಂತ ಹೇಳುವುದು ಸರಿಯಲ್ಲ,

ಇನ್ನು ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಮಹಿಳೆಯರ ಅತ್ಯಾಚಾರದ ಬಗ್ಗೆ ವಿವರವಾಗಿ ಹೇಳಿಲ್ಲ ಎಂದು ಹೇಳಿದರು. ಈ ಬಗ್ಗೆ ೧೩೧ ಪ್ರಕರಣಗಳು ಬಂದಿವೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಈ ಇಲಾಖೆ ಏನೂ ಮಾಡಲಿಲ್ಲ ಎಂದು ಹೇಳಲಿಲ್ಲ. ಈ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ, ನಮಗೆ ಇದರ ಬಗ್ಗೆ ಹೆಚ್ಚು ಮಾಹಿತಿಯನ್ನು ಒದಗಿಸಿ ಕೊಟ್ಟರೆ ಈ ಬಗ್ಗೆ ಮಾತನಾಡುವುದಕ್ಕೆ ಅವಕಾಶವಾಗುತ್ತಿತ್ತು. ಈ ಬಗ್ಗೆ ಯಾವ ರಿಪೋರ್ಟನ್ನೂ ಒದಗಿಸಿಕೊಟ್ಟಿಲ್ಲ, ಒದಗಿಸಿ ಕೊಟ್ಟಿದ್ದರೆ ಚೆನ್ನಾಗಿತ್ತು ಅಂತ ಹೇಳಿದ್ದು.

ಶ್ರೀ ಬಿ. ರಾಚಯ್ಯ.—ಅದಕ್ಕೋಸ್ಕರವಾಗಿ ನಾನು ಈಗ ಅದರ ಅಂಕಿಅಂಶಗಳನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಯಾರಾದರೂ ಏನಾದರೂ ಕ್ಲಾರಿಫಿಕೇಷನ್ ಕೇಳಬೇಕಾದರೆ ಮಾನ್ಯ ಮಂತ್ರಿಗಳ ಉತ್ತರ ಮುಗಿದ ಮೇಲೆ ಕೇಳಿ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ವಾಸ್ತವಿಕವಾದ ಸಂಗತಿ ಹೇಳಬೇಕಾದರೆ ಈ ಇಲಾಖೆಯಲ್ಲಿ ಯಾವ್ಯಾವುದರಲ್ಲಿ ಎಷ್ಟೆಷ್ಟು ಕೇಸುಗಳು ಬಂದಿವೆ ಅನ್ನುವುದರ ಬಗ್ಗೆ ಹೇಳಬೇಕಾದರೆ, ಇದರ ಬಗ್ಗೆ ವರದಿಯನ್ನು ಕೊಡುವ ಹಾಗೆ ಮಾನ್ಯ ಅಧ್ಯಕ್ಷರು ಅವರಿಗೆ ಉಪದೇಶ ಮಾಡಬೇಕಾಗಿದೆ. ನಮಗೆ ಪೋಲೀಸ್ ರಿಪೋರ್ಟಿನ ವರದಿ ಕೊಡುವುದಿಲ್ಲ. ನಾವು ಭಾಷಣ ಪ್ರಾರಂಭ ಮಾಡುವ ಮೊದಲೇ ಮಾನ್ಯ ಮಂತ್ರಿಗಳು ಈ ವರದಿಯನ್ನು ಒದಗಿಸಿಕೊಟ್ಟಿದ್ದರೆ ಚೆನ್ನಾಗಿತ್ತು. ಅದನ್ನು ನೋಡಿಕೊಂಡು ನಾವು ಭಾಷಣ ಮಾಡುತ್ತಿದ್ದೆವು. ಅದು ಇಲ್ಲದೇ ಹೋದದ್ದರಿಂದ ಪತ್ರಿಕಾ ವರದಿಯ ಆಧಾರದ ಮೇಲೆ ನಾವು ಹೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮಹಿಳೆಯರ ಅತ್ಯಾಚಾರದ ಬಗ್ಗೆ ಹೇಳಬೇಕಾದರೆ ೧೯೮೪ರಲ್ಲಿ ೧೩೧ ಅತ್ಯಾಚಾರ (ರೇಪ್) ಪ್ರಕರಣಗಳು ವರದಿಯಾಗಿದ್ದವು. ೧೯೮೫ರಲ್ಲಿ ೮೮ ಪ್ರಕರಣಗಳು ವರದಿ ಆಗಿವೆ. ಸನ್ಮಾನ್ಯ ಸದಸ್ಯರ ಗಮನವನ್ನು ಬೇರೆ ರಾಜ್ಯಗಳಲ್ಲಿ ವರದಿಯಾದ ಪ್ರಕರಣಗಳ ಬಗ್ಗೆ ಸೆಳೆಯಲು ಯೋಚಿಸಿದ್ದೇನೆ. ಈ ಎರಡು ವರ್ಷಗಳಲ್ಲಿ ಹೆಣ್ಣುಮಕ್ಕಳ ಅತ್ಯಾಚಾರಗಳ ಬಗ್ಗೆ ಆಗಿರುವುದು ಹೇಳುತ್ತೇನೆ. ೧೯೮೪ರಲ್ಲಿ ೧೩೧, ೧೯೮೫ರಲ್ಲಿ ೮೮ ಪ್ರಕರಣಗಳು ಆಗಿವೆ. ಇದರಿಂದ ನಮಗೆ ಅರ್ಥವಾಗುತ್ತದೆ ಈ ಎರಡು ವರ್ಷದಲ್ಲಿ ಇದರ ಬಗ್ಗೆ ಎಷ್ಟು ಇಳಿಮುಖವಾಗಿದೆ ಎನ್ನುವುದು. ಇದರ ಜೊತೆಗೆ ಬೇರೆ ರಾಜ್ಯಗಳ ಅಂಕಿ ಅಂಶಗಳನ್ನೂ ಕೊಡಲು ಬಯಸುತ್ತೇನೆ. ಮಧ್ಯ ಪ್ರದೇಶದಲ್ಲಿ ೧೩೦೫, ಉತ್ತರ ಪ್ರದೇಶದಲ್ಲಿ ೮೯೭, ಮಹಾರಾಷ್ಟ್ರದಲ್ಲಿ ೬೭೫, ಪಶ್ಚಿಮ ಬಂಗಾಳದಲ್ಲಿ ೫೯೪, ಬಿಹಾರದಲ್ಲಿ ೪೭೫, ರಾಜಾಸ್ಥಾನದಲ್ಲಿ ೩೭೯, ಆಂಧ್ರ ಪ್ರದೇಶದಲ್ಲಿ ೨೭೬, ತಮಿಳ್‌ನಾಡ್‌ನಲ್ಲಿ ೨೦೭, ಗುಜರಾತ್‌ನಲ್ಲಿ ೧೫೯, ಕೇರಳದಲ್ಲಿ ೧೨೪ ಕರ್ನಾಟಕದಲ್ಲಿ ಮೇಲೆ ಹೇಳಿದಂತೆ ೧೩೧. ಈ ವರ್ಷ ಆಗಿರುವುದು ೮೮. ಇದನ್ನು ಬೇರೆ ರಾಜ್ಯಕ್ಕೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಈ ಪಿಡುಗು ಎಷ್ಟು ಕಡಿಮೆಯಾಗಿದೆ ಅನ್ನುವುದು ಅರ್ಥವಾಗುತ್ತದೆ. ಅಷ್ಟೇ ಅಲ್ಲದೆ ಸಾಧ್ಯವಾದ ಮಟ್ಟಿಗೆ ಈ ಒಂದು ಪಿಡುಗು ಸಂಪೂರ್ಣವಾಗಿ ಇಲ್ಲದೇ ಇರುವ ಹಾಗೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಬಹುಶಃ ಈ ಹೆಣ್ಣುಮಕ್ಕಳು ಏನು ಇದ್ದಾರೆ ಇವರನ್ನು ವಿಶೇಷವಾಗಿ ಗೌರವಯುತವಾಗಿ ನೋಡಿಕೊಳ್ಳುವ ಹಾಗೆ ಅವರು ರಾಷ್ಟ್ರದಲ್ಲಿ ಹೊರಗೇ ಇರಲಿ, ಒಳಗೇ ಇರಲಿ. ಅವರ ಮೇಲೆ ಅತ್ಯಾಚಾರ ಆಗದೇ ಇದ್ದ ಹಾಗೆ ನೋಡಿಕೊಳ್ಳುವುದು ನಮ್ಮ ಧರ್ಮ. ಈ ಮಹಿಳೆಯ ಅತ್ಯಾಚಾರದ ವಿಷಯದಲ್ಲಿ ಇನ್ನೂ ಹೆಚ್ಚು ನಿಗಾ ಇಟ್ಟು ಕೆಲಸ ಮಾಡಿ, ಮುಂದೆ ಆ ರೀತಿಯಾಗಿ ನಡೆಯದೇ ಇರುವ ಹಾಗೆ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಈ ವರ್ಷ ಎಷ್ಟು ಅತ್ಯಾಚಾರವಾಗಿದೆಯೋ

ಅದು ಮುಂದಿನ ವರ್ಷಗಳಲ್ಲಿ ಇನ್ನೂ ಕಡಿಮೆ ಆಗುವ ಹಾಗೆ ಮಾಡುವ ಉದ್ದೇಶ ಇದೆ. ಅದಕ್ಕೋಸ್ಕರ ವಾಗಿ ಈ ವಿಷಯದಲ್ಲಿ ಈ ಇಲಾಖೆ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುತ್ತಾ ಇದೆ ಎಂದು ಹೇಳು ವುದರಲ್ಲಿ ಅಡ್ಡಿ ಇಲ್ಲ ಎಂದು ಹೇಳುತ್ತೇನೆ.

ಇನ್ನು ವರದಕ್ಷಿಣೆ ಸಾವಿನ ಬಗ್ಗೆ ಮಾಹಿತಿ ನೀಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಿಜ, ಅದರ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಈಗ ಆ ರಿಪೋರ್ಟನ್ನು ಕೊಡುವುದಕ್ಕೆ ಈ ಸಭೆಯ ಅನುಮತಿಯನ್ನು ಕೇಳುತ್ತೇನೆ. ಈ ವರದಕ್ಷಿಣೆ ಸಾವಿನ ಬಗ್ಗೆ ೧೯೮೩ರಲ್ಲಿ ೩೧ ಪ್ರಕರಣಗಳು ವರದಿಯಾಗಿದ್ದರೆ ಅವುಗಳಲ್ಲಿ ೧೦ ಪ್ರಕರಣಗಳು ನಿಜವಲ್ಲವೆಂಬ ವರದಿಯನ್ನು ಸಲ್ಲಿಸಲಾಗಿದೆ. ೨೧ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಛಾರ್ಜ್‌ಶೀಟ್ ಕಳು ಸಲಾಯಿತು. ಒಂದು ಕೇಸಿನಲ್ಲಿ ಶಿಕ್ಷೆಯಾಗಿದೆ. ಒಂದು ಕೇಸು ಖುಲಾಸೆ ಯಾಗಿದೆ. ೧೯ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆಯಲ್ಲಿವೆ. ೧೯೮೪ರಲ್ಲಿ ೪೮ ಪ್ರಕರಣಗಳು ವರದಿಯಾಗಿದ್ದವು. ಅವುಗಳಲ್ಲಿ ೬ ಪ್ರಕರಣಗಳಲ್ಲಿ ಅವು ನಿಜವಲ್ಲವೆಂಬ ವರದಿಯನ್ನು ಸಲ್ಲಿಸಲಾಯಿತು. ೨೮ ಪ್ರಕರಣಗಳಲ್ಲಿ ಛಾರ್ಜ್‌ಶೀಟ್ ಆಗಿವೆ. ೨ ಪ್ರಕರಣಗಳಲ್ಲಿ ಖುಲಾಸೆಗೊಂಡು ೨೬ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ. ೧೯೮೫ರಲ್ಲಿ ೩೧ ಪ್ರಕರಣಗಳು ವರದಿಯಾಗಿ ೧೦ ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ. ಒಂದು ಕೇಸಿನಲ್ಲಿ ಸಜ ಆಗಿದೆ. ೨೦ ಕೇಸುಗಳು ತನಿಖಾ ವ್ಯವಸ್ಥೆಯಲ್ಲಿವೆ. ತನಿಖೆಯನ್ನು ಶೀಘ್ರವಾಗಿ ಮುಗಿಸಬೇಕೆಂದು ಆದೇಶ ನೀಡಲಾಗಿದೆ. ಇಂತಹ ಪ್ರಕರಣಗಳು ವರದಿಯಾದಾಗ ಸಿ.ಓ.ಡಿ. ಘಟಕದವರು ಶೀಘ್ರವಾಗಿ ತನಿಖೆಯನ್ನು ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ಡೌರಿಗೋಸ್ಕರ ಮತ್ತು ವರದಕ್ಷಿಣೆಯ ಪಿಡುಗಿಗೆ ಅವರ ಕಷ್ಟವನ್ನು ತಾಳಲಾರದೆ ಸೂಯಿಸೈಡ್ ಮಾಡಿಕೊಳ್ಳುವ ಸಂದರ್ಭ ಇರುವುದರಿಂದ ಅವೆಲ್ಲವನ್ನೂ ಗೊತ್ತಾದ ಕೂಡಲೇ ಸಿ.ಓ.ಡಿ.ಯವರು ಶೀಘ್ರವಾಗಿ ತನಿಖೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ಪ್ರಕರಣ ಎಲ್ಲೇ ಆಗಲಿ ಈ ಬಗ್ಗೆ ಅನುಮಾನಾಸ್ಪದವಾದಂಥಾ ಸಾವು ಆಗಿದ್ದಲ್ಲಿ ಅದರ ಬಗ್ಗೆ ಸಿ.ಓ.ಡಿ.ಯವರು ತನಿಖೆ ನಡೆಸಬೇಕು ಎಂದು ಹೇಳಿದ್ದೇನೆ. ಇಬ್ಬರು ಡಾಕ್ಟರ್‌ಗಳು ಪೋಸ್ಟ್ ಮಾರ್ಟಮ್ ಮಾಡಿ ಸರಿಯಾಗಿ ಎಕ್ಸಾಮಿನ್ ಮಾಡಿ ಆ ವಿಚಾರದಲ್ಲಿ ನಿರ್ದೇಶನ ಕೊಡಬೇಕೆಂದೂ ಕೂಡಾ ನಾನು ಆದೇಶ ನೀಡಿದ್ದೇನೆ.

ಇನ್ನು ಡಕಾಯಿತಿ ಪ್ರಕರಣಗಳು ಬೆಂಗಳೂರು–ಮಂಗಳೂರು ಭಾಗದಲ್ಲಿ ಅತ್ಯಂತ ಅಮಾನುಷ ವಾದ ರೀತಿಯಲ್ಲಿ ಇದು ನಡೆದಿದೆ. ಇದರಲ್ಲಿ ದೊಡ್ಡವರು, ಮಧ್ಯಮ ವರ್ಗದವರು, ಚಿಕ್ಕವರು, ಸಣ್ಣವರು ಎನ್ನುವುದನ್ನು ನೋಡದೆ ಅಮಾನುಷವಾದ ರೀತಿಯಲ್ಲಿ ಅವರ ಮನೆಗೆ ನುಗ್ಗಿ ಬೀಗ ಮುರಿದು, ಅವರನ್ನು ಹೊಡೆದು ಸಾಯಿಸಿರುವ ಪ್ರಕರಣಗಳೂ ಇವೆ

ನಮ್ಮ ರಾಜ್ಯದಲ್ಲಿ ಯಾವಾಗಲೂ ಇಷ್ಟೊಂದು ಅಮಾನುಷವಾದಂಥ ಘಟನೆಗಳು ನಡೆದಿಲ್ಲ. ನಮ್ಮ ರಾಜ್ಯದಲ್ಲಿರುವಂಥ ಪ್ರತಿಯೊಬ್ಬ ಪ್ರಜೆಯೂ ಈ ಕಡೆ ಗಮನಹರಿಸಿದ್ದಾರೆ. ಬೆಂಗಳೂರು ಮತ್ತು ಮಂಗಳೂರಿನಲ್ಲಿ ಜನರು ನಿದ್ರೆಯಿಲ್ಲದೆ ಅನೇಕ ರಾತ್ರಿಗಳನ್ನು ಕಳೆದಿದ್ದಾರೆ. ಜನರಲ್ಲಿ ಬಹಳ ಮಟ್ಟಿಗೆ ಭೀತಿ, ಭಯ ಉಂಟಾಗಿದೆ ಎನ್ನುವುದನ್ನು ನಾನು ಹಿಂದೆ ಒಪ್ಪಿಕೊಂಡಿದ್ದೇನೆ. ಆ ಪ್ರಯುಕ್ತ ಆಯಾ ಜಿಲ್ಲೆಯಲ್ಲಿ ದರೋಡೆಗಳು ಅಥವಾ ಅಪರಾಧಗಳು ನಡೆಯದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಕ್ರೈಂಸ್ಕ್ವಾಡನ್ನು ಪ್ರತಿಜಿಲ್ಲೆಯಲ್ಲೂ ಏರ್ಪಾಡು ಮಾಡಿದ್ದೇವೆ. ಅದೇರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ದಳವನ್ನೇ ನೇಮಕಮಾಡಿ ಅಲ್ಲಿ ನಡೆದಂಥ ಅಮಾನುಷ ದರೋಡೆಗಳಿಗೆ ಕಾರಣಕರ್ತರಾದವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕೇರಳ ರಾಜ್ಯದ ತ್ಯಾಗನೂರು, ಮತ್ತೊಂದು ಕಡೆ ಸುಮಾರು ೧೧ ಪ್ರಕರಣಗಳಲ್ಲಿ ೫ ಜನ ಖೂನಿಯಾಗಿದ್ದಾರೆ. ನಮ್ಮಲ್ಲೂ ಜನರಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅಮಾನುಷವಾದಂಥ ಡಕಾಯಿತಿ ನಡೆದಿದೆ. ಇದರಲ್ಲಿ ಅಲ್ಲಿನ ರಾಜ್ಯದ ಪೋಲೀಸ್ ಅಧಿಕಾರಿಗಳು ಮತ್ತು ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಗಳು ವಿಚಾರ ವಿನಿಮಯಮಾಡಿ ಬಹುಶಃ ಇದರಲ್ಲಿ ಕಾರಣಕರ್ತರಾಗಿರುವವರನ್ನು ಗುರುತಿಸಿ ಅವರನ್ನು ಹಿಡಿಯು ವುದಕ್ಕೆ ನಮ್ಮ ರಾಜ್ಯದವರೇ ಮುಂದಾಳುಗಳಾಗಿ ಇಂಥವರೇ ಮಾಡಿರಬೇಕು ಎಂದು ಗುರುತಿಸಿ ಸೂಚನೆ ಕೊಟ್ಟರು. ಕೇರಳ ರಾಜ್ಯದಲ್ಲಿ ಮುಂಚಿತವಾಗಿ ಇಂತಹ ಪ್ರಕರಣ ನಡೆದಿದೆ. ಕಾಡಿನಲ್ಲಿ ಅವರು ಅವಿತು ಕೊಂಡರು, ಆದರಿಂದ ಸ್ವಲ್ಪ ತೊಂದರೆಯಾಯಿತು. ಆದಾಗ್ಯೂ ೩ ಜನ ಡಕಾಯಿತರನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಪಿ.ಯವರ ನೇತೃತ್ವದಲ್ಲಿ ರಚಿಸಿದಂಥ ಸುಮಾರು ೪೦ ಜನ ಪೋಲೀಸರ ತಂಡ ಪತ್ತೆಹಚ್ಚಿದೆ. ಇದನ್ನು ತಿಳಿಸಲು ಕೊನೇಪಕ್ಷದ ನನ್ನ ಮನಸ್ಸಿಗಾದರೂ ಒಂದು ತೃಪ್ತಿಯನ್ನು ತಂದಿದೆ

ಈ ಮೊದಲು ನಾನು ಈ ಶಾಸನ ಸಭೆಗೆ ಹೇಳಿದ್ದೆ, ಇನ್ನು ೫ ದಿವಸಗಳೊಳಗಾಗಿ ಡಕಾಯಿತರನ್ನು ಪೋಲೀಸ್ ಇಲಾಖೆಯ ಅಧಿಕಾರಿಗಳು ಹಿಡಿಯುತ್ತಾರೆನ್ನುವ ವಿಶ್ವಾಸ ನನಗಿದೆ, ಇಲ್ಲದೇಹೋದರೆ ನೀವು ಹೇಳಿದ ಶಿಕ್ಷೆಗೆ ಒಳಗಾಗುತ್ತೇನೆ ಎಂದು ಮುಂದುವರಿದು ಮಾತನಾಡಿದ್ದೆ. ಇದರಿಂದ ನನ್ನ ಮನಸ್ಸಿಗೆ ನೋವಾಗಿದೆ ಎನ್ನುವ ಮಾತನ್ನು ಮಾತನ್ನು ಮಾನ್ಯ ಸಭೆಯವರು ಅರ್ಥಮಾಡಿಕೊಳ್ಳಬಹುದು. ಈ ಪ್ರಕರಣದಲ್ಲಿ ಪತ್ತೆಯಾಗಿರತಕ್ಕಂಥವರು ಚಂದ್ರ ಅಲಿಯಾಸ್ ರಮೇಶ್ ಪೂಜಾರಿ. ಇವರು ಬೇರೆ ಬೇರೆ ಹೆಸರುಗಳನ್ನು ಇಟ್ಟುಕೊಂಡು ಕುಖ್ಯಾತ ಡಕಾಯಿತಿಗಳನ್ನು ಮಾಡಿದ್ದಾರೆ. ಅವನ ಸಹಚರ ತಿಮ್ಮ ಅಲಿಯಾಸ್ ರಾಜನ್ ಮತ್ತು ಅದ್ದು ಅಲಿಯಾಸ್ ಅಬ್ದುಲ್ ರಹಮಾನ್, ಈ ೩ ಜನರನ್ನು ಚಿಕ್ಕಮಂಗಳೂರಿನ ಕೋಟೇಗರ ಕಾಡಿನಲ್ಲಿ ಬಂಧಿಸಿದ್ದಾರೆ. ಅವರನ್ನು ಬಂಧಿಸಬೇಕಾದರೆ ಪೋಲೀಸರು ಎಷ್ಟು ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ ಎನ್ನುವ ಚಿತ್ರವನ್ನು ಇಲ್ಲಿ ಬರದಿದ್ದಾರೆ. ಅದು ಏನೇ ಇರಲಿ, ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟಾಗಿರತಕ್ಕಂಥ ಜನರ ಮನಸ್ಸಿನಲ್ಲಿದ್ದಂಥ ಭೀತಿ, ಆತಂಕ ನಿದೆ ಅದು ನಿವಾರಣೆಯಾಗಿದೆ ಎಂಬ ಮಾತನ್ನು ಹೇಳಿ, ಇದರಿಂದ ನನಗೆ ಒಂದುರೀತಿಯ ಸಮಾಧಾನ ತಂದಿದೆ. ಅದೇ ರೀತಿ ಮಾನ್ಯ ವೀರಪ್ಪ ಮೊಯಿಲಿಯವರಿಗೂ ಸಮಾಧಾನ ತಂದಿದೆ ಎಂದು ಭಾವಿಸಿಕೊಳ್ಳುತ್ತೇನೆ. ಆದರೆ ಇಂತಹ ಡಕಾಯಿತಿಗಳು ಆಗದ ರೀತಿಯಲ್ಲಿ ನಡೆದುಕೊಂಡಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎನ್ನುವುದು ನಮಗೂ ಅರ್ಥವಾಗುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಪ್ ಜಾನ್‌ಪಾಲ್–೨ ಅವರು ಬರತಕ್ಕಂಥ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳೆಲ್ಲಾ ಆ ಕಡೆ ಗಮನ ಇಟ್ಟು ಕಾಲವನ್ನು ಕಳೆದದ್ದರಿಂದ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಡಕಾಯಿತರು ಅಂತಹ ಡಕಾಯಿತಿಗಳನ್ನು ನಡೆಸಲು ಕಾಲಿಟ್ಟರು. ಬಹುಶಃ ನಮ್ಮ ಅಧಿಕಾರಿಗಳು ಹೆಚ್ಚಿನ ಶ್ರಮವನ್ನು ತೆಗೆದುಕೊಂಡು ಅವರನ್ನು ಬಂಧಿಸುವ ಕೆಲಸವನ್ನು ಮಾಡಿದ್ದಾರೆ, ಆದಕ್ಕಾಗಿ ನನ್ನ ಪರವಾಗಿ, ರಾಜ್ಯ ಸರ್ಕಾರದ ಪರವಾಗಿ ಆ ಅಧಿಕಾರಿಗಳಿಗೆ ಸಂಪೂರ್ಣವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅವರ ಕಾರ್ಯಕ್ಕೆ ತಕ್ಕ ಬಹುಮಾನವನ್ನು ಕೊಡಬೇಕು ಎಂದು ನಿರ್ಧರಿಸಿದ್ದೇನೆ. ಮತ್ತೆ ಈ ಸಂದರ್ಭದಲ್ಲಿ ಸರಗಳ್ಳತನ ಕಡಿಮೆಯಾಗಿದೆ ಎಂದು ಹೇಳಿದೆ. ಆದಾಗ್ಯೂ, ಅದು ಎಲ್ಲಿ ನಿಂತಿದೆ ಎಂದು ಮಾನ್ಯ ಸದಸ್ಯೆಯವರಾದ ಶ್ರೀಮತಿ ನಾಗರತ್ನಮ್ಮನವರು ಕೇಳಿದರು, ಅವರು ಮಾತನಾಡಲಿಲ್ಲ ಮಧ್ಯೆ ಎದ್ದು ನಿಂತು ಹೇಳಿದರು. ಅವರು ಸ್ವಲ್ಪ ವ್ಯಂಗವಾಗಿ ಹೇಳಿದ್ದು ನನಗೆ ಸ್ವಲ್ಪಮಟ್ಟಿಗೆ ಅರ್ಥವಾಯಿತು ಆದ್ದರಿಂದ ಸರಗಳ್ಳತನದ ವಿವರಗಳನ್ನು ಈಗ ಕೊಡಲು ಇಚ್ಛೆ ಪಡುತ್ತೇನೆ. ೧೯೮೧ರಲ್ಲಿ ೩೧೩ ಪ್ರಕರಣಗಳು ವರದಿಯಾಗಿದ್ದು ೯೫ ಪತ್ತೆಯಾಗಿದೆ. ೧೯೮೨ರಲ್ಲಿ ೨೪೨ ಪ್ರಕರಣಗಳು ವರದಿಯಾಗಿದ್ದು ೮೨ ಪತ್ತೆಯಾಗಿದೆ, ೧೯೮೩ರಲ್ಲಿ ೨೭೭ ಪ್ರಕರಣಗಳು ವರದಿಯಾಗಿದ್ದು ೧೨೯ ಪ್ರಕರಣಗಳು ಪತ್ತೆಯಾಗಿವೆ, ೧೯೮೪ರಲ್ಲಿ ೩೦೯ ಪ್ರಕರಣಗಳು ವರದಿಯಾಗಿದ್ದು ೧೩೮ ಪತ್ತೆಯಾಗಿವೆ, ೧೯೮೫ರಲ್ಲಿ ೨೧೬ ಪ್ರಕರಣಗಳು ವರದಿಯಾಗಿದ್ದು ೭೭ ಪತ್ತೆಯಾಗಿವೆ. ಇದಕ್ಕೆ ಸಂಬಂಧಪಟ್ಟಹಾಗೆ ಬೆಂಗಳೂರು ನಗರದಲ್ಲಿ ಪತ್ತೆಯಾಗಿರತಕ್ಕ ವಿವರ ಈ ರೀತಿ ಇದೆ. ೧೯೮೩ರಲ್ಲಿ ೪ ಲಕ್ಷ ೫೬ ಸಾವಿರ ರೂಪಾಯಿ ಮೊತ್ತದ ೯೨ ಕೇಸುಗಳು ಪತ್ತೆಯಾಗಿವೆ, ರಿಪೋರ್ಟ್ ಆಗಿರುವ ಕೇಸುಗಳು ೧೫೦. ೧೯೮೪ರಲ್ಲಿ ೩ ಲಕ್ಷ ೮೭ ಸಾವಿರದ ೭೫ ರೂಪಾಯಿ ಮೊತ್ತದ ೭೫ ಕೇಸುಗಳು ಪತ್ತೆಯಾಗಿವೆ ರಿಪೋರ್ಟ್ ಆಗಿರುವುದು ೧೨೮ ಕೇಸುಗಳು. ೧೯೮೫ರಲ್ಲಿ ೨ ಲಕ್ಷದ ೩೬ ಸಾವಿರ ರೂಪಾಯಿ ಮೊತ್ತದ ೩೨ ಕೇಸುಗಳು ಪತ್ತೆಯಾಗಿವೆ, ರಿಪೋರ್ಟ್ ಆಗಿರುವುದು ೫೮ ಕೇಸುಗಳು. ೧೯೮೬ರಲ್ಲಿ ೫೧ ಸಾವಿರ ರೂಪಾಯಿ ಮೊತ್ತದ ೭ ಕೇಸುಗಳು ಪತ್ತೆಯಾಗಿವೆ, ರಿಪೋರ್ಟ್ ಆಗಿರುವುದು ೧೧ ಕೇಸುಗಳು. ಇದರಿಂದ ಈ ಒಂದು ಪತ್ತೆ ಹಚ್ಚುವ ಕಾರ್ಯದಲ್ಲಿ ಹೆಚ್ಚಿನ ಶೀಘ್ರಗತಿಯಲ್ಲಿ ಕೆಲಸ ಮಾಡಿದ್ದಾರೆ ಎಂದು ಅರ್ಥವಾಗುತ್ತದೆ. ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳು ದಕ್ಷರಾಗಿ ಕೆಲಸ ಮಾಡುತ್ತಾ ಇದ್ದಾರೆ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಕೂಡ ಅವರು ಇನ್ನೂ ಕೆಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಮಹಿಳಾ ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಕರ್ನಾಟಕದಲ್ಲಿ ಇದುವರೆಗೆ ೩ ಜನ ಐಪಿಎಸ್ ಮಹಿಳಾ ಪೋಲೀಸ್ ಅಧಿಕಾರಿಗಳಿದ್ದಾರೆ. ೨೩ ಮಹಿಳಾ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ಸ್ ಇದ್ದಾರೆ ೪೭ ಮಹಿಳಾ ಹೆಡ್ ಕಾನ್‌ಸ್ಟೇಬಲ್ಸ್ ಇದ್ದಾರೆ ೨೪೨ ಮಹಿಳಾ ಪೋಲೀಸ್ ಕಾನ್‌ಸ್ಟೇಬಲ್ಸ್ ಇದ್ದಾರೆ. ಮಹಿಳಾ ಐಪಿಎಸ್ ಅಧಿಕಾರಿಗಳಲ್ಲಿ ಒಬ್ಬರು ಎಸ್. ಪಿ ಆಗಿರುತ್ತಾರೆ, ಇನ್ನಿಬ್ಬರು ಎಎಸ್‌ಪಿ ಯಾಗಿದ್ದಾರೆ. ಈ ಒಂದು ಸಂಖ್ಯೆಯನ್ನು ಹಂತಹಂತವಾಗಿ ಹೆಚ್ಚಿಸಬೇಕು. ಸಾಧ್ಯವಾದಮಟ್ಟಿಗೆ ದೊಡ್ಡ ನಗರಗಳಲ್ಲಿ ಅದರಲ್ಲೂ ಹೆಣ್ಣುಮಕ್ಕಳ

ಮೇಲೆ ನಡೆಯುತಕ್ಕ ಅತ್ಯಾಚಾರಗಳು, ಅವರ ಮೇಲೆ ಬರತಕ್ಕಂಥ ದೂರುಗಳ ವಿಚಾರಣೆ ಮಾಡಲು ಮಹಿಳಾ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿರತಕ್ಕಂಥ ಒಂದು ಸೆಲ್ ಅನ್ನು ಕ್ರಿಯೇಟ್ ಮಾಡುತ್ತೇನೆಂದು ಹೇಳಿದ್ದೇನೆ. ಅದನ್ನು ಈ ವರ್ಷ ಪ್ರಾರಂಭ ಮಾಡುತ್ತೇನೆ. ಇದರ ಮುಖಾಂತರ ಮಹಿಳೆಯರ ಮೇಲೆ ಆಗಿರತಕ್ಕ ಅನ್ಯಾಯಗಳನ್ನು ಗೋಪ್ಯವಾಗಿ ವಿಚಾರಣೆ ಮಾಡುವುದಕ್ಕೆ, ಅವರ ಮಾನವನ್ನು ಕಾಪಾಡುವುದಕ್ಕೆ ಅನುಕೂಲವಾಗುತ್ತದೆ. ಮೇಲ್ಮನೆಯಲ್ಲಿ ಈ ಬಗ್ಗೆ ಸಲಹೆಯನ್ನು ಕೊಟ್ಟರು. ಮಹಿಳಾ ಉನ್ನತಾಧಿಕಾರಿಗಳು ಕಡಿಮೆ ಇದ್ದುದರಿಂದ ಇದುವರೆಗೂ ಕೂಡ ಇದನ್ನು ಮಾಡುವುದಕ್ಕಾಗಲಿಲ್ಲ. ಈಗ ಈ ಒಂದು ಸೆಲ್ಲನ್ನು ಕ್ರಿಯೇಟ್ ಮಾಡುವುದರಿಂದ ಮಹಿಳೆಯರು ತಮ್ಮ ಮನಸ್ಸಿನಲ್ಲಿ ಉಂಟಾದ ತೊಂದರೆಗಳನ್ನು ಹೇಳಿಕೊಳ್ಳುವುದಕ್ಕೆ ಮತ್ತು ಅವರ ಮೇಲೆ ಆದಂಥ ಅತ್ಯಾಚಾರಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಮಹಿಳಾ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಒಂದು ಸೆಲ್ಲನ್ನು ಮಾಡುವುದಕ್ಕೆ ಯೋಚನೆ ಮಾಡಿದ್ದೇನೆ.

ಈ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹವರ ಮೇಲೆ ಹೆಚ್ಚು ಹೊರೆಯಾಗಿದೆ. ಬಹುಃ ಅವರಿಗೆ ಸ್ವಲ್ಪಮಟ್ಟಿಗಾದರೂ ಕೂಡ ಕಾಲವನ್ನು ಗೊತ್ತು ಮಾಡಬೇಕಾಗುತ್ತದೆ. ಒಬ್ಬರು ಮಾಡತಕ್ಕಂತಹ ಕೆಲಸಕ್ಕೆ ಇಬ್ಬರನ್ನು ನೇಮಿಸಿದರೆ ಒಳ್ಳೆಯದೆಂದು ಮಾನ್ಯ ಪ್ರತಾಪ ಚಂದ್ರಶೆಟ್ಟಿಯವರು ಹೇಳಿದರು. ಹೆಚ್ಚು ಸಂಖ್ಯೆಯಲ್ಲಿ ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಲ್ಲದೆ ಗೃಹ ನಿರ್ಮಾಣಕ್ಕೆ ಸಂಬಂಧಪಟ್ಟ ಹಾಗೆ ಮಹಿಳಾ ಪೋಲೀಸ್‌ರವರಿಗಾಗಲೀ ಅಥವಾ ಸಾಮಾನ್ಯ ಪೋಲೀಸ್‌ರವರಿಗಾಗಲೀ ಮನೆಗಳನ್ನು ಕೊಡದೇ ಇದ್ದರೆ, ಅವರು ಬೇರೆ ಆಶ್ರಯದಲ್ಲಿದ್ದು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಹಾಗೂ ಅಪರಾಧಗಳು ನಡೆವಂತಹ ಕಾಲದಲ್ಲಿ ತಕ್ಷಣ ಬಂದು ಕಾರ್ಯಾಚರಣೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲವೆಂಬ ದೃಷ್ಟಿಯಿಂದ ಅವರಿಗೆ ವಾಸದ ಮನೆಗಳನ್ನು ಕಟ್ಟಿಸತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಇನ್ನಿತರ ಸದಸ್ಯರು ಹೇಳಿದ್ದಾರೆ. ಕಳೆದ ವರ್ಷ ಪೋಲೀಸ್ ಹೌಸಿಂಗ್ ಕಾರ್ಪೊರೇಶನ್ ನಿಗಮವೆಂದು ಮಾಡಿ ಅದಕ್ಕೆ ಒಂದು ಕೋಟಿ ರೂಪಾಯಿ ಬಂಡವಾಳ ಕೊಟ್ಟಿದ್ದೇವೆ. ಈಗ ಸುಮಾರು ೧೦ ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ಕೊಟ್ಟಿದ್ದೇವೆ. ಸುಮಾರು ೭ ಕೋಟಿ ೫೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆಯುತ್ತಿದ್ದೇವೆ. ಈ ವರ್ಷ ಒಂದು ಸಾವಿರ ಮನೆಗಳನ್ನು ೫ ಭಾಗಗಳಾಗಿ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದುವರೆಗೆ ೪೫ ಪರ್ಸೆಂಟ್ ನಷ್ಟು ಜನಕ್ಕೆ ಮಾತ್ರ ಮನೆಗಳು ಇದೆ. ಪೋಲೀಸ್ ಇನ್ಸ್‌ಪೆಕ್ಟರ್‌ರವರಿಗೆ, ಕಾನ್‌ಸ್ಟೇಬಲ್ಸ್‌ರವರಿಗೆ ಉಚಿತವಾಗಿ ವಸತಿ ಗೃಹಗಳನ್ನು ಕೊಡತಕ್ಕಂತಹ ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ಈಗ ನಾವು ೧೯೦೦೦ ಜನಕ್ಕೆ ಮಾತ್ರ ವಸತಿಗಳನ್ನು ಒದಗಿಸಿದ್ದೇವೆ. ಪ್ರತಿ ವರ್ಷ ಒಂದು ಸಾವಿರ ಮನೆಗಳನ್ನು ಕಟ್ಟಿಕೊಂಡು ಹೋದರೂ ಕೂಡ ೨೫ ವರ್ಷಗಳು ಬೇಕಾಗುತ್ತದೆ. ಈ ಮನೆಗಳ ಸಂಖ್ಯೆಯನ್ನು ಹೆಚ್ಚಿಸಲೇಬೇಕಾಗಿದೆ. ಈ ವರ್ಷ ನಿಗಮವನ್ನು ವಿಸ್ತಾರಗೊಳಿಸಿ ಹೆಚ್ಚು ಹೆಚ್ಚು ರೀತಿಯಲ್ಲಿ ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿಕೊಟ್ಟರೆ ಅವರ ತೊಂದರೆಯೇನಿದೆ, ಆ ತೊಂದರೆಯನ್ನು ನೀಗಿಸಿ ಬಹುಮಟ್ಟಿಗೆ ಅವರು ತಮ್ಮ ಕರ್ತವ್ಯದಲ್ಲಿ ನಿರತರಾಗುವುದಕ್ಕೆ ಎಲ್ಲಾ ರೀತಿಯ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರಥಮ ಬಾರಿಗೆ ನಮ್ಮ ಸರ್ಕಾರ ರಾಜ್ಯದಲ್ಲಿ ಈ ಒಂದು ನಿಗಮವನ್ನು ಜಾರಿಗೆ ತಂದಿದ್ದೇವೆ. ನೀಲಸಂದ್ರದಲ್ಲಿ ಆಗಲೇ ಮನೆಗಳು ಮೊದಲನೇ ಹಂತ ಪೂರೈಸಿದೆ. ಮತ್ತೊಂದು ಕಡೆ ಅಂದರೆ ಕೋರಮಂಗಲದಲ್ಲಿ ೪೯೪ ಮನೆಗಳು ಎದ್ದು ನಿಂತಿದೆ ಭದ್ರಾವತಿಯಲ್ಲಿ ೧೮೦ ಮನೆಗಳು, ಶಿವಮೊಗ್ಗದಲ್ಲಿ ೧೮೮ ಮನೆಗಳನ್ನು ಮಾಡಿದ್ದೇವೆ. ಮೈಸೂರಿನಲ್ಲಿ ೧೬೭ ಮನೆಗಳನ್ನು ಪ್ರಾರಂಭ ಮಾಡಿದ್ದೇವೆ. ಹೀಗೆ ಗುಲ್ಬರ್ಗಾ, ಮಂಗಳೂರು, ಬೆಳಗಾಂ, ಧಾರವಾಡ ಡಿವಿಜನ್ ಹಾಗೂ ಎಲ್ಲಾ ಭಾಗಗಳಲ್ಲೂ ಆ ಭಾಗಗಳಿಗನುಗುಣವಾಗಿ ಈ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಮನೆಗಳನ್ನು ಕಟ್ಟಿಸತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ಎಲ್ಲೆಲ್ಲಿ ಸರ್ಕಾರೀ ಕಟ್ಟಡಗಳಿಲ್ಲವೋ, ಎಲ್ಲೆಲ್ಲಿ ಭೂಮಿ ಸುಲಭವಾಗಿ ದೊರೆಯುತ್ತದೆ, ಎಲ್ಲಿ ಇದರ ಹೆಚ್ಚಿನ ಅವಶ್ಯಕತೆಯಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ಮನೆಗಳನ್ನು ಕಟ್ಟಿಸತಕ್ಕಂತಹ ನಿರ್ಮಾಣವನ್ನು ಮಾಡುತ್ತಿದ್ದೇವೆ. ಗೃಹ ನಿರ್ಮಾಣದ ಮುಖಾಂತರ ಕಟ್ಟಿಸತಕ್ಕಂತಹ ಮನೆಗಳಿಗೆ ಬಾಡಿಗೆ ಇರುವುದಿಲ್ಲ. ಹಾಗೂ ಅದಕ್ಕೆ ರಿಕವರಿ ಕೂಡ ಇರುವುದಿಲ್ಲ, ಹೀಗಾಗಿ ಸರ್ಕಾರದ ಮೇಲೆ ಹೆಚ್ಚು ಹೊರೆಯಾಗುತ್ತಿದೆ. ಇದಕ್ಕೆ ಹಣ ಕೊಡುವುದಕ್ಕಾಗುವುದಿಲ್ಲವೆಂದು ಹಣಕಾಸಿನ ಸಚಿವರೂ ಆದ

ಮುಖ್ಯಮಂತ್ರಿಗಳು ಹೇಳಿದರು. ನಂತರ ನಾವು ಎಷ್ಟೋ ಒತ್ತಡ ತಂದ ಮೇಲೆ, ಕಡೆಗೆ ಹಣ ಕೊಡಬೇಕಾಗಿದ್ದರೆ ಕಷ್ಟಪಟ್ಟು ಏನೋ ಕೊಡೋಣ ಎನ್ನುವ ರೀತಿಯಲ್ಲಿ ಕೊಟ್ಟಿದ್ದಾರೆ ರಾಜ್ಯದಲ್ಲಿ ಇವತ್ತು ಡಕಾಯಿತಿ ಪ್ರಕರಣಗಳು ನಡೆಯುತ್ತಿವೆ. ಪೋಲೀಸ್ ಸ್ಟೇಷನ್‌ಗಳಿಗೆ ಹೆಚ್ಚು ಸಂಖ್ಯೆಯ ವಾಹನಗಳು, ವೈರ್‌ಲೆಸ್ ಸೆಟ್‌ಗಳನ್ನು ಕೊಡಬೇಕಾಗುತ್ತವೆ. ಇದನ್ನೆಲ್ಲಾ ಲೆಕ್ಕ ಹಾಕಿ ನೋಡಿದಾಗ ನಮ್ಮ ಇಲಾಖೆಗೆ ಎಷ್ಟು ಹಣ ದೊರಕಬೇಕಿತ್ತು ಅಷ್ಟು ಹಣ ದೊರಕಿಲ್ಲ. ಈ ರೀತಿ ಮಾಡದೇ ಇದ್ದ ಪಕ್ಷದಲ್ಲಿ ಸರ್ಕಾರದ ಮೇಲೆ ಬರತಕ್ಕಂತಹ ಟೀಕೆಗಳನ್ನು ನಾನು ಒಬ್ಬನೇ ಹೊತ್ತುಕೊಳ್ಳುವುದಕ್ಕೆ ಬದಲಾಗಿ ನಮ್ಮ ಸರ್ಕಾರ ಸಂಪೂರ್ಣವಾಗಿ ಹೊರಬೇಕಾಗುತ್ತದೆ ಬೆಂಗಳೂರು ನಗರದ ಪೋಲೀಸ್ ಸ್ಟೇಷನ್‌ಗಳಿಗೆ ಬೇಕಾಗಿರತಕ್ಕಂತಹ ವಾಹನಗಳು, ವೈರ್‌ಲೆಸ್ ಸೆಟ್‌ಗಳು ಹಾಗೂ ಅವರು ಚನ್ನಾಗಿ ಕೆಲಸ ಮಾಡಲು, ಆಧುನೀಕರಣ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕಳೆದ ವರ್ಷ ಕೇಂದ್ರ ಸರ್ಕಾರದವರು ಸುಮಾರು ೩೧ ಲಕ್ಷ ರೂಪಾಯಿಗಳನ್ನು ಕೊಟ್ಟರು. ಹಿಂದಿನ ವರ್ಷ ೩೧ ಲಕ್ಷ ರೂಪಾಯಿಗಳನ್ನು ಕೊಟ್ಟರು. ಆದರೆ ಈ ವರ್ಷ ೨೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಬೇರೆ ರಾಜ್ಯಗಳನ್ನು ನೋಡಿದಾಗ ನಮಗೆ ಇದು ಅತ್ಯಂತ ಕಡಿಮೆಯಾಗಿದೆಯೆಂದು ಅನಿಸುತ್ತದೆ. ಇದಕ್ಕೆ ಕಾರಣವೇನೆಂದರೆ ಅವರು ಮ್ಯಾಚಿಂಗ್ ಗ್ರ್ಯಾಂಟ್ ಕೊಡುತ್ತಾರೆ. ನಾವು ಎಷ್ಟು ಖರ್ಚು ಮಾಡುತ್ತೇವೆಯೋ ಅಷ್ಟು ಮ್ಯಾಚಿಂಗ್ ಗ್ರ್ಯಾಂಟನ್ನು ಅವರು ನಮಗೆ ಕೊಡುತ್ತಾರೆ. ೪೨ ಲಕ್ಷ ರೂಪಾಯಿಗಳು ಬರಬೇಕೆಂದು ನಿರೀಕ್ಷೆ ಮಾಡಿದ್ದೇವೆ. ಈ ಹಣವನ್ನು ಖರ್ಚು ಮಾಡಿದ ಮೇಲೆ ಅದನ್ನು ಒದಗಿಸಿ ಕೊಡಿ ಎಂದು ಕೇಳುತ್ತೇವೆ. ಕೇಂದ್ರ ಸರ್ಕಾರದ ಆಡಳಿತ ಸಚಿವರಾದ ಶ್ರೀ ಅರುಣ್ ನೆಹರೂರವರು ಪೋಲೀಸ್‌ರವರಿಗೆ ವಿಶೇಷ ರೀತಿಯಲ್ಲಿ ತರಬೇತಿ ಕೊಡಬೇಕು ಈಗ ಅವರಿಗೆ ಕೊಟ್ಟಿರತಕ್ಕಂತಹ ತರಬೇತಿ ಸಾಲುವುದಿಲ್ಲ ಅವರು ಹೊಸ ಉಪಕರಣಗಳನ್ನು, ಆಯುಧಗಳನ್ನು ಹಿಡಿಯ ಬೇಕಾದ ಪಕ್ಷದಲ್ಲಿ ಅವರಿಗೆ ಹೊಸ ರೀತಿಯ ತರಬೇತಿ ಆಗಲೇಬೇಕೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ಟ್ರೈನಿಂಗ್ ಸ್ಕೂಲ್‌ಗಳೇನಿವೆ ಮೈಸೂರು, ಚನ್ನಪಟ್ಟಣ, ರಾಯಪುರ, ಮಾಗೋಡು ಹಾಗೂ ಖಾನಾಪುರದಲ್ಲಿ ಅಲ್ಲಿ ಅವರಿಗೆ ಕೊಡತಕ್ಕಂತಹ ಟ್ರೈನಿಂಗ್, ಡ್ರಿಲ್ ಫಿಸಿಕಲ್ ಟ್ರೈನಿಂಗ್ ಹಾಗೂ ಇನ್ನೂ ಏನೇನು ನೀಡಬೇಕೋ ಅದನ್ನೆಲ್ಲಾ ಮಾಡುತ್ತೇವೆ. ಆದರೆ ಸಾರ್ವಜನಿಕರು ಅವರ ಹತ್ತಿರ ಬಂದಂತಹ ಕಾಲದಲ್ಲಿ ಯಾವರೀತಿ ಅವರ ಹತ್ತಿರ ನಡೆದುಕೊಳ್ಳಬೇಕು ಮತ್ತು ಅವರಿಗೂ ಸಾರ್ವಜನಿಕರಿಗೂ ಇರತಕ್ಕಂತಹ ಸಂಬಂಧ ಹೇಗೆ ಇರಬೇಕು ಎಂಬ ವಿಷಯದಲ್ಲಿ ವಿಶೇಷ ತರಬೇತಿಯನ್ನು ಕೊಡಬೇಕೆಂದು ನಮ್ಮ ಕರಿಕ್ಯುಲರ್‌ನಲ್ಲಿ ಬದಲಾವಣೆ ಮಾಡಿದ್ದೇವೆ. ಈ ಪೋಲೀಸ್ ಕಲ್ಚರ್ ಏನಿದೆ, ಅದನ್ನು ಒಂದೇ ದಿವಸದಲ್ಲಿ ಹೋಗಲಾಡಿಸುವುದಕ್ಕೆ ಕಷ್ಟವಾಗುತ್ತದೆ. ಉಚ್ಚನ್ಯಾಯಾಲಯದವರು ಕಾನ್ಸಿಟಿಟ್ಯೂಷನ್ ೩೧೧ನೇ ಆರ್ಟಿಕಲ್ ಅನ್ನು ರದ್ದುಗೊಳಿಸಿರುವ ಚರ್ಚೆ ವಿರುದ್ಧವಾಗಿ ಸರ್ಕಾರೀ ನೌಕರರು ಎಲ್ಲಾ ಕಡೆ ಬಂದ್‌ನ್ನು ಆಚರಿಸಿದರು.

ವಿಧಾನ ಸೌಧದ ನೌಕರರು ಕೂಡ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಸುಮಾರು ೧೬ ಜನರು ಮೆಟ್ಟಿಲ ಹತ್ತಿರ ಕಚೇರಿಗೆ ಹೋಗುವವರನ್ನು ತಡೆಗಟ್ಟಬೇಕೆಂದು ಪ್ರಯತ್ನ ಮಾಡಿದರು. ಆ ಸಂದರ್ಭದಲ್ಲಿ ನೀವು ಏಕೆ ನಮ್ಮನ್ನು ತಡೆಗಟ್ಟುತ್ತೀರಿ, ನಿಮ್ಮ ಕೆಲಸ ನೀವು ಮಾಡಿ ಎಂದು ಕೇಳಿದಂತಹ ಕಾಲದಲ್ಲಿ ಅವರಿಗೂ ಪೋಲೀಸ್ ಅಧಿಕಾರಿಗಳಿಗೆ ಒಂದು ರೀತಿಯಾದಂತಹ ಘರ್ಷಣೆ ನಡೆದಿದೆ ಪೋಲೀಸ್ ಅಧಿಕಾರಿಗಳು ಅವರ ಕರ್ತವ್ಯವನ್ನು ಮಾಡಿದ್ದಾರೆ. ಇವರೂ ಕೂಡ, ಅಂದರೆ ಸ್ಟ್ರೈಕ್ ಮಾಡುತ್ತಿದ್ದವರು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ. ಈ ಘರ್ಷಣೆ ಆಗಿರುವುದರಿಂದ ಪೋಲೀಸಿನವರು ಹೊಡೆದಿದ್ದಾರೆ. ಪೋಲೀಸಿನವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸಸ್ಪೆಂಡ್ ಮಾಡ ಬೇಕೆಂದು ಒತ್ತಾಯ ತಂದರು. ವಿಚಾರ ಮಾಡತಕ್ಕ ಸಂದರ್ಭದಲ್ಲಿ ಎರಡೂ ಕಡೆಯವರದ್ದು ತಪ್ಪು ಎಂದು ಕಾಣುತ್ತದೆ. ನೀವೆಲ್ಲರೂ ಸರ್ಕಾರದ ಸಂಬಳ ಪಡೆಯುವವರು ಈ ನ್ಯಾಯಾಲಯದ ತೀರ್ಪು ನಿಮಗೂ ಅನ್ವಯವಾಗುತ್ತದೆ ನೀವೇಕೆ ಈ ಮುಷ್ಕರದಲ್ಲಿ ಭಾಗವಹಿಸಿಲ್ಲವೆಂದು ಅವಾಚ್ಯ ಶಬ್ದಗಳಿಂದ ಬೈದಿರತಕ್ಕಂಥಾದ್ದು ಇದೆ. ಪೋಲೀಸಿನವರು ಇದನ್ನು ಕೇಳಲಾರದೆ ಕೆನ್ನೆಗೆ ಹೊಡದಿರ ತಕ್ಕಂಥಾದ್ದು ಕಾಣುತ್ತದೆ. ಆದುದರಿಂದ ಇವನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದ ಕ್ಕೋಸ್ಕರ ಸಿ.ಒ.ಡಿ.ಗೆ ರೆಫರ್ ಮಾಡುತ್ತಿದ್ದೇನೆ. ಅವರು ಹೊಡೆದಿಲ್ಲವೆಂದು ಹೇಳಲಾರೆ ಹಾಗೂ ಇವರು ಬೈದಿಲ್ಲವೆಂದೂ ಹೇಳಲಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಸಿ.ಓ ಡಿ.ಗೆ ರೆಫರ್ ಮಾಡತಕ್ಕಂಥಾದ್ದು ಯಾವುದು ? ನಿಮ್ಮಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳಿದ್ದಾರೆ ಅವರಿಂದ ತನಿಖೆ ಮಾಡಿಸಿ. ನೀವು ಮಾಡುತ್ತೇವೆಂದು ಹೇಳಿದರೆ ಸಾಕು.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ......

ಶ್ರೀ ಕೆ. ಹೆಚ್. ಪಾಟೀಲ್.—ನೀವು ಎನ್‌ಕ್ವೈರಿ ಮಾಡಿಸಿ. ಅದರಿಂದ ನಿಮಗೆ ಸಮಾಧಾನವಾಗಿದೆಯೆಂದು ಹೇಳಿದರೆ ನಾವೂ ಸಮಾಧಾನ ಪಡುತ್ತೇವೆ.

ಶ್ರೀ ಯು. ಭೂಪತಿ.—ರಕ್ತ ಬರುವ ರೀತಿಯಲ್ಲಿ ಹೊಡೆದಿದ್ದಾರೆ,

ಶ್ರೀ ಆರ್. ವೆಂಕಟರಾಮಯ್ಯ.—ಒಬ್ಬನ ಮೇಲೆ ಅವಮಾನುಷವಾದ ರೀತಿಯಲ್ಲಿ ಹಲ್ಲೆ ನಡೆಸಿ ಅವನಿಗೆ ಕಿವಿ ಕೇಳಿಸದಂತೆ ಮಾಡಿದ್ದಾರೆ. ಬಟ್ಟೆ ಬಿಚ್ಚಿ ಚರ್ಮ ಸುಲಿದಿದ್ದಾರೆ.

ಶ್ರೀ ಯು. ಭೂಪತಿ.—ಕರ್ನಾಟಕ ವಿಧಾನ ಮಂಡಲದ ನೌಕರರಿಗೆ ಈ ರೀತಿಯಾದರೆ ಬೇರೆಯವರ ಗತಿ ಏನು ? ಇದರ ಬಗ್ಗೆ ಸರಿಯಾದಂತಹ ಕ್ರಮಕೈಗೊಳ್ಳಬೇಕು.

ಶ್ರೀ ಬಿ. ರಾಚಯ್ಯ.—ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಸೀನಿಯರ್ ಅಧಿಕಾರಿಗಳಿಗೆ ವಿಚಾರಣೆ ಮಾಡಿ ಎಂದು ಹೇಳಿದ್ದೆ, ಆ ವಿಚಾರಣೆಯ ವರದಿ ಬಂದಿದೆ. ಸಬಾಸ್ಟಿನ್ ಎಂಬ ವ್ಯಕ್ತಿಯಾರಿದ್ದಾರೆ. ಅವರು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ, ಒಂದು ರೀತಿಯಲ್ಲಿ ಅತಿಕ್ರಮಣ ಮಾಡುವುದಕ್ಕೆ ಹೋಗಿದ್ದರು, ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದಮೇಲೆ, ನೀವೆಲ್ಲರೂ ಕೂಡ ಸರ್ಕಾರೀ ಸಂಬಳ ತೆಗೆದುಕೊಳ್ಳುತ್ತಿದ್ದೀರಿ ನಿಮಗೂ ೩೧೧ನೇ ಸೆಕ್ಷನ್ ಎಫೆಕ್ಟ್ ಆಗುತ್ತದೆ ನೀವೇಕೆ ಮುಷ್ಕರದಲ್ಲಿ ಭಾಗವಹಿಸಿಲ್ಲ ಎಂದು ಹೇಳಿದ್ದಾರೆ. ಆಗ ಅವರಿಬ್ಬರ ಮಧ್ಯೆ ಘರ್ಷಣೆ ನಡೆದಿದೆ.

ಶ್ರೀ ಯು. ಭೂಪತಿ —ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಿತ್ತು. ಮನಸೋ ಇಚ್ಛೆ ಹೊಡೆಯಬೇಕೆಂದು ಇದೆಯೇ ?

೧೦ ಪಿ. ಎಂ.

ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ ಮನಸ್ವೇಚ್ಛೆ ಹೊಡೆಯುವುದಕ್ಕೆ ಇವರಿಗೆ ಏನು ಅಧಿಕಾರ ಇದೆ?

ಶ್ರೀ ಬಿ. ರಾಚಯ್ಯ.—ಸ್ವಾಮಿ ಬಂದ್‌ನಲ್ಲಿ ಲಕ್ಷಾಂತರ ಜನ ಭಾಗವಹಿಸಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲೂ ಕೂಡ ಲಾಠಿ ಚಾರ್ಜು ಆದಂಥ ಘಟನೆ. ಗೋಳಿಬಾರು ನಡೆದಂಥ ಘಟನೆ. ಮ್ಯಾನ್ ಹ್ಯಾಂಡಲ್ ಮಾಡಿದಂಥ ಘಟನೆ ವರದಿಯಾಗಿಲ್ಲ. ಇಲ್ಲಿ ಇಬ್ಬರಿಗೂ ಮಾತಂಕತೆ ನಡೆದಾಗ ಪೋಲೀಸ್ ಅಧಿಕಾರಿ ಕಪಾಳಕ್ಕೆ ಹೊಡೆದಿರುವುದು ನಿಷ್ಪಕ್ಷಪಾತ ತನಿಖೆಯಿಂದ ಗೊತ್ತಾಗಿದೆ. ಎರಡೂ ಕಡೆಯಿಂದ ತಪ್ಪು ನಡೆದಿದೆ. ಆದರೂ ಕೂಡ ವಿಷಯ ಸಿ ಓ.ಡಿ.ಗೆ ರೆಫರ್ ಮಾಡಿ ಸತ್ಯ ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆಯೇ ಹೊರತು ಪ್ರತಿಯೊಂದು ವಿಷಯವನ್ನು ಸಿ.ಓ.ಡಿ.ರಗೆ ರೆಫರ್ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್— ಅಧಿಕಾರಿಗಳನ್ನು ಡೀಮಾರಲೈಸ್ ಮಾಡುವುದು ಬೇಡ. ಅನೇಕ ಜನ ಶ್ರೇಷ್ಠವಾದಂಥ ದರ್ಜೆ ಅಧಿಕಾರಿಗಳು ಇದ್ದಾರೆ, ನಿಮ್ಮ ಮಾತಿನ ಮೇಲೆ ನಮಗೆ ನಂಬಿಕೆ ಇದೆ, ನಿಮಗೆ ಸಮಾಧಾನವಾದರೆ. ನಮಗೆ ಸಮಾಧಾನವಾದಂತೆ.

ಶ್ರೀ ಆರ್. ವೆಂಕಟರಾಮಯ್ಯ— ಶಾಸಕಾಂಗದ ಒಬ್ಬ ನೌಕರ ಸರ್ಕಲ್ ಇನ್‌ಸ್ಪೆಕ್ಟರ್‌ನನ್ನು ಬಯ್ಯುತ್ತಾನೆಂದರೆ ನಂಬುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ— ವಿಚಾರ ಏನು ಅಂದರೆ. ದಾವಣಗೆರೆ ವಿಚಾರ ಬಂದಾಗ ಒಬ್ಬ ಸಬ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದಕ್ಕೆ ಅಲ್ಲಿಯ ಪೋಲೀಸಿನವರು ಪ್ರತಿರೋಧವನ್ನು ವ್ಯಕ್ತ ಪಡಿಸಿದರು. ಸಸ್ಪೆಂಡ್ ಮಾಡಿದ ಮೇಲೆ ಸ್ಟ್ರೈಕ್ ಹೋದರೆ ಏನು ಮಾಡುವುದು ಎನ್ನುವಂಥ ಅಸಹಾಯಕತೆಯನ್ನು ಮಾನ್ಯ ಮಂತ್ರಿಯವರು ವ್ಯಕ್ತಪಡಿಸುತ್ತಿದ್ದಾರೆ. ಇದರಿಂದ ಸಮಸ್ಯೆ ಬಗೆ

ಹರಿಯುವುದಿಲ್ಲವೆಂದು ಕೂಡ ಅದೇ ಧಾಟಿಯಲ್ಲಿ ಹೇಳುತ್ತಿದ್ದಾರೆ, ಪೋಲೀಸ್ ಅಧಿಕಾರಿಗಳು ತಪ್ಪಿತಸ್ಥರಲ್ಲದಿದ್ದರೆ ಅವರನ್ನು ಸಸ್ಪೆಂಡ್ ಮಾಡತಕ್ಕ ಅವಶ್ಯಕತೆ ಬರುವುದಿಲ್ಲ. ನಿಜವಾಗಿಯೂ ತಪ್ಪಿತಸ್ಥರಾದ ಮೇಲೆ ಸ್ಟ್ರೈಕ್ ಮಾಡುವಂಥ ಪರಿಸ್ಥಿತಿ ಏತಕ್ಕೆ ಬರುತ್ತದೆ?

ಶ್ರೀ ಬಿ ರಾಚಯ್ಯ — ಸ್ವಾಮಿ, ಅವರಿಗೂ ಕೂಡ ಸಾಕಷ್ಟು ಅನುಭವ ಇದೆ. ಎರಡೂ ಕಡೆಯಿಂದಲೂ ತಪ್ಪಾಗಿದೆಯೆಂದು ಕಂಡುಬಂದಿರುವುದರಿಂದ ಸಸ್ಪೆಂಡ್ ಮಾಡತಕ್ಕ ಪ್ರಮೇಯ ಬರುವುದಿಲ್ಲ. ಮ್ಯಾನ್ ಹ್ಯಾಂಡಲ್ ಮಾಡಿರತಕ್ಕಂಥಾದ್ದನ್ನು ಕಂಡೆಮ್ ಮಾಡಿದ್ದೇನೆ. ಬೇರೆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ — ಆಕ್ಷನ್ ತೆಗೆದುಕೊಳ್ಳಿ.

ಶ್ರೀ ಬಿ. ರಾಚಯ್ಯ — ಇನ್ನು ಸಿ ಓ ಡಿ. ಇಲಾಖೆಯವರು ಮಾಡಿರತಕ್ಕ ಕೆಲಸ ಕಾರ್ಯಗಳ ಮಾಹಿತಿಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಎಷ್ಟು ಕೇಸುಗಳು ವಿಲೆಯಾಗಿವೆ, ಎಷ್ಟು ಜನರಿಗೆ ಸಹಾಯವಾಗಿದೆ ಎನ್ನತಕ್ಕ ವಿವರಗಳನ್ನು ಕೊಡುತ್ತೇನೆ. ೧೯೮೧ರಲ್ಲಿ ೧೯೫ ಕೇಸುಗಳು. ೧೯೮೨ರಲ್ಲಿ ೩೦೮ ಕೇಸುಗಳು. ೧೯೮೩ರಲ್ಲಿ ೨೨೦ ಕೇಸುಗಳು, ೧೯೮೪ರಲ್ಲಿ ೨೮೧ ಕೇಸುಗಳು, ೧೯೮೫ರಲ್ಲಿ ೨೮೧ ಕೇಸುಗಳು ಬಂದಿದ್ದು. ಪೆಂಡಿಂಗ್ ಉಳಿದಿರತಕ್ಕಂಥಾದ್ದು ೧೮೯ ಕೇಸುಗಳು. ೧೯೮೧ರಲ್ಲಿ ೩೨ ಕೇಸುಗಳಲ್ಲಿ ಚಾರ್ಜ್‌ಷೀಟ್ ಹಾಕಲಾಗಿದ್ದು, ೨೪೩ ಕೇಸುಗಳು ಡಿಸ್‌ಪೋಸಲ್ ಆಗಿವೆ. ೧೯೮೨ರಲ್ಲಿ ೨೦೨ ಕೇಸುಗಳು ಡಿಸ್‌ಪೋಸಲ್ ಆಗಿವೆ. ೧೯೮೩ರಲ್ಲಿ ೯೫ ಕೇಸುಗಳಲ್ಲಿ ಚಾರ್ಜ್‌ಷೀಟ್ ಹಾಕಲಾಗಿದ್ದು, ೧೫೩ ಡಿಸ್‌ಪೋಸಲ್ ಆಗಿವೆ. ೧೯೮೩ರಲ್ಲಿ ೯೬ ಕೇಸುಗಳಲ್ಲಿ ಚಾರ್ಜ್‌ಷೀಟ್ ಹಾಕಲಾಗಿದೆ. ೧೯೮೪ರಲ್ಲಿ ೨೮೧ ಕೇಸುಗಳಲ್ಲಿ ೧೨೯ ಚಾರ್ಜ್‌ಷೀಟ್ ಹಾಕಲಾಗಿದೆ. ಇನ್ನು ೧೮೦ ಕೇಸುಗಳು ಪೆಂಡಿಂಗ್‌ನಲ್ಲಿವೆ. ಇವುಗಳಲ್ಲಿ ಬಹಳ ಮುಖ್ಯವಾಗಿ ಸ್ಕಾಲರ್‌ಷಿಪ್‌ಗೆ ಸೇರಿದಂಥವು. ವೈಶ್ಯ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ೬೯ ಕೋಟಿ ರೂಪಾಯಿ ದುರುಪಯೋಗಪಡಿಸಿಕೊಂಡದ್ದು ಪತ್ತೆ ಹಚ್ಚಿದ್ದಾರೆ. ಬ್ಯಾಂಕ್ ಚೀಟಿಂಗ್ ಕೇಸ್‌ಗಳ ಬಗ್ಗೆ ಹೇಳುವುದಾದರೆ ಒಟ್ಟು ೨೪ ಕೇಸುಗಳನ್ನು ಸಿ.ಓ.ಡಿ. ತನಿಖೆಗೆ ತೆಗೆಕೊಂಡಿದುದ್ದು ಅದರಲ್ಲಿ ೧೬ ಕೇಸುಗಳಲ್ಲಿ ಚಾರ್ಜ್ ಷೀಟ್ ಹಾಕಿದರೆ, ಉಳಿದ ೮ ಕೇಸುಗಳಲ್ಲಿ ತನಿಖೆ ನಡೆಯುತ್ತಿದೆ. ಒರಿಜನಲ್ ಡಾಕ್ಯುಮೆಂಟ್ಸ್ ಸಿವಿಲ್‌ಕೋರ್ಟ್‌ನಿಂದ ಪಡೆಯಬೇಕಾಗಿದೆ. ಪಿ.ಯು.ಇ. ಬೋರ್ಡಿಗೆ ಸಂಬಂಧಪಟ್ಟಂತೆ ೪೧ ಕೇಸುಗಳಲ್ಲಿ ಸಿ.ಓ.ಡಿ. ತನಿಖೆಗೆ ತೆಗೆದುಕೊಂಡಿದ್ದು, ೨೫ ಕೇಸುಗಳಲ್ಲಿ ಚಾರ್ಜ್ ಷೀಟ್ ಹಾಕಲಾಗಿದೆ. ೩ ಕೇಸುಗಳಲ್ಲಿ ಬಿ ರಿಪೋರ್ಟ್ ಕೊಡಲಾಗಿದೆ. ೮ ಕೇಸುಗಳು ಬೆರಳಚ್ಚು ತಜ್ಞರ ತನಿಖೆಯಿಂದ ತಡವಾಗಿದೆ. ೩ ಕೇಸುಗಳಲ್ಲ ತನಿಖೆ ನಡೆಯುತ್ತಿದೆ. ಬಿ.ಡಿ.ಎ.ಗೆ ಸಂಬಂಧಪಟ್ಟ ೩ ಕೇಸುಗಳಲ್ಲಿ ಒಂದು ಕೇಸಿನಲ್ಲಿ ಚಾರ್ಜ್‌ಷೀಟ್ ಹಾಕಿದೆ. ೨ ಕೇಸುಗಳನ್ನು ತನಿಖೆಗೆ ತೆಗೆದುಕೊಂಡಿದ್ದಾರೆ. ಕಾಫಿ ಬೋರ್ಡ್‌ನಲ್ಲಿ ನಡೆದಿರತಕ್ಕ ಮಿಸ್ ಅಪ್ರೊಪ್ರಿಯೇಷನ್ ಕೇಸನ್ನು ಕೂಡ ತನಿಖೆಗೆ ತೆಗೆದುಕೊಂಡಿದ್ದಾರೆ. ಹುಣಸೂರು ಲ್ಯಾಂಡ್ ಅಕ್ವಿಜೇಷನ್ ಕೇಸ್ ತನಿಖೆಗೆ ತೆಗೆದುಕೊಂಡಿದ್ದಾರೆ, ಹಿಡಕಲ್ ಡ್ಯಾಂಗೆ ಸಂಬಂಧಪಟ್ಟಂತೆ ರಾಜಕಮಲ್ ಟ್ರಾನ್ಸ್‌ಪೋರ್ಟ್ ಕೇಸನ್ನು ಕೂಡ ತನಿಖೆ ಮಾಡುತ್ತಿದ್ದಾರೆ, ಸಣ್ಣ ಕೈಗಾರಿಕೆಗಳಿಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುವಂಥ ಸಂದರ್ಭದಲ್ಲಿ ನಡೆದಂಥ ವ್ಯವಹಾರಗಳನ್ನು ತನಿಖೆಗೆ ತೆಗೆದುಕೊಂಡಿದ್ದಾರೆ. ಇಲಾಖೆಗಳಲ್ಲಿ ಎಲ್ಲೆಲ್ಲಿ ಹಣ ದುರುಪಯೋಗವಾಗಿದೆ, ಅಟಾನಮಸ್ ಬಾಡಿಗಳಲ್ಲಿ ಹಣ ಎಲ್ಲೆಲ್ಲಿ ದುರುಪಯೋಗವಾಗಿದೆ, ಬ್ಯಾಂಕ್‌ಗಳಲ್ಲಿ ಎಲ್ಲೆಲ್ಲಿ ಹಣ ದುರುಪಯೋಗವಾಗಿದೆ, ಅಂಥ ಎಲ್ಲಾ ಕೇಸುಗಳಲ್ಲಿಯೂ ಸಿ ಓ.ಡಿ.ಯವರು ತನಿಖೆ ಮಾಡಿದ್ದಾರೆ ಕೋರ್ಟಿನಿಂದ ಡಾಕ್ಯುಮೆಂಟ್ಸ್ ತಡವಾಗಿರುವಂಥ ಸಂದರ್ಭದಲ್ಲಿ ಮಾತ್ರ ವಿಳಂಬವಾಗಿದೆ. ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಮಾನ್ಯ ವೆಂಕಟರಾಮಯ್ಯನವರು ಶ್ವಾನದಳದ ಬಗ್ಗೆ ಮಾತನಾಡಿದ್ದಾರೆ. ಅವರು ಕಳೆದ ೨೦ ವರ್ಷಗಳಿಂದಲೂ ಕ್ರಿಮಿನಲ್ ಲಾಯರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಎಷ್ಟು ಜನ ಅಪರಾಧಿಗಳನ್ನು ಬಿಡಿಸಿದ್ದಾರೋ ಗೊತ್ತಿಲ್ಲ. ರಾಷ್ಟ್ರದ ಅನೇಕ ದೇಶಗಳಲ್ಲಿ ಶ್ವಾನದಳ ಇದೆ, ಅದರ ಮುಖಾಂತರ ಇಂತಹ ಅಪರಾಧಿಗಳನ್ನು ಸಹಿತ ಪತ್ತೆ ಹಚ್ಚುವುದಕ್ಕೆ ಹೆಚ್ಚು ಸಹಕಾರಿಯಾಗಿರುವುದರಿಂದ ಡಾಗ್ ಸ್ಕ್ವಾಡ್‌ನಲ್ಲಿ ಹೆಚ್ಚಾಗಿ ಶ್ವಾನಗಳನ್ನು ಸಾಕಬೇಕಾಗಿ ಬಂದಿದೆ. ೮ ಜಿಲ್ಲೆಗಳಲ್ಲಿ ಈ ಡಾಗ್ ಸ್ಕ್ವಾಡ್ ಇದೆ. ಹಿಂದೆ ಕೊಲೆಯಾಗಿ ಪತ್ತೆಯಾಗದೇ ಇರತಕ್ಕಂತಹ ಕೇಸುಗಳು ಸಹ ಪತ್ತೆಯಾಗಿವೆ. ಇತ್ತೀಚೆಗೆ ನಡೆದಂತಹ ಡಕಾಯಿತಿಗಳ ಕೇಸುಗಳಲ್ಲೂ ಇವುಗಳು ಸ್ವಲ್ಪ ಸಹಾಯಕವಾಗಿವೆ. ಆ ದೃಷ್ಟಿಯಿಂದ ಇನ್ನೂ ಕೆಲವು ಕಾಲ ಬೇಕಾಗಬಹುದು.

ಬೆಂಗಳೂರಿನ ಹೊರ ವಲಯದಲ್ಲಿ ನಡೆದಂತಹ ಡಕಾಯಿತಿಗಳನ್ನು ಪತ್ತೆ ಹಚ್ಚುವುದಕ್ಕೆ ಬೇಕಾದಂತಹ ವಿಧಿ-ವಿಜ್ಞಾನಗಳನ್ನು ಉಪಯೋಗಿಸಿಕೊಂಡು ಪತ್ತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಇದರಿಂದ ಆಗಿರತಕ್ಕಂತಹ ಆತಂಕವನ್ನು ನಾನು ಅರಿತುಕೊಂಡಿದ್ದೇವೆ. ಮಾನ್ಯ ಬಸವಲಿಂಗಪ್ಪನವರ ಕ್ಷೇತ್ರದಲ್ಲೇ ೯ ಕಡೆಗಳಲ್ಲಿ ಈ ರೀತಿಯ ಡಕಾಯಿತಿಗಳು ಆಗಿವೆ. ಅವರ ಮನಸ್ಸಿನಲ್ಲಿ ಆ ಬಗ್ಗೆ ಆಗಿರತಕ್ಕಂತಹ ಆತಂಕವನ್ನು ನಾನು ಅರಿತುಕೊಂಡಿದ್ದೇನೆ. ಅದನ್ನು ನಾನು ಬೆಳಗ್ಗೆ ಮಾತನಾಡುವಾಗಲೇ ಹೇಳಿದ್ದೇನೆ. ಈಗ ಒಂದು ಘಟನೆ ಸಾಮಾನ್ಯವಾಗಿ ಅಮಾವಾಸ್ಯೆಯ ಹಿಂದೆ ಮುಂದೆ ಅಂದರೆ ೧೧–೧೧ ಹಾಗೂ ೧೩ನೇ ತಾರೀಖು ಜನವರಿ ತಿಂಗಳಲ್ಲಿ ನಡೆದಿವೆ. ಸ್ವಾಭಾವಿಕವಾಗಿ ಇದರಿಂದಾಗಿ ಶಾಸಕರ ಮನಸ್ಸಿನ ಮೇಲೆ ಬಹಳ ರೀತಿಯಾಗಿ ಆತಂಕವಾಗಿದೆ. ಘಟನೆ ನಡೆದಿರತಕ್ಕಂತಹ ಸ್ಥಳಕ್ಕೆ ನಾನೂ ಹೋಗಿ ಬಂದಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ನಡೆದಂತಹ ಸ್ಥಳಗಳಿಗೆ ಹೋಗಿ ಬಂದಿದ್ದೇನೆ. ನೊಂದಂತಹವರಿಗೆ ಸಂತಾಪವನ್ನು ಸೂಚಿಸಿ ಕೂಡ ಬಂದಿದ್ದೇನೆ. ದರೋಡೆಗಳು ಯಲಹಂಕದಲ್ಲಿ ನಡೆದಿವೆ. ಬಾಣಸವಾಡಿಯಲ್ಲಿ ನಡೆದಿವೆ. ಅದೇ ರೀತಿ ಮಹದೇವಪುರದಲ್ಲೂ ನಡೆದಿದೆ ಇದೇ ರೀತಿಯ ದರೋಡೆ ಎಂ.ಜಿ. ರಸ್ತೆಯಲ್ಲಿರುವಂತಹ ಸೂರಜ್ ಮಹಲ್‌ನಲ್ಲಿ ನಡೆದಾಗ ಅಲ್ಲೊಬ್ಬರು ಕೊಲೆಯಾದರು. ಅವರನ್ನೂ ಕೂಡ ನಾನು ಹೋಗಿ ನೋಡಿಕೊಂಡು ಬಂದೆ. ಈ ಒಂದು ದರೋಡೆಯಲ್ಲಿ ಶ್ರೀಲಂಕಾದವನು ಎನ್ನಲಾದ ಕಣ್ಣದಾಸ್ ಎಂಬುವರು ಅಲ್ಲಿ ದರೋಡೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಕೊಲೆ ಮಾಡಿರತಕ್ಕಂತಹುದು. ಅಂತಹವರನ್ನು ಸಾಹಸ ಮಾಡಿ ನಮ್ಮ ಪೋಲೀಸ್ ಸಬ್ ಇನ್ಸ್‌ಪೆಕ್ಟರೊಬ್ಬರು ಹಿಡಿದಿದ್ದಾರೆ. ಅವರಲ್ಲಿರತಕ್ಕಂತಹ ಪಿಸ್ತೂಲುಗಳು, ಹಾಗೂ ಗ್ರನೈಡಾ ಇವುಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಅದನ್ನು ಅವನು ಏನಾದರೂ ಸ್ವಲ್ಪ ಓಪನ್ ಮಾಡಿದೇ ಆದರೆ, ಆ ಸಬ್ ಇನ್ಸ್‌ಪೆಕ್ಟರ್ ಇರುತ್ತಿರಲಿಲ್ಲ. ಅಂತಹ ಸಾಹಸವನ್ನು ಮಾಡಿ ಅವರನ್ನು ಹಿಡಿದಿದ್ದಾರೆ. ಇದರ ಬಗ್ಗೆ ಕೇಂದ್ರದ ಸಿ.ಐ.ಡಿ. ಇಲಾಖೆಯವರು ತನಿಖೆ ಮಾಡುವುದಕ್ಕೆ ಉತ್ಸುಕರಾಗಿದ್ದಾರೆ. ಇದರ ಬಗ್ಗೆ ತಮಿಳುನಾಡಿನ ಪೋಲೀಸ್ ಅಧಿಕಾರಿಗಳ ಜೊತೆ ಈ ಕಣ್ಣದಾಸನ್ ಎಂಬುವನ ಬಗ್ಗೆ ತಿಳಿದುಕೊಳ್ಳುವುದಕ್ಕೆ ಅವರ ಜೊತೆ ಸಂಪರ್ಕವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ ಅದೇ ರೀತಿ ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಕೇರಳ, ಮದ್ರಾಸ್, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳ ಪೋಲೀಸ್ ಅಧಿಕಾರಿಗಳ ಜೊತೆ ಒಂದು ಸಭೆಯನ್ನೂ ಕೂಡ ಇಲ್ಲಿ ಮಾಡಿದ್ದೇವೆ. ಇದರಿಂದಾಗಿ ಅಲ್ಲೂ ಈ ರೀತಿಯ ಡಕಾಯಿತಿಗಳನ್ನು ಮಾಡಿದ್ದಾರೆ, ಯಾವ ರೀತಿ ಮಾಡಿದ್ದಾರೆ ಎಂಬುದನ್ನು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಆ ರಾಜ್ಯಗಳ ಗ್ಯಾಂಗ್ ಮಾಡಿರಬಹುದೇ ಎಂಬುದನ್ನೂ ಕೂಡ ಗುರುತು ಮಾಡಿಕೊಂಡು ಅವರುಗಳನ್ನು ಪತ್ತೆ ಹಚ್ಚತಕ್ಕಂತಹ ಕೆಲಸದಲ್ಲಿದ್ದೇವೆ. ಅವರನ್ನು ಹಿಡಿಯುತ್ತೇವೆ. ನಂತರ ಇದರಿಂದಾಗಿ ಮಾನ್ಯ ಸದಸ್ಯರಿಗೆ ಹಾಗೂ ಸಾಮಾನ್ಯ ಜನರಲ್ಲಿ ಏನು ಆತಂಕ ಉಂಟಾಗಿದೆ, ಅದು ದೂರವಾಗಿ, ಪೋಲೀಸ್ ಇಲಾಖೆಯ ಮೇಲೆ ಏನೊಂದು ಅಭಿಮಾನ ಇವೆ ಅದು ಕಡಿಮೆಯಾಗದ ರೀತಿಯಲ್ಲಿ ಬಹಳಷ್ಟು ಪ್ರಯತ್ನ ಮಾಡಿ, ಅವರನ್ನು ಹಿಡಿಯುವುದಕ್ಕೆ ಏನು ಸಾಧ್ಯವೋ ಆ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ ಮತ್ತೆ ಈ ಒಂದು ಡಕಾಯಿತಿಗಳನ್ನು ಹಿಡಿಯುವುದಕ್ಕೆ ಸುಳಿವು ಕೊಟ್ಟವರಿಗೆ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಕೊಡುತ್ತೇವೆಂದೂ ಕೂಡ ಹೇಳಿದ್ದೇವೆ. ಇದೇ ರೀತಿ ಒಂದೆಯೂ ಮಾಡುತ್ತಿದ್ದರು ಆದರೆ ಇಷ್ಟೊಂದು ಮೊತ್ತವನ್ನು ಬಹುಮಾನವಾಗಿ ಇಟ್ಟಿರಲಿಲ್ಲ ಅಂತ ಕಾಣುತ್ತೆ. ಕೆಲವು ಡಕಾಯಿತರು ದುಡ್ಡಿಗೋಸ್ಕರ ಡಕಾಯಿತಿಗಳನ್ನು ಮಾಡುತ್ತಿರುತ್ತಾರೆ. ಅಂತಹವರ ಸಹವಾಸ ಇರುವಂತಹವರು ಸುಳಿವು ಕೊಟ್ಟರೆ, ಅವರಿಗೂ ಸ್ವಲ್ಪ ಸಹಾಯವಾಗಬಹುದು. ಹಾಗೂ ಇದರಿಂದ ಜನರಿಗೂ ನೆಮ್ಮದಿಯಾಗಬಹುದೆಂದು ಊಹಿಸಿ ಈ ರೀತಿಯ ತೀರ್ಮಾನವನ್ನು ಮಾಡಿದ್ದೇವೆ. ಇದರಿಂದ ಪೋಲೀಸ್ ಅಧಿಕಾರಿಗಳು ಇಂತಹ ಡಕಾಯಿತರನ್ನು ಕಂಡುಹಿಡಿಯುವುದಕ್ಕಾಗಲಿಲ್ಲ ಅವರೆಲ್ಲರೂ ಕೈಕಟ್ಟಿಕೊಂಡು ಕುಳಿತಿದ್ದಾರೆಂದು ಈ ರೀತಿಯ ಒಂದೆರಡು ಪ್ರಕರಣದ ಮುಖಾಂತರವೇ ಪೋಲೀಸ್ ಅಧಿಕಾರಿಗಳ ದಕ್ಷತೆ ಹಾಗೂ ಅವರ ಕೆಲಸಕಾರ್ಯಗಳನ್ನು ಅಳೆಯಬಾರದು, ಹಿಂದಿನ ವರ್ಷಗಳಲ್ಲಿ ನಡೆದಿರುವಂತಹ ೪-೬ ಪ್ರಕರಣಗಳಲ್ಲಿ ಪೋಲೀಸ್‌ನವರು ಆ ಜನರನ್ನು ಕಂಡುಹಿಡಿದಿದ್ದಾರೆ. ಆದ್ದರಿಂದ ಇವರನ್ನು ಕಂಡುಹಿಡಿಯುವುದಕ್ಕೆ ಪೋಲೀಸ್ ಇಲಾಖೆಯವರ ಕೈಯಲ್ಲಿ ಆಗುವುದಿಲ್ಲ ಎಂಬುದನ್ನು ನಾನು ಒಪ್ಪಿಕೊಂಡಿಲ್ಲ. ಇಂತಹ ಡಕಾಯಿತಿಗಳ ಬಗ್ಗೆ ಬೇರೆ ರಾಜ್ಯಗಳನ್ನು ಹೋಲಿಸಿ ನೋಡುವುದಾದರೆ, ಕೇರಳದಲ್ಲಿ ಇದೇ ರೀತಿಯ ಪ್ರಕರಣ ಒಂದರಲ್ಲಿ ನಾವು ಹಿಡಿದೇ ಹಿಡಿಯುತ್ತೇವೆಂದು ಪ್ರಚಾರ ಮಾಡಿ

ದ್ದರೂ, ಅವರನ್ನು ಹಿಡಿಯುವುದಕ್ಕಾಗಲಿಲ್ಲ. ನಮ್ಮವರು ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರಕರಣಗಳಲ್ಲಿ ಡಕಾಯಿತಗರನ್ನು ಹಿಡಿದಿದ್ದಾರೆ. ಮತ್ತೆ ೧೯೮೪ನೇ ಇಸವಿಯಲ್ಲಿ ಇಂತಹದ್ದೇ ಡಕಾಯಿತಿ ಹೈದರಾಬಾದ್‌ನಲ್ಲಿ ನಡೆದಿದ್ದರೆ, ಇವತ್ತಿನವರೆಗೂ ಅದನ್ನು ಪತ್ತೆಹಚ್ಚಲಾಗಲಿಲ್ಲ. ಮತ್ತೆ ೧೯೮೩ನೇ ಸಾಲಿನಲ್ಲಿ ತಮಿಳುನಾಡಿನಲ್ಲೂ ಇದೇ ರೀತಿಯ ಡಕಾಯಿತಿ ನಡೆದಿದ್ದು ಡಕಾಯಿತರು ಪತ್ತೆಯಾಗಿಲ್ಲ. ಆದ್ದರಿಂದ ಇವತ್ತು ಅಂತಹವರನ್ನು ಹಿಡಿಯುವ ಕಾಲ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ಅಧಿಕಾರಿಗಳು ದಕ್ಷರಿದ್ದು, ಅವರು ಡಕಾಯಿತರನ್ನು ಹಿಡಿಯುತ್ತಾರೆಂಬ ಆತ್ಮ ವಿಶ್ವಾಸ ನನಗಿದೆ. ಬಹುಶಃ ಕೆಲವೇ ದಿವಸಗಳಲ್ಲಿ ಬೆಂಗಳೂರು ನಗರ ಹೊರವಲಯದಲ್ಲಿ ಹಾಗೂ ಇನ್ನಿತರೆ ಕಡೆಗಳಲ್ಲಿ ನಡೆದಂತಹ ಪ್ರಕರಣಗಳಲ್ಲಿ ಡಕಾಯಿತಿಗಳನ್ನು ಹಿಡಿಯುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆಂದು ಮಾನ್ಯ ಸಭೆಗೆ ನಾನು ಆಶ್ವಾಸನೆ ಕೊಡಬಲ್ಲೆ. ಈ ಒಂದು ಪ್ರಕರಣಗಳಿಂದ ಹಲ್ಲೆಗೊಳಗಾದ ಜನರ ಆತಂಕದಲ್ಲಿ ನಾವೂ ಕೂಡ ಭಾಗಿಯಾಗಿದ್ದೇವೆ.

ಆ ಒಂದು ದುಃಖವನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳೂ ಹಾಗೂ ನಾನು ಸಾಕಷ್ಟು ಸಂದರ್ಭಗಳಲ್ಲಿ ಆಶ್ವಾಸನೆ ಕೊಟ್ಟಿದ್ದೇವೆ. ಅವರನ್ನು ಹಿಡಿಯುತ್ತೇವೆ. ಜನ ನಿರ್ಭಯವಾಗಿ ತಿರುಗಾಡಬಹುದು. ನಮ್ಮ ಜನರ ಮಾನ ಸಂರಕ್ಷಣೆಯನ್ನು, ಕಾನೂನು ಮತ್ತು ಶಾಂತಿಪಾಲನೆಯ ಮುಖಾಂತರ ತಹಬಂದಿಗೆ ತರುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆಂದು ಮಾನ್ಯ ಸಭೆಗೆ ಆಶ್ವಾಸನೆ ಕೊಡಬಲ್ಲೆ. ಮುಂದಿನ ವರ್ಷದಲ್ಲಿ ಬೆಂಗಳೂರು ನಗರದಲ್ಲಿ ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ ಅಗತ್ಯವಾಗಿ ಬೇಕಾಗಿರತಕ್ಕಂತಹ ಹೆಚ್ಚು ಪೋಲೀಸ್ ಠಾಣೆಗಳನ್ನು ಕೊಡತಕ್ಕಂಥ, ವಾಹನಗಳನ್ನು ಹೆಚ್ಚಿಸತಕ್ಕಂಥ ಹಾಗೂ ವೈರ್‌ಲೆಸ್ ಸೆಟ್‌ಗಳನ್ನು ಕೊಡತಕ್ಕಂತಹ ಯೋಚನೆ ಮಾಡಿದ್ದೇವೆ. ಆ ಯೋಚನೆಯ ಪ್ರಕಾರ ಸುಮಾರು ಒಂದು ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಈ ಎಲ್ಲ ಸೌಕರ್ಯಗಳನ್ನು ಒದಗಿಸತಕ್ಕಂತಹ ಪ್ರಯತ್ನ ಮಾಡುತ್ತೇನೆ. ಅದನ್ನು ಒಂದೊಂದನ್ನು ಹೇಳುವುದು ಬೇಕಾಗಿಲ್ಲ. ಆ ಒಂದು ಕೋಟಿ ರೂಪಾಯಿಗಳ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಬೇರೆ ಬೇರೆ ಇಲಾಖೆಗಳಲ್ಲಿ ನಡೆಯಬೇಕಾಗಿರುವಂತಹ ಅಭಿವೃದ್ಧಿ ಕಾರ್ಯಗಳಿಗೆ ಏನು ಹಣವನ್ನು ಕೊಡುತ್ತಿದ್ದೇವೆ, ಆ ಎಲ್ಲ ಅಭಿವೃದ್ಧಿ ಕಾರ್ಯಗಳು ಸಮರ್ಥ ರೀತಿಯಲ್ಲಿ ನಡೆಯಬೇಕಾಗಿದ್ದರೆ, ಶಾಂತಿ ಹಾಗೂ ನೆಮ್ಮದಿ ಅಷ್ಟೇ ಮುಖ್ಯ. ಅದಕ್ಕೋಸ್ಕರ ಈ ಒಂದು ಇಲಾಖೆಗೆ ಮುಂದಿನ ವರ್ಷದಲ್ಲಿ ಒಂದು ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಹೆಚ್ಚುವರಿ ಪೋಲೀಸ್ ಠಾಣೆ ವೈರ್‌ಲೇಸ್ ಸೆಟ್. ಮೋಟಾರು ವಾಹನಗಳು, ಹಾಗೂ ಜಿಲ್ಲಾ ಮಟ್ಟದಲ್ಲಿರತಕ್ಕ ವೈಜ್ಞಾನಿಕ ವ್ಯವಸ್ಥೆಗೆ ಇನ್ನಷ್ಟು ಸಹಾಯ ಕೊಡುವುದಕ್ಕೋಸ್ಕರ, ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಈ ವರ್ಷದಲ್ಲಿ ಅಳವಡಿಸಿಕೊಂಡಿದ್ದೇವೆ ಅದನ್ನು ಕೊಡುವುದಕ್ಕೆ ತಮ್ಮ ಅನುಮತಿಯನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಈಗಾಗಲೇ ಕೇಳಿಕೊಂಡಿದ್ದೇನೆ. ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಹೆಚ್ಚು ವಾಹನಗಳ ಸಂಚಾರ ಇರುವುದರಿಂದ, ಇದರಿಂದ ಆಗತಕ್ಕಂಥ ಅಪಘಾತಗಳನ್ನು ನೋಡುವುದಾದರೆ. ಹೋದ ವರ್ಷ ೨,೦೨೬ಕ್ಕಿಂತ ಹೆಚ್ಚಿನ ವಾಹನ ಅಪಘಾತಗಳು ಆಗಿವೆ. ಈ ರೀತಿಯ ಅಪಘಾತಗಳು ಪದೇ ಪದೇ ಯಾವ ಒಂದು ಸ್ಥಳದಲ್ಲಿ ಆಗುತ್ತಿವೆಯೋ, ಆ ಸ್ಥಳಗಳನ್ನು ಗುರುತಿಸಿ, ಆ ಸ್ಥಳದಲ್ಲಿ ಪೋಲೀಸ್‌ನ ಗೈಡನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಇದನ್ನು ತಪ್ಪಿಸುವುದಕ್ಕೋಸ್ಕರ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಲೋಕೋಪಯೋಗಿ ಇಲಾಖೆ, ಹಾಗೂ ನಮ್ಮ ಇಲಾಖೆ, ಮೂರು ಇಲಾಖೆಗಳು ಸೇರಿ ಯಾವ ರೀತಿ ಈ ಅಪಘಾತಗಳನ್ನು ತಪ್ಪಿಸಬೇಕೆಂಬುದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮಾನ್ಯ ಸಾರಿಗೆ ಸಚಿವರು, ಈ ಒಂದು ದುರಸ್ತಿಗೆ ಹಾಗೂ ಮಾರ್ಗದರ್ಶನ ನೀಡುವುದಕ್ಕೆ ಖರ್ಚಾಗುವಂತಹ ಹಣ ಏನಿದೆ, ಅಷ್ಟನ್ನು ಅವರ ಇಲಾಖೆಯ ವತಿಯಿಂದ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಅನಧಿಕೃತವಾಗಿ ಓಡಾಡತಕ್ಕಂತಹ ವಾಹನಗಳ ಮೇಲೆ ಕೇಸು ಹಾಕುವುದರಿಂದ ಆ ಇಲಾಖೆಗೆ ಸುಮಾರು ಒಂದು ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಅದನ್ನು ಇದಕ್ಕಾಗಿ ಉಪಯೋಗಿಸುವ ಪ್ರಯತ್ನ ಮಾಡುತ್ತೇವೆ. ಅದಕ್ಕೋಸ್ಕರ ಆ ಕಡೆಗೂ ಹೆಚ್ಚು ಗಮನಹರಿಸಿ ಸಾರಿಗೆ ಸಂಪರ್ಕ ಇಲಾಖೆಯ ಜೊತೆಯಲ್ಲಿ ಹೆಚ್ಚು ಹೊಂದಾಣಿಕೆಯನ್ನು ಮಾಡಿಕೊಂಡು ಅಲ್ಲಿ ಹೆಚ್ಚಿಗೆ ಹಣವನ್ನು ಉಳಿತಾಯ ಮಾಡುವುದಕ್ಕೆ ಕೆಲಸ ಮಾಡುತ್ತೇನೆ. ಪೋಲೀಸ್ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಫುಡ್ ಡಿಪಾರ್ಟ್‌ಮೆಂಟ್‌ಗೆ ಸಾಂಗ್ಲಿಯಾನ ಎಂಬ ಒಬ್ಬರು

ಡಿ.ಐ.ಜಿ ಯನ್ನು ಕೊಟ್ಟಿದ್ದೇವೆ. ಅವರ ವಿಷಯದಲ್ಲಿ ಮೆಚ್ಚಿಗೆ ಮಾತನ್ನು ಹೇಳಿದ್ದಾರೆ. ಕಳೆದ ವರ್ಷ ಫುಡ್ ಡಿಪಾರ್ಟ್‌ಮೆಂಟ್‌ನಲ್ಲಿ 1 ಕೋಟಿ ರೂಪಾಯಿ ಹಣ ವಸೂಲಾಗಿದೆ. ಅವರು ಅಲ್ಲಿ ದಕ್ಷ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಯಾಂಡಲ್ ವುಡ್ ಏನು ಕಳ್ಳತನದಿಂದ ಹೋಗುತ್ತಿತ್ತು ಅದನ್ನು ಹಿಡಿದಿದ್ದಾರೆ. ಪೋಲೀಸ್ ಅಧಿಕಾರಿಗಳು ದಕ್ಷ ರೀತಿಯಲ್ಲಿ ಕೆಲಸ ಮಾಡಿದ್ದರಿಂದ ಅಲ್ಲಿಯೂ ಕೂಡ 1ಕೋಟಿ ರೂಪಾಯಿ ಬಂದಿದೆ. ಕೆ ಎಸ್.ಆರ್.ಟಿ.ಸಿ.ಯಲ್ಲಿರತಕ್ಕ ನಮ್ಮ ಇಲಾಖೆಯ ಡಿ.ಐ.ಜಿ.ಯವರು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ನಮ್ಮ ಇಲಾಖೆಯ ದಕ್ಷ ಅಧಿಕಾರಿಗಳನ್ನು ನಾವು ಬೇರೆ ಇಲಾಖೆಗಳಿಗೆ ಎರವಲು ಸೇವೆಯ ಮೇಲೆ ಕಳುಹಿಸುವುದರಿಂದ ನಮ್ಮ ಇಲಾಖೆಯಲ್ಲಿ ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬೇರೆ ಇಲಾಖೆಯಲ್ಲಿ ಮಾಡತಕ್ಕ ಕಾರ್ಯ ಅತ್ಯುತ್ತಮ ಕಾರ್ಯ. ಫುಡ್ ಡಿಪಾರ್ಟ್‌ಮೆಂಟ್‌ನಲ್ಲಿ ಕದ್ದು ಹೋಗುತ್ತಿದ್ದಂತಹ ಆಹಾರಧಾನ್ಯಗಳನ್ನು ನಿಲ್ಲಿಸಿದ್ದರಿಂದ ಲಾಭವಾಗಿದೆ. ಮಾನ್ಯ ಸದಸ್ಯರಾದ ಚಿನ್ನಪ್ಪನವರು ಮಾತನಾಡುತ್ತಾ ಕೊಡುಗು ಜಿಲ್ಲೆಯಲ್ಲಿ ಹುಲ್ಲು ಮತ್ತು ಗೊಬ್ಬರ ಹೊರಗಡೆ ಹೋಗುತ್ತಿದೆ ಎಂದು ಹೇಳಿದರು. ಅದೇ ರೀತಿ ಮಾನ್ಯ ಶಿವಣ್ಣನವರು ಸಹ ಹೇಳಿದರು. ನಮಗೆ ಬೇಕಾಗಿರತಕ್ಕ ಹುಲ್ಲನ್ನು ಬೇರೆ ಕಡೆ ಸಾಗಿಸಿದರೆ ನಮಗೆ ಕಷ್ಟವಾಗುತ್ತದೆ. ಅದು ಹೊರಗಡೆ ಹೋಗದ ಹಾಗೆ ನೋಡಿಕೊಂಡರೆ ನಮ್ಮಲ್ಲಿರತಕ್ಕ ಅಭಾವವನ್ನು ನೀಗಿಸುವುದಕ್ಕೆ ಸಾಧ್ಯವಾಗುತ್ತದೆ. ಪೋಲೀಸ್ ಇಲಾಖೆಯ ತರಹ ಬೇರೆ ಇಲಾಖೆಗಳು ಸಹ ಕೆಲಸ ಮಾಡಬೇಕು. ಆಯಾ ಇಲಾಖೆಗಳ ಕೆಲಸಗಳನ್ನು ಆಯಾ ಇಲಾಖೆಗಳು ನೋಡಿಕೊಂಡರೆ ಪೋಲೀಸ್ ಇಲಾಖೆಗೆ ಹೆಚ್ಚು ಹೊರೆ ಬೀಳುವುದಿಲ್ಲ ಯಾವುದೇ ಕೆಲಸ ಆಗಲಿ. ಬೇರೆ ಅಧಿಕಾರಿಗಳಿಂದ ಕೆಲಸ ಆಗುತ್ತಿಲ್ಲವೆಂದು ಹೇಳುತ್ತಿಲ್ಲ. ಇರತಕ್ಕ ಅಧಿಕಾರಿಗಳಿಂದ ಕೆಲಸ ಸಫಲವಾಗಿದೆ, ದಕ್ಷ ಅಧಿಕಾರಿಗಳು ಬಂದರೆ ಮಾತ್ರ ಕೆಲಸ ಚೆನ್ನಾಗಿ ನಡೆಯುತ್ತದೆ. ಯಾರ್ಯಾರು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿದ್ದಾರೆ ಅಂತಹವರನ್ನು ಬದಲಾವಣೆ ಮಾಡಿ ದಕ್ಷರಾಗಿರುವವರ ಕಡೆಯಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಬಹುಶಃ ಪೋಲೀಸ್ ಇಲಾಖೆಯಲ್ಲಿ ಆಗಿರತಕ್ಕಂತಹ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿರುವ ಅಂಕಿಅಂಶಗಳನ್ನು ನೋಡಿದರೆ ಬೇರೆಲ್ಲೂ ಸಸ್ಪೆಂಡ್, ಡಿಸ್‌ಮಿಸ್ ಮಾಡಿಲ್ಲ. ಶಿಸ್ತಿನ ಕ್ರಮ ತೆಗೆದುಕೊಂಡಿರುವುದು ಇದ್ದರೆ ಅದು ನಮ್ಮ ಇಲಾಖೆಯಲ್ಲಿದೆ. ಮೇಲಿನಾಧಿಕಾರಿಗಳಿಗೆ ಕೆಳಗಡೆ ಇರತಕ್ಕವರು ಸಲಾಮು ಹೊಡೆಯುತ್ತಾರೆಂದರೆ ಅಂತಹ ಶಿಸ್ತು ನಮ್ಮ ಇಲಾಖೆಯಲ್ಲಿದೆ. ಎಲ್ಲೋ ಒಂದು ಕಡೆ ಏನೋ ಆದರೆ ರಾಜ್ಯದ ಆಡಳಿತ ಕುಸಿದು ಬೀಳುತ್ತದೆಂದು ಹೇಳುವುದು ಸರಿಯಲ್ಲ. ನಮ್ಮಲ್ಲಿಯೂ ಅಲ್ಪಸ್ವಲ್ಪ ದೋಷಗಳು ಇರಬಹುದು ಅದನ್ನೇ ಬೃಹದಾಕಾರ ಮಾಡಿ ರಾಜ್ಯದ ಜನತೆಗೆ ಏನೂ ನೆಮ್ಮದಿಯಿಲ್ಲ, ಶಾಂತಿಯಿಲ್ಲ ಎಂದು ಹೇಳುವುದು ಸರಿಯಲ್ಲ. ಮಾನ್ಯ ಖರ್ಗೆಯವರು ಮಾತನಾಡುತ್ತಾ ಒಂದು ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ ಮಾನ್ಯ ಸ್ವಾಮಿರಾವ್‌ರವರು ಪ್ರಭಾವಕ್ಕೆ ಒಳಗಾಗಿದ್ದಾರೆಂದು ಹೇಳಿದ್ದಾರೆ. ಯಾರ್ಯಾರು ಅಧಿಕಾರದಲ್ಲಿರುತ್ತಾರೆ ಅವರು ಸ್ವಾಭಾವಿಕವಾಗಿ ಕೆಲವು ಸಂದರ್ಭಗಳಲ್ಲಿ ಪ್ರಭಾವಕ್ಕೆ ಒಳಗಾಗುತ್ತಾರೆ. ಮನುಷ್ಯರಾಗಿರತಕ್ಕವರು ತಪ್ಪು ಮಾಡುವುದಿಲ್ಲವೆಂದು ಹೇಳುವುದಿಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಮೇಲೆ ಹಲ್ಲೆ ದೌರ್ಜನ್ಯ ಮಾಡಿದವರನ್ನು ಹಿಡಿಯಲಿಲ್ಲವೆಂದು ಹೇಳಿದರು. ಅವರನ್ನು ಹಿಡಿಯಲಿಕ್ಕೆ ಹಿಂದು ಮುಂದು ನೋಡುತ್ತಿದ್ದಾರೆಂದು ನನಗೆ ಆಗಾಗ್ಗೆ ಮೂದಲಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಮೇಲೆ ದೌರ್ಜನ್ಯ ನಡೆಸಿದಂತಹ ನಂದಕುಮಾರ್ ಅವರ ಹೇಳಿಕೆಯನ್ನು ಓದಬಾರದೆಂದು ಬಹಳ ದಿವಸಗಳಿಂದ ಇಟ್ಟುಕೊಂಡಿದ್ದೆ. ಈಗ ಅವರು ಒತ್ತಾಯ ಮಾಡಿ ನನ್ನನ್ನು ಮೂದಲಿಸುತ್ತಿರುವುದನ್ನು ನೋಡಿದರೆ ನಾನು ಆ ಹೇಳಿಕೆಯನ್ನು ಓದಬೇಕಾಗಿದೆ. ದಿವಂಗತ ನಂದಕುಮಾರ್ ಕೊಟ್ಟಿರತಕ್ಕ ಹೇಳಿಕೆ ಈ ರೀತಿ ಇದೆ.

"Voluntary Statement of Sri Nanda @ Nanda Kumar S/o V. N. Gangadhara Naidu age 24 Years R/O No. 124 (A) 13th Cross, Pillamma Block, Srirampuram, Bangalore:

ನಾನು ಈ ಮೇಲ್ಕಂಡ ವಿಳಾಸದಲ್ಲಿ ನನ್ನ ತಂದೆ ತಾಯಿಯೊಟ್ಟಿಗೆ ವಾಸವಾಗಿದ್ದೇನೆ. ನಮ್ಮ ತಂದೆ ತಾಯಿಗೆ ನಾವು ಒಟ್ಟು 6 ಜನ ಮಕ್ಕಳು. ನಾನೇ ಕೊನೆಯವನು. ಅದರಲ್ಲಿ ದೊಡ್ಡ ಅಣ್ಣನಾದ ಆತ್ಮಜ್ಯೋತಿ ಎಂಬುವರು ಪ್ರಕಾಶನಗರದಲ್ಲಿ ವಾಸವಾಗಿದ್ದು

ಅಲ್ಲಿಯೇ ಸಣ್ಣ ಫ್ಯಾಕ್ಟರಿಯನ್ನು ನಡೆಸುತ್ತಿದ್ದಾರೆ. ಎರಡನೇ ಅಣ್ಣ ನಿತ್ಯಾನಂದ ಮತ್ತು ದೊಡ್ಡ ಅಕ್ಕ ರಾಜೇಶ್ವರಿ ಇಬ್ಬರೂ ಕೂಡಿ "ಜ್ಯೋತಿ ಸ್ಕೂಲ್" ಎಂಬ ಹೆಸರಿನ ಸ್ಕೂಲನ್ನು ನಡೆಸುತ್ತಿದ್ದಾರೆ. ಎರಡನೇ ಅಕ್ಕ ಜಗದೀಶ್ವರಿ ಅವಳ ಗಂಡ ನೋಡಿದ್ದಾರೆ. ಮೂರನೇ ಅಕ್ಕ ಸತ್ಯಪ್ರೇಮ ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನಲ್ಲಿ ಗುಮಾಸ್ತಳಾಗಿದ್ದಾಳೆ. ನಾನು ಗೌರ್ನಮೆಂಟ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ೧೯೭೬ನೇ ಇಸವಿಯಲ್ಲಿ ಎರಡನೇ ಬಿ.ಎಸ್.ಸಿ. ಯವರೆಗೆ ಓದಿದ್ದೇನೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ನಾವು ಸಚಿವರ ಉತ್ತರಕ್ಕೆ ಅಡ್ಡಿ ಬರುವುದಕ್ಕೆ ಆಗುವುದಿಲ್ಲ. ನಮಗೆ ಎಷ್ಟು ವಿಚಾರ ಬೇಕೋ ಅಷ್ಟನ್ನು ಹೇಳಿದರೆ ಸಾಕು. ಮಾನ್ಯ ಸಚಿವರು ಹೇಳತಕ್ಕ ವಿಚಾರ ಸದನದಲ್ಲಿ ಪ್ರಸ್ತಾಪವಾಗಿದೆ. ಪತ್ರಿಕೆಗಳಲ್ಲಿ ಬಂದಿದೆ, ಜೊತೆಗೆ ಚಾರ್ಜ್‌ಶೀಟ್ ಕೂಡ ಹಾಕಲಾಗಿದೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿರತಕ್ಕದ್ದು ಪತ್ರಿಕೆಗಳಲ್ಲಿ ಬಂದಿದೆ. ಅಟ್ಯಾಕ್ ಮಾಡಿದಂತಹವರ ಮೇಲೆ ಚಾರ್ಜ್‌ಶೀಟ್ ಹಾಕಲಾಗಿದೆ. If the charge sheet has been filed, the matter becomes sub-judice. ಪೋಲೀಸ್ ದಾಖಲೆಗೆ ಹೋದ ಮೇಲೆ ಅದು ಸಬ್ ಜುಡೀಸ್ ಆಗುತ್ತದೆ, If the FIR has been filed, it will not become sub-judice... If the charge-she t has already been filed in the court, the matter becomes sub-judice and you cannot read out this Statement ಒಮ್ಮೆ ಓದಿದ ಮೇಲೆ That becomes a subject for discussion in this House.

ಶ್ರೀ ರಾಮಕೃಷ್ಣ ಹೆಗಡೆ.—ಸಬ್ ಜುಡೀಸ್ ಆಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ನನ್ನನ್ನು ಹೇಳಲಿಲ್ಲವೆಂದು ಆ ಕಡೆಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಗೃಹಮಂತ್ರಿಗಳು ಏನೋ ಬಚ್ಚಿಟ್ಟುಕೊಂಡಿದ್ದಾರೆ ಏತಕ್ಕೋ ಹಿಂಜರಿಯುತ್ತಿದ್ದಾರೆ. ಭಯಪಡುತ್ತಿದ್ದಾರೆಂದು ನನ್ನ ಮೇಲೆ ಹೇಳುವುದಾದರೆ ಇದನ್ನು ಓದಬೇಕಾಗುತ್ತದೆ.

SRI. M. VEERAPPA MOILY —If the charge-sheet has already been filed, it becomes sub-judice since it will be a matter pendingbefore the Court ವಿಷಯಗಳನ್ನು ಎತ್ತಬಹುದು, ಚರ್ಚೆ ಮಾಡಬಹುದು ಎಂದರೆ, it becomes a precedent. If the Hon. Speaker lays down a precedent, it is left to the Chair...

ಶ್ರೀ ರಾಮಕೃಷ್ಣ ಹೆಗಡೆ.—ಚರ್ಚೆ ಮಾಡುವುದಿಲ್ಲ,

ಶ್ರೀ ಬಿ. ರಾಚಯ್ಯ.—ತಾವು ಹೇಳುವವರೆಗೂ ತಾವು ಸುಮ್ಮನೆ ಇರುತ್ತೇವೆ ನಾನು ಹೇಳುವಾಗ ತಾವು ಹೀಗೆ ಮಾಡಿದರೆ ಹೇಗೆ ?

SRI M VEERAPPA MOILY.—Once it becomes the property of this House, it is pronote that it is open for discussion. ತಾವು ಇದರ ಬಗ್ಗೆ ರೂಲಿಂಗ್ ಕೊಡಿ.

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ ಮಾತನಾಡುವಾಗ ಮಾನ್ಯ ಖರ್ಗೆಯವರು ಮಾನ್ಯ ಧರ್ಮಸಿಂಗ್‌ರವರು ಇದರಲ್ಲಿ ಏನೋ ಇದೆ ನಿಮಗೆ ಹೇಳುವುದಕ್ಕೆ ಇಷ್ಟವಿಲ್ಲವೆಂದು ಹೇಳುತ್ತಿದ್ದರು.

ಶ್ರೀ ಬಿ.ಜಿ. ಕೊಟ್ರಪ್ಪ.—ಕೇಸಿನ ಸ್ವಭಾವ ಮತ್ತು ಹಂತವನ್ನು ಹೇಳಿದರೆ ಸಬ್‌ಜ್ಯುಡೀಸ್ ಆಗುವುದಿಲ್ಲ,

ಶ್ರೀ ಬಿ. ರಾಚಯ್ಯ.—ನಂದಕುಮಾರ್ ಕೊಟ್ಟಿರತಕ್ಕ ಹೇಳಿಕೆಯನ್ನು ಮತ್ತೆ ಓದುತ್ತೇನೆ.

"......ನಂತರ ಮಲ್ಲೇಶ್ವರದಲ್ಲಿ ೧೯೭೭ ನೇ ಇಸವಿಯಲ್ಲಿ ರೇಡಿಯೋ ಇಂಜಿನಿ-ಯರಿಂಗ್ ಕೋರ್ಸನ್ನು ಮುಗಿಸಿದ್ದೇನೆ. ನನಗೆ ರಾಜಕೀಯ ಏನೆಂದು ಗೊತ್ತಿರಲಿಲ್ಲ. ೧೯೭೭ ನೇ ಇಸವಿಯಲ್ಲಿ ಒಂದು ಸಿಮೆಂಟ್ ವಿಚಾರದಲ್ಲಿ ಗಲಾಟೆಯಾಗಿ ಶ್ರೀರಾಂಪುರದ ಪೋಲೀಸಿನವರು ನನ್ನನ್ನು ಹಿಡಿದುಕೊಂಡು ಹೋಗಿದ್ದರು. ಆಗ ಶ್ರೀರಾಂಪುರದ ವಾಸಿ ಅಪರಂಜಿ ಎಂಬುವರು ನನ್ನನ್ನು ಬಿಡಿಸಿಕೊಂಡು ಬಂದರು. ಅಪರಂಜಿಯು ರಾಜಕೀಯದಲ್ಲಿದ್ದು ಶ್ರೀ ಎಂ. ಡಿ. ನಟರಾಜ್ ಎಂಬುವರ ಒಡನಾಡಿಯಾಗಿದ್ದು ಅವನಿಂದ ನನಗೆ ಎಂ. ಡಿ. ನಟರಾಜ್‌ರವರ ಮತ್ತು ಹೆಚ್. ಟಿ. ರೆಡ್ಡಿಯವರ ಪರಿಚಯವಾಯ್ತು. ಆಗ ನಾನು ಅಪರಂಜಿ ಜೊತೆಯಲ್ಲಿ ಎಷ್ಟೋ ಸಾರಿ ಕಾಂಗ್ರೆಸ್ ಆಫೀಸಿಗೆ ಹೋಗಿ ಗಲಭೆಗಳಲ್ಲಿ ಭಾಗಿಯಾಗಿದ್ದೆ. ೧೯೭೯ ನೇ ಇಸವಿಯಲ್ಲಿ ನನ್ನ ಸ್ನೇಹಿತರಾದ ಶ್ರೀ ಸುಂದರಂ ನಾಯ್ಡು ಎಂಬುವವರಿಂದ ಶ್ರೀ ಬಂಗಾರಪ್ಪನವರು ಪರಿಚಯವಾದರು. ಶ್ರೀ ಸುಂದರಂ ನಾಯ್ಡುರವರು ಈ ಹಿಂದೆ ಸುಮಾರು ೫ ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದರು. ಇವರ ಜೊತೆಗೆ ನಾನು ಎಷ್ಟೋ ಬಾರಿ ಶ್ರೀ ಬಂಗಾರಪ್ಪನವರ ಮನೆಗೆ ಅಂದರೆ ಕುಮಾರ ಪಾರ್ಕ್ ರೈಲ್ವೆ ಲೈನ್ ಪಕ್ಕದಲ್ಲಿರುವ ಮನೆಗೆ ಹೋಗಿದ್ದೇನೆ. ಶ್ರೀ ಸುಂದರಂ ನಾಯ್ಡುರವರು ಶ್ರೀ ಬಂಗಾರಪ್ಪನವರಿಗೆ ಬಹಳ ಬೇಕಾದ ವ್ಯಕ್ತಿ. ಅಂದರೆ ಖಾಸಗೀ ಶಿಷ್ಯ. ಅವರ ಏನೇ ಕೆಲಸವಿದ್ದರೂ ಬಂಗಾರಪ್ಪನವರು ಸುಂದರಂ ನಾಯ್ಡುರವರಿಗೆ ಹೇಳುತ್ತಿದ್ದರು. ಅವರ ಹಣದ ವ್ಯವಹಾರವೂ ಸಹ ಸುಂದರಂ ನಾಯ್ಡುರವರೇ ನಡೆಸುತ್ತಿದ್ದರು. ಎಷ್ಟೋ ಸಾರಿ ಕಾಂಗ್ರೆಸ್ ಸಭೆಗೆ ಮತ್ತು ಮೆರವಣಿಗೆಗಳಿಗೆ ಜನಗಳನ್ನು ಕರೆತರಲು ನಾಯ್ಡುರವರಿಗೆ ಹೇಳಿ ಹಣ ಕೊಡುತ್ತಿದ್ದರು, ಅವರು ನನಗೆ ಹೇಳುತ್ತಿದ್ದರು ನಾನು ಜನಗಳನ್ನು ಲಾರಿಗಳಲ್ಲಿ ಸಭೆಗಳಿಗೆ ಮತ್ತು ಮೆರವಣಿಗೆಗೆ ಕರೆತರುತ್ತಿದ್ದೆ. ಅದೇ ರೀತಿ ಎಷ್ಟೋ ಗಲಾಟೆಗಳನ್ನು ಮಾಡಿಸಲು ಸಹ ನನಗೆ ಹೇಳುತ್ತಿದ್ದರು, ಅದನ್ನು ಸಹಾ ನಾನು ಮಾಡಿಸಿದ್ದೇನೆ. ಸುಂದರಂನಾಯ್ಡುರವರ ಮೇಲೆ ಬಂಗಾರಪ್ಪನವರು ಬಹಳ ನಂಬಿಕೆ ಅದು ನನಗೆ ಚೆನ್ನಾಗಿ ಗೊತ್ತು. ತಾರೀಖು ೧-೧೧-೮೫ ರಂದು ಶುಕ್ರವಾರ ನಾನು ನಮ್ಮ ಮನೆಯಲ್ಲಿದ್ದಾಗ ಸಾಯಂಕಾಲ ಸುಮಾರು ೭-೦೦ ಗಂಟೆಯಲ್ಲಿ ಶ್ರೀ ಬಂಗಾರಪ್ಪನವರು ಹೇಳಿದ್ದಾರೆ ಎಂದು ಹೇಳಿ ನಾನು ಕಾಂಗ್ರೆಸ್ ಆಫೀಸಿನಲ್ಲಿಗೆ ಹೋಗಿ ಗಲಾಟೆಮಾಡಿ ಗುಂಡೂರಾವ್‌ರವರಿಗೆ ಜಿಂದಬಾದ್ ಎಂಬ ಘೋಷಣೆಗಳನ್ನು ಕೂಗಿ ಬರಬೇಕೆಂದು ಹೇಳಿದರು, ಅದಕ್ಕೆ ನಾನು ಒಪ್ಪಿಕೊಂಡೆ ಅನಂತರ ಅವರು ಹೊರಟು ಹೋದರು. ಮೂರನೇ ದಿವಸ ಮತ್ತು ಭಾನುವಾರ ಕಾಂಗ್ರೆಸ್ ಆಫೀಸಿಗೆ ಹೋದಾಗ ಆಫೀಸು ಮುಚ್ಚಿತ್ತು. ಸೋಮವಾರ ೪-೧೧-೮೫ ರಂದು ಕಾಂಗ್ರೆಸ್ ಆಫೀಸ್ ತೆಗೆದುದನ್ನು ಬೆಳಿಗ್ಗೆ ನೋಡಿಕೊಂಡು ಹೋಗಿ ನಮ್ಮ ಮನೆಯ ಹತ್ತಿರವಿರುವ ನನ್ನ ಸ್ನೇಹಿತ ರವಿ ಎಂಬುವವನನ್ನು ಕರೆದುಕೊಂಡು ಶ್ರೀರಾಂಪುರದಲ್ಲಿರುವ ರಂಭಾ ವೈನ್ ಸ್ಟೋರ್‌ನಲ್ಲಿ ಇಬ್ಬರು ರಮ್ ಕುಡಿದು ಅಲ್ಲಿಂದ ಪ್ರಕಾಶನಗರಕ್ಕೆ ನನ್ನ ಸ್ನೇಹಿತರನ್ನು ನೋಡಲು ಹೋದೆವು. ನಂತರ ಮತ್ತೆ ಸೌಮ್ಯ ಬಾರ್‌ನಲ್ಲಿ ಕುಡಿದೆವು. ಅಲ್ಲಿಂದ ಬಂದು ಒಂದು ಆಟೋವನ್ನು ಹಿಡಿದು ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರೋಡಿಗೆ ಹೋದೆವು. ಆಗ ರವಿಗೆ ಕಾಂಗ್ರೆಸ್ ಆಫೀಸಿಗೆ ಹೋಗಿ ಗಲಾಟೆ ಮಾಡಬೇಕೆಂದು ಮತ್ತು ಗುಂಡೂರಾವ್‌ಗೆ ಜಿಂದಾಬಾದ್ ಎಂದು ಕೂಗ ಬೇಕೆಂದು ಹೇಳಿ ಕೊಟ್ಟೆ. ನಂತರ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಎಳ ನೀರನ್ನು ಕಟ್ಟಿದ ಮತ್ತು ಮಚ್ಚನ್ನು ತಗಲಿ ಹಾಕಿದ್ದ ಸೈಕಲ್ಲನ್ನು ನೋಡಿ ಆಟೋರಿಕ್ಷಾ ನಿಲ್ಲಿಸಿ ಮಚ್ಚನ್ನು ನಾನು ತೆಗೆದುಕೊಂಡು ಮತ್ತು ಅದೇ ಆಟೋದಲ್ಲಿ ನಾವಿಬ್ಬರೂ ನಮ್ಮ ಮನೆಗೆ ಬಂದೆವು. ಅಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಜೀವ ಅಲಿಯಾಸ್ ಮಹಾದೇವ ರಸ್ತೆಯಲ್ಲಿದ್ದ ಅವನನ್ನು ಸಹಾ ಕರೆದುಕೊಂಡು ನನ್ನ ರೂಮಿಗೆ ಹೋಗಿ ಅಲ್ಲಿದ್ದ ಒಂದು ಕ್ವಾರ್ಟರ್ ರಮ್ಮನ್ನು ಮೂವರೂ ಕುಡಿದೆವು. ಅಲ್ಲಿಂದ ಒಂದು ಆಟೋ ಹಿಡಿದು ಮೂವರು ಕಾಂಗ್ರೆಸ್ ಆಫೀಸಿನ ಬಳಿ ಬಂದೆವು. ಮಚ್ಚನ್ನು ರವಿಯ ಕೈಗೆ ಕೊಟ್ಟು ಕಳುಹಿಸಿದೆ. ನಾನು ಹರೇಕೃಷ್ಣ ರಸ್ತೆಯಲ್ಲಿ ಕಾಂಗ್ರೆಸ್ ಆಫೀಸಿನ

ಕ್ಯಾಂಟಿನ್ ಎದುರಿಗೆ ನಾವು ಒಂದು ಆಟೋವನ್ನು ನಿಲ್ಲಿಸಿಕೊಂಡು ನಿಂತಿದ್ದೆವು. ರವಿ ಮತ್ತು ದೇವನಿಗೆ ಕಾಂಗ್ರೆಸ್ ಆಫೀಸಿನ ಬಲಗಡೆ ರೂಮಿಗೆ ನುಗ್ಗಿ ಗಲಾಟೆ ಮಾಡಬೇಕೆಂದೂ ಸಹಾ ಹೇಳಿದ್ದೆ. ಅವರು ಹೋಗಿ ಸ್ವಲ್ಪ ಹೊತ್ತಿಗೆ ಕೂಗಾಟದ ಶಬ್ದ ಕೇಳಿ ಬಂದಿತು. ತಕ್ಷಣ ನಾನು ಕಾಂಗ್ರೆಸ್ ಆಫೀಸಿನ ಕಾಂಪೌಂಡಿನೊಳಗೆ ಹೋದಾಗ ರವಿ ವರಾಂಡದಲ್ಲಿ ಮಚ್ಚನ್ನು ಹಿಡಿದು ನಿಂತಿದ್ದ ದೇವಾ ಸಹಾ ಅವನಿಂದಿದ್ದ ನಾನು ಸಾಕುಬನ್ರೋ ಹೋಗೋಣ ಎಂದು ಹೇಳಿ ನನ್ನನ್ನು ಬೇರೆಯುವರು ನೋಡುತ್ತಾರೆಂದು ತಕ್ಷಣ ಅಲ್ಲಿಂದ ನಾನು ನಿಲ್ಲಿಸಿದ್ದ ಆಟೋರಿಕ್ಷಾದಲ್ಲಿ ನನ್ನ ಮನೆಗೆ ಹೋದೆ, ಅಲ್ಲಿಗೆ ರವಿ ಮತ್ತು ದೇವ ಅಲಿಯಾಸ್ ಮಹದೇವ ಸ್ವಲ್ಪ ಹೊತ್ತಿನ ನಂತರ ಬಂದು ಸೇರಿದರು. ಸಾಯಂಕಾಲ ನಮ್ಮ ರೂಮಿನಲ್ಲಿದ್ದಾಗ ಪೋಲೀಸರು ಬಂದರೆಂದು ಸುದ್ದಿ ಕೇಳಿ ನಾನು ನನ್ನ ಮನೆಯ ಹಿಂಬಾಗಿಲಿನಿಂದ ಓಡಿ ತಪ್ಪಿಸಿಕೊಂಡೆ. ನಂತರ ಸೌಮ್ಯ ಬಾರಿಗೆ ಹೋಗಿ ಕುಡಿದು ಪ್ರಕಾಶ್‌ನಗರದಲ್ಲಿರುವ ನಮ್ಮ ಅಣ್ಣನ ಮನೆಗೆ ಹೋಗಿ ಮಲಗಿಕೊಂಡೆ. ಮಾರನೆ ದಿವಸ ರವಿ ಮತ್ತು ದೇವ ಅಲಿಯಾಸ್ ಮಹದೇವನನ್ನು ಪೋಲೀಸರು ಹಿಡಿದುಕೊಂಡು ಹೋಗಿದ್ದಾರೆಂದು ಗೊತ್ತಾಯಿತು. ನಾನು ಹೆದರಿಕೊಂಡು ನಮ್ಮ ಮನೆಗೆ ಹೋಗದೆ ನಮ್ಮ ಮನೆಯ ಪಕ್ಕದಲ್ಲಿರುವ ಫೋನಿಗೆ ಫೋನ್ ಮಾಡಿದೆ, ಆಗ ನನ್ನ ಅಕ್ಕ ರಾಜೇಶ್ವರಿ ಬಂದು ನನ್ನನ್ನು ಫೋನಿನಲ್ಲಿ ಬಹಳ ಬೈದಳು. ಅಂದರೆ ನಂದನಿಂದ ಬಹಳ ಅವಮಾನವಾಯಿತೆಂದು ಮತ್ತು ನನ್ನ ಅಣ್ಣ ನಿತ್ಯಾನಂದನಿಗೆ ನನ್ನ ಬಗ್ಗೆ ಪೀಡಿಸುತ್ತಿದ್ದಾರೆಂದು ಹೇಳಿ ಬೈಯ್ದಳು, ಆಗ ನನಗೆ ಆ ಮಾತನ್ನು ಕೇಳಿ ಬಹಳ ಬೇಜಾರಾಯ್ತು. ನಂತರ ಶ್ರೀರಾಂಪುರದ ಔಷಧಿ ಷಾಪಿನಲ್ಲಿ ಕಾಂಪೋಸ್ ಮಾತ್ರೆಗಳನ್ನು ತೆಗೆದುಕೊಂಡು ಅಲ್ಲಿಂದ ಪ್ರಕಾಶ್‌ನಗರಕ್ಕೆ ಹೋಗಿ ಒಂದು ಕಾಕಾ ಅಂಗಡಿಯಲ್ಲಿ ಡಾಲ್ಫಿ ಬಾಟಲ್‌ಗಳನ್ನು ತೆಗೆದುಕೊಂಡು ನವರಂಗ್ ಟಾಕೀಸಿನ ಬಳಿ ಇರುವ ಪೂರ್ಣಿಮಾ ಎಂಬ ಹೋಟೆಲಿಗೆ ಹೋಗಿ ಅಲ್ಲಿ ಡಾಲ್ಫ್ ಮತ್ತು ಮಾತ್ರೆಗಳನ್ನು ಕಲಕಿ ಕುಡಿದು ನನ್ನ ಅಣ್ಣನ ಮನೆಗೆ ಬಂದು ಮಗಿಬಿಟ್ಟೆ. ನನಗೆ ಎಚ್ಚರವಾದಾಗ ನನ್ನನ್ನು ಕೆ. ಸಿ. ಜಿ. ಜನರಲ್ ಆಸ್ಪತ್ರೆಗೆ ಸೇರಿಸಿದ್ದುದು ಗೊತ್ತಾಯಿತು. ಕಾಂಗ್ರೆಸ್ ಆಫೀಸಿನಲ್ಲಿ ಗಲಾಟೆ ಮಾಡಬೇಕೆಂದು ಶ್ರೀ ಸುಂದರಂನಾಯ್ಡು ಹೇಳಿದ್ದರಿಂದ ರವಿ ಮತ್ತು ದೇವ ಅಲಿಯಾಸ್ ಮಹಾದೇವ ಎಂಬುವರನ್ನು ಕರೆದುಕೊಂಡು ಹೋಗಿ ಗಲಾಟೆ ಮಾಡಿಸಿದ್ದು ನಿಜ. ನನ್ನನ್ನು ಕರೆದುಕೊಂಡು ಹೋದರೆ ಮಚ್ಚು ತೆಗೆದುಕೊಂಡಿದ್ದ ಜಾಗಗಳನ್ನು ಇತರೆ ಜಾಗಗಳನು ತೋರಿಸುತ್ತೇನೆ.''

ನನ್ನಿಂದ ಓದಲಾಯ್ತು ಕೇಳಿದೆ ಸರಿ

ಸಹಿ.—ಜಿ. ಆರ್. ಪರಮೇಶ್ವರಪ್ಪ ೧೪–೧೧–೬೫ ಯಾಗಿದೆ

೧೧–೩೦ ಪಿ. ಎಂ.

ಇದರಲ್ಲಿ ನನಗೆ ಅನ್ನಿಸುವುದೇನೆಂದರೆ. ಬಹುಶಃ ಬೆಂಗಳೂರಿನಲ್ಲಿ ಕಾಗ್ರೇಂಸ್ ಕಛೇರಿಯಲ್ಲಿ ನಡೆದ ಗಲಾಟೆ ಮತ್ತು ಮೈಸೂರಿನಲ್ಲಿ...............

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಓದಿದರು, ಇದು ಸೆಕ್ಷನ್ ೧೬೨ರ ಪ್ರಕಾರ ಇನತಕ್ಕಂಥಾದ್ದೋ ಅಥವಾ ಒಬ್ಬ ಕಾನ್‌ಸ್ಟೇಬಲ್ ಬರೆದುಕೊಂಡು ಬಂದದ್ದೋ ?

ಶ್ರೀ ಬಿ. ರಾಚಯ್ಯ.—ನಾನು ಈ ಸ್ಟೇಟ್‌ಮೆಂಟ್ ಓದಿದ ಮೇಲೆ ಏನು ಅನ್ನಿಸತೆಂದರೆ. ರಾಜಕಾರಣಿಗಳು ಇದರ ಹಿನ್ನೆಲೆಯಲ್ಲಿದ್ದಾರೆ. ಎಂದು ನಾನು ರಾಜಕಾರಣಿಗಳು ಇದರ ಹಿನ್ನೆಲೆಯಲ್ಲಿದ್ದಾರೆಂದು ಹೇಳಿದೆ ಅಷ್ಟೇ ಹೊರತು, ಇಂತಹ ಪಕ್ಷದವರು ಎಂದು ಹೇಳಲಿಲ್ಲ. ಬಹುಶಃ ಇದರಲ್ಲಿ ರಾಜಕಾರಣಿಗಳ ಪ್ರಭಾವ ಇರಬಹುದೆಂದು ನನ್ನ ಊಹೆ. ಕಾಂಗ್ರೆಸ್ ಅಧ್ಯಕ್ಷರ ಅಮಾನುಷ ಕೊಲೆಗೆ ಪ್ರಯತ್ನಿಸಿದ್ದಾರೆಂದೂ ನಾನು ತಿಳಿದಿದ್ದೇನೆ. ಇದರಲ್ಲಿ ರಾಜಕಾರಣಿಗಳ ಕೈವಾಡವನ್ನು ತಳ್ಳಿಹಾಕುವುದಕ್ಕಾಗುವುದಿಲ್ಲ. ಮೊನ್ನೆ ತಾನೇ ಸುಮಾರು ೯ ಜನರನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಹೆಚ್ಚಿನ ರೀತಿಯಲ್ಲಿ ಗೂಂಡಾಗಿರಿಯನ್ನು ಮಾಡಿದವರನ್ನು ನಾವು ಹಿಡಿದಿದ್ದೇವೆ. ದಿವಾಕರ ಹೆಗಡೆ ಎಂಬುವವರನ್ನೂ ಹಿಡಿದ್ದೇವೆ. ೯ ಕೇಸುಗಳು ಅವರ ಮೇಲಿವೆ. ಅವರ ಕಾರಿನಲ್ಲಿ ಮಚ್ಚು, ರಿವಾಲ್ವರ್,

ಮತ್ತು ವಿವಿಧ ರೀತಿಯ ಆಯುಧಗಳು ಇದ್ದವು ಯಾವ ಯಾವ ಜನರ ಹಿಂದೆ ಅವರು ಓಡಾಡುತ್ತಿದ್ದಾರೆ, ಯಾರು ಯಾರು ಅವರಿಗೆ ಸುಳಿವು ಕೊಡುತ್ತಿದ್ದಾರೆ ಮತ್ತು ರಾಜಕೀಯ ವ್ಯಕ್ತಿಗಳ ಬೆಂಬಲವಿಲ್ಲದಿದ್ದರೆ, ಅವರು ಹೀಗೆ ಓಡಾಡಿಕೊಂಡಿರಲು ಸಾಧ್ಯವಿಲ್ಲವೆಂದು ಅನ್ನಿಸಿತು. ನಾನು ಕಛೇರಿಯಲ್ಲಿದ್ದಾಗ, ಸಣ್ಣ ಪತ್ರಿಕೆಯವರೆಂದು ಹೇಳಿಕೊಂಡು ನನ್ನ ಕಛೇರಿಗೆ ಬಲತ್ಕಾರವಾಗಿ ಬಂದು ಜೈರಾಜ್ ಎಂಬುವರ ಮೇಲೆ ಕ್ರಮ ತೆಗೆದುಕೊಂಡರೆ, ಈತನ ಹಿಂದೆ ಮುನ್ನೂರು ಜನ ಇದ್ದಾರೆ, ಎಂದು ಬೆದರಿಸಿದರು. ಇಂತಹ ವರನ್ನು ನಿಗ್ರಹಿಸಲು ನಿಮ್ಮೆಲ್ಲರ ಬೆಂಬಲ ಹೆಚ್ಚಿನ ರೀತಿಯಲ್ಲಿ ಬೇಕು ಎನಿಸಿತು. ಅವರ ಮೇಲಿನ ಕೇಸನ್ನು ಹಿಂತೆಗೆದುಕೊಳ್ಳಬೇಕೆಂದೂ ಹೇಳಿದರು. ಇವತ್ತು ಈ ರಾಜ್ಯವನ್ನು ಸುವ್ಯವಸ್ಥಿತವಾದ ಅಥವಾ ಶಾಂತ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದರೆ, ಯಾರು ಸಮಾಜಘಾತುಕ ಶಕ್ತಿಗಳಿದ್ದಾರೆ, ಅವರಿಗೆ ರಾಜಕಾರಣಿಗಳು ಬೆಂಬಲ ಕೊಡಬಾರದು. ತಪ್ಪಿತಸ್ಥರು ಯಾರೇ ಆಗಲಿ. ಶಿಕ್ಷೆಯಾಗಬಾರದೆಂಬ ಮನೋಭಾವವೇನೂ ಇಲ್ಲ. ರಾಜಕಾರಣಿಗಳು ನಮಗೆ ಇದರಲ್ಲಿ ಸಹಕಾರ ಕೊಡದಿದ್ದರೆ ಇಂತಹ ಕೃತ್ಯ ನಡೆಯಲು ಸಾಧ್ಯವಾಗುವುದಿಲ್ಲ. ನಾನು ಯಾವುದೇ ದಯಾದಾಕ್ಷಿಣ್ಯವಿಲ್ಲದೇ, ದಕ್ಷತೆಯಿಂದ ಕೆಲಸ ಮಾಡಿರುವುದರಿಂದ. ನನಗೆ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ನಾವು ನಿಮ್ಮ ರಾಜೀನಾಮೆ ಯನ್ನು ಕೇಳುವುದಿಲ್ಲ, ಇನ್ನೂ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಿ ಎಂದು ನನಗೆ ಉತ್ಸಾಹ ತುಂಬಿದ್ದಾರೆ ಆದುದರಿಂದ ಅವರಿಗೆಲ್ಲಾ ನಾನು ಚಿರಋಣಿಯಾಗಿದ್ದೇನೆ ಮತ್ತು ಇಂತಹ ಕೆಲಸಗಳು ಇನ್ನೂ ಮುಂದು ವರಿದರೆ ಪ್ರಜಾಪ್ರಭುತ್ವವು ಯಶಸ್ವಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರ್ಯಾರು ಸಹಪಾಠಿಗಳಿದ್ದಾರೆ, ಯಾರ್ಯಾರ ಬಳಿ ಹೋಗುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ನಾನು ಮೊನ್ನೆ ಶಾಸಕರ ಭವನಕ್ಕೆ ಹೋಗಿದ್ದಾಗ ಬಾಗಿಲ ಬಳಿ ಹೋದ ತಕ್ಷಣ ಅಲ್ಲಿ ಗಲಾಟೆ ಆಯಿತು.

ಈ ಮನೆಯಲ್ಲಿ ನನ್ನನ್ನೂ ಸೇರಿದ ಹಾಗೆ ೨೨೪ ಜನ ಮಾನ್ಯ ಸದಸ್ಯರಿದ್ದಾರೆ. ಅದೇ ರೀತಿ ಮೇಲ್ಮನೆಯಲ್ಲಿ ೬೧ ಜನ ಇದ್ದಾರೆ. ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಕೆಲಸ ಮಾಡುವುದಾ ಗುವುದಿಲ್ಲ. ನನಗೆ ರಾಜಕೀಯ ವ್ಯಾಮೋಹ ಏನೂ ಇಲ್ಲ. ಈ ರಾಜ್ಯದಲ್ಲಿ ಶಾಂತಿ ಹಾಗೂ ನೆಮ್ಮದಿ ನೆಲೆಸುವುದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಈ ರಾಜ್ಯದಲ್ಲಿ ಶಾಂತಿ ಹಾಗೂ ನೆಮ್ಮದಿ ಕೊಡ ಬೇಕೆಂದು ಆ ಒಂದು ಜವಾಬ್ದಾರಿಯನ್ನು ನನಗೆ ಕೊಟ್ಟಿದ್ದಾರೆ. ಅದನ್ನು ನಿರ್ವಹಣೆ ಮಾಡುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಶಾಂತಿ ಹಾಗೂ ನೆಮ್ಮದಿ ಈ ರಾಜ್ಯದಲ್ಲಿ ನೆಲೆಸು ವುದಕ್ಕೆ ಸಾಧ್ಯವಾಗಲೇ ಇಲ್ಲ ಅಂದರೆ ನಾನು ಈ ಸ್ಥಾನದಲ್ಲಿ ಇರುವುದಕ್ಕೆ ಯೋಗ್ಯತೆ ಇಲ್ಲವೆಂದು ತಿಳಿದು ಕೊಂಡು ಬಿಡುತ್ತೇನೆ, ಅದರಲ್ಲೂ ಕೂಡ ಏನು ನಿರಪರಾಧಿಗಳು ಕಣ್ಣೀರು ಸುರಿಸಿದ್ದಾರೆ, ಕಂಗಾಲಾಗಿ ದ್ದಾರೆ, ಇನ್ನು ಮುಂದೆ ಆ ರೀತಿ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ. ಇದೇ ರೀತಿ ತಾವೇನಾದರೂ ಮಾಡುತ್ತೇವೆ ಎಂದು ಮಾಡಿದ್ದೇ ಆದರೆ, ಅದು ನಡೆಯುವುದಿಲ್ಲ. ಅದಕ್ಕಾಗಿ ಅವಕಾಶ ಮಾಡಿಕೊಡು ವುದಿಲ್ಲ. ಈ ರಾಜ್ಯದಲ್ಲಿಂತಕ್ಕವರು ಎಲ್ಲರೂ ಸತ್ಪ್ರಜೆಗಳಾಗಿ, ಶಾಂತಿ ಹಾಗೂ ನೆಮ್ಮದಿ ನೆಲಸತಕ್ಕ ಕಾರ್ಯವನ್ನು ನನಗೆ ವಹಿಸಿದ್ದಾರೆ. ಆ ಒಂದು ಕಾರ್ಯವನ್ನು ಮಾಡುವುದರಲ್ಲಿ, ನನ್ನ ಅಧಿಕಾರಿಗಳು ನನಗೆ ಹೆಚ್ಚಿನ ಸಹಕಾರವನ್ನು ನೀಡಿ ಕೆಲಸ ಮಾಡುತ್ತಾರೆಂದು ಹೇಳುತ್ತಿದ್ದೇನೆ. ಯಾರಾದರೂ ರಾಜಕಾರಿಣಿಗಳ ಜೊತೆಯಲ್ಲಿದ್ದುಕೊಂಡು, ಅಥವಾ ಅವರ ಪ್ರಭಾವವನ್ನು ಬೀರಿ ಇಂತಹ ಕೃತ್ಯಗಳನ್ನು ಮಾಡುವುದಾದರೆ, ಅದು ನಡೆಯುವುದಿಲ್ಲ, ಆ ಒಂದು ದೃಷ್ಟಿಯಿಂದ ಮಾನ್ಯ ಸದಸ್ಯರು ಅದರಲ್ಲೂ ವಿರೋಧ ಪಕ್ಷದ ನಾಯಕರು, ಶ್ರೀಮಾನ್ ಧರ್ಮಸಿಂಗ್‌ರವರು, ಶ್ರೀಮಾನ್ ವೀರಪ್ಪ ಮೊಯ್ಲಿ ಯವರು ತಮ್ಮಗಳ ಸಹಕಾರವನ್ನು ಕೊಡಬೇಕು. ಇದನ್ನು ನಾನು ಹೇಳಿ ಅವರಿಂದ ಬೆನ್ನುತಟ್ಟಿಸಿ ಕೊಳ್ಳಬೇಕೆಂದು ನಾನು ಆ ರೀತಿ ಹೇಳುತ್ತಿಲ್ಲ. ಯಾರು ಈ ಒಂದು ದರೋಡೆಗಳನ್ನು ಮಾಡಿದ್ದಾರೆ, ಅವರನ್ನು ಪತ್ತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ದಿವಾಕರ ಹೆಗ್ಗಡೆಯವರನ್ನು ಹಿಡಿದಿ ದ್ದೇವೆ. ಅದೇ ರೀತಿ ಕೊತ್ವಾಲ ರಾಮಚಂದ್ರನ ಹಾಗೂ ಅವರ ಸಹಚರರ ನೆರವಿನಿಂದ ಹೆಬ್ಬಾಳ್, ಬಾಣಸವಾಡಿ ಹಾಗೂ ಇತರೆ ಕಡೆಗಳಲ್ಲಿ ದರೋಡೆಗಳು ಏನೇನು ಮಾಡಿದ್ದಾರೆ, ಅದರಲ್ಲಿ ಇವರ ಸಹಪಾಠಿಗಳು ಎಷ್ಟು ಜನ ಇದ್ದಾರೆ ಎಂಬುದನ್ನು ಪತ್ತೆ ಹಚ್ಚುವುದಕ್ಕೋಸ್ಕರ ಸ್ಪೆಷಲ್ ದಳವನ್ನೇ ಇಟ್ಟು ಕೆಲಸ ಮಾಡುತ್ತಿದ್ದೇವೆ. ಸ್ವಲ್ಪ ದಿವಸ ತಡವಾಗಬಹುದು. ತಾವು ಸಹಕರಿಸಬೇಕು. ದರೋಡೆ ಮಾಡಿರತಕ್ಕಂತಹವರು ಇಲ್ಲಿಯವರ ಸಹಕಾರ ಇಲ್ಲದೆ ಹೊರಗಡೆಯಿಂದ ಬಂದು ಇಲ್ಲಿ ಆ ರೀತಿಯ ದರೋಡೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನ್ನು ಕಂಡು ಹಿಡಿದಿದ್ದೇವೆ. ಇದರಲ್ಲಿ ತಮ್ಮ ಸಹಕಾರವನ್ನು ಮತ್ತೊಮ್ಮೆ ಕೋರುತ್ತೇನೆ. ಇಷ್ಟನ್ನು ಹೇಳುತ್ತಾ, ಕರ್ನಾಟಕ ರಾಜ್ಯದಲ್ಲಿ

ಶಾಂತಿ ಹಾಗೂ ಸುವ್ಯವಸ್ಥೆಗೆ ಹೆಚ್ಚಿನ ಸಹಕಾರಿಯಾಗುವ ರೀತಿಯಲ್ಲಿ ಪೋಲೀಸ್ ದಳವನ್ನು ವ್ಯವಸ್ಥೆ ಮಾಡುತ್ತೇನೆ. ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ಹೇಳಿದಂತಹ ಇನ್ನು ಯಾವುದಾರೂ ವಿಷಯಗಳಿಗೆ ನಾನು ಉತ್ತರವನ್ನು ಕೊಡದಿದ್ದರೆ, ಅವರು ಏನು ಪ್ರಸ್ತಾಪ ಮಾಡಿದ್ದಾರೆಂಬುದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಅವರೆಲ್ಲರಿಗೂ ಲಿಖಿತ ಮೂಲಕ ಉತ್ತರವನ್ನು ಕಳುಹಿಸಿಕೊಡುತ್ತೇನೆ. ನನ್ನ ಇಲಾಖೆಯ ಬೇಡಿಕೆಗಳನ್ನು ಮಾನ್ಯ ಸದಸ್ಯರು ಸರ್ವಾನುಮತದಿಂದ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಅವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್, ನಾರಾಯಣಸಿಂಗ್.— ಮಾನ್ಯ ಅಧ್ಯಕ್ಷರೆ, ನಾವು ಕೆಲವು ಪ್ರಮುಖವಾದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆದರೆ ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲಿಲ್ಲ. ೪ ಕೋಟಿ ಜನಸಂಖ್ಯೆ ಇರುವ ರಾಜ್ಯದಲ್ಲಿ ೬೫,೦೦೦ ಪೋಲೀಸ್‌ನವರು ಇದ್ದಾರೆ. ಜನಸಂಖ್ಯೆಗನುಗುಣವಾಗಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸಬೇಕೆಂದು ಹೇಳಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ೧೬ನೇ ತಾರೀಖು ಜನವರಿ ತಿಂಗಳಲ್ಲಿ ಪ್ರಸಾಪ ಮಾಡಿದಾಗ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದರೂ ಕೂಡ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವುದಕ್ಕೆ ಆಗಲಿಲ್ಲ. ಅದಕ್ಕೆ ತಾವಾದರೂ ಏನು ಹೇಳುತ್ತೀರಿ ಎಂಬುದಕ್ಕೆ ಉತ್ತರಬೇಕು. ಎರಡನೆಯದಾಗಿ ಸಿವಿಲ್‌ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಎನಿದೆ, ಅದರಲ್ಲಿ ದಲಿತರ ಮೇಲೆ ಏನು ಅನ್ಯಾಯವಾಗಿದೆ ಆ ಬಗ್ಗೆ ೧೯೮೧ ರಿಂದ ೧೯೮೪ರ ವರೆಗೆ ರಿಜಿಸ್ಟರ್ ಆದಂತಹ ೨೩೪೪ ಕೇಸುಗಳಲ್ಲಿ ಕೇವಲ ೮೦ ಕನ್ವಿಕ್ಟ್ ಆಗಿದ್ದು ಇನ್ನುಳಿದ ೧೬೨೦ ಕೇಸುಗಳಲ್ಲಿ ಚಾರ್ಜ್‌ಷೀಟ್ ಹಾಕಲಾಗಿದೆ ಎಂಬುದಾಗಿ ಹೇಳಿದ್ದೀರಿ. ನಿಮ್ಮ ಇಲಾಖೆಯ ಫರ್‌ಫಾರ್‌ರಮೆನ್ಸ್ ಬಡ್ಜೆಟ್ಟಿನಲ್ಲಿ ಏನೇನು ಹೇಳಿದ್ದೀರಿ. ಏನೇನು ಅಂಕಿ ಅಂಶಗಳನ್ನು ಒದಗಿಸಿಕೊಟ್ಟಿದ್ದೀರಿ. ಅದಕ್ಕೂ ತಾವು ಇಲ್ಲಿ ಕೊಡುತ್ತಿರುವಂಥ ಅಂಕಿ ಸಂಖೆಗಳಿಗೂ ಬಹಳಷ್ಟು ವ್ಯತ್ಯಾಸ ಇದೆ. ಮೂರನೆಯದಾಗಿ ಇವತ್ತು ಎಲ್ಲೆಲ್ಲಿ ಪೋಲೀಸ್ ಎಕ್ಸಸ್ ಆಗಿದೆ ಅಲ್ಲೆಲ್ಲಾ ನ್ಯಾಯಾಂಗ ವಿಚಾರಣೆ ಮಾಡಬೇಕು. ಬರೀ ಇಲಾಖೆಯ ವಿಚಾರಣೆಯಿಂದ ಸತ್ಯಾಂಶ ಹೊರಬೀಳುವುದಿಲ್ಲವೆಂದು ಹೇಳಿದ್ದೆ. ನಾಲ್ಕನೆಯದಾಗಿ ಪೋಲೀಸ್ ಕಮಿಷನ್ ೧೯೮೩ ರಲ್ಲಿ ಒಂದು ವರದಿಯನ್ನು ಕೊಟ್ಟಿತ್ತು. ಅದು ಪಬ್ಲಿಷ್ ಆಗಿದಿಯೋ ಎಂಬುದಾಗಿ ನಾನು ನಿನ್ನೆ ಪ್ರಸ್ತಾಪ ಮಾಡಿದ್ದೆ. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಷ್ಟ್ರಕ್ಕೆ ಅನ್ವಯವಾಗತಕ್ಕಂತಹದ್ದು. ಎಲ್ಲೆಲ್ಲಿ ಮಾಡಿದ್ದಾರೋ ಅದು ನನಗೆ ನೆನಪು ಇಲ್ಲ, ಅದರ ಬಗ್ಗೆ ವಿವರಗಳನ್ನೇ ಮಾನ್ಯ ಮಂತ್ರಿಗಳು ಹೇಳಲಿಲ್ಲ. ತರಬೇತಿ ಕೊಡತಕ್ಕಂತಹ ಪದ್ಧತಿ ಏನಿದೆ, ಕೇವಲ ಅಧಿಕಾರಿಗಳಿಗೆ ಮಾತ್ರ ತರಬೇತಿಯನ್ನು ಕೊಡುತ್ತಿದ್ದೀರಿ. ಪೋಲೀಸ್‌ಪೇದೆಗಳಿಗೆ ತರಬೇತಿಯನ್ನು ಕೊಡುತ್ತಿಲ್ಲ. ನಮ್ಮಲ್ಲಿ ಈಗ ಏರೋಪ್ಲೇನ್ ಹೈಜಾಕ್ ಮಾಡುವಂತಹ ಮಟ್ಟಕ್ಕೆ ಹೋಗಿದ್ದಾರೆ. ಆ ಬಗ್ಗೆ ಯಾವ ಗಮನ ಹರಿಸಿದ್ದೀರಿ ಎಂಬುದನ್ನು ಹೇಳಬೇಕು. ಪೋಲೀಸ್‌ಪೇದೆಗೆ ರಾತ್ರಿ ಸಮಯದಲ್ಲಿ ಗಸ್ತು ತಿರುಗುವಾಗ ಅವರ ಕೈಯಲ್ಲಿ ಕೇವಲ ಬಡಿಗೆಯನ್ನು ಕೊಟ್ಟಿರುತ್ತೀರಿ. ಇದರಿಂದ ಏನೂ ಆಗುವುದಿಲ್ಲ. ಡಕಾಯಿತಿ ನಡೆಯುತ್ತಿದ್ದರೂ ಅವರು ನೋಡದ ಹಾಗೆ ಹೋಗಬೇಕೇ ಹೊರತು ಅವರನ್ನು ಹೆದರಿಸುವುದಕ್ಕೆ ಹೋದರೆ ಇವರಿಗೇ ಅಪಾಯವಾಗುವ ಸಂಭವವೇ ಹೆಚ್ಚು. ಆದ್ದರಿಂದ ಅವರಿಗೆ ಬೇಕಾದಂತಹ ಮಾಡ್ರನೈಜ್ ಎಕ್ವಿಪ್‌ಮೆಂಟ್‌ನ್ನು ಒದಗಿಸಿಕೊಡಬೇಕಾಗುತ್ತದೆ. ಅದರ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕು, ಮತ್ತೆ ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷರ ಮೇಲೆ ಹಲ್ಲೆ ಪ್ರಯತ್ನ ನಡೆಯಿತು. ಮೊನ್ನೆ ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿದಾಗ, ಯಾರ್‍ಯಾರು ಮಾಡಿದ್ದಾರೆಂಬುದನ್ನು ಹೇಳಿ ಎಂಬುದಾಗಿ ಒತ್ತಾಯ ಮಾಡಿದಾಗ ಆಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರಣೆಯಾಗುತ್ತಿರುವುದರಿಂದ ವಿವರಗಳನ್ನು ಹೇಳುವುದಿಲ್ಲವೆಂದು ಹೇಳಿದರು ಆದರೆ ಈಗ ಅದರಿಂದ ಸಬ್‌ಜುಡೀಸ್ ಏನೂ ಆಗುವುದಿಲ್ಲವೆಂದು ಹೇಳಿ ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ಇವತ್ತು ಸದನದಲ್ಲಿ ಇಲ್ಲದೇ ಇರುವಂತಹ ಸಮಯದಲ್ಲಿ ಆ ಹೇಳಿಕೆಯನ್ನು ಓದಿದ್ದೀರಿ. ಇದರ ಬಗ್ಗೆ ಮಾನ್ಯ ವೀರಪ್ಪಮೊಯ್ಲಿಯವರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದರ ಬಗ್ಗೆ ವಿವರಣೆಯನ್ನು ಕೊಡಬೇಕು.

ಶ್ರೀ ಬಿ. ರಾಚಯ್ಯ.— ಸಿ. ಆರ್. ಇ. ಸೆಲ್‌ನ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಅದರ ಉಪ ಕಛೇರಿಗಳು ರೆವಿನ್ಯೂ ವಿಭಾಗದಲ್ಲಿ ಅಂದರೆ, ಗುಲ್ಬರ್ಗ, ಬೆಳಗಾಂ, ಮೈಸೂರು ಹಾಗೂ ಬೆಂಗಳೂರು ವಿಭಾಗ ಕೇಂದ್ರಗಳಲ್ಲಿ ಈಗಾಗಲೇ ಇವೆ. ಇದಕ್ಕಾಗಿ ಸಹಾಯಕ ಅಧಿಕಾರಿಗಳನ್ನು ನಾವು ಕೊಟ್ಟಿದ್ದೇವೆ. ಈ ಸೆಲ್‌ನ ಕೆಲಸಕಾರ್ಯಗಳು, ಡಿ. ಐ. ಜಿ. ಯ. ನೇತೃತ್ವದಲ್ಲಿ ನಡೆಯುತ್ತಿದೆ.

ಸಮಾಜದಲ್ಲಿರತಕ್ಕ ಈ ದಲಿತರ ಮೇಲೆ ಏನೊಂದು ಹಲ್ಲೆಗಳು ನಡೆಯುತ್ತಿವೆ, ಅವುಗಳೆಲ್ಲವನ್ನೂ ಒಂದೇ ವರ್ಷದಲ್ಲಿ ಹೋಗಲಾಡಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಯಾರೇ ದೂರು ಕೊಟ್ಟರೂ ಕೇಸನ್ನು ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ. ಆ ಬಗ್ಗೆ ನಾವು ಒಂದು ಸುತ್ತೋಲೆಯನ್ನು ಕೂಡ ಕೊಟ್ಟಿದ್ದೇವೆ. ಅದರ ವಿವರ ಈ ರೀತಿ ಇದೆ.

(೧) ಮಹಿಳಾ ಅಪರಾಧಿಗಳಿಗೆ ಕೈ ಕೋಳಗಳನ್ನು ಹಾಕಬಾರದು.

(೨) ಯಾವ ಮಹಿಳೆಯನ್ನೂ ಆಕೆಯ ವಾಸಸ್ಥಳವನ್ನು ಬಿಟ್ಟು ಬೇರೆ ಕಡೆಯಲ್ಲಿ ವಿಚಾರಣೆಗೆ ಕರೆಯಬಾರದು.

(೩) ಮಹಿಳೆಯರನ್ನು ಮಹಿಳಾ ಪೋಲೀಸ್ ಅಧಿಕಾರಿಗಳಿಂದಲೇ ಶೋಧನೆ ಮಾಡಿಸಬೇಕು; ಹಾಗೂ ಪುರುಷ ಅಧಿಕಾರಿಗಳು ಇದನ್ನು ಮಾಡಬಾರದು. ಮತ್ತು ಮಹಿಳೆಯರು ಯಾವುದಾದರೂ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಆರೋಪಿತರಾಗಿದ್ದರೆ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಪ್ರಶ್ನೆಗಳಿಗಾಗಿ ಕರೆಯಬಾರದು.

(೪) ಮಹಿಳೆಯರನ್ನು ಬಹಳ ಗೌರವದಿಂದ ನೋಡಿಕೊಳ್ಳಬೇಕು

(೫) ಮಹಿಳಾ ಪ್ರದರ್ಶನಕಾರರನ್ನು ಒರಟು ರೀತಿಯಲ್ಲಿ ನೋಡಿಕೊಳ್ಳಬಾರದು.

ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೫೨ (೨) ೧೦೦ (೨) ಪ್ರಕಾರ ಎಂಬುದಾಗಿ ಮಹಿಳಾ ಅಪರಾಧಿಗಳ ಬಗ್ಗೆ ಪೋಲೀಸ್ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳಬೇಕೆಂಬುದರ ಬಗ್ಗೆ ಈ ಒಂದು ಸುತ್ತೋಲೆಯನ್ನು ಕೊಟ್ಟಿದ್ದೇವೆ. ಈ ಒಂದು ಸುತ್ತೋಲೆಯನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಿ ಮಹಾ ನಿರ್ದೇಶಕರು, ೧೫-೩-೧೯೮೩ ರಲ್ಲಿ ಕಳುಹಿಸಿಕೊಟ್ಟಿದ್ದಾರೆ. ಇದರ ಜೊತೆಗೆ ದಲಿತರ ವಿಷಯದಲ್ಲಿ ಇನ್ನೊಂದು ಸುತ್ತೋಲೆಯನ್ನು ಕೊಟ್ಟಿದ್ದೇವೆ, ಅದು ಈ ರೀತಿ ಇದೆ.

"ಗೃಹ ಮಂತ್ರಿಗಳನ್ನು ಭೇಟಿ ಮಾಡಲು ಬರುತ್ತಿರುವ ಅನೇಕ ಅರ್ಜಿದಾರರುಗಳು ಠಾಣಾ ಮಟ್ಟದಲ್ಲಿ ತಮಗೆ ಉಂಟಾಗುತ್ತಿರುವ ಕಿರುಕುಳದ ಹಾಗೂ ದುರ್ವರ್ತನೆಗಳ ಬಗ್ಗೆ ದೂರನ್ನು ನೀಡಿದ್ದಾರೆ. ದೂರುಗಳ ಮುಖ್ಯಾಂಶಗಳು ಈ ಕೆಳಕಂಡಂತಿವೆ.

(೧) ಅರ್ಜಿಯನ್ನು ಕೊಡಲು ಠಾಣೆಗೆ ಹೋದಾಗ ಅಲ್ಲಿ ಅವರನ್ನು ಬಹಳ ಹೊತ್ತು ನಿಲ್ಲಿಸಿಯೇ ಇರುತ್ತಾರೆ.

(೨) ಅರ್ಜಿಗಳಿಗೆ ಹಿಂಬರಹವನ್ನು ಕೇಳಿದರೆ ವಾಚಾಮಗೋಚರವಾಗಿ ಬಯ್ಯುತ್ತಾರೆ.

(೩) ಸ್ತ್ರೀಯರು, ಮಕ್ಕಳು ಬಂದರೆ ಅವರನ್ನು ಹೀನಾಯಮಾನವಾಗಿ ಕಾಣುವುದಲ್ಲದೆ, ಏಕ ವಚನದಲ್ಲೇ ಸಂಬೋಧಿಸುತ್ತಾರೆ.

(೪) ನಲ್ಲಿ ಜಗಳ ಕಸ ಹಾಕುವುದು ಇತ್ಯಾದಿ ಚಿಕ್ಕಪುಟ್ಟ ದೂರುಗಳನ್ನು ತೆಗೆದು ಕೊಂಡು ಹೋದಾಗ, ಸ್ಥಳಕ್ಕೆ ಹೋಗಿ ಎರಡೂ ಕಡೆಯವರಿಗೂ ಸಮಾಧಾನ ಮಾಡಿ ಪರಿಹಾರ ನೀಡುವ ಬದಲು ಉದ್ಧಟತನದಿಂದ ಮಾತನಾಡುತ್ತಾರೆ.

(೫) ಮೇಲಧಿಕಾರಿಗಳಿಂದ ಅರ್ಜಿಗಳ ಮೇಲೆ ಶರಾವನ್ನು ಬರೆಸಿಕೊಂಡು ಹೋದರೆ ಠಾಣೆಗೇಕೆ ಬಂದಿರಿ ಆ ಅಧಿಕಾರಿಯ ಬಳಿ ಹೋಗಿರಿ ಎಂದು ಒರಟುತನದಿಂದ ಮಾತನಾಡಿ ಠಾಣೆಗಳಿಂದ ಹೊರಗೆ ಅಟ್ಟುತ್ತಾರೆ.

ಇಂತಹ ದೂರುಗಳು ಬಡಜನರಿಂದ ಬಹಳವಾಗಿ ಬರುತ್ತಿರುವುದರಿಂದ ನಿರೀಕ್ಷಕಾಧಿಕಾರಿಗಳು ಠಾಣೆಗಳಿಗೆ ನಿರೀಕ್ಷಿತ ಹಾಗೂ ಅನಿರೀಕ್ಷಿತ ಭೇಟಿಗಳನ್ನು ನೀಡಿ ಇಂತಹ ಅಸಭ್ಯ ನಡತೆಯನ್ನು ಮಟ್ಟ ಹಾಕಿ ಸಾರ್ವಜನಿಕರೊಂದಿಗೆ ವಿನಯಪೂರ್ವಕವಾಗಿ ನಡೆದುಕೊಳ್ಳುವಂತೆ ಠಾಣಾ ಮಟ್ಟದ ಅಧಿಕಾರಿಗಳಿಗೆ ಆದೇಶ

ದುರ್ವರ್ತನೆಯ ದೂರು ಬಂದಾಗ ಶೀಘ್ರವಾಗಿ ವಿಚಾರಣೆ ಮಾಡಿ ಸದಸ್ಯರೇ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ, ಠಾಣೆಗಳು ನ್ಯಾಯ ನೀಡುವ ಠಾಣೆಗಳು ಆಗಬೇಕೇ ಹೊರತು ದುರ್ವರ್ತನೆಯ ಕೇಂದ್ರಗಳಾಗಬಾರದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಮಾದರಿಯಾಗಿ ಮಾಡಬೇಕಾಗಿದೆ. ನಾನು ಹೇಳಿದ ಮೇಲೆ ಮಹಾ ನಿರ್ದೇಶಕರು ಒಂದು ಸುತ್ತೋಲೆಯನ್ನು ಎಲ್ಲಾ ಪೊಲೀಸ್ ಠಾಣೆಗಳಿಗೂ ಕಳುಹಿಸಿ ಕೊಟ್ಟಿದ್ದಾರೆ. ತಿಂಗಳಲ್ಲಿ ಒಂದು ದಿನವನ್ನು ದಲಿತರಿಗೋಸ್ಕರ ಮೀಸಲಿಡಬೇಕೆಂದು ಹೇಳಿದ್ದೇವೆ. ಪರಿಶಿಷ್ಟ ವರ್ಗಗಳು, ಪಂಗಡಗಳು, ಹೆಣ್ಣುಮಕ್ಕಳ ಮೇಲೆ ಮಾಡತಕ್ಕ ದೌರ್ಜನ್ಯಗಳು ಏನಿವೆ ಅವುಗಳಿಗೆ ಸಂಬಂಧಪಟ್ಟ ಅರ್ಜಿಗಳು ಎಷ್ಟು ಬಂದಿರುತ್ತವೋ ಅವೆಲ್ಲವನ್ನು ತಪಾಸಣೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಮಾಡಿದ್ದೇವೆ. ದಲಿತರಿಗೋಸ್ಕರ ಮೀಸಲಿಡುವ ವಾರ ಪ್ರತಿ ತಿಂಗಳ ಕಡೆಯ ಭಾನುವಾರವಾಗಿರಬೇಕೆಂದು ಹೇಳಿದ್ದೇವೆ. ಠಾಣಾಧಿಕಾರಿಗಳು ಎಲ್ಲ ಜನರ ಅರ್ಜಿಗಳನ್ನು ತೆಗೆದುಕೊಂಡು ಅದರ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಡಿವೈಎಸ್‌ಪಿ.ಯವರು ಸಮೀಕ್ಷೆ ನಡೆಸಬೇಕೆಂದು ಹೇಳಿದ್ದೇವೆ. ಹಳ್ಳಿಗಳಿಗೆ ಹೋಗಿ ಸಮಸ್ಯೆಗಳನ್ನು ಬಗೆಹರಿಸಿ, ತಪ್ಪಿತಸ್ಥ ಜನರ ವಿರುದ್ಧ ತೀವ್ರ ಕ್ರಮ ತೆಗೆದುಕೊಂಡು ಅಶಾಂತಿ ಹರಡದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದೇವೆ. ಎಲ್ಲಾ ಎಸ್.ಪಿ.ಯವರು ಮೇಲ್ಕಂಡ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೋ ಎಂಬುದನ್ನು ಪರಿಶೀಲಿಸಿ......

ಶ್ರೀ ಧರ್ಮಸಿಂಗ್.—ನಾನು ಏನು ಕೇಳಿದೆ ಎಂದರೆ

ಶ್ರೀ ಬಿ. ರಾಚಯ್ಯ.—ಪರಿಶಿಷ್ಟ ಪಂಗಡದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದೀರಿ. ಅರ್ಜಿದಾರರು ಠಾಣೆಗಳಿಗೆ ಹೋದರೆ ಹೀನಾಯ ಮಾನವಾಗಿ ಕಾಣುತ್ತಾರೆ, ಗೌರವದಿಂದ ಕಾಣುವುದಿಲ್ಲ ಎಂದು ಹೇಳಿದ್ದೀರಿ.

ಶ್ರೀ ಧರ್ಮಸಿಂಗ್.—ಸೋಷಿಯಲ್ ವೆಲ್‌ಫೇರಿಗೆ ಸಂಬಂಧಪಟ್ಟಂತೆ ೨-೩ ಸಾವಿರ ಕೇಸುಗಳು ಇವೆ. ಅದರಲ್ಲಿ ಕನ್‌ವಿಕ್ಟೆಡ್ ಕೇಸಸ್ ೧೦. ಇನ್ನು ಚಾರ್ಜ್‌ಷೀಟ್ ಹಾಕದೆ ಇರತಕ್ಕ ಕೇಸುಗಳು ಇವೆ. ಹೀಗಾದರೆ ಪೊಲೀಸ್ ಇಲಾಖೆ ಏನು ಮಾಡುತ್ತಿವೆ? ಇದರ ಬಗ್ಗೆ ಸ್ಪಷ್ಟವಾದ ಉತ್ತರಬೇಕು. ದಲಿತರಿಗೆ ಅನ್ಯಾಯವಾದರೆ ಸಿವಿಲ್ ರೈಟ್ ಸೆಲ್ ಕೇಳುತ್ತದೆಂದು ಹೇಳುತ್ತೀರಲ್ಲ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಪೊಲೀಸ್ ಫೋರ್ಸ್ ೪೫ ಸಾವಿರ ಇದೆ ಎಂದು ಹೇಳುತ್ತೀರಿ. ಆದರೆ ಅವರಿಂದ ಡಕಾಯಿತರನ್ನು ಹಿಡಿಯುವುದಕ್ಕೆ ಏಕೆ ಸಾಧ್ಯವಾಗಿಲ್ಲ? ಪೊಲೀಸ್ ಖಾತೆ ರಿಪೇರ್ ಆಗಬೇಕೆಂದು ೧೯೮೩ರಲ್ಲಿ ವರದಿ ಬಂದಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಪೊಲೀಸ್ ಇಲಾಖೆಯನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳುವ ವಿಚಾರ ಇದೆಯೇ?

ಶ್ರೀ ಬಿ. ರಾಚಯ್ಯ.—ಮೊದಲನೇ ಪ್ರಶ್ನೆಗೆ ಈಗಾಗಲೇ ನಾನು ಉತ್ತರಿಸಿದ್ದೇನೆ. ಕೇಸುಗಳು ಅನೇಕ ಹಂತಗಳಲ್ಲಿವೆ. ಅದಕ್ಕೆಲ್ಲ ಸಾಕ್ಷಿದಾರರನ್ನು ಹೊಂದಿಸಿಕೊಡುವುದು ಕಷ್ಟವಾಗಿದೆ. ೧೦ ಕೇಸುಗಳು ಮಾತ್ರ ತೀರ್ಮಾನವಾಗಿವೆ, ಒಂದು ಕೇಸ್‌ನಲ್ಲಿ ಮಾತ್ರ ಕನ್‌ವಿಕ್ಷನ್ ಆಗಿದೆ ಉಳಿದ ಕೇಸುಗಳು ವಿಚಾರಣೆಯಲ್ಲಿವೆ, ತೀರ್ಮಾನವಾಗಿಲ್ಲವೆಂದು ಆಗಲೇ ಹೇಳಿದ್ದೇನೆ. ಪೊಲೀಸ್ ಇಲಾಖೆಯಲ್ಲಿ ಇಷ್ಟೊಂದು ರೀತಿಯಲ್ಲಿ ನಡೆಯುತ್ತಿರುವಾಗ ಪೊಲೀಸ್ ಇಲಾಖೆಯನ್ನು ಸ್ವಚ್ಛಗೊಳಿಸುವುದಕ್ಕೇ ಆಗಲಿ, ವಿಸ್ತಾರಗೊಳಿಸುವುದಕ್ಕೇ ಆಗಲಿ, ಪೊಲೀಸರನ್ನು ಹೆಚ್ಚಿಸುವುದಕ್ಕಾಗಲಿ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ. ಒಂದು ಕೋಟಿ ರೂಪಾಯಿ ಅಂದಾಜಿನಲ್ಲಿ ಈ ವರ್ಷ ಎಲ್ಲೆಲ್ಲಿ ಠಾಣೆಗಳ ಅವಶ್ಯಕತೆ ಇದೆ ಅಂಥ ಕಡೆ ಆದ್ಯತೆ ಮೇಲೆ ಕೊಡುತ್ತೇವೆ. ಮೋಟಾರ್ ವಾಹನಗಳು, ಜೀಪುಗಳು, ವೈರ್‌ಲೆಸ್ ಸೆಟ್ಟುಗಳಿಗೆ ಇಷ್ಟು ಹಣವೆಂದು ಹೋದ ವರ್ಷ ಖರ್ಚು ಮಾಡಿದ್ದೇವೆ. ಕೇಂದ್ರ ಸರ್ಕಾರದವರು ನಮಗೆ ಈ ಬಾಬಿಗೆ ೩೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ನಾವು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ೨೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ ೨೧ ಲಕ್ಷ ರೂಪಾಯಿ ಬರಬೇಕಾಗಿದೆ. ಇಲಾಖೆಯನ್ನು ಸಜ್ಜುಗೊಳಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೊ ಅದನ್ನು ಹಾಕಿಕೊಂಡಿದ್ದೇವೆ. ಆ ವಿವರಗಳನ್ನು ಹೇಳಲಿಲ್ಲವೆಂಬುದು ಬಹುಶಃ ಮಾನ್ಯ ಸದಸ್ಯರ ಮನಸ್ಸಿನಲ್ಲಿರಬಹುದು. ಇಲಾಖೆಯಲ್ಲಿ ಮಾಡಬೇಕಾದುದನ್ನು ಒಂದು ಮಾತಿನಲ್ಲಿ ತಿಳಿಸಿದ್ದೇನೆ. ಇಲಾಖೆಯನ್ನು ಆಧುನೀಕರಿಸಲು ನಾನು ಸತತವಾಗಿ ಕಾರ್ಯಕ್ರಮ ಕೈಗೊಂಡಿದ್ದೇನೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರದವರು ೧೯೮೩-೮೪ರಲ್ಲಿ ೩೧.೭೯ ಲಕ್ಷ, ೮೪-೮೫ರಲ್ಲಿ ೩೧.೫೨

ಲಕ್ಷ. ೮೫–೮೬ರಲ್ಲಿ ಈವರೆಗೆ ೨೧.೦೧ ಲಕ್ಷ ಹಣ ಬಂದಿದೆ. ಇದನ್ನು ವಾಹನಗಳ ಖರೀದಿ, ತರಬೇತಿ ಶಾಲೆಗಳ ಆಧುನಿಕರಣ, ವಿಧಿವಿಜ್ಞಾನ ಪ್ರಯೋಗಾಲಯದ ಕಟ್ಟಡದ ನಿರ್ಮಾಣ ಮತ್ತು ಇತರೆ ಯಂತ್ರ ಸಾಮಗ್ರಿಗಳನ್ನು ಖರೀದಿಸಲು ವಿನಿಯೋಗಿಸಿದ್ದೇವೆ. ಕಳೆದ ವರ್ಷ ನಮ್ಮ ರಾಜ್ಯ ಸರ್ಕಾರದ ಹಣದಿಂದ ೯೯೯ ವೈರ್‌ಲೆಸ್ ಸೆಟ್ಟುಗಳನ್ನು ೧೭ ಜೀಪುಗಳು, ೫ ವ್ಯಾನುಗಳು, ೪೭ ಮೋಟಾರು ಸೈಕಲ್ಲುಗಳು ೨ ಕಾರುಗಳು, ೭ ಬಸ್ಸುಗಳನ್ನು ಕೊಳ್ಳಲು ಒಂದು ಕೋಟಿ ರೂಪಾಯಿಗಳ ಮೇಲೆ ಹಣವನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಅದೇ ರೀತಿಯಲ್ಲಿ ನಾವು ಇಲಾಖೆಯನ್ನು ಸಜ್ಜುಗೊಳಿಸಲು ಬೇಕಾದ ಹಣವನ್ನು ಅವರಿಂದ ಹೊಸದಾಗಿ ಕೇಳಿದ್ದೇವೆ. ನಾವು ನಮ್ಮ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಪೋಲೀಸ್ ಸಿಬ್ಬಂದಿ ಹಾಗೂ ಕಚೇರಿಗಳ ಹೆಚ್ಚಳ ಮತ್ತು ಸ್ಥಾಪನೆಯ ಬಗ್ಗೆ ಕಳಕಳಿಯನ್ನು ಅನೇಕ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅದನ್ನು ಮಾಡಬೇಕೆಂದಿದ್ದೇವೆ. ಆದರೆ ಏಕಕಾಲದಲ್ಲಿ ಎಲ್ಲವನ್ನೂ ಪೂರೈಸಲು ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುವುದಿಲ್ಲ. ಆದರೂ ಕೂಡ, ಈ ವರ್ಷ ನಮಗೆ ಪ್ರಾಪ್ತವಾಗಿರುವ ಹಣದಲ್ಲೇ ಉಳಿತಾಯ ಮಾಡಿ ಕೆಲವಾರು ಕಡೆ ಈ ಕೆಳಕಂಡ ಸಿಬ್ಬಂದಿ ಹೆಚ್ಚಳ ಹಾಗೂ ಕಚೇರಿಗಳನ್ನು ತೆರೆಯುವ ಬಗ್ಗೆ ಸರ್ವ ಪ್ರಯತ್ನ ಮಾಡುತ್ತೇನೆಂದು ತಿಳಿಸಿದ್ದೇನೆ. ಈ ವರ್ಷ ಈಗಾಗಲೇ ಎರಡು ಠಾಣೆಗಳಿಗೆ ಮಂಜೂರಾತಿ ನೀಡಲಾಗಿದೆ. ಈ ವರ್ಷ ಬೆಂಗಳೂರು ನಗರಕ್ಕೆ ಎರಡು ಠಾಣೆಗಳು, ಬೆಂಗಳೂರು ಜಿಲ್ಲೆಯ ಆನೇಕಲ್ಲಿನಲ್ಲಿ ಸರ್ಕಲ್ ಆಫೀಸು, ಚಿತ್ರದುರ್ಗ ಜಿಲ್ಲೆಯ ಹಡದಿಯಲ್ಲಿ ಪೋಲೀಸ್ ಠಾಣೆ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಅಶೋಕನಗರ ಬಡಾವಣೆಯಲ್ಲಿ ಪೋಲೀಸ್ ಠಾಣೆ, ಬಿಜಾಪುರ ಜಿಲ್ಲೆಯ ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಪೋಲೀಸ್ ಠಾಣೆ, ಬೀದರ್ ಜಿಲ್ಲೆಯ ಮುಡಬಿಯಲ್ಲಿ ಪೋಲೀಸ್ ಠಾಣೆ, ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಸರ್ಕಲ್ ಆಫೀಸ್, ಮೈಸೂರು ನಗರದಲ್ಲಿ ಜಯಲಕ್ಷ್ಮಿಪುರಂ ಠಾಣೆ, ಮೈಸೂರು ಜಿಲ್ಲೆಯ ಚಾಮರಾಜನಗರ ಪೂರ್ವ ವಿಭಾಗದ ಠಾಣೆ ಹಾಗೂ ಹನೂರು ಪೋಲೀಸ್ ಠಾಣೆಯಲ್ಲಿ ಸಿಬ್ಬಂದಿಯ ಹೆಚ್ಚಳ, ತಲಕಾಡು, ಬಿಳಿಗಿರಿ ಹೊರ ಠಾಣೆಗಳಿಗೆ ಸಿಬ್ಬಂದಿ ಹೆಚ್ಚಳ, ಬಿದರಹಳ್ಳಿಯಲ್ಲಿ ಹೊರಠಾಣೆ. ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಸರ್ಕಲ್ ಆಫೀಸು, ಮಂಡ್ಯ ಪಟ್ಟಣದಲ್ಲಿ ಟ್ರಾಫಿಕ್ ಪೋಲೀಸ್ ಠಾಣೆ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಸರ್ಕಲ್ ಆಫೀಸು, ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್ಲಿನಲ್ಲಿ ಪೋಲೀಸ್ ಠಾಣೆ, ವೆನ್‌ಲಾಕ್ ಆಸ್ಪತ್ರೆಯಲ್ಲಿ ಹೊರಠಾಣೆ, ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಟ್ರಾಫಿಕ್ ಠಾಣೆ ಮತ್ತು ರಾಮಪುರದಲ್ಲಿ ಪೋಲೀಸ್ ಠಾಣೆ, ಚಿಕ್ಕಮಗಳೂರಿನಲ್ಲಿ ಟ್ರಾಫಿಕ್ ಪೋಲೀಸ್ ಠಾಣೆ, ರೈಲ್ವೆ ವಿಭಾಗದ ವಾಡಿಯಲ್ಲಿ ಡಿ.ಎಸ್.ಪಿ. ಆಫೀಸು, ಬೈಯ್ಯಪ್ಪನಹಳ್ಳಿಯಲ್ಲಿ ಪೋಲೀಸ್ ಠಾಣೆ, ಸಿಐಡಿ. ವಿಭಾಗದಲ್ಲಿ ತನಿಖೆಗಾಗಿ ಮತ್ತೊಂದು ಘಟಕ, ರಾಜ್ಯದ ನಾನಾ ಭಾಗಗಳಲ್ಲಿ ಮಹಿಳಾ ವಿಭಾಗದಲ್ಲಿ ಸಿಬ್ಬಂದಿಯ ಹೆಚ್ಚಳ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಫೋಟೋ ವಿಭಾಗಕ್ಕೆ ಸಹಾಯಕ ನಿರ್ದೇಶಕರ ಹುದ್ದೆ, ಬೆರಳಚ್ಚಿನ ಘಟಕದಲ್ಲಿ ಒಬ್ಬ ಡಿ.ಎಸ್.ಐ. ೨ ಸಬ್ ಇನ್ಸ್‌ಪೆಕ್ಟರು, ೨ ಕಾನ್‌ಸ್ಟೇಬಲ್ಲುಗಳ ಹುದ್ದೆ, ಗುಪ್ತವಾರ್ತಾ ಶಾಖೆಯಲ್ಲಿ ೫ ಡ್ರೈವರುಗಳ ಹುದ್ದೆ, ವೈರ್‌ಲೆಸ್ ವಿಭಾಗದಲ್ಲಿ ಒಂದು ಡಿ.ಎಸ್.ಪಿ. ಒಂದು ಇನ್ಸ್‌ಪೆಕ್ಟರು, ಒಂದು ಎ.ಎಸ್.ಐ. ಮೂರು ಹೆಚ್.ಸಿ. ೧೦ ಕಾನ್‌ಸ್ಟೇಬಲ್ಲುಗಳ ಹುದ್ದೆ, ಎರಡು ಜಿಲ್ಲೆಗಳಲ್ಲಿ ಶ್ವಾನ ದಳಗಳು ಹಾಗೂ ಮೈಸೂರಿನ ಅರಮನೆಯ ವಾದ್ಯಗೋಷ್ಠಿಯ ಇನ್ಸ್‌ಪೆಕ್ಟರು ಹುದ್ದೆಯನ್ನು ಡಿ.ಎಸ್.ಪಿ. ಹುದ್ದೆಗೆ ಬಡ್ತಿ ಮಾಡುವುದು ಇವುಗಳ ಬಗ್ಗೆ ಮಂಜೂರಿ ಮಾಡಲು ಪ್ರಯತ್ನಿಸುತ್ತೇನೆ. ಹೀಗೆ ಈ ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತೇವೆ. ಒಂದು ಕೋಟಿ ರೂಪಾಯಿ ಅಂದಾಜಿನಲ್ಲಿ ನಮ್ಮ ಇಲಾಖೆಗೆ ಕೊಟ್ಟಿರುವ ಹಣದಲ್ಲಿ ಉಳಿತಾಯ ಮಾಡಿ ಅವಶ್ಯಕತೆ ಇದ್ದ ಕಡೆ ಕೊಡಬೇಕೆಂದು ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಹಣಕಾಸು ಸಿಕ್ಕಿದರೆ ಹೆಚ್ಚು ವಿಸ್ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ರಾಚಯ್ಯನವರ ಭಾಷಣ ಕೇಳಿ ನನಗೆ ಮಿಶ್ರ ಪ್ರತಿಕ್ರಿಯೆ ಉಂಟಾಗಿದೆ ನಾನು ಸಹವಾಸ ದೋಷದಿಂದ ಹರಿಕಥೆ ಮಾಡುವುದನ್ನು ಕೇಳಿದ್ದೇನೆ, ಆದರೆ ಹರಿಕಥೆ ಮಾಡುವುದನ್ನು ಕೇಳಿಲ್ಲ.

ಅಧ್ಯಕ್ಷರು.—ನೀವು ಹರಿಕಥೆ ಹೇಳಿದರೆ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾತನಾಡದೆ ಹೋದರೆ ಹೇಳುತ್ತೇನೆ. ನಾನು ಕೆಲವಾರು ಪ್ರಶ್ನೆಗಳನ್ನು ಕೇಳಿದ್ದೇನೆ, ಅದಕ್ಕೆ ಮಂತ್ರಿಗಳು ಉತ್ತರಿಸಿದ್ದಾರೆ. ಈಗ ಅವರು ಉತ್ತರ ಕೊಟ್ಟಿರುವ

ದಕ್ಕೂ ಹಿಂದೆ ಉತ್ತರ ಕೊಟ್ಟಿರುವುದಕ್ಕೂ ಏನೇನು ವ್ಯತ್ಯಾಸ ಇಲ್ಲ. ಮಧ್ಯ ಪ್ರದೇಶ, ಅಸ್ಸಾಂಗಿಂತ ನಮ್ಮಲ್ಲಿ ಡಕಾಯಿತ ಪ್ರಕರಣಗಳು ಕಡಿಮೆ ಇವೆ ಎಂದು ಬೆನ್ನು ತಟ್ಟಿಕೊಳ್ಳುವ ಸಾಹಸ ಸರಿಯಲ್ಲ. ನನ್ನ ಕ್ಷೇತ್ರದಲ್ಲಿ ಡಕಾಯಿತ ಪ್ರಕರಣಗಳು ನಡೆದಿವೆ. ಇದರಿಂದ ಬಸವಲಿಂಗಪ್ಪನವರಿಗೆ ವ್ಯಾಕುಲ ವಾಗಿದೆ ಎಂದು ಹೇಳಿದ್ದಾರೆ. ನಿಮ್ಮ ಅನಾಸಕ್ತಿ, ಅಧ್ಯಕ್ಷತೆಯನ್ನು ಎತ್ತಿ ತೋರಿಸುವಾಗ ನನಗೆ ಏನಾಗ ಬೇಕು. ನೀವು ಅವರನ್ನು ಹಿಡಿಯುವ ಹಾಗೆ ಇಲ್ಲ. ಹುಬ್ಬಳ್ಳಿಯಲ್ಲಿ ೧೫ರಂದು ಆದ ಘಟನೆಗೆ ಸಂಬಂಧಪಟ್ಟ ಅರ್ಜಿ ನನ್ನ ಹತ್ತಿರ ಇದೆ. ಅಲ್ಲಿ ಹೋದ ಡಕಾಯಿತರನ್ನು ಊರಿನವರು ಹಿಡಿದು ಪೋಲೀಸರಿಗೆ ಕೊಟ್ಟಿದ್ದಾರೆ. ಮತ್ತೊಂದು ಕಡೆ ಪೋಲೀಸರಿಗೆ ವಿಷಯ ತಿಳಿಸಿದ ತಕ್ಷಣ ಅವರು ಹೋಗಿದ್ದಾರೆ. ಸ್ಪೆಷಲ್ ಪೋಲೀಸ್ ಕೂಡ ಬಂದಿದ್ದಾರೆ, ಅವರು ಡಕಾಯಿತರನ್ನು ನೋಡಿಯೂ ಜೀಪ ಏರಿ ಹೋಗಿದ್ದಾರೆ. ಆಗ ಅವರಿಗೆ ಪೋಲೀಸರು ನಮ್ಮನ್ನು ಬಿಟ್ಟು ಹೋದರು ಅವರು ನಮ್ಮನ್ನು ಹಿಡಿಯುವುದಿಲ್ಲವೆಂಬುದು ಖಚಿತವಾಯಿತು. ಆಮೇಲೆ ಚಾಮುಂಡಿ ಎಕ್ಸ್‌ಟೆನ್‌ಷನ್‌ನಲ್ಲಿ ದರೋಡೆ ನಡೆಯಿತು. ಅಲ್ಲಿಯೂ ಪೋಲೀಸರು ಇದ್ದರು. ಆ ಪೋಲೀಸರು ಡಕಾಯಿತರನ್ನು ನೋಡಿ ಇಟ್ಟಿಗೆ ಗೂಡಿನೊಳಗೆ ಹೋಗಿದ್ದಾರೆ. ಯಾರು ಸತ್ತಿದ್ದಾರೆ ಇಲ್ಲವೆಂದು ವಿಚಾರ ಮಾಡುವು ದಕ್ಕೆ ಹೋಗಿಲ್ಲ. ಈ ರೀತಿ ಎಲ್ಲ ನಡೆಯುತ್ತಿದೆ.

೧೧-೦೦ ಎ.ಎಂ.

ನಾನು ಏತಕ್ಕೆ ಹೇಳುವುದಕ್ಕೆ ಬಂದೆ ಎಂದರೆ ೪೫ ಸಾವಿರ ಪೋಲೀಸರು ಇದ್ದಾರೆ. ಈ ಪೋಲೀಸರಿಂದ ಡಕಾಯಿತರನ್ನು, ಅವರ ಸಂಚನ್ನು ಬಹಿರಂಗ ಪಡಿಸುವುದಕ್ಕೆ ಆಗಿಲ್ಲ. ಎಷ್ಟು ಜನ ಅಧಿಕಾರಿಗಳು, ಎಷ್ಟು ಶಾಖೆಯ ಅಧಿಕಾರಿಗಳು ನಿಮ್ಮಲ್ಲಿ ಇದ್ದಾರೆ. ಇಷ್ಟೆಲ್ಲಾ ಇದ್ದು ಡಕಾಯಿತರನ್ನು ಹಿಡಿಯುವುದಕ್ಕೆ ಏತಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ, ಇಂಟೆಲಿಜೆನ್ಸ್ ಅದು ಇದು ಎಂದು ಯಾವುದಕ್ಕೆ ಯಾವುದಕ್ಕೋ ಟ್ರೈನಿಂಗ್ ಕೊಡುತ್ತೀರಿ. ನನಗಂತೂ ಗೊತ್ತಿಲ್ಲ. ಬಹಳ ಜಾಸ್ತಿ ಇಲ್ಲ ಇಲ್ಲಿ ಕಡಿಮೆ ಎನ್ನುವುದು ಬೇಡ. ಶಾಂತಿಯನ್ನು ಸ್ಥಾಪನೆ ಮಾಡಬೇಕು. ಜನರಿಗೆ ಭಯ ಇಲ್ಲದ ರೀತಿ ಮಾಡಬೇಕು. ಇಂಥ ಸನ್ನಿವೇಶವನ್ನು ಉಂಟು ಮಾಡುವುದಕ್ಕೆ ತಾವು ಏನು ಮಾಡುತ್ತೀರಿ ? ಸಿವಿಲ್ ರೈಟ್ಸ್ ಸೆಲ್ ಎಂದು ಇಟ್ಟಿದ್ದೀರಿ. ಅದನ್ನು ವಜಾ ಮಾಡಿ. ಕೆಲಸ ಕೊಟ್ಟು ನೀವು ಕೆಲಸ ಮಾಡಬೇಡಿ ಎಂದು ಹೇಳುವುದು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ವಿ. ಎಲ್. ಪಾಟೀಲರು ಯಾರೋ ಸುಳ್ಳು ಜಾತಿ ಪತ್ರಗಳನ್ನು ತೆಗೆದುಕೊಂಡು ಬಂದಿದ್ದರಿಂದ ಆ ಕೇಸ್ ಕ್ರಿಮಿನಲ್ ಮತ್ತು ಹೈಕೋರ್ಟ್‌ನಲ್ಲಿ ದಾಖಲೆ ಮಾಡಬೇಕು ಎಂದರೆ ನೀವು ಮಾಡಬೇಡಿ ಎಂದು ಹೇಳಲಿಕ್ಕೆ, ನಿರ್ದೇಶನ ಕೊಡಲಿಕ್ಕೆ ನೀವು ಯಾರು ? ಸಿವಿಲ್ ರೈಟ್ ಸೆಲ್‌ನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಕೇಂದ್ರ ಸರ್ಕಾರದಿಂದ ಆದೇಶ ಬಂದರೂ ಕೂಡ ಅದನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ. ಅದರ ಬಗ್ಗೆ ವಿವರಣೆ ಕೊಡಿ. ಮೂರನೆಯದು ಯಾರಾದರೂ ಒಂದು ದೂರು ಕೊಟ್ಟರೆ ದೂರು ಕೊಟ್ಟವರ ಮೇಲೆಯೇ ಆಪಾದನೆಯನ್ನು ಮಾಡುತ್ತಿದ್ದೀರಿ. ನನ್ನ ಕ್ಷೇತ್ರದಲ್ಲಿ ಮರ್ಡರ್‌ಗೆ ಸಂಬಂಧಪಟ್ಟಂತೆ ಬೆಳಲಹಳ್ಳಿ ಗ್ರಾಮದಲ್ಲಿ ಮೆಹಬೂಬ ಅವರ ತಮ್ಮನ ಹತ್ತಿರ ಹೋಗಿ ನಿನ್ನ ಮೇಲೆ ಮರ್ಡರ್ ಕೇಸಾಗಿದೆ. ಕೋರ್ಟಿಗೆ ಹೋದರೆ ೫-೬ ಸಾವಿರ ರೂಪಾಯಿ ಖರ್ಚಾಗುತ್ತದೆ. ಆ ೫-೬ ಸಾವಿರ ರೂಪಾಯಿಗಳನ್ನು ನಮಗೆ ಕೊಡಿ ಎಂದು ಪೋಲೀಸರೇ ಹೇಳುವಂಥ ಒಂದು ಕುತಂತ್ರ ನಡೆದಿದೆ. ಕುತಂತ್ರ ಎಂದು ಹೇಳುವುದಿಲ್ಲ. ಬೆದರಿಕೆ ಸನ್ನಿವೇಶವನ್ನು ಉಂಟು ಮಾಡಿದ್ದಾರೆ, ದೊಡ್ಡ ಅಧಿಕಾರಿಗಳಿಂದ ಚಿಕ್ಕ ಅಧಿಕಾರಿಗಳವರೆಗೂ ಬೆದರಿಕೆ ಸ್ವೇಚ್ಛೆಯಾಗಿ ನಡೆಯುತ್ತಿದೆ. ಆದ್ದರಿಂದ ನೀವು ಇದನ್ನು ಯಾವ ರೀತಿಯಾಗಿ ಕಂಟ್ರೋಲ್ ಮಾಡುವುದಕ್ಕೆ ಹೋಗುತ್ತೀರಿ ? ಜನಗಳಿಗೆ, ಪ್ರಜೆಗಳಿಗೆ ಅಧಿಕಾರಿಗಳ ಮೇಲೆ ನಂಬಿಕೆ ಬರುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದ್ದೀರಿ. ನಂಬಿಕೆಯನ್ನು ಕಳೆದುಕೊಳ್ಳುವ ರೀತಿಯಲ್ಲಿ ವಿರುದ್ಧವಾಗಿ ಮಾಡುತ್ತಿದ್ದೀರಿ, ಅಧಿಕಾರಿಗಳು, ನೀವೂ ಯಾವ ರೀತಿಯಾಗಿ ಶಾಂತಿಯನ್ನು ಸ್ಥಾಪನೆ ಮಾಡುತ್ತೀರಿ ? ನಿಮ್ಮಲ್ಲಿ ಯಾರ್ಯಾರು ಅಧಿಕಾರಿಗಳು ಇದ್ದಾರೆ, ಗೃಹಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ನಿಮ್ಮಲ್ಲಿ ಯಾರ್ಯಾರು ಅಧಿಕಾರಿಗಳು ಇದ್ದಾರೆ. ಆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಪುನಃ ೨-೩ ಸಾರಿ ಟ್ರೈನಿಂಗ್‌ಗೆ ಕಳಿಸಬೇಕು. ಕಾನೂನನ್ನು ಮಾಡಲಿಕ್ಕೆ, ತರಬೇತಿಯನ್ನು ಚೆನ್ನಾಗಿ ಪಡೆದುಕೊಂಡು ಬರಲಿಕ್ಕೆ ಅವರನ್ನು ಟ್ರೈನಿಂಗ್‌ಗೆ ಕಳಿಸಬೇಕಾಗುತ್ತದೆ. ಶ್ರೀಮಾನ್ ರಾಜೀವ್ ಗಾಂಧಿಯವರು ಯಾರೇ ಅಧಿಕಾರಿಗಳಾಗಿರಲಿ ಅವರಿಗೆ ಟ್ರೈನಿಂಗ್ ಕೊಡಬೇಕೆಂದು ಮಾಡಿದ್ದಾರೆ. ಅದರಂತೆ ನೀವೂ ಕೂಡ ಎಲ್ಲಾ ಅಧಿಕಾರಿಗಳನ್ನು

ಲಾ ಕಾಲೇಜಿನಲ್ಲಿ ಟ್ರೈನಿಂಗ್ ಕೊಟ್ಟು ಲಾ ಕಲಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ನಾನು ದೊಡ್ಡ ದೊಡ್ಡ ಅಧಿಕಾರಿಗಳನ್ನು ನೋಡಿದ್ದೇನೆ. ಅವರಿಗೆ ಕಾನೂನು ಗೊತ್ತಿದೆಯೋ, ಇಲ್ಲವೋ ನನಗೆ ಅರಿವಾಗಿಲ್ಲ. ಬಸವಲಿಂಗಪ್ಪನವರು ಏನಾದರೂ ಹೇಳಿದರೆ ಅದನ್ನು ಕಾನೂನು ಪ್ರಕಾರ ಮಾಡಿರಿ ಎಂದರೆ ಏನಾದರೂ ಮಾಡಿ ಅವರ ಮೇಲೆ ಒಂದು ಕೇಸನ್ನು ಹಾಕಬೇಕು, ಹೆರಾಸ್‌ಮೆಂಟ್ ಮಾಡಬೇಕು ಎಂಬ ಮನೋವೃತ್ತಿ ನಮ್ಮ ಪೋಲೀಸ್ ಅಧಿಕಾರಿಗಳಲ್ಲಿದೆ. ನನ್ನಂಥವರ ಮೇಲೆ ಬರುತ್ತೀರಾ ? ನಾಚಿಕೆಗೇಡಿತನ ಇಂಥ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಿ. ನೀವು ಕಂಟ್ರೋಲ್ ಇಟ್ಟುಕೊಂಡು ಭಯ ಇರುವ ರೀತಿಯಲ್ಲಿ ಸರ್ಕಾರವನ್ನು ಇಟ್ಟುಕೊಳ್ಳಬೇಕು. ಗೃಹಮಂತ್ರಿಗಳು, ಮುಖ್ಯಮಂತ್ರಿಗಳು ಇದ್ದಾರೆ ಎನ್ನುವ ಭಯ ಅವರಲ್ಲಿ ಮೂಡಿಸದೇ ಹೋದರೆ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಬಡವರ ರಕ್ಷಣೆಯೂ ಆಗುವುದಿಲ್ಲ. ಆ ಪಾರ್ಟಿ, ಈ ಪಾರ್ಟಿ ಎಂದೇನೂ ಹೇಳುತ್ತಿಲ್ಲ. ನಾನು ಚಿತ್ರದುರ್ಗದವನು. ಅಲ್ಲಿ ವಾಡಿಕೆಯಲ್ಲಿರುವ ಗಂಡ ಹೆಂಡತಿಯ ಕಥೆ. ಅದರಲ್ಲಿ ಗಂಡ ಸ್ವಲ್ಪ ಕಡಿಮೆ, ಹೆಂಡತಿ ಸ್ವಲ್ಪ ಮೇಲುಗೈ. ಗಂಡನು ಹೆಂಡತಿಗೆ ದುರುಗದ ಗೆದ್ದನ್ನು ಗುದ್ದಿ ಬಿಡುತ್ತೇನೆ ಎಂದು ಹೆದರಿಸುತ್ತಿದ್ದನು,

ಶ್ರೀ ಸಿ. ಬೈರೇಗೌಡ.—ಹೆಚ್ಚು ಕಡಿಮೆ ಮಾತನಾಡುವುದಕ್ಕೆ ಇದು ಸಮಯವೇ ?

ಶ್ರೀ ಬಿ. ಬಸವಲಿಂಗಪ್ಪ.—ಪೋಲೀಸ್ ಇಲಾಖೆ ಅಂಥದ್ದು. ಒಂದು ದಿವಸ ಗಂಡ ಗುದ್ದೇ ಬಿಡುತ್ತಾನೆ. ನಂತರ ಗಂಡ ಅಡಿಯಾಳಾಗುತ್ತಾನೆ. ಈ ಕಥೆಯಂತೆ ಆಗಬಾರದು. ನಿಮ್ಮ ಭಯ ನಿರಂತರವಾಗಿರಬೇಕು, ಭಯ ಇರಲೇಬೇಕು, ಅಧಿಕಾರಿಗಳಿಗೆ ಮುಂದುವರಿದು ಮಾಡಲಿಕ್ಕೆ ಬಿಡಬಾರದು. ಅಂಥ ಒಂದು ಸನ್ನಿವೇಶವನ್ನು ಸೃಷ್ಟಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ಶೆಡ್ಯೂಲ್ಡ್ ಕ್ಯಾಸ್ಟ್ ಅದರಲ್ಲಿ ಸಿ.ಆರ್.ಇ. ಸೆಲ್ ಒಂದನ್ನು ಇಟ್ಟಿದ್ದೇವೆ, ಸಿ.ಆರ್.ಇ. ಸೆಲ್ ಯಾರು ಸುಳ್ಳು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ. ಆ ವಿಷಯದಲ್ಲಿ ತನಿಖೆ ಮಾಡುವುದು ಬೇಡ ಎಂದು ಆದೇಶ ಕೊಟ್ಟಿದ್ದೇವೆಂದು ಅವರು ಹೇಳಿದರು. ಆ ರೀತಿಯಾದಂಥ ಆದೇಶವನ್ನು ನಾವು ಕೊಟ್ಟಿಲ್ಲ. ಯಾವ ವಿಷಯದಲ್ಲಿ ಕೊಟ್ಟಿದ್ದೇವೆಂದರೆ ಯಾರನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿಸಬೇಕೋ ಅಂಥದ್ದಕ್ಕೆ ಮಾಡಿದ್ದೇವೆ. ಕೇಂದ್ರ ಸರ್ಕಾರದ ಒಂದು ಆದೇಶ ಬರುವವರೆಗೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದೆಂದು ಅವರಲ್ಲಿ ಕೊಟ್ಟಿದ್ದೇವೆ. ಮಿಕ್ಕವರ ವಿಷಯದಲ್ಲಿ ಸುಳ್ಳು ಸರ್ಟಿಫಿಕೇಟ್ ಕೊಟ್ಟಿದ್ದರೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ, ಎರಡನೆಯದಾಗಿ...

ಶ್ರೀ ಬಿ, ಬಸವಲಿಂಗಪ್ಪ.—ಗೃಹ ಶಾಖೆಯ ಕಾರ್ಯದರ್ಶಿ ಶ್ರೀ ಗೋಶಾಲ್‌ರವರು ಹೊರಡಿಸಿದಂಥ ಆಜ್ಞೆ ತಮಗೆ ಗೊತ್ತಿದೆಯೋ ? ತಮ್ಮ ಗಮನಕ್ಕೆ ಅದು ಬಂದಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ. ರಾಚಯ್ಯ.—ಎರಡನೆಯದಾಗಿ ಅರ್ಜಿ ಕೊಡುವುದಕ್ಕೆ ಹೋದವರ ಮೇಲೆ ಕೇಸ್ ಹಾಕುತ್ತಾರೆ ಎಂದು ಹೇಳಿದ್ದಾರೆ. ಅರ್ಜಿ ಕೊಡುವವರೆಲ್ಲಾ ಪ್ರಾಮಾಣಿಕವಾಗಿಯೇ ಅರ್ಜಿ ಕೊಟ್ಟರೆ ಪರವಾಗಿಲ್ಲ. ಮೊನ್ನೇ ಪೆಟ್ರೋಲ್ ಬಂಕ್‌ನಲ್ಲಿ ೧೮ ಸಾವಿರ ರೂಪಾಯಿ ಕಳುವಾಗಿದೆ ಎಂದು ಹೇಳಿ ಪೋಲೀಸ್ ಕಂಪ್ಲೈಂಟ್ ಕೊಟ್ಟರು. ತನಿಖೆಯಾದ ಮೇಲೆ ಯಾರು ಅರ್ಜಿ ಕೊಟ್ಟರೋ ಅವರೇ ಆ ಪೆಟ್ರೋಲ್‌ಬಂಕ್‌ನ ಹಿಂಭಾಗದಲ್ಲಿ ೧೮ ಸಾವಿರ ರೂಪಾಯಿಯನ್ನು ಬಚ್ಚಿಟ್ಟಿದ್ದ ಎಂದು ಗೊತ್ತಾಗಿದೆ ಇಂಥ ಸುಳ್ಳು ಸತ್ಯಕ್ಕೆ ದೂರವಾಗಿರತಕ್ಕಂಥ ಫಿರ್ಯಾದಿಯನ್ನು ಕೊಟ್ಟಾಗ ಪೋಲೀಸರೇ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿ ಹೂತಿಟ್ಟಿದ್ದ ಹಣವನ್ನು ಕಂಡು ಹಿಡಿದಿದ್ದಾರೆ. ಇದೆ ಸಮಯ ಎಂದು ಡಕಾಯಿತಿ, ಕಳ್ಳತನ, ಖೂನಿ ಆಗುವಾಗ ಸ್ವಲ್ಪ ಹೊಡೆದುಕೊಳ್ಳೋಣ ಎಂದು ಹೇಳಿ ಸುಳ್ಳು ಕಂಪ್ಲೇಂಟ್ ಕೊಟ್ಟಾಗ ಪ್ರಾಮಾಣಿಕವಾಗಿ ಪೋಲೀಸರು ಪತ್ತೆ ಹಚ್ಚಿದರೆ ತಪ್ಪೇ ?

ಶ್ರೀ ಬಿ. ಬಸವಲಿಂಗಪ್ಪ.—ಅರ್ಜಿ ಕೊಟ್ಟಿದ್ದಾರೆ, ಕ್ರಮ ತಗದುಕೊಳ್ಳಿ.

ಅಧ್ಯಕ್ಷರು.—ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತಾರೆ.

ಶ್ರೀ ಬಿ. ರಾಚಯ್ಯ.—ಹಾಗೆಯೇ ಇನ್ನೊಂದು. ಆಟೋರಿಕ್ಷಾದ ಸೀನ ಯಾವ ರೀತಿ ಡಕಾಯಿತಿ ಮಾಡುತ್ತಿದ್ದ ಎಂಬುದು ಅವರಿಗೆ ಗೊತ್ತು.

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಗೊತ್ತಿಲ್ಲಪ್ಪ.

ಶ್ರೀ ಬಿ. ರಾಚಯ್ಯ.—ಸುಬ್ರಮಣಿ ಎಂದು ಹಿಂದೆ ಅವರ ಪಿ.ಎ. ಆಗಿದ್ದ.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲವನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಸುಮ್ಮನೆ ಗಲಾಟೆ ಮಾಡಿ ಅದಕ್ಷರು, ಇವರ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿದರೆ...

SRI B. BASAVALINGAPPA.—I want him to speak out what he wants to speak. I do not want that he should say about one man. You take action against all persons.

ಶ್ರೀ ಬಿ. ರಾಚಯ್ಯ.—I will mention. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಬಂದಾಗ, ಮೊದಲು ಕೇಸನ್ನು ದಾಖಲು ಮಾಡಿಕೊಳ್ಳುತ್ತಾರೆ. ಬಸವಲಿಂಗಪ್ಪನವರ ಕಡೆಯವರು ಎಂದು ಕೇಸ್ ಹಾಕಿದ್ದಾರೆ ಎಂದು ಹೇಳಿದ್ದೀರಲ್ಲ ? ಅದು ಸತ್ಯವೇ ಅಲ್ಲವೇ ಹೇಳಿ. ಪೆಟ್ರೋಲ್ ಬಂಕ್‌ನಲ್ಲಿ ೧೮ ಸಾವಿರ ರೂಪಾಯಿಗಳನ್ನು ಡಕಾಯಿತಿ ಆಯಿತು ಎಂದು ಕಂಪ್ಲೇಂಟ್ ಕೊಟ್ಟಿದ್ದರೆ ತನಿಖೆ ಮಾಡಲಾಗಿ ಪೆಟ್ರೋಲ್ ಬಂಕ್ ಹಿಂದೆ ಹೂತಿಟ್ಟಿದ್ದುದು ಪತ್ತೆಯಾಯಿತು. ೧೮ ಸಾವಿರ ರೂಪಾಯಿಗಳನ್ನು ವಶಪಡಿಸಿಕೊಂಡು ಕೇಸ್ ಹಾಕಿದ್ದಾರೆ. ಆಟೋ ಸೀನ ಎಂಬುವವನು ಎಷ್ಟು ರೌಡಿಸಂ ಮಾಡುತ್ತಿದ್ದ ಎಂಬುದು ೪-೬ ಕೇಸ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಭಾಸ್ಕರಶೆಟ್ಟಿ ಎಂಬುವವರನ್ನು ಒತ್ತಾಯ ಮಾಡಿ ಅವನಿಂದ ದುಡ್ಡನ್ನು ಕಸಿದುಕೊಂಡಿದ್ದಾರೆ. ಅದಕ್ಕಾಗಿ ಕೇಸ್ ಹಾಕಿದ್ದಾರೆ. ಸುಬ್ರಮಣಿ ಎಂಬುವವರು ಅವರ ಪಿ. ಎ. ಆಗಿದ್ದ ಎಂದು ಹೇಳಿ ಬಿಡಬೇಕು ಎಂದು ಒತ್ತಾಯ ಮಾಡಿದರೆ ಹೇಗೆ ? ಗಲಾಟೆ ಮಾಡುವವರು ಅವರ ಕ್ಷೇತ್ರದಲ್ಲಿದ್ದಾರೆ, ಕ್ರಮ ತೆಗೆದುಕೊಂಡರೆ ನನ್ನ ಕಡೆಯವರು ಎಂದು ಹೇಳಿ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಈ ತರಹ ಏತಕ್ಕೆ ಹೇಳುತ್ತಾರೋ ಗೊತ್ತಾಗುತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಪಿ. ಎ. ಆಗಿದ್ದವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳಿ.

ಶ್ರೀ ಬಿ. ರಾಚಯ್ಯ.—ನಾನು ಬಸವಲಿಂಗಪ್ಪನವರ ಬಗ್ಗೆ ಹೇಳುತ್ತಿದ್ದೇನೆ. ನೋಡಿದ ತಕ್ಷಣ ಹೆದರಬೇಕು ಎಂದು ಹೇಳುತ್ತಾರಲ್ಲ ಅವರು ಮಾಡಿದ್ದನ್ನೂ ಜನ ನೋಡಿದ್ದಾರೆ. ನಾನು ಮಾಡಿದ್ದನ್ನೂ ಜನ ನೋಡುತ್ತಿದ್ದಾರೆ. ನೀವು ಮಾಡಿರುವುದನ್ನು ನೋಡಿದ್ದೇವೆ. (ಬಸವಲಿಂಗಪ್ಪ ನವರನ್ನು ಕುರಿತು). ನಿಮ್ಮ ಅಧಿಕಾರದಲ್ಲಿ ಏನೇನು ಮಾಡಿದ್ದೀರಿ, ನಾನು ಏನು ಮಾಡುತ್ತಿದ್ದೇನೆ ಎಂಬುದನ್ನು ಜನ ನೋಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ನೀವು ಮಂತ್ರಿ ಯಾಗಿದ್ದೀರಿ ಎಂದು ಹೇಳುತ್ತಿಲ್ಲ. ನಿಮ್ಮ ಮೇಲೆ ನನಗೆ ಸಿಟ್ಟಿಲ್ಲ, ದ್ವೇಷವಿಲ್ಲ. ನಾನು ಏನೇನು ಮಾಡಿದ ಪಟ್ಟಿ ಕೊಡಿ, ನೀವು ಏನೇನು ಮಾಡಿದ್ದೀರಿ ಪಟ್ಟಿ ಕೊಡುತ್ತೇನೆ.

ಅಧ್ಯಕ್ಷರು.—ಬಸವಲಿಂಗಪ್ಪನವರೇ ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಜನರಿಗೆ ಗೊತ್ತಾಗಲಿ, ನಾನು ಏನೇನು ಮಾಡಿದ್ದೇನೆ, ಅವರು ಏನೇನು ಮಾಡಿದ್ದಾರೆ ಎಂಬುದು. ಬಸವಲಿಂಗಪ್ಪನವರ ಮೇಲೆ ವೈಯಕ್ತಿಕವಾಗಿ ಸಿಟ್ಟು ತೀರಿಸಿಕೊಳ್ಳಬೇಕು ಎಂದು ನಾನು ನಿರ್ದೇಶನ ಕೊಟ್ಟಿಲ್ಲ. ಆ ರೀತಿ ಮಾಡಿದರೆ ಅಪ್ರಾಮಾಣಿಕತೆಯನ್ನು ಪ್ರದರ್ಶಿಸಿದಂತಾ ಗುತ್ತದೆ. ನನ್ನ ಇಲಾಖೆಯಲ್ಲಿ ನಡೆಯತಕ್ಕ ಲೋಪದೋಷಗಳನ್ನು ಎತ್ತಿಹಿಡಿದಿದ್ದಾರೆ. ಅದನ್ನು ಸರಿಪಡಿಸುತ್ತೇನೆ. ಮಾತೆತ್ತಿದರೆ ಅದಕ್ಷತೆ, ಕೈಲಾಗದೇ ಇದ್ದವರು ಎಂದರೆ ನಾನೇನು ಮಾಡಬೇಕೋ ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು (ಬಸವಲಿಂಗಪ್ಪನವರು) ಹೇಳಿದ್ದು ಏನೆಂದರೆ ಯಾರೋ ಅಧಿಕಾರಿಗಳು ಈ ರೀತಿಯಾಗಿ ನನ್ನನ್ನು abettor ಮಾಡಬೇಕೆಂದು ಸಂಚನ್ನು ಮಾಡು ತ್ತಿದ್ದಾರೆ ಎಂದು ನೇರವಾಗಿ ನಿಮ್ಮ ಹೆಸರನ್ನು ಹೇಳಲೇ ಇಲ್ಲ.

ಶ್ರೀ ಬಿ. ರಾಚಯ್ಯ.—ಆ ರೀತಿ ಸಂಚು ಮಾಡಿದ್ದರೆ, ಅವರ ವಿರುದ್ಧವಾಗಿ ಏನಾದರೂ ವೈಯಕ್ತಿಕವಾಗಿ ತೆಗೆದುಕೊಂಡಿದ್ದರೆ ನನಗೂ ಗೊತ್ತಾಗುತ್ತದೆ. ಅದಕ್ಕೋಸ್ಕರ ಅವರು ಇಷ್ಟೊಂದು ಸಿಟ್ಟಿಗೇಳುವುದಕ್ಕೆ ಕಾರಣ ಇಲ್ಲ.

ಅಧ್ಯಕ್ಷರು.—ಈಗ ಅವರು ಸಮಾಧಾನದಿಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಎರಡು ಎರಡೂವರೆ ತಿಂಗಳತನಕ ಡಕಾಯಿತಿ ಪ್ರಸಂಗಗಳು ಏನು ನಡೆಯಿತು ಅದರ ವಿಚಾರದಲ್ಲಿ ಸಂಬಂಧಪಟ್ಟ ಅಪಾದಿತರನ್ನು ಪೋಲೀಸರು ಹಿಡಿದಿದ್ದಾರೆ ಎಂದು ಹೇಳಿದ್ದಾರೆ, ಅದಕ್ಕೆ ನಮ್ಮ ಜಿಲ್ಲೆಯ ಜನತೆಯ ಪರವಾಗಿ ತಮ್ಮ ಇಲಾಖೆಗೆ ಮತ್ತು ಪ್ರಮುಖವಾಗಿ ದಕ್ಷತೆಯಿಂದ ಕೆಲಸ ಮಾಡಿದಂಥ ಪೋಲೀಸ್ ಅಧಿಕಾರಿಗಳಿಗೆ ವಂದನೆಗಳನ್ನು ಸಮರ್ಪಿಸುತ್ತಿದ್ದೇನೆ. ಆದರೆ ತಾವು ಹೇಳುತ್ತಾ ಏನು ಹೇಳಿದ್ದೀರಿ ? ತಮಗೆ ಸರಿಯಾದಂಥ ವರದಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಕೇರಳ ಪೋಲೀಸರೂ ಕೂಡ ಎರಡು ತಿಂಗಳ ಕಾಲ ಸತತವಾಗಿ ನಮ್ಮ ಅಧಿಕಾರಿಗಳ ಜೊತೆ ವ್ಯವಹರಿಸಿ ಕ್ರಮ ಕೈಗೊಂಡಿದ್ದಾರೆ. ಅದನ್ನು ಅಲ್ಲಗಳೆಯುತಕ್ಕ ಪ್ರಸಂಗ ಸದನದಲ್ಲಿ ಮಾಡುವುದು ಬೇಡ. ಯಾವ ರಾಜ್ಯದಲ್ಲಿ ಯಾವ ಪಕ್ಷವೇ ಅಧಿಕಾರದಲ್ಲಿರಲಿ ಇವತ್ತಲ್ಲ ನಾಳೆ there will be some reflection. It has gone on record. ಆ ದೃಷ್ಟಿಯಿಂದ ಯೋಚನೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಪತ್ರಿಕೆಯಲ್ಲಿ ಹೊರಬಂತು. ಅದು ಹೊರ ಬರಬಾರದಾಗಿತ್ತು ಎಂಬ ದೃಷ್ಟಿಯಿಂದ ನಾನು ಹೇಳಿದೆ. ಅವರೂ ಕೆಲಸ ಮಾಡಿದ್ದಾರೆ, ನಾವೂ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಡಕಾಯಿತರನ್ನು ಹಿಡಿಯುವುದಕ್ಕೆ ಕೇರಳ ಪೋಲೀಸರೂ ಸಹಾಯ ಮಾಡಿದ್ದಾರೆ. Even for smallest incidents the top officers used to visit the spot. ಸತ್ಯಕ್ಕೆ ಅಪಚಾರ ಆಗಬಾರದು ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಎರಡನೆಯದಾಗಿ ಈ ಡಕಾಯಿತಿ ಲಕ್ಷಣ ಏನಿತ್ತು ಎಂದರೆ ಅದು ಅಮಾವಾಸ್ಯೆ ಸಂದರ್ಭದಲ್ಲಿ ಆಗುತ್ತಿತ್ತು. ಬಾಕಿ ಬೆಳದಿಂಗಳು ಇರುವ ಸಂದರ್ಭದಲ್ಲಿ ಆಗುತ್ತಿರಲಿಲ್ಲ. ಡಕಾಯಿತರನ್ನು ಹಿಡಿದರೂ ಕೂಡ ಮುಂದೆ ಬರತಕ್ಕ ಅನಾಹುತವನ್ನೂ ತಪ್ಪಿಸಬೇಕಾಗುತ್ತದೆ. ತಾವು ಏನು ಬಿಗಿ ಕ್ರಮವನ್ನು ತೆಗೆದುಕೊಂಡಿದ್ದೀರಿ ಅದನ್ನು ಮುಂದೆ ಬರತಕ್ಕ ಅಮಾವಾಸ್ಯೆ ದಿವಸ ಕೂಡ ಮುಂದು ವರೆಸಿ ಭದ್ರತಾ ಕ್ರಮವನ್ನು ತೆಗೆದುಕೊಂಡು ಅಷ್ಟೇ ಜಾಗ್ರತೆಯನ್ನು ವಹಿಸಬೇಕು. ರಿಲಾಕ್ಸ್ ಮಾಡ ಬಾರದು. ಡಕಾಯಿತರನ್ನು ಹಿಡಿದ ವಿಷಯದಲ್ಲಿ ಪೋಲೀಸರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಏಕೆಂದರೆ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಆದರೆ ಎರಡು ಎರಡೂವರೆ ತಿಂಗಳಿಂದ ಜನ ಕೂಡ ರಾತ್ರಿ ಹಗಲು ನಿದ್ದೆ ಮಾಡದೆ ಪೋಲೀಸರೊಡನೆ ಸಹಕರಿಸಿದ್ದಾರೆ. ಹೆಚ್ಚು ಅನಾಹುತ ಆಗುವು ದನ್ನು ತಪ್ಪಿಸಿದ್ದಾರೆ. ಅಂಥ ಸಾರ್ವಜನಿಕರ ಬಗ್ಗೆ ಒಳ್ಳೆಯ ಮಾತನ್ನು ಆಡಿದರೆ ಹೆಚ್ಚು ಪರಿಣಾಮ ಕಾರಿಯಾಗುತ್ತದೆ ಎಂದು ಸೂಚನೆ ಕೊಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಅದನ್ನು ಹೇಳುತ್ತಾ ರೆಂದು ನಾನು ನೆನೆಸಿದೆ. ಸನ್ಮಾನ್ಯ ಸಚಿವರು ದೊಡ್ಡ ರಾಮಬಾಣ ಬಿಟ್ಟಂತೆ ಮಾಡಿದ್ದಾರೆ. ಯಾವಾಗಲೂ ನನ್ನ ಹತ್ತಿರ ಇದೆ, ನನ್ನ ಹತ್ತಿರ ಮಾಹಿತಿ ಇದೆ ಎಂದು ಹೇಳುತ್ತಿದ್ದರು ವಿರೋಧ ಪಕ್ಷದ ನಾಯಕರಿಗೆ ಸಂಬಂಧಪಟ್ಟಹಾಗೆ ಹೇಳಿಕೆ ಓದಿದ್ದಾರೆ. ಅದನ್ನು ಅವರ ಸಮಕ್ಷಮದಲ್ಲಿ ಹೇಳಿದ್ದರೆ ಸರಿಯಾದ ಉತ್ತರ ಬರುತ್ತಿತ್ತು, ಅವರು ಏನು ಹೇಳುತ್ತಾರೆ ಎಂಬುದನ್ನು ನಾವು ತಿಳಿದುಕೊಳ್ಳ ಬಹುದಾಗಿತ್ತು. ಸಾರ್ವಜನಿಕರ ಗಮನಕ್ಕೆ ಸತ್ಯಾಂಶವನ್ನು ತಿಳಿಸತಕ್ಕ ಕಾರ್ಯ ಆಗುತ್ತಿತ್ತು. ಈಗ ಏನು ಮಾಡಿದ್ದೀರಿ ? ಅವರು ಇಲ್ಲದೇ ಇದ್ದ ಸಂದರ್ಭದಲ್ಲಿ ಹೇಳಿದ್ದೀರಿ. ಈ ಮೆಟೀರಿಯಲ್ ಹೊಸದಾಗಿ ನಿಮಗೆ ಬಂದಿಲ್ಲ.

ಅಧ್ಯಕ್ಷರು.—ಅವರು ಇಲ್ಲದ ಟೈಂ ನೋಡಿ ನಾವು ಈ ಡಿಮ್ಯಾಂಡ್‌ನನ್ನು ಇಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಚಿವರ ಹತ್ತಿರ ಯಾವುದು ಮಾಹಿತಿ ಇದೆ, ಅದನ್ನು ಯಾವಾಗಲೂ ಕೈಯಲ್ಲೇ ಹಿಡಿದುಕೊಂಡು ಬರುತ್ತಿದ್ದರು ದಿನಾಗಲೂ ನಾನು ೨೦ ದಿವಸಗಳಿಂದ ನೋಡುತ್ತಿದ್ದೇನೆ. ಓದಿ ಹೇಳುತ್ತೇನೆ, ಎಂದು ಹೇಳುತ್ತಲೇ ಇದ್ದರು. ಎಲ್ಲರೂ ಇದ್ದಾಗ ಹೇಳ ಬಹುದಾಗಿತ್ತು. In the name of fairness under Section 162 statement ಓದಿ

ಹೇಳಿದ್ದಾರೆ. ನಮಗೆ ಬೇಕಾದ್ದು ಇಷ್ಟು, ಅದು ಪೋಲೀಸರು ರೆಕಾರ್ಡ್ ಮಾಡಿದ ಸ್ಟೇಟ್‌ಮೆಂಟಾ ? ಅಥವಾ ಮ್ಯಾಜಿಸ್ಟ್ರೇಟ್ ಮುಂದೆ ಬರೆಸಿಕೊಂಡ ಹೇಳಿಕೆಯೇ ? ಪೋಲೀಸರು ರೆಕಾರ್ಡ್ ಮಾಡಿದ್ದರೆ ಹೇಳಿಕೆ ಕೊಟ್ಟ ಬಗ್ಗೆ ದಸ್ಕತ್ತಿರುವುದಿಲ್ಲ, It is not a statement which can be uncorroborated. ಅದನ್ನು ಕೋರ್ಟಿನಲ್ಲಿ ನೋಡಬೇಕು. ಸ್ಟೇಟ್‌ಮೆಂಟ್ ಸರಿಯೋ ಇಲ್ಲವೋ ಎಂಬುದು ಕೋರ್ಟಿನಲ್ಲಿ ಪ್ರೂವ್ ಆಗಬೇಕು. ಆದ್ದರಿಂದ ಆ ವಿಚಾರ ಬೇಕು. ಹೊಸದಾಗಿ ಇವತ್ತು ಸಂಪ್ರದಾಯ ಪ್ರಾರಂಭವಾಗಿದೆ,

ಅಧ್ಯಕ್ಷರು.—ಹೊಸ ಸಂಪ್ರದಾಯವಲ್ಲ, ಸತ್‌ಸಂಪ್ರದಾಯ.

ಶ್ರೀ ಎಂ, ವೀರಪ್ಪ ಮೊಯಿಲಿ.—ಈ ಬಗ್ಗೆ ಸಚಿವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಬಿ. ರಾಚಯ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಅಮಾನುಷ ಡಕಾಯಿತಿ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನರೂ ಪೋಲೀಸ್ ಇಲಾಖೆ ಜೊತೆಯಲ್ಲಿ ಸಹಕರಿಸಿದ್ದಾರೆ. ಡಕಾಯಿತರನ್ನು ಪತ್ತೆ ಹಚ್ಚುವುದಕ್ಕೆ ಹೆಚ್ಚಿನ ರೀತಿಯಲ್ಲಿ ನಿದ್ರೆಗೆಟ್ಟು ಶ್ರಮಿಸಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳಬೇಕಾಗಿತ್ತು ಮರೆತಿದ್ದೆ. ಜ್ಞಾಪಿಸಿದ್ದಕ್ಕಾಗಿ ವೀರಪ್ಪ ಮೊಯಿಲಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಡಕಾಯಿತಿಗೆ ಕೇರಳ ಪೋಲೀಸರು ನಮ್ಮ ಪೋಲೀಸರ ಜೊತೆ ಸಹಕರಿಸಿದ್ದಾರೆ. ಅವರಿಗೂ ಧನ್ಯವಾದಗಳನ್ನು ಅರ್ಪಿಸಬೇಕೆಂದು ಹೇಳಿದ್ದಾರೆ. ನಾನು ಅವರನ್ನು ಹೀಯಾಳಿಸುತ್ತೇನೆ. ಎಂದಲ್ಲ. ಯಾರು ಹೇಗೆ ಹೇಗಿದ್ದಾರೆ ಎಂದು ನಾವು ಚರ್ಚೆ ಮಾಡಿದ ವಿಷಯ ಅಲ್ಲಿ ಪ್ರಕಟಣೆಯಾಯಿತು. ಆದ್ದರಿಂದ ಡಕಾಯಿತರು ಅವಿತುಕೊಂಡು ಹಿಡಿಯುವುದಕ್ಕೆ ಕಷ್ಟವಾಯಿತು. ಹುಲಿ ಬೇಟೆ ಮಾಡಿದ ಹಾಗೆ ಸುತ್ತಲೂ ಬೇಲಿ ಹಾಕಿ ಹಿಡಿಯಬೇಕಾಗಿ ಬಂತು. ಅಲ್ಲಿ ಪ್ರಚಾರ ಆದದ್ದರಿಂದ ಅವರು ಸಿಗಲಿಲ್ಲ ಎಂದು ಹೇಳಿದೆನೇ ವಿನಹ ಅವರ ಮೇಲೆ ಆಸ್ಪರ್ಷನ್ ಮಾಡಿದ್ದೇನೆ ಎಂದಲ್ಲ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯದಲ್ಲಿ ನಡೆಯಂತಕ್ಕ ಇಂಥ ಅಕೃತ್ಯಗಳನ್ನು ಪತ್ತೆ ಹಚ್ಚುವುದಕ್ಕೆ ಇಬ್ಬರಿಗೂ ಸಹಾಯ ಬೇಕು. ಆ ರೀತಿ ಹೊಂದಾಣಿಕೆಯಿಂದ ಜೋನಲ್ ಕೌನ್ಸಿಲ್ಲಿನಲ್ಲಿ ಮಾಡಿ ಕೆಲಸ ಮಾಡಿಕೊಂಡು ಹೋಗುತ್ತೇವೆ, ಹೇಳಿಕೆ ಬಗ್ಗೆ ಹೇಳಿದ್ದಾರೆ. ನಾನೇನೂ ಬಾಣ ಬಿಡಬೇಕೆಂದು ಬಿಡಲಿಲ್ಲ. ಪ್ರತಿಸಾರಿಯೂ ಅವರ ಪಕ್ಷದವರೇ ಆ ಬಗ್ಗೆ ಚುಚ್ಚಿ ಏತಕ್ಕೆ ಹೇಳುವುದಿಲ್ಲ ಎಂದು ಕೇಳುತ್ತಿದ್ದರೆ. ನಂದಕುಮಾರ್ ಕಡೆಯವರನ್ನು ಹಿಡಿದಿದ್ದೇವೆ ಎಂದು ಹೇಳಿದರೂ ಸಮಾಧಾನವಾಗದಿದ್ದರೆ ನಾನೇನು ಮಾಡಲಿ ?

ಅಧ್ಯಕ್ಷರು.—ಓದಿ ಓದಿ ಎಂದು ಅನೇಕ ಸಾರಿ ಈ ಕಡೆಯವರು(ಕಾಂಗ್ರೆ ಪಕ್ಷದವರು)ಹೇಳಿದ್ದಾರೆ. ನನಗೆ ಜ್ಞಾಪಕ ಇದೆ. ನಾನೇ ಬೇಡ ಎಂದು ಹೇಳಿದ್ದೆ.

ಶ್ರೀ ಬಿ. ರಾಚಯ್ಯ.—ಟೇಪ್‌ರೆಕಾರ್ಡ್ ಕೂಡ ಇದೆ,

ಶ್ರೀ ಬಿ ಬಸವಲಿಂಗಪ್ಪ,—ನಂದಕುಮಾರನದು ಏನಾಗಿದೆ ?

ಶ್ರೀ ಬಿ. ರಾಚಯ್ಯ.—ಅವರನ್ನು ಕೊಂದು ಹಾಕಿದರು. ಯಾರು ಕೊಂದು ಹಾಕಿದರು ಎಂಬುದು ಕೋರ್ಟಿನಲ್ಲಿ ಬರುತ್ತದೆ.

ಶ್ರೀ ಕೆ.ಎಚ್. ಪಾಟೀಲ.—ಮಾನ್ಯ ಅಧ್ಯಕ್ಷರೇ, ನಮ್ಮ ಗೃಹ ಸಚಿವರು ಇವತ್ತು ಉತ್ತರ ಕೊಡುವಾಗ ಎದುರು ಪಕ್ಷ ಖಾಲಿ ಇರುವ ಸಮಯವನ್ನು ನೋಡಿ ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಹಾಗೇನಿಲ್ಲ ಪಾಟೀಲರೇ, ಬಿ ಎ ಸಿ ಪ್ರಕಾರ ಇವತ್ತು ಉತ್ತರ ಕೊಡುವುದೆಂದು ನಿರ್ಧಾರ ಆಗಿದೆ? ಆ ಪ್ರಕಾರ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಎಚ್. ಪಾಟೀಲ್.—ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಪೋಲೀಸ್ ಅಧಿಕಾರಿಗಳಲ್ಲಿ ನೈತಿಕ ಮಟ್ಟ ಅಥವಾ ದಕ್ಷತೆ ಯಾರಿಗಿಂತಲೂ ಕಡಿಮೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನೇನೂ ಡೀಮಾರಲೈಸ್ ಮಾಡುವುದು ಬೇಡ. ಪ್ರತಿಯೊಂದು ಮಾತಿಗೆ ವಿರೋಧಪಕ್ಷದವರು ಹೇಳಿದರು, ಸಿ ಓ ಡಿ ಗೆ ರೆಫರ್ ಮಾಡುತ್ತೇವೆ ಎಂದು ಹೇಳುತ್ತಾರೆ. ಸಿ ಓ ಡಿ ಎಂದರೆ, ಇಲ್ಲಿ ಯಾರು ಖಂಡಮ್ ಆಗಿದ್ದಾರೋ ಅಂಥವರನ್ನೇ ಅಲ್ಲಿ ನೇಮಿಸುತ್ತಾರೆ. ಇವತ್ತು ಸಿ ಓ ಡಿ ಗೆ ವಹಿಸಿದಂತಹ

ಎಷ್ಟು ಕೇಸುಗಳಲ್ಲಿ ತನಿಖೆ ಮುಗಿದಿದೆ ? ಎಷ್ಟು ಜನ ಅಪರಾಧಿಗಳು ಎಂದು ಸಾಬೀತಾಗಿದ್ದಾರೆ ಎಂಬುದನ್ನು ನೋಡಬೇಕಾಗಿದೆ. ನಾನೂ ಕೂಡಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಕಾಂಗ್ರೆಸ್ಸಿನಲ್ಲಿರತಕ್ಕ ಕೆಲವು ಪುಂಡಾಟಿಕೆ ಜನ ನನ್ನ ಹತ್ತಿರವೂ ಬಂದಿದ್ದರು ನಾನು ಅವರ ಮೇಲೆ ಫಿರ್ಯಾದಿ ಕೊಟ್ಟೆ. ಎನ್‌ಕ್ವಯರಿ ಆಯಿತೋ ಇಲ್ಲವೋ ಗೊತ್ತಿಲ್ಲ, ಇದುವರೆವಿಗೂ ಅದು ಏನಾಯಿತೆಂದು ಗೊತ್ತಾಗಲಿಲ್ಲ. ಅವರನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೇ ? ಆ ದುಷ್ಟ ವ್ಯಕ್ತಿ ಯಾವ ಪಕ್ಷದವನೇ ಆಗಲೀ, ಆತ ಯಾವ ಪಕ್ಷದವರ ಮನೆಯಲ್ಲೇ ಇರಲಿ ಅಥವಾ ಆ ವ್ಯಕ್ತಿ ನಾನೇ ಆಗಿರಲಿ ಅಂತಹ ವ್ಯಕ್ತಿಗಳನ್ನು ಹಿಡಿಯುವುದು ನಿಮ್ಮ ಕರ್ತವ್ಯ. ಜನತಾಪಾರ್ಟಿ, ಕಾಂಗ್ರೆಸ್ ಪಾರ್ಟಿ ಎಂದು ನೋಡಬಾರದು. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಹಿಡಿದುಹಾಕಬೇಕು. ಇವತ್ತು ತಾವು ಒಂದು ಹೇಳಿಕೆಯನ್ನು ಓದಿದಿರಿ. ನಾನು ಪೋಲೀಸರ ಬಗ್ಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಕೆ ಎಚ್ ಪಾಟೀಲರೇ ತಪ್ಪು ಮಾಡಿದ್ದಾರೆಂದು ಗೊತ್ತಾದರೆ ಅವರು ಪೊಲಿಟಿಕಲ್ ಬ್ಲಾಕ್‌ಲಿಸ್ಟ್‌ನಲ್ಲಿ ಬರುತ್ತಾರೆ. ಕೆ ಎಚ್ ಪಾಟೀಲರನ್ನು ಹಿಡಿದು, ಜೈಲಿಗೆ ಹಾಕಿದರೆ ನಾನು ಶಹಬಾಸ್‌ಗಿರಿ ಕೊಡುತ್ತೇನೆ. ಈ ರೀತಿಯಾದ ಹೇಳಿಕೆ ಓದಿಸಿ ಈ ರೀತಿ ಮಾಡತಕ್ಕದ್ದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಪ್ರಚೋದನೆಯಿಂದಾಗಿ ಒಬ್ಬರನ್ನು ಕೊಲೆ ಮಾಡುವುದಕ್ಕೆ ಹೋಗಿದ್ದಾನೆ. ಅದೂ ರಾಜ್ಯದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರನ್ನು ಕೊಲೆ ಮಾಡುವುದಕ್ಕೆ ಹೋಗಿದ್ದಾನೆ. ಇಂತಹ ಮಹನೀಯರನ್ನು ಬಿಡುವುದಕ್ಕೆ ಹತ್ತಿದರೆ, ಇನ್ನೂ ಕೂಡಾ ಎನ್‌ಕ್ವಯರಿಯಲ್ಲೇ ಕೂತರೆ, ಹೇಗೆ ? ನೀವು ದಕ್ಷ ಮಂತ್ರಿಗಳು ಎಂದು ಹೇಳಲಿ ? ನೀವು ನಮ್ಮ ಸ್ನೇಹಿತರು. ನಾನು ಹಾಗೆ ಹೇಳಿದರೆ ಮಾನ್ಯ ಬಸವಲಿಂಗಪ್ಪನೀ ಯಾಕೆ ಹಾಗೆ ಹೇಳ್ತಿ ಅಂತ ಟೀಕೆ ಮಾಡ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅಯ್ಯೋ ಮಾರಾಯ ನನ್ ಯಾಕೆ ಎಳೀತೀ ?

ಶ್ರೀ ಕೆ.ಎಚ್. ಪಾಟೀಲ್.—ನಾನು ಟೀಕೆ ಮಾಡುವುದಿಲ್ಲ. ಅವರು ದಕ್ಷರು ಎಂದು ಹೇಳುತ್ತಿದ್ದೇನೆ. ಅವರ ಮೇಲೆ ನನಗೆ ಅಭಿಮಾನ ಇದೆ. ಈ ಅಭಿಮಾನ ಇವತ್ತು ಏನಾಗ್‌ತದೆ ? ಒಂದು ವೇಳೆ ಯಾರೋ ಒಬ್ಬ ಮನುಷ್ಯ ಅಪಾದನೆಗೆ ಗುರಿಯಾದರೆ ಅಂತಹವರಿಗೆ ಇಷ್ಟು ದಿವಸ ಏಕೆ ಬಿಟ್ಟಿರಿ ? ರಂಗನಾಥ್ ಅವರ ಮನೆಗೆ ಹೋಗಿ ಸಂತಾಪವನ್ನು ವ್ಯಕ್ತಮಾಡಿ ನಾವು ಮತ್ತು ರಂಗನಾಥ್ ಇಬ್ಬರೂ ಒಂದೇ ಎನ್ನುವ ಪ್ರಕಟಣೆಯನ್ನು ಮಾಡಿದ ನೀವು ರಂಗನಾಥ್ ಅವರ ಜೀವಕ್ಕೆ ಕುತ್ತು ತರುವ ವ್ಯಕ್ತಿಯನ್ನು ಅರೆಸ್ಟ್ ಮಾಡಿ ಬಿಟ್ಟು ಬಿಟ್ಟಿದ್ದೀರಿ ಎಂದರೆ ತಪ್ಪಾಗುತ್ತದೆ. ನಂದಕುಮಾರ್ ಕೊಲೆ ಆದ ಬಗ್ಗೆ ನಾನು, ಮಾನ್ಯ ಮಲ್ಲಿಕಾರ್ಜುನ ಖಾರ್ಗೆ ಹಾಗೂ ಶ್ರೀನಿವಾಸ್ ಅವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಾಗ ನಂದಕುಮಾರ್ ಅವರ ಹೇಳಿಕೆಯ ಬಗ್ಗೆ ಹೇಳಲಿಲ್ಲ. ಆದರೆ ಅದನ್ನು ಇವತ್ತು ಹೇಳುತ್ತಿದ್ದೀರಿ. ಈ ನಂದಕುಮಾರ್ ಇವತ್ತು ದೊಡ್ಡ ವ್ಯಕ್ತಿ ಅಲ್ಲವೇ ? ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಂತಹ ವ್ಯಕ್ತಿಯನ್ನು ಹಿಡಿದು ಜೈಲಿಗೆ ಹಾಕಬೇಕಾಗಿತ್ತು. ನಾನ್ ಬೇಲ್‌ನಲ್ಲಿ ಇಡಬೇಕಾಗಿತ್ತು. ಇವತ್ತಿನದಿವಸ ಒಬ್ಬ ಟಿ ಡಿ ಬಿ ಬೋರ್ಡ್‌ನ ಪ್ರೆಸಿಡೆಂಟ್ ಏನಾದರೂ ಸಣ್ಣ ತಪ್ಪು ಮಾಡಿದರೆ ಆತನನ್ನು ಗೂಂಡಾ ಆಕ್ಟ್‌ನಲ್ಲಿ ಅರೆಸ್ಟ್ ಮಾಡುತ್ತೀರಿ. ಈತನಿಗೆ ಏಕೆ ಹೀಗೆ ಮಾಡಲಿಲ್ಲ ? ಇವತ್ತು ಆತನನ್ನು ಒಳಗೆ ಇಟ್ಟಿದ್ದರೆ ಆತನ ಕೊಲೆ ಆಗುತ್ತಾ ಇರಲಿಲ್ಲ. ನಂತರ ನಿಜವಾದ ಸಂಗತಿಯನ್ನು ತಿಳಿದುಕೊಳ್ಳಬಹುದಾಗಿತ್ತು. ಇದಕ್ಕೆಲ್ಲಾ ನೀವು ನೈತಿಕವಾಗಿ ಹೊಣೆಗಾರರಾಗಿದ್ದೀರಿ. ನಾವು ಈ ಬಗ್ಗೆ ರಾಜೀನಾಮೆಯನ್ನೇನೂ ಕೇಳಿಲ್ಲ, ಈ ಬಗ್ಗೆ ರಾಜೀನಾಮೆ ಕೇಳುವುದೂ ಇಲ್ಲ. ಕೇಳುವಂತಹ ಕಾಲ ಬಂದಾಗ ನಾವು ಕೇಳುತ್ತೇವೆ. ಅವಶ್ಯಕತೆ ಬಂದಾಗ, ವಿಷಯ ಸಾಬೀತಾದಾಗ, ವಿಷಯ ಅಧ್ಯಕ್ಷರಿಗೆ ಮನದಟ್ಟಾದಾಗ ನಾವು ಕೇಳುತ್ತೇವೆ. ಅಲ್ಲಿಯವರೆಗೆ ನಾವು ಕೇಳುವುದಿಲ್ಲ. ಆ ದೃಷ್ಟಿಯಿಂದ ಮಾತ್ರ ನಮ್ಮ ಹೇಳುತ್ತೇನೆ. ಇಂತಹ ಮಾತುಗಳು ಬಂದಾಗ, ರಾಜಕೀಯ ವ್ಯಕ್ತಿಗಳ ಮೇಲಾಗಲೀ, ರಾಜಕೀಯ ಪಕ್ಷಗಳ ಮೇಲಾಗಲೇ ಏನಾದರೂ ಹೀನಾಯವಾದ ವಾತಾವರಣ ಉಂಟಾದಾಗ ಪಕ್ಷದ ಹಿತದೃಷ್ಟಿಯಿಂದ ಅಲ್ಲ. ರಾಜಕೀಯ ಜೀವನದ ಪಾವಿತ್ರ್ಯತೆಯನ್ನು ಕಾಯುವ ದೃಷ್ಟಿಯಿಂದ ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳಬೇಕು. ತಪ್ಪು ಆಗಿದ್ದರೆ ಅಂತಹವರು ಯಾರೇ ಇರಲಿ, ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ವಿಮರ್ಶೆ ಮಾಡಿ ತಕ್ಕ ಶಿಕ್ಷೆಯನ್ನು ಕೊಡುವುದು ಮಾನ್ಯ ಗೃಹ ಮಂತ್ರಿಗಳ ಕರ್ತವ್ಯವಾಗಬೇಕು. ಇವತ್ತು ವಿರೋಧ ಪಕ್ಷದ ನಾಯಕರ ಮೇಲೆ ಹೇಳಿದ್ದಾರೆ. ಅದು ಯಾರ ಮೇಲೆ ಎಂದು ಇನ್ನೂ ಸ್ಪಷ್ಟವಾಗಿಲ್ಲ. ಹಾಗೂ ಎಚ್ ಟಿ ರೆಡ್ಡಿ ಎಂದು ಹೇಳಿದ್ದಾರೆ. ಅವರು ಎಂ ಎಲ್ ಸಿ ಆಗಿರುವವರೋ ಅಥವಾ ಬೇರೆಯವರೋ

ಎಂದು ಗೊತ್ತಾಗಲಿಲ್ಲ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರ ಮೇಲೆ ಆಗಿದ್ದರೆ ಅವರು ಈ ಬಗ್ಗೆ ತಮ್ಮ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅಧಿಕಾರ ಇದೆ. ಆ ದೃಷ್ಟಿಯಿಂದ ಇನ್ನೊಮ್ಮೆ ನ್ಯಾಯವನ್ನು ಎಲ್ಲರಿಗೂ ಕೊಡುವ ದೃಷ್ಟಿಯಲ್ಲಿ ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ವಿರೋಧ ಪಕ್ಷ ಖಾಲಿ ಇದ್ದಾಗ ಈ ಅವಕಾಶವನ್ನು ಉಪಯೋಗಿಸಿಕೊಂಡಿರಿ ಎಂದು ಹೇಳಿದರು. ನನ್ನ ಉದ್ದೇಶ ಅದು ಅಲ್ಲ. ಇವತ್ತು ನನ್ನ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಂತಹ ಕಾಲದಲ್ಲಿ, ಯೋಗ್ಯ ಟೀಕೆಗಳನ್ನು ಮಾಡಿದ ಕಾಲದಲ್ಲಿ ಉತ್ತರವನ್ನು ಕೊಡುವ ದೃಷ್ಟಿಯಿಂದ ಮಾಡಿದ್ದೇನೆ. ಬಹುಶಃ ಗೊಬೆಯನ್ನು ಕೂರಿಸ ಬೇಕೆಂದೇನೂ ಅಲ್ಲ.

ಶ್ರೀ ಕೆ. ಎಚ್. ಪಾಟೀಲ್.—ವಿರೋಧ ಪಕ್ಷ ಖಾಲಿ ಇದ್ದಾಗ ಎಂದು ನಾನು ಹೇಳಲಿಲ್ಲ. ಎದುರು ಪಕ್ಷ ಖಾಲಿ ಇರುವ ಸಮಯವನ್ನು ನೋಡಿ ಉತ್ತರವನ್ನು ಕೊಟ್ಟಿದ್ದಾರೆ ಎಂದು ನಾನು ಹೇಳಿದೆ.

ಶ್ರೀ ಜೆ. ಎಚ್. ಪಟೇಲ್.—ದಿನೇದಿನೇ ಖಾಲಿ ಆಗತಕ್ಕ ಪಕ್ಷವನ್ನು ಹೇಗೆ ಉಳಿಸುವುದಕ್ಕಾಗುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ.—ಈ ಕಡೆ ಅಷ್ಟೇ ಅಲ್ಲ, ಆ ಕಡೆಯೂ ಖಾಲಿ ಇದೆ.

ಶ್ರೀ ಬಿ. ರಾಚಯ್ಯ.—ನಂದಕುಮಾರ್‌ರನ್ನು ಅರೆಸ್ಟ್ ಮಾಡಿದಮೇಲೆ ಕೋರ್ಟಿನಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಮಾನ್ಯ ಕೆ ಎಚ್ ಪಾಟೀಲರು ಗೂಂಡಾ ಆಕ್ಟ್ ಮೇಲೆ ಏಕೆ ಇಡಲಿಲ್ಲ ಎಂದು ಹೇಳಿದರು. ಮೊಕದ್ದಮೆ ಆಧಾರದ ಮೇಲೆ ಛಾರ್ಜ್‌ಶೀಟ್ ಮಾಡಿದ ಮೇಲೆ ಕೋರ್ಟಿನವರು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಅದರಲ್ಲಿ ಹಾಕಿದರೆ ಆಗುವುದಿಲ್ಲ. ಅದೇ ಸಂದರ್ಭದಲ್ಲಿ ಕೊಲೆ ಮಾಡಿರುವವರು ಯಾರು ಎಂದು ಹಿಡಿದಿದ್ದೇವೆ. (೧) ಅಶ್ವಥ್, ವಯಸ್ಸು ೨೨, ಮುನಿಸ್ವಾಮಪ್ಪನವರ ಮಗ. ೧೩೭, ಗೌರಿ ಪೇಟೆ, ಕೋಲಾರ. (೨) ಗಣೇಶ್. ಅಲಿಯಾಸ್ ಗಣಪತಿ ಅಪ್ಪಯ್ಯನವರ ಮಗ. ೨೯ ವರ್ಷ, ಅಲಮೇರಿಗ್ರಾಮ, ಕೊಡಗು ಜಿಲ್ಲೆ, ವಿರಾಜಪೇಟೆ. (೩) ಶಂಕರ; ಅಲಿಯಾಸ್ ಶಂಕರಪ್ಪ, ೩೭ ವರ್ಷ; ೧೬೯, ಶೇಷಾದ್ರಿಪುರಂ. ೨ನೇ ಮುಖ್ಯ ರಸ್ತೆ. ಬೆಂಗಳೂರು ನಗರ. ಈ ಮೂರೂ ಜನರನ್ನು ನಂದಕುಮಾರನ ಅಪರಾಧದಲ್ಲಿ ಹಿಡಿದು ತನಿಖೆ ಮಾಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ, ಅಲ್ಲಿ ನಾನೇನೂ ಯಾವುದೇ ಒಂದು ಇನ್‌ಫ್ಲೂಯೆನ್ಸ್‌ಗೆ ಒಳಗಾಗಿ ಅಧಿಕಾರಿಗಳನ್ನು ಹಾಕಿಲ್ಲ, ರೊಟೀನ್ ಕೋರ್ಸ್‌ನಲ್ಲಿ ಹಾಕಿದ್ದೇವೆ, ಅದು ನನ್ನ ಜವಾಬ್ದಾರಿ ಅಲ್ಲ ಎನ್ನುವ ರೀತಿಯಲ್ಲಿ ಹೇಳಿದರು. ಒಂದೇ ಕೋಮಿನ ಅಧಿಕಾರಿಗಳು ಇರುವ ಕಾರಣದಿಂದ ಅಲ್ಲಿ ತೊಂದರೆ ಆಗುತ್ತಾ ಇದೆ ಎಂದು ನಾನು ಪದೇ ಪದೇ ಅವರ ಗಮನ ತಂದಿದ್ದೇನೆ. ಇವತ್ತು ಅಲ್ಲಿ ಆ ವ್ಯವಸ್ಥೆ ಇರುವುದರಿಂದ ನಮ್ಮ ಭಾಗದ ಜನರಲ್ಲಿ ಒಂದು ಭಯದ ವಾತಾವರಣ ಬಂದಿದೆ. ಇವತ್ತು ಯಾರೂ ಕೂಡಾ ಪೋಲೀಸ್ ಠಾಣೆಗೆ ಹೋಗುವುದಿಲ್ಲ ನಾವು ಹೋದರೆ ನಮ್ಮ ಮೇಲೆ ಎಲ್ಲಿ ಕೇಸ್ ಹಾಕಿ ಬಿಡುತ್ತಾರೋ, ಇನ್ನೇನು ಮಾಡುತ್ತಾರೋ ಎಂದು ಒಬ್ಬರೂ ಹೋಗುತ್ತಿಲ್ಲ. ಆದುದರಿಂದ ಇವತ್ತು ಅನೇಕ ಕೇಸುಗಳು ಅಲ್ಲಿನ ಗ್ರಾಮಗಳ ಮುಖಂಡರ ಮನೆಯಲ್ಲೇ ಇತ್ಯರ್ಥವಾಗುತ್ತಿವೆ. ಇದನ್ನು ನಾನು ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ನನ್ನ ಮೂರು ತಾಲ್ಲೂಕಿನಲ್ಲಿ ೧೯೮೩-೮೪ರಲ್ಲಿ ಸುಮಾರು ೨೭ ಕೊಲೆಗಳು ಆಗಿವೆ. ಆದರೆ ಈ ವರ್ಷ ಡಿ ವೈ ಎಸ್ ಪಿ ಯವರು ಕೇವಲ ೧೦ ಆಗಿವೆ ಎಂದು ಹೇಳುತ್ತಿರುವುದನ್ನು ಇವರು ಹೇಳುತ್ತಾರೆ. ಇಂತಹ ಒಂದು ವಾತಾವರಣ ಅಲ್ಲಿ ಇರುವುದರಿಂದ ಅದನ್ನು ಸರಿಪಡಿಸಬೇಕೆಂದು ನಾವು ಹೇಳಿದರೂ ಕೂಡಾ ಇದನ್ನು ಇನ್ನೂ ಏಕೆ ಸರಿಪಡಿಸಿಲ್ಲವೆಂಬುದನ್ನು ಹೇಳಬೇಕು. ಮತ್ತೆ ನಂದಕುಮಾರ್ ಕೊಲೆಯಾದಮೇಲೆ ನಾನು ಕೆ ಎಚ್ ಶ್ರೀನಿವಾಸ್ ಮತ್ತು ಕೆ ಎಚ್ ಪಾಟೀಲರು ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಾಗ ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಈಗ ಈ ನಂದಕುಮಾರ್ ಅವರ ಸ್ಟೇಟ್‌ಮೆಂಟನ್ನು ಓದುವುದಕ್ಕಾಗುವುದಿಲ್ಲ, ಇನ್ನೂ ಪತ್ತೆ ಹಚ್ಚಬೇಕಾಗಿದೆ. ಇದರಿಂದ ಆ ಕೇಸ್‌ಗೆ ಧಕ್ಕೆ ಬರುತ್ತದೆ ಎನ್ನುವ ರೀತಿಯಲ್ಲಿ ಅವರು ಮಾತನಾಡಿ ಅದಕ್ಕೆ ನಾನು ಈಗ ಓದುವುದಕ್ಕಾಗುವುದಿಲ್ಲವೆಂದು ಹೇಳಿದರು, ಇವತ್ತು ಅದನ್ನು ಓದಿದರು,

೧೧-೩೦ ಎ. ಎಂ. –

ಆದರೆ ಇವತ್ತು ಅದನ್ನು ಓದಿದರು. ಅದರ ಸತ್ಯಾಂಶ ಹೊರಗೆ ಬರಬೇಕಾದರೆ ಅದನ್ನು ಓದ ಬೇಕೆಂದು ನಾವು ಅನೇಕ ಸಲ ಕೇಳಿದ್ದೇವೆ. ನಮ್ಮ ಯಾದಗಿರಿ ಬಗ್ಗೆ ಹೇಳಿದ್ದೆ ತಾವು ಅದಕ್ಕೂ ಏತಕ್ಕೆ ಗಮನ ಕೊಡಲಿಲ್ಲ ? ಆ ದಿವಸ ಕಾಲಿಂಗ್ ಅಟೆನ್ಷನ್ ಹಾಕಿದ್ದಾಗ ಈ ವಿವರಣೆಯನ್ನು ಅವತ್ತೇ ಏತಕ್ಕೆ ಕೊಡಲಿಲ್ಲ ?

ಶ್ರೀ ಬಿ. ರಾಚಯ್ಯ. — ನಂದಕುಮಾರನ ಕೊಲೆಗೆ ಸಂಬಂಧಪಟ್ಟ ಹಾಗೆ ಇನ್ನೂ ನಾವು ಸಂಶೋಧನೆ ಮಾಡುತ್ತಿದ್ದೇವೆ. ಹೇಳಿಕೆ ಕೊಟ್ಟರೆ ಬಹುಶಃ ಯಾರು ಕೊಲೆ ಮಾಡಿದ್ದಾರೆ ಅವರನ್ನು ಹಿಡಿಯುವುದಕ್ಕೆ ಕಷ್ಟವಾಗಬಹುದು ಎನ್ನುವ ದೃಷ್ಟಿಯಿಂದ ಅದನ್ನು ಅವತ್ತು ಹೇಳುವುದಕ್ಕೆ ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಆ ದಿವಸ ಅವರನ್ನು ಹಿಡಿದಿದ್ದೇವೆಂದು, ಅವರ ಹೆಸರನ್ನು ಹೇಳಿದಿರಿ ಸ್ವಾಮಿ.

ಶ್ರೀ ಬಿ. ರಾಚಯ್ಯ. — ಇನ್‌ವೆಸ್ಟಿಗೇಷನ್ ನಡೆಯುತ್ತಿತ್ತು ಸ್ವಾಮಿ, ಅದರಲ್ಲಿ ಏನು ಬರುತ್ತದೆಯೋ ಎನ್ನುವುದಕ್ಕೋಸ್ಕರ ಅವತ್ತು ಇದನ್ನು ಕೊಡುವುದಕ್ಕಾಗಲಿಲ್ಲ. ಆದುದರಿಂದ ಇವತ್ತಿನ ದಿವಸ ಹಿಡಿದಿದ್ದೇವೆ. ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಆದುದರಿಂದ ಇವತ್ತು ಕೊಟ್ಟಿದ್ದೇವೆ. ಖಾಲಿ ಬೆಂಚ್‌ಗೆ ಹೇಳಿದರೂ ನಾಳೆ ಅವರು ಬರುತ್ತಾರಲ್ಲ, ಅದಕ್ಕೋಸ್ಕರವಾಗಿ ಏನು ಹೇಳಿಕೆ ಕೊಟ್ಟರೂ ಜವಾಬ್ದಾರಿಯುತವಾಗಿ ಕೊಟ್ಟಿದ್ದೇನೆ. ಹಾಗೆಯೇ ಎರಡನೆಯದಾಗಿ ಗುಲ್ಬರ್ಗಾಕ್ಕೆ ಸಂಬಂಧಪಟ್ಟ ಹಾಗೆ ೩ ಜನ ಅಧಿಕಾರಿಗಳು ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಎಸ್‌ಐ ಒಂದೇ ಕೋಮಿಗೆ ಸೇರಿದವರೆಂದು ಹೇಳಿದ್ದಾರೆ ಬಹುಶಃ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಒಂದೇ ಕೋಮಿನವರು ಇರಬಾರದು ಅಂತಲ್ಲಾ. ಆದರೆ ಅವರು ಪ್ರಭಾವಕ್ಕೆ ಒಳಗಾಗಿ ಅಲ್ಲಿ ಕೆಲಸ ಮಾಡಿದ್ದರಿಂದ ಇವತ್ತು ಅಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ ಎಂಬುದನ್ನು ನಾವು ನೂರಾರು ಸಲ ಪದೇ ಪದೇ ಹೇಳುತ್ತಿದ್ದೇವೆ. ಅದಕ್ಕೆ ನಿಮ್ಮಿಂದ ವಿವರವಿಲ್ಲ ಅದಕ್ಕೆ ಉತ್ತರ ಹೇಳಿ.

ಶ್ರೀ ಬಿ. ರಾಚಯ್ಯ. — ಈ ಭಾಗದಲ್ಲಿ ಸುಮಾರು ೨೭ ಕೊಲೆ ಪ್ರಕರಣಗಳು ಆಗಿವೆ. ಅವು ಇನ್ನೂ ಪತ್ತೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ೧೯೮೪ರಲ್ಲಿ ೭೧ ಕೊಲೆ ಪ್ರಕರಣಗಳು ವರದಿಯಾಗಿದೆ. ೧೯೮೫ರಲ್ಲಿ ೪೦ ಕೇಸುಗಳು ವರದಿಯಾಗಿದೆ. ೧೯೮೪ ರಲ್ಲಿ ಒಟ್ಟು ೪೬ ಪ್ರಕರಣಗಳು ಪತ್ತೆಯಾಗಿ ೩ ನಿಜವಲ್ಲವೆಂದು ವರದಿಯಾಗಿದೆ. ೯ ಪ್ರಕರಣಗಳಲ್ಲಿ ೭ ಜನ ಆಪಾದಿತರಿಗೆ ಶಿಕ್ಷೆಯಾಗಿದೆ. ೧೭ ಪ್ರಕರಣಗಳಲ್ಲಿ ಆಪಾದಿತರಿಗೆ ಖುಲಾಸೆಯಾಗಿದೆ. ೨೧ ಕೇಸುಗಳು ನ್ಯಾಯಾಲಯದ ವಿಚಾರಣೆಯಲ್ಲಿವೆ. ೧೯೮೫ನೇ ಇಸ್ವಿಯಲ್ಲಿ ೪೦ ಪ್ರಕರಣಗಳಲ್ಲಿ ೨೮ ಪತ್ತೆಯಾಗಿವೆ. ಒಂದು ಪ್ರಕರಣ ಖುಲಾಸೆಯಾಗಿದೆ. ಇನ್ನು ೨೨ ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿವೆ. ೪ ಪ್ರಕರಣಗಳು ಪತ್ತೆಯಾಗಿಲ್ಲ. ೭ ಕೇಸುಗಳಲ್ಲಿ ತನಿಖೆ ಮುಂದುವರಿಯುತ್ತಾ ಇದೆ. ಯಾದಗಿರಿಯಲ್ಲಿ ೧೯೮೫ರಲ್ಲಿ ೮ ಪ್ರಕರಣಗಳು ವರದಿಯಾಗಿದೆ. ೮ ಪ್ರಕರಣಗಳಲ್ಲಿ ಆರು ಪ್ರಕರಣಗಳು ಪತ್ತೆಯಾಗಿದೆ. ಇದು ನ್ಯಾಯಾಲಯದಲ್ಲಿದೆ. ಮತ್ತೊಂದು ಕೇಸು ನಿಜವಲ್ಲವೆಂದು ವರದಿಯಾಗಿದೆ. ಮತ್ತೊಂದು ತನಿಖೆಯಲ್ಲಿದೆ. ಇದನ್ನು ನೋಡಿದರೆ ಈ ಭಾಗದಲ್ಲಿ ಖೂನಿ ಪ್ರಕರಣದಲ್ಲಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಿದ್ದಾರೆ ಎಂಬುದು ಅರ್ಥವಾಗುತ್ತದೆ, ಆದರೂ ಕೂಡ ಮೂರು ವರ್ಷಗಳು ಮುಗಿದ ಮೇಲೆ ಅವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಮಾಡಬೇಕು ಎನ್ನುವ ನಿಯಮವನ್ನು ಹಾಕಿಕೊಂಡಿದ್ದೇವೆ. ಆದರಂತೆ ಏಪ್ರಿಲ್ ತಿಂಗಳಲ್ಲಿ ಯಾರು ಯಾರನ್ನು ಎಲ್ಲೆಲ್ಲಿಗೆ ವರ್ಗ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ನಾನು ಅವರಿಗೆ ವರ್ಗ ಮಾಡಿಯೆಂದು ಹೇಳುತ್ತಿಲ್ಲ. ಅಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಇದಕ್ಕೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೀರಿಯೆಂದು ಕೇಳಿದ್ದೇನೆಯೇ ಹೊರತು ನೀವು ಯಾರನ್ನಾದರೂ ವರ್ಗ ಮಾಡಿ ನನಗೆ ಅಭ್ಯಂತರವಿಲ್ಲ. ಈಗ ಅಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಅಲ್ಲಿಯ ಮುಖಂಡರು ತಮ್ಮ ಮನೆಯನ್ನೇ ಪೋಲೀಸ್ ಸ್ಟೇಷನ್ ಮಾಡಿಕೊಂಡು ಅಲ್ಲಿಯೇ ತೀರ್ಮಾನಗಳನ್ನು ಮಾಡುತ್ತಾರೆ. ಅಲ್ಲಿ ಆಗತಕ್ಕ ವ್ಯಾಜ್ಯಗಳನ್ನು ತಮ್ಮ ಮನೆಯಲ್ಲಿಯೇ ತೀರ್ಮಾನ ಮಾಡುತ್ತಿದ್ದಾರೆ. ನ್ಯಾಯವಾದ ಕೇಸುಗಳನ್ನು ಪೋಲೀಸ್

ಸ್ಟೇಷನ್‌ಗೆ ಹೋಗುವುದಕ್ಕೆ ಬಿಡುವುದಿಲ್ಲ. ಕೆಲವು ನ್ಯಾಯುವಾದ ಕಂಪ್ಲೇಂಟ್ಸ್‌ನ್ನು ತೆಗೆದುಕೊಂಡು ಹೋದರೂ ಕೂಡ ಪೋಲೀಸಿನವರು ಅದನ್ನು ರಿಜಿಸ್ಟ್ರೇಷನ್ ಮಾಡುವುದಿಲ್ಲ. ಹಿಂದೆ ವೀರೇಂದ್ರ ಪಾಟೀಲರು ಕೇಂದ್ರ ಮಂತ್ರಿಯಾಗಿದ್ದಾಗ ಅವರ ಎದುರುಗಡೆನೇ ಸಬ್‌ಇನ್ಸ್‌ಪೆಕ್ಟರ್ ಹೊಡೆದು ಕೊಂಡರು ಇಷ್ಟೆಲ್ಲಾವನ್ನು ತಮ್ಮ ಗಮನಕ್ಕೆ ತಂದರೂ ಕೂಡ ತಾವು "ನಿಯಮದ ಪ್ರಕಾರ ನಾನು ಅವರನ್ನು ವರ್ಗ ಮಾಡುತ್ತೇನೆಂದು" ಹೇಳುತ್ತೀರಿ. ವರ್ಗ ಮಾಡದೆ ಬೇಕಾದರೆ ಇನ್ನೂ ೧೦ ವರ್ಷ ಇಡಿ, ನನ್ನ ಅಭ್ಯಂತರವಿಲ್ಲ. ಅದಕ್ಕೆ ಪ್ರಚೋದನೆಯಾಗಿ ಅಥವಾ ಸಹಾಯಕ್ಕೆ ಇರತಕ್ಕ ಅನೇಕ ಮುಖಂಡರೂ ಕೂಡ ಇದ್ದಾರೆ. ಅದು ತಮಗೆ ಗೊತ್ತಿದೆ. ಇಷ್ಟೆಲ್ಲಾ ಇದ್ದರು ಕೂಡ ತಾವು ಇನ್ನೂ ಸಹಿಸುತ್ತಾ ಇದ್ದೀರಲ್ಲಾ ಇದಕ್ಕೆ ಕಾರಣ ಏನು ? ನೀವು ಪ್ರಭಾವಕ್ಕೆ ಒಳಗಾಗಿದ್ದೀರೆಂದು ನಾವು ಹೇಳಬೇಕೋ ಇಲ್ಲವೋ ಹೇಳಿ.

ಶ್ರೀ ಬಿ. ರಾಚಯ್ಯ.— ಈಗ ಇವರು ಏನು ಹೇಳಿದ್ದಾರೆ ಇದನ್ನು ಇಲಾಖಾ ತನಿಖೆಗೆ ಕೊಟ್ಟಿದ್ದೇನೆ ಬಹುಶಃ ಆ ಇಲಾಖಾ ತನಿಖೆ ಬಂದ ಮೇಲೆ ನಿಮ್ಮ ಎಲ್ಲಾ ವಿಷಯಗಳಲ್ಲಿ ಸತ್ಯಾಂಶ ಇದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಆಮೇಲೆ ಏನೂ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್‌ನ್ನು ತಂದು ಹೇಳಿದರೂ ನಿಮಗೆ ನಂಬಿಕೆ ಇಲ್ಲ. ನಿಮ್ಮ ಇಲಾಖೆಯ ಮೇಲೆ ಜವಾಬ್ದಾರಿ ಇದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿಯೊಬ್ಬ ಮಂತ್ರಿಗಳು ತಮ್ಮ ಇಲಾಖೆಯನ್ನು ನಂಬಿ ಸ್ಟೇಟ್‌ಮೆಂಟ್ ಮಾಡಬೇಕು, ಒಪ್ಪುತ್ತೇನೆ. ಆದರೆ ನನ್ನಂತಹ ಸದಸ್ಯ ತಮ್ಮ ಹತ್ತಿರ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟರೂ ಸಹ ಇದನ್ನು ನೀವು ನಂಬುವುದಿಲ್ಲವಲ್ಲ ಎಂದರೆ ಹೇಗೆ ? ಅದು ಮಾನ್ಯ ವೀರೇಂದ್ರ ಪಾಟೀಲರ ಎದುರುಗಡೆನೇ ಸಬ್ ಇನ್ಸ್‌ಪೆಕ್ಟರ್ ಹೊಡೆದುಕೊಂಡಿದ್ದಾರೆ ಎಂಬುದನ್ನು ಅವರೂ ಸಹ ಹೇಳಿದ್ದಾರೆ, ಅದನ್ನು ಸಹ ತಾವು ನಂಬದೆ, ನಾವು ಈ ಸದನದಲ್ಲಿ ಹೇಳಿದರೂ ಕೂಡ ಅದನ್ನು ನಂಬದೇ ತಾವು ವರದಿ ತರಿಸುತ್ತೇವೆ, ನಾನು ನೋಡುತ್ತೇನೆ ಎಂದರೆ ? ...

ಶ್ರೀ ಕೆ ಎಸ್. ನಾಗರತ್ನಮ್ಮ.— ನಮ್ಮ ಗೃಹ ಮಂತ್ರಿಗಳಿಗೆ ನಾನು ಏನೂ ಪ್ರಶ್ನೆಯನ್ನೂ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಸೂಚನೆಯನ್ನು ಮಾತ್ರ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ಅಮಾವಾಸ್ಯೆಯ ದಿನ ಕಳ್ಳತನವಾಗುತ್ತದೆಂದು ಹೇಳಿದರು. ಪೋಲೀಸ್ ಪೇದೆಗಳ ಕೈಯಲ್ಲಿ ಒಂದು ಟಾರ್ಚ್ ಕೂಡ ಇರುವುದಿಲ್ಲ. ಅವರ ಜೀಪ್‌ನಲ್ಲಿ ಒಂದು ಸರ್ಚ್ ಲೈಟ್ ಕೂಡ ಇರುವುದಿಲ್ಲ. ಆ ಜೀಪ್ ಎಲ್ಲಿ ಅಂದರೆ ಅಲ್ಲಿ ನಿಂತುಕೊಳ್ಳುತ್ತದೆ. ಅದಕ್ಕೆ ಟೈರ್ ಟ್ಯೂಬ್ ಕೂಡ ಸರಿಯಿರುವುದಿಲ್ಲ. ದಯವಿಟ್ಟು ಇವುಗಳನ್ನಾದರೂ ಸರಿಮಾಡಿಯೆಂದು ಸರ್ಕಾರಕ್ಕೆ ನನ್ನದೊಂದು ವಿನಂತಿ.

ಶ್ರೀ ಬಿ. ರಾಚಯ್ಯ.— ಸರ್ಚ್ ಲೈಟ್ ಇದೆ ಸ್ವಾಮಿ, ಬಹಳ ದೂರ ಹೋಗುವಂತಹ ಸರ್ಚ್ ಲೈಟ್‌ಗಳನ್ನು ನಾವು ಈಗ ಇಟ್ಟುಕೊಂಡಿದ್ದೇವೆ. ಇದುವರೆವಿಗೂ ಟೈರ್ ಟ್ಯೂಬ್ ಹಳೆಯದನ್ನು ಕೊಟ್ಟಿಲ್ಲ. ಹೊಸದನ್ನೇ ಕೊಟ್ಟಿದ್ದೇವೆ. ನಾವು ಏನೇನು ಕೊಡಬೇಕೊ ಅದನ್ನೆಲ್ಲಾ ಕೊಟ್ಟಿದ್ದೇವೆ. ಆದರೆ ಅಧಿಕಾರಿಗಳಲ್ಲಿರತಕ್ಕಂಥ ಸ್ಥೈರ್ಯ, ಧೈರ್ಯ ಮತ್ತು ಶಕ್ತಿಯನ್ನು ತುಂಬ ಬೇಕಾಗಿದೆ. ಇದು ನಮ್ಮ ಕರ್ತವ್ಯ. ಅವರ ಕೈಯಲ್ಲಿ ಆಗದಿದ್ದರೆ ಅವರನ್ನು ಬೇರೆ ಕಡೆ ಹಾಕಿ ಬೇರೆಯವರ ಕೈಯಲ್ಲಿ ಮಾಡಿಸೋಣ. ಇವತ್ತು ಅವರಿಗೆ ಏನೇನು ಸಹಕಾರವನ್ನು ಕೊಡಬೇಕು ಅದನ್ನೆಲ್ಲಾ ಕೊಟ್ಟಿದ್ದೇವೆ. ಅಮಾವಾಸ್ಯೆಯ ದಿವಸವೂ ಮತ್ತೆ ಬರುತ್ತದೆ, ಇನ್ನೂ ಕಳ್ಳರು ಬರುವುದಿಲ್ಲವೆಂದು ಕುಳಿತುಕೊಳ್ಳ ಬೇಡಿಯೆಂದೆ ಹೇಳಿದ್ದೇವೆ. ಬಹುಶಃ ಮುಂಜಾಗರೂಕತೆ ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲಾ ಕಡೆ ಸಶಸ್ತ್ರ ಪೋಲೀಸ್ ದಳಗಳನ್ನು ಇಟ್ಟಿದ್ದೇವೆ. ಆದರಿಂದ ಸ್ವಲ್ಪ ಮಟ್ಟಿಗೆ ಕಳ್ಳರಿಗೂ ಭಯ ಬಂದಿರ ಬಹುದು. ನಾನು ಮೊದಲೇ ಹೇಳಿದಹಾಗೆ ಡಕಾಯಿತಿಗಳನ್ನು ಮಾಡುವವರಿಗೂ ಕೊನೆಗಾಲ ಬಂದಿದೆ. ಅವರನ್ನು ಹಿಡಿದೇ ಹಿಡಿಯುತ್ತೇವೆ ಎಂಬ ಆತ್ಮ ವಿಶ್ವಾಸ ನಮಗಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಸಭಾಧ್ಯಕ್ಷರೇ, ನಾನು ಡಕಾಯಿತಿ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರಿನಲ್ಲಂತೂ ಪರಿಸ್ಥಿತಿ ಬಹಳ ತೀವ್ರವಾಗಿದೆ. ತಾವು ಇದರಿಂದ ತಮ್ಮ ಅಧ್ಯಕ್ಷತೆ ಯನ್ನು ಪ್ರದರ್ಶಿಸಿಕೊಂಡಿದ್ದೀರಿ. ಈ ಪೋಲೀಸ್ ಸೆಟ್‌ಅಪ್‌ನ್ನು ಎರಡು ಮೂರು ತಿಂಗಳಿಂದ ಏಕೆ ಬದಲಾವಣೆ ಮಾಡಲಿಲ್ಲ ಎರಡು ಮೂರು ತಿಂಗಳಿಂದ ಒಂದೇ ಸಮನಾಗಿ ೧೦ ಸಾರಿ ಜರುಗಿ ಹೋಗಿದೆ.

೧೯೭೨ರಲ್ಲಿ ಕಲ್ಕತ್ತಾದಲ್ಲಿ ಜರುಗಿದಂತೆ ಬೆಂಗಳೂರಿನಲ್ಲಿ ಜರುಗಿ ಹೋಗಿದೆ. ಆದರೂ ಕೂಡ ಈ ಹಿರಿಯ ಪೋಲೀಸ್ ಅಧಿಕಾರಿಗಳನ್ನು ಏಕೆ ಇಟ್ಟುಕೊಂಡಿದ್ದೀರಿ ? ಅವರೆಲ್ಲರ ಅಧ್ಯಕ್ಷತೆಯನ್ನು ತೋರಿಸಿಕೊಳ್ಳುವುದಕ್ಕೆ ಇಟ್ಟುಕೊಂಡಿದ್ದೀರಿ ಎಂಬುದು ನನ್ನ ಪ್ರಶ್ನೆ. ಎರಡನೆಯದಾಗಿ ನಿನ್ನೆ ದಿವಸ ನಾನು ಕೇಳಿದೆ, ಪಿಸಿಯಿಂದ ಎಚ್‌ಸಿಗೆ ಹೆಚ್ಚು ಪ್ರಮೋಷನ್ ಇಲ್ಲ. ಈ ಡೈರೆಕ್ಟ್ ರೆಕ್ರೂಟ್‌ಮೆಂಟ್‌ನಿಂದ ಸಬ್‌ಇನ್ಸ್‌ಪೆಕ್ಟರುಗಳು ಜಾಸ್ತಿಯಾಗಿ ನೇಮಕವಾಗಿರುವುದರಿಂದ ೨೦ ವರ್ಷಗಳಾದರೂ ಪೋಲೀಸ್, ಪೋಲೀಸ್ ಆಗಿಯೇ ಇರುತ್ತಾನೆ. ಹೆಡ್‌ಕಾನ್ಸ್‌ಸ್ಟೇಬಲ್ ಹೆಡ್‌ಕಾನ್ಸ್‌ಸ್ಟೇಬಲ್ ಆಗಿಯೇ ಇರುತ್ತಾನೆ. ಅವರಿಗೆ ಒಂದು ಟೈಮ್ ಬೌಂಡ್ ಪ್ರಮೋಷನ್ ಕೊಡುವ ಹಾಗೆ ಒಂದು ಪ್ರಯತ್ನವನ್ನಾದರೂ ಮಾಡಿಯೆಂದು ನಿನ್ನೆ ನಾನು ಹೇಳಿದ್ದೆ. ಪೋಲೀಸ್ ಕಾನ್ಸ್‌ಸ್ಟೇಬಲ್ ಏನಾದರೂ ಹಿಡಿದರೂ ಕೂಡ ಸಬ್‌ಇನ್ಸ್‌ಪೆಕ್ಟರ್ ಅದನ್ನು ನಾನು ಹಿಡಿದೆಯೆಂದು ಬರೆದುಕೊಳ್ಳುತ್ತಾನೆ. ಆದುದರಿಂದ ಅದರಬಗ್ಗೆ ಏನನ್ನು ಇತಕ್ಕೆ ಹೇಳಿಲ್ಲ ಅಂತ. ಇನ್ನೂ ಡಾಗ್ಸ್ ಸ್ಕ್ವಾಡ್ ಬಗ್ಗೆ ಒಂದು ತಪ್ಪು ಕಲ್ಪನೆ ಇದೆ. ಈ ಡಾಗ್ಸ್ ಸ್ಕ್ವಾಡ್ ಫೇಲ್ ಆಗಿದೆ, ಬೇಕಾದರೆ ಪರಿಣಿತರನ್ನು ಕೇಳಿ. ಅವು ಎಲ್ಲೆಲ್ಲಿ ಕೇಸಸ್‌ನಲ್ಲಿ ಬಂದಿದೆಯೋ ಅಲ್ಲೆಲ್ಲಾ ಫೇಲ್ ಆಗಿದೆ. ಏಕೆಂದರೆ ಅದೇ ಒಂದು ಇನ್‌ವೆಸ್ಟಿಗೇಷನ್ ಪ್ರಾರಂಭ ಮಾಡಬೇಕಾಗುತ್ತದೆ. ಆ ಇನ್‌ವೆಸ್ಟ್‌ಮೆಂಟ್‌ಗೆ ಅಡ್ಜೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಇವರ ಎವಿಡೆನ್ಸಿಗೆ ಅಡ್ಜೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಆದುದರಿಂದ ಪರಿಣಿತರನ್ನು ಇದರ ಬಗ್ಗೆ ಕೇಳಿ, ಇದರ ಬಗ್ಗೆ ಅನಾವಶ್ಯಕವಾಗಿ ಡಾಗ್ಸ್ ಸ್ಕ್ವಾಡ್ ತಂದು ಕೇಸುಗಳನ್ನು ಹಾಳು ಮಾಡುವುದು ಬೇಡ ಮತ್ತೊಂದು ವಿಷಯವಾಗಿ ಚಾರ್ಜ್‌ಷೀಟ್ ಹಾಕಿಸಿದ ಮೇಲೆ ಫಾಲೋ ಅಫ್ ಆಕ್ಷನ್ ಇಲ್ಲ. ಶಿಕ್ಷೆ ಆಗಲಿ ಆಗದೇ ಹೋಗಲಿ ನಾವು ಡಿಟೆಕ್ಟ್ ಮಾಡಿದ್ದೇವೆಂದು ಬಿಟ್ಟು ಬಿಡುತ್ತಾರೆ. ಮೊದಲು ಇವತ್ತು, ಆ ಫಾಲೋ ಅಫ್ ಆ್ಯಕ್ಷನ್ ಇಲ್ಲದಿದ್ದರೆ ಈ ಕೇಸುಗಳಲ್ಲಿ ೯೫ ಪರ್ಸೆಂಟ್ ಅಕ್ವಿಟ್ ಆಗುತ್ತದೆ. ದಯವಿಟ್ಟು ಈ ಫಾಲೋ ಅಫ್ ಆ್ಯಕ್ಷನ್ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು.

ಶ್ರೀ ಬಿ. ರಾಚಯ್ಯ.— ಈ ಪೋಲೀಸ್ ಕಾನ್ಸ್‌ಸ್ಟೇಬಲ್‌ನಿಂದ ಹೆಡ್‌ಕಾನ್‌ಸ್ಟೇಬಲ್‌ಗೆ ಹೆಡ್ ಕಾನ್ಸ್‌ಸ್ಟೇಬಲ್‌ನಿಂದ ಸಬ್‌ಇನ್ಸ್‌ಪೆಕ್ಟರ್‌ಗೆ ಪ್ರಮೋಷನ್ ಜಾಸ್ತಿ ಮಾಡಿಯೆಂದು ಹೇಳಿದ್ದಾರೆ. ಬಹುಶಃ ಈಗ ಕರ್ನಾಟಕ ರಾಜ್ಯದಲ್ಲಿ ಸುಮಾರು ೬೫ ಪರ್ಸೆಂಟ್ ಜನ ಇವತ್ತು ಪ್ರಮೋಷನಲ್ ಆಗಿಬಂದಿದ್ದಾರೆ. ಬಹುಶಃ ಡೈರೆಕ್ಟ ರಿಕ್ರೂಟ್‌ಮೆಂಟ್‌ನ್ನು ಪ್ರತಿ ವರ್ಷ ಎಸ್‌ಐ ಲೆವೆಲ್‌ನಲ್ಲಿ, ಪೋಲೀಸ್ ಇನ್ಸ್‌ಪೆಕ್ಟರ್ ಲೇವೆಲ್‌ನಲ್ಲಿ ಮಾಡಿದ್ದರೆ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಿತ್ತು. ೬೫ ಪರ್ಸೆಂಟ್ ಪೋಲೀಸ್‌ನವರಿಗೆ ಪ್ರಮೋಷನ್ ಸಿಕ್ಕಿದೆ. ೭೫ ಸಬ್‌ಡಿವಿಷನ್, ೧೭೨ ಸರ್ಕಲ್‌ಗಳು, ಸುಮಾರು ೬೫೨ ಪೋಲೀಸ್ ಸ್ಟೇಷನ್‌ಗಳು ಕರ್ನಾಟಕ ರಾಜ್ಯದಲ್ಲಿದೆ. ೯೧೩ ಜನ ಸಬ್‌ಇನ್ಸ್‌ಪೆಕ್ಟರ್‌ಗಳು ಇದ್ದಾರೆ ಅದನ್ನು ದ್ವಿಗುಣ ಗೊಳಿಸಬೇಕಾದರೆ ರಾಜ್ಯದ ಖಜಾನೆ ಹೆಚ್ಚಾಗಬೇಕಾಗುತ್ತದೆ. ಇಲ್ಲಿ ೯೧೩ ಸಬ್ ಇನ್ಸ್‌ಸ್ಪೆಕ್ಟರ್‌ಗಳಿದ್ದಾರೆ. ಇವರುಗಳನ್ನೆಲ್ಲಾ ದ್ವಿಗುಣ ಗೊಳಿಸಬೇಕಾದರೆ ನಮ್ಮ ಖಜಾನೆಯು ಹಣವನ್ನೆಲ್ಲಾ ಬರಿದು ಮಾಡಬೇಕಾಗುತ್ತದೆ. ಅವರಿಗೆ ಏನು ಪ್ರೊಮೋಷನ್ ಕೊಡಬೇಕೋ ಅದನ್ನೆಲ್ಲಾ ಕೊಟ್ಟಿದ್ದೇವೆ. ಆದರೆ ತಾವು ಹೇಳುವಂತೆ ಪ್ರೊಮೋಷನ್ ಸ್ಟ್ಯಾಗ್ನೇಷನ್ ಆಗಿಲ್ಲ.

ಇನ್ನು ಶ್ವಾನದಳದ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಈ ಶ್ವಾನದಳ ಅಪರಾಧಿಗಳನ್ನು ಪತ್ತೆ ಹಚ್ಚುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿದ್ದಾರೆ. ಆದರೆ ಬಹಳ ದಿವಸದಿಂದ ಪತ್ತೆಯೇ ಆಗದಿದ್ದ ಎಷ್ಟೋ ಕೇಸುಗಳನ್ನು ಈ ಶ್ವಾನದಳ ಪತ್ತೆ ಮಾಡಿಕೊಟ್ಟಿರುವುದರಿಂದ ಈ ಶ್ವಾನದಳಕ್ಕೆ ಇನ್ನೂ ಆಧುನಿಕ ರೀತಿಯಲ್ಲಿ ತರಬೇತಿ ಕೊಡುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಬೇರೆ ರಾಜ್ಯಗಳಲ್ಲಿಯೂ ಈ ಶ್ವಾನದಳವನ್ನು ಬಹಳ ಆಧುನಿಕ ರೀತಿಯಲ್ಲಿ ತರಬೇತಿ ಕೊಟ್ಟು ಇಟ್ಟುಕೊಂಡಿದ್ದಾರೆ. ಅದರಂತೆ ನಾವೂ ಕೂಡ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಭೂಪತಿ.—ಮಾನ್ಯ ಅಧ್ಯಕ್ಷರೆ, ಪೋಲೀಸ್ ಇಲಾಖೆಯಲ್ಲಿ ಹಲವಾರು ಮಾರ್ಪಾಟುಗಳನ್ನು ಮಾಡುವ ಸಲುವಾಗಿ ಧರ್ಮವೀರ ಆಯೋಗವು ನೀಡಿದ ಶಿಫಾರಸ್ಸುಗಳನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದೀರಿ, ಇಲಾಖೆಯ ರೂಪರೇಷೆಗಳನ್ನು ಬದಲಾವಣೆ ಮಾಡಿ, ದಕ್ಷತೆಯನ್ನು ಹೆಚ್ಚು ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳು ನಡೆದಿವೆ ಎಂಬುದನ್ನು ತಿಳಿಸಬೇಕೆಂದು ನಾನು ಕಳೆದ ಸಾರಿಯೂ ಮಾತನಾಡಿದ್ದೆ. ಆದರೆ ಅದಕ್ಕೆ ಮಾನ್ಯ ಸಚಿವರು ಯಾವುದೇ ಉತ್ತರವನ್ನೂ ಕೊಡಲಿಲ್ಲ.

ಈ ಸಾರಿಯೂ ಕೆಲವು ಮಾನ್ಯ ಸದಸ್ಯರು ಈ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡಿದಾಗ ಇದರಲ್ಲೂ ಕೂಡ ಮಾನ್ಯ ಸಚಿವರು ಸ್ಪಷ್ಟ ಅಭಿಪ್ರಾಯವನ್ನು ತಿಳಿಸಲಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹೊಸಪೇಟೆ ತಾಲ್ಲೂಕಿನ ಗಾಜಗನೂರು ಎಂಬಲ್ಲಿ ಯಾವುದೋ ಒಂದು ಗಲಭೆ ಆದಾಗ ಪೋಲೀಸ್ ಠಾಣೆಗೆ ಫೋನ್ ಮಾಡಲು ನೋಡಿದಾಗ ನಮಗೆ ಟೆಲಿಫೋನ್ ವ್ಯವಸ್ಥೆಯೇ ಇರಲಿಲ್ಲ. ನಮ್ಮ ಊರಿನಲ್ಲಿ ಕಳ್ಳತನ ಆದಾಗ ಯಾರೋ ಒಬ್ಬರು ಬಂದು ನನ್ನನ್ನು ರಾತ್ರಿ ಹನ್ನೆರಡು ಗಂಟೆ ಸಮಯದಲ್ಲಿ ಎಬ್ಬಿಸಿದರು. ಪೋಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋದರೆ ಅಲ್ಲಿ ಪೋಲೀಸರು ಗೊರಕೆ ಹೊಡೆಯುತ್ತಿದ್ದರು, ನಮಗೆ ಟೆಲಿಫೋನ್ ವ್ಯವಸ್ಥೆ ಇಲ್ಲ. ಆದ್ದರಿಂದ ನಮಗೆ ಆದಷ್ಟು ಬೇಗ ಟೆಲಿಫೋನ್ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ಅದು ಬರುವವರೆಗೆ ನಮಗೆ ವಾಕಿಟಾಕಿ ಯನ್ನಾದರೂ ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳು ತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮವೀರ ಅವರ ಆಯೋಗದ ಶಿಫಾರಸು ಗಳಲ್ಲಿ ಕೆಲವನ್ನು ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ. ನಮ್ಮ ಇಲಾಖೆಯಲ್ಲಿ ಆ ಆಯೋಗದ ಶಿಫಾರಸ್ಸಿನ ಪ್ರಕಾರ ಆಧುನೀಕರಣವನ್ನು ಮಾಡಬೇಕಾದರೆ ಅದಕ್ಕೆ ಪ್ರಯೋಗಾಲಯ, ವಿಜ್ಞಾನಿಗಳು, ತಜ್ಞರು, ಇನ್ನೂ ಮುಂತಾದುವನ್ನು ಒದಗಿಸಿಕೊಳ್ಳಬೇಕಾದರೆ ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆ. ಇದನ್ನೆಲ್ಲಾ ಒಟ್ಟಿಗೇ ಮಾಡಲು ಸಾಧ್ಯವಿಲ್ಲದಿರುವುದರಿಂದ ಹಂತಹಂತವಾಗಿ ಕ್ರಮ ಕೈಗೊಳ್ಳುತ್ತಿದ್ದೇವೆ. ನಮ್ಮ ಇಲಾಖೆಗೆ ಸಾಕಷ್ಟು ವಾಹನಗಳು ಬೇಕಾಗುತ್ತದೆ. ಅದೇ ರೀತಿ ಇನ್ನೂ ಹಲವಾರು ರೀತಿಯ ಸಾಧನ ಸಾಮಗ್ರಿಗಳು ಬೇಕಾಗುತ್ತದೆ. ಆದ್ದರಿಂದ ಒಂದೇ ಸಾರಿ ಮಾಡಲು ಸಾಧ್ಯವಾಗದೇ ಹಂತಹಂತವಾಗಿ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಪೋಲೀಸ್ ಹೌಸಿಂಗ್ ವಿಚಾರದಲ್ಲಿ ಆಯೋಗದವರು ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನೂ ಕೂಡ ಕಾರ್ಯಗತಮಾಡುತ್ತಿದ್ದೇವೆ. ಬೆನೆವೆಲೆಂಟ್ ಫಂಡ್‌ನಿಂದ ಪೋಲೀಸರ ಮನೆಯವರಿಗೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ, ಇನ್ನೂ ಮುಂತಾದುವುಗಳ ಬಗ್ಗೆ ಯಾವರೀತಿ ನಾವು ಸಹಾಯ ಮಾಡಬಹುದು ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಶಿವಣ್ಣ.—ಸ್ವಾಮಿ, ನಿನ್ನೆ ನಿಯಮ ೩೩೮ರ ಪ್ರಕಾರ ಎತ್ತಿದಂಥ ವಿಚಾರದಲ್ಲಿ ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಪ್ರತಿದಿನ ಸುಮಾರು ೨ ಲಕ್ಷ ರೂ. ಬೆಲೆಬಾಳುವ ವಸ್ತುಗಳು ಕಳ್ಳ ಸಾಗಾಣಿಕೆಯಲ್ಲಿ ಹೋಗುತ್ತಿರುವುದಾಗಿ ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳ ಲಾಗುತ್ತಿದೆಯೆಂದು ತಿಳಿಸುವುದಾಗಿ ಮಾನ್ಯ ಸಚಿವರು ತಿಳಿಸಿದರು ಗಡಿ ಪ್ರದೇಶದಲ್ಲಿ ವಿಶೇಷವಾಗಿ ಕಳ್ಳ ಸಾಗಾಣಿಕೆ ನಡೆಯುತ್ತಿರುವುದರಿಂದ ಅದನ್ನು ಕಾಯಲು ಬಿಗಿಯಾದ ಪೋಲೀಸ್ ಪಹರೆಯನ್ನು ಇಡಬೇಕಾಗಿದೆ. ಇದನ್ನು ಇಡುತ್ತೀರಾ ? ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಲ್ಲಿ ಬಡವರೇ ನೂರಕ್ಕೆ ತೊಂಭತ್ತರಷ್ಟು ಇರುವುದರಿಂದ ಅವರ ಮೇಲೆ ಯಾರಾದರೂ ಕೇಸನ್ನು ಹಾಕಿದಾಗ ಅವರು ಕೋರ್ಟಿಗೆ ಹೋಗುವುದಕ್ಕೆ ಕೈಯಲ್ಲಿ ಹಣ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಸರ್ಕಾರದ ವತಿಯಿಂದಲೇ ಅವರಿಗೆ ಹಣವನ್ನು ಕೊಡುವ ವ್ಯವಸೆ ಮಾಡುತ್ತೀರಾ ? ಇತ್ತೀಚೆಗೆ ಕಳ್ಳರ ಕಾಟಕ್ಕಿಂತ ಪೋಲೀಸರ ಕಾಟವನ್ನು ತಪ್ಪಿಸಿಕೊಂಡರೆ ಸಾಕು ಎನ್ನುವ ಮಟ್ಟಕ್ಕೆ ಜನರು ಬಂದಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ಐ.ಜಿ.ಪಿ. ಡಿ.ಐ.ಜಿ., ಅಥವಾ ಕಮೀಷನರ್ ಇವರುಗಳನ್ನು ಬಿಟ್ಟರೆ ಇನ್ನುಳಿದ ಯಾವ ಪೋಲೀಸ್ ಆಫೀಸರ್‌ಗಳ ಹತ್ತಿರ ರಾಜಕಾರಣಿಗಳು ಹೋದರೂ ಒಂದೇ ಒಂದು ಪೈಸೆಯಷ್ಟೂ ಗೌರವ ಸಿಕ್ಕುವುದಿಲ್ಲ. ಆ ರೀತಿ ಅವರು ನಮ್ಮನ್ನು ಕಾಣುತ್ತಾರೆ. ಆದ್ದರಿಂದ ಈ ಕೆಳಮಟ್ಟದ ಪೋಲೀಸ್ ಅಧಿಕಾರಿಗಳು ರಾಜಕೀಯ ವ್ಯಕ್ತಿಗಳ ಬಗ್ಗೆ ಗೌರವಯುತವಾಗಿ, ಸೌಜನ್ಯತೆಯಿಂದ ನಡೆದುಕೊಳ್ಳುವಂತೆ ಸೂಚನೆಯನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಪೋಲೀಸರು ಸಾರ್ವಜನಿಕರ ಹತ್ತಿರ, ರಾಜಕಾರಣಿಗಳ ಹತ್ತಿರ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ನಾನು ಈಗಾಗಲೇ ಒಂದು ಸುತ್ತೋಲೆಯನ್ನು ಇಲ್ಲಿ ಓದಿದ್ದೇನೆ. ಅದನ್ನೇ ಮತ್ತೆ ಓದುವುದು ಸರಿಯಲ್ಲ. ಮಾನ್ಯ ಸದಸ್ಯರು ಸದನಕ್ಕೆ ಸ್ವಲ್ಪ ತಡವಾಗಿ ಬಂದಿರಬಹುದು. ಆದ್ದರಿಂದ ಅವರಿಗೆ ಈ ವಿಷಯ ಗೊತ್ತಿಲ್ಲದಿರಬಹುದು. ರಾಜ್ಯದ ಗಡಿ ಪ್ರದೇಶದಲ್ಲಿ ಬಿಗಿಯಾದ ಪೋಲೀಸ್ ಪಹರೆಯನ್ನು ಹಾಕಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡು ಪೋಲೀಸ್ ಇಲಾಖೆಯಲ್ಲಿ ಯಾರು ಅತ್ಯಂತ ದಕ್ಷ ಎಂದು ಹೆಸರನ್ನು

ಪಡೆದಿದ್ದಾರೆ ಅಂಥ ಪೋಲೀಸ್ ಅಧಿಕಾರಿಯ ನೇತೃತ್ವದಲ್ಲೇ ಪೋಲೀಸ್ ಪಹರೆಯನ್ನು ಇಡಲಾಗಿದೆ. ಅವರು ಈಗಾಗಲೇ ಸುಮಾರು ೧ ಕೋಟಿ ರೂ.ಗಳಿಗೂ ಹೆಚ್ಚು ಬೆಲೆಬಾಳುವ ವಸ್ತುಗಳನ್ನು ವಶಪಡಿಸಿ ಕೊಂಡಿದ್ದಾರೆ. ಹೆಗ್ಗಡದೇವನಕೋಟೆ, ಚಾಮರಾಜನಗರ, ಮುಖಾಂತರ ಹೋಗತಕ್ಕ ವಸ್ತುಗಳ ಬಗ್ಗೆಯೂ ಗಮನಹರಿಸಬೇಕೆಂದು ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಪೋಲೀಸ್ ಇಲಾಖೆಯಲ್ಲಿರತಕ್ಕ ಕೆಲವರಿಗೆ ಸರ್ಕಾರೀ ಮನೆಗಳನ್ನು ಒದಗಿಸಿಕೊಡುತ್ತೀರಿ. ಕೆಲವರಿಗೆ ಕೊಡುವುದಿಲ್ಲ. ಕೆಲವು ಐ.ಪಿ.ಎಸ್. ಅಧಿಕಾರಿಗಳಿಗೆ ಮನೆ ಬಾಡಿಗೆಯನ್ನು ಕೊಡುತ್ತೀರಿ, ನಾನ್ ಐ.ಪಿ.ಎಸ್.ಗೆ ಮನೆ ಬಾಡಿಗೆಯನ್ನು ಕೊಡುವುದಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಬೇಕು.

ಶ್ರೀ ಬಿ. ರಾಚಯ್ಯ.—ನಾವು ವೇತನ ಆಯೋಗವನ್ನು ನೇಮಕ ಮಾಡಿರುವುದರಿಂದ ಈ ವಿಚಾರ ಅದರ ಮುಂದೆ ಬರುತ್ತದೆ. ಮನೆ ಬಾಡಿಗೆಯನ್ನು ಕೊಡಬೇಕೋ, ಬಿಡಬೇಕೋ ಎಂಬುದನ್ನು ಅವರು ತಿಳಿಸುತ್ತಾರೆ.

ಅಧ್ಯಕ್ಷರು.—ಇದುವರೆಗೆ ಸಾಕಷ್ಟು ಸಮಯವನ್ನು ಈ ಚರ್ಚೆಗೋಸ್ಕರ ವಿನಿಯೋಗಿಸಿದ್ದೇವೆ. ಇಲ್ಲಿಗೆ ಈ ಬೇಡಿಕೆಯ ಮೇಲಿನ ಚರ್ಚೆ ಮತ್ತು ಉತ್ತರ ಮುಕ್ತಾಯವಾಯಿತು. ಈಗ ಬೇಡಿಕೆಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :

> ತಾ|| ೩೧–೩–೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೫೯,೬೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೆ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ೪ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ,

ಶ್ರೀ ಐ.ಬಿ. ಶಂಕರ್.—ನಾನು ಇದನ್ನು ಅನುಮೋದಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

ಅಭಿಯಾಚನೆ ಕ್ರಮಾಂಕ ೩೪-(ಸಣ್ಣ ನೀರಾವರಿ)—೩೫—ನೀರಾವರಿ, ಜಲಸಂಚಾರ ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ೪೪—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ), ೪೫—(ಕಟ್ಟಡಗಳು), ೪೬ ರಸ್ತೆಗಳು ಮತ್ತು ಸೇತುವೆಗಳು

ಅಭಿಯಾಚನೆ ಕ್ರಮಾಂಕ—೩೪ (ಸಣ್ಣ ನೀರಾವರಿ)

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ,

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫,೩೩,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೪,೮೦,೬೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೫— (ನೀರಾವರಿ, ಜಲಸಂಚಾರ ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು)

‘‘ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೩೯,೬೫,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೨,೮೬,೨೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪೪—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ)

‘‘ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ರಂದು ಕೊನಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦,೮೦,೩೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ: ೪೫ (ಕಟ್ಟಡಗಳು).

‘‘ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೩೮ ೪೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೯೨,೩೧,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ: ೪೬. (ರಸ್ತೆಗಳು ಮತ್ತು ಸೇತುವೆಗಳು).

‘‘ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮ ೨೧.೩೯,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೨ ೧೩,೦೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವಗಳನ್ನು ಮಂಡಿಸಲಾಯಿತು. ಈಗ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ಮಾನ್ಯ ಅಧ್ಯಕ್ಷರೇ, ಪರ್‌ಫಾರ್ಮೆನ್ಸ್ ಬಜೆಟ್, ಆನ್ಯುಯಲ್ ರಿಪೋರ್ಟುಗಳನ್ನು ಮುಂಚಿತವಾಗಿ ಕೊಟ್ಟಿದ್ದಾರೆ. ಅವುಗಳನ್ನು ಸರಿಯಾಗಿ ನೋಡಿಕೊಳ್ಳದೇ, ಅಭ್ಯಾಸ ಮಾಡದೆ ಮಾತನಾಡುವುದಕ್ಕೆ ಹೇಗೆ ಸಾಧ್ಯ ?

ಅಧ್ಯಕ್ಷರು.—ಕೂತುಕೊಂಡು ಸ್ವಲ್ಪ ನೋಡಿಕೊಳ್ಳಿ. ನನ್ನ ಗಮನಕ್ಕೆ ತಂದಿದ್ದೀರಿ ವಿಚಾರ ಮಾಡುತ್ತೇನೆ.

ಶ್ರೀ ಧರ್ಮಸಿಂಗ್.—ತಾವು ಏತಕ್ಕೆ ಕಾಲಕ್ಕೆ ಸರಿಯಾಗಿ ಇವುಗಳನ್ನು ತಲುಪಿಸಲಿಲ್ಲ ?

ಅಧ್ಯಕ್ಷರು.—ಮಾನ್ಯ ಮೊಯಿಲಿಯವರು ಪ್ರಾರಂಭ ಮಾಡಲಿ ನೋಡೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ಹೊಸ ರಿಕಾರ್ಡ್ಸ್ ಯಾವುದೂ ಬಂದಿಲ್ಲ.

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯ್ಲಿಯವರೇ ತಾವು ಪ್ರಾರಂಭ ಮಾಡಿ ನೋಡೋಣ.

ಶ್ರೀ ಎಂ. ವೀರಪ್ಪಮೊಯ್ಲಿ.—ಪರ್‌ಫಾರ್ಮೆನ್ಸ್ ಬಡ್ಜೆಟ್ ಇಲ್ಲ ಅಂದರೆ ಹೇಗೆ ?

ಶ್ರೀ ಯಂ. ಭೂಪತಿ.— ಒಂದು ದಿನ ಮುಂಚಿತವಾಗಿ ಕೊಡದಿದ್ದರೆ ಹೇಗೆ ?

ಶ್ರೀ ಧರ್ಮಸಿಂಗ್.—ಹೊಸ ಸದಸ್ಯರು ಯಾವ ಆಧಾರದ ಮೇಲೆ ಮಾತನಾಡಬೇಕು ?

ಅಧ್ಯಕ್ಷರು.—ನಿಮ್ಮ ಹೆಸರು ಇಲ್ಲ, ಮಾನ್ಯ ಖರ್ಗೆಯವರ ಹೆಸರೂ ಬಂದಿಲ್ಲ, ನಿಮ್ಮ ಪಾಳಿ ನಿನ್ನೆಗೆ ಮುಗಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪರ್‌ಫಾರ್ಮೆನ್ಸ್ ಬಡ್ಜೆಟ್ಟಿನಲ್ಲಿ ಡಿಟೇಲ್ ಇರುತ್ತೆ.

ಅಧ್ಯಕ್ಷರು.— ಈ ಡಿಮ್ಯಾಂಡ್ ಇವತ್ತು ಮುಗಿಯಲೇಬೇಕು. ಮಾನ್ಯ ವೀರಪ್ಪಮೊಯ್ಲಿಯವರೇ ತಾವು ಪ್ರಾರಂಭ ಮಾಡಿ ಮುಂದೆ ವಿಚಾರ ಮಾಡೋಣ.

ಶ್ರೀ ಧರ್ಮಸಿಂಗ್.—ಸ್ವಾಮಿ, ಮಾನ್ಯ ವೀರಪ್ಪಮೊಯ್ಲಿಯವರು ಮಾತನಾಡುತ್ತಾರೆ, ಆದರೆ ಹೊಸ ಸದಸ್ಯರು ಹೇಗೆ ಮಾತನಾಡಬೇಕು ?

ಶ್ರೀ ಎಂ ವೀರಪ್ಪಮೊಯ್ಲಿ.—ಇದು ಬಹಳ ಪ್ರಾಮುಖ್ಯವಾದಂಥ ಬೇಡಿಕೆ. ಪರ್‌ಫಾರ್ಮೆನ್ಸ್ ಬಡ್ಜೆಟ್ ಇವತ್ತು ಟೇಬಲ್ ಮೇಲೆ ಇಟ್ಟಿದ್ದಾರೆ. ಇಂಥ ದೊಡ್ಡ ಬೇಡಿಕೆ ಮೇಲೆ ಸರಿಯಾಗಿ ಚರ್ಚೆಯಾಗದಿದ್ದರೆ ಹೇಗೆ ?

ಅಧ್ಯಕ್ಷರು.— ತಮಗೆ ಅಪಾರವಾದ ಅನುಭವ ಇದೆ, ತಾವು ಚರ್ಚೆ ಪ್ರಾರಂಭ ಮಾಡಿ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ಸ್ವಾಮಿ, ನೀರಾವರಿ ವಿಷಯ, ರಸ್ತೆಗಳ ವಿಷಯ ಹಾಗೂ ಸೇತುವೆಗಳ ವಿಷಯ ಪ್ರಸ್ತಾಪ ಮಾಡಬೇಕಾಗಿದೆ. ೯ ಗಂಟೆಗೆ ಟೇಬಲ್ ಮೇಲೆ ಇಟ್ಟರೆ ಹೇಗೆ ನೋಡಿ ಕೊಳ್ಳುವುದಕ್ಕೆ ಸಾಧ್ಯ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಖರ್ಗೆಯವರಿಗೆ ಎಲ್ಲಾ ವಿಷಯವೂ ಗೊತ್ತಿದೆ, ಪರ್‌ಫಾರ್ಮೆನ್ಸ್ ಬಡ್ಜೆಟ್ ಇಲ್ಲದೆ, ಆನ್ಯುಯಲ್ ರಿಪೋರ್ಟ್ ಇಲ್ಲದೆ, ಅವರು ಭಾಷಣ ಮಾಡುವಷ್ಟು ಅನುಭವ ಇದೆ, ಶಕ್ತಿ ಇದೆ. ಪ್ರಿಂಟಿಂಗ್‌ನಿಂದ ಬರುವುದು ತಡವಾಗಿದೆ, ವೀರಪ್ಪಮೊಯ್ಲಿಯವರು ಮಾತನಾಡಲಿ, ಎಷ್ಟುಬೇಕಾದರೂ ಅವಕಾಶ ಕೊಡೋಣ. ನಮ್ಮ ಕಡೆ ಮಾತನಾಡುವವರನ್ನು ನಿಲ್ಲಿಸಿ ಅವಕಾಶ ಕೊಡಿಸೋಣ.

† ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ) —ಮಾನ್ಯ ಅಧ್ಯಕ್ಷರೇ, ನಮ್ಮನ್ನು ಬಹಳ ಸಂಕಷ್ಟದಲ್ಲಿ ಹಾಕಿದ್ದೀರಿ, ಪರ್‌ಫಾರ್ಮೆನ್ಸ್ ಬಜೆಟ್ ಇಲ್ಲದೆ ಮಾತನಾಡುವುದಾದರೂ ಹೇಗೆ ? ಈ ದಿವಸ ಅತ್ಯಂತ ಪ್ರಾಮುಖ್ಯವಾದಂಥ ಬೇಡಿಕೆ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಅದೇ ಸಮಯದಲ್ಲಿ ನಮಗೆ ಸ್ವಲ್ಪ ನಿರಾಶೆ ತಂದಿದ್ದು ಏನೆಂದರೆ ಈ ಚರ್ಚೆಯನ್ನು ಶನಿವಾರ ಇಟ್ಟಿದ್ದರಿಂದ ಅನೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ಇಲ್ಲದಂತಾಗಿದೆ. ಶಾಸಕರ ಸಾರ್ವಭೌಮತ್ವ ಈ ಇಲಾಖೆಯ ಮೇಲಿದೆ, ಈ ಇಲಾಖೆ ಪ್ರಸನ್ನವಾದರೆ, ಮಾನ್ಯ ದೇವೇಗೌಡರು ಪ್ರಸನ್ನರಾದರೆ ಮತದಾರ ಪ್ರಸನ್ನನಾಗುತ್ತಾನೆ. ನಾನು ಇವತ್ತು ನಮ್ಮ ಕ್ಷೇತ್ರಕ್ಕೆ ಹೋಗಬೇಕಾಗಿತ್ತು, ಆದರೆ ಮಾನ್ಯ ದೇವೇಗೌಡರ ಕೃಪಾಕಟಾಕ್ಷ ಪಡೆಯುವುದಕ್ಕಾಗಿ ಮತ್ತು ಈ ಇಲಾಖೆಯ ಪ್ರಾಮುಖ್ಯತೆಯನ್ನು ಮತ್ತು ಅದರ ಮಹತ್ವವನ್ನು ಅರಿತು ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇನೆ. ಒಂದು ಸಂತೋಷದ ವಿಚಾರ ಅಂದರೆ ಈ ಒಂದು ಇಲಾಖೆ ಬಲಾಢ್ಯ ಮಂತ್ರಿಯವರ ಕೈಯಲ್ಲಿದೆ. ಸನ್ಮಾನ್ಯ ದೇವೇಗೌಡರು ರಾಜಕೀಯವಾಗಿಯೂ ರಾಜ್ಯವನ್ನು ಬಲಪಡಿಸಬಲ್ಲರು, ಪಕ್ಷವನ್ನು ಬಲಪಡಿಸಬಲ್ಲರು, ಆರ್ಥಿಕವಾಗಿ ಈ ಇಲಾಖೆಯ ಮುಖಾಂತರ ರಾಜ್ಯವನ್ನು ಕಟ್ಟಬಲ್ಲರು. ಆದ್ದರಿಂದ, ಅವರು ಖಾತೆ ಸರಿಯಲ್ಲ, ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಏನೂ ಮಾಡಲಿಕ್ಕೆ ಆಗುತ್ತಿಲ್ಲ ಎಂದು ಯಾವುದೇ ರೀತಿಯ ದುರ್ಬಲತೆಯನ್ನು ಪ್ರಕಟಮಾಡಲಿಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಪಕ್ಷದವಿಚಾರವಾಗಿ ಕೂಡ ಮುಖ್ಯಮಂತ್ರಿ ಯವರ ಕೈಯನ್ನು ಬಲಪಡಿಸುವುದು ಗೌಡರ ಕೈಯಲ್ಲಿದೆ. ಪಕ್ಷದ ಮಾನ್ಯ ಮುಖ್ಯಮಂತ್ರಿಯವರು ಕೂಡ ದೇವೇಗೌಡರ ಕೈಯಲ್ಲಿ ಪ್ರಾಮುಖ್ಯವಾದಂಥ ಖಾತೆಯನ್ನು ಕೊಟ್ಟಿದ್ದೇನೆ. ದೇವೇಗೌಡರು ಸರಿಯಾಗಿ

ಆಡಳಿತ ನಡೆಸದಿದ್ದರೆ ತಾವು ಹೇಗೆ ನಡೆಸುವುದಕ್ಕೆ ಆಗುತ್ತದೆಂದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಹುದು. ಇವತ್ತು ಮಾನ್ಯ ದೇವೇಗೌಡರು ದೊಡ್ಡ ನೀರಾವರಿ, ಸಣ್ಣ ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳನ್ನು ಇಟ್ಟು ಕೊಂಡಿದ್ದಾರೆ. ಒಂದು ಕಾಲದಲ್ಲಿ ಇದನ್ನು ಚನ್ನಬಸಪ್ಪನವರು ಇಟ್ಟುಕೊಂಡಿದ್ದರು, ಈವೊತ್ತು ದೇವೇಗೌಡರ ಕೈಯಲ್ಲಿದೆ. ಒಟ್ಟು ೭೬೫ ಕೋಟಿ ರೂಪಾಯಿ ಯೋಜನೆಯಲ್ಲಿ ೧೯೪ ಕೋಟಿ ರೂಪಾಯಿಗಳನ್ನು ಮಾನ್ಯ ದೇವೇಗೌಡರು ಅನುಷ್ಠಾನ ಮಾಡಬೇಕು. ಇಡೀ ಬಜೆಟ್ಟಿನಲ್ಲಿ ಅತ್ಯಂತ ದೊಡ್ಡ ಮೊತ್ತ. ರೆವಿನ್ಯೂ ಖರ್ಚಿನಲ್ಲೂ ಕೂಡ ಕನ್‌ಸಾಲಿಡೇಟ್ ಫಂಡ್ ೨೧೧.೨೭ ಕೋಟಿ ರೂಪಾಯಿ ಸಿಂಹಪಾಲು ದೇವೇಗೌಡರದು.

೧೨-೦೦ ಮಧ್ಯಾಹ್ನ

ಆಮೇಲೆ ಬಂಡವಾಳ ಖಾತೆಯನ್ನು ನೋಡಿದರೂ ಕೂಡ, ೨೪೬.೯೩ ಕೋಟಿ. ಇದು ಕೂಡ ಇಡೀ ಬಜೆಟ್‌ನ್ನು ಅದರ ಸ್ಥೂಲ ಸ್ವರೂಪವನ್ನು ನೋಡಿದರೆ ಅತ್ಯಂತ ಹೆಚ್ಚಿನ ಸಮಪಾಲು, ಮೊತ್ತ ಸನ್ಮಾನ್ಯ ದೇವೇಗೌಡ ಅವರದ್ದು. ಸುಮಾರಾಗಿ ರೆವಿನ್ಯೂ ಅಕೌಂಟ್ ಎಕ್ಸ್‌ಪೆಂಡಿಚರ್ ಮತ್ತು ಕ್ಯಾಪಿಟಲ್ ಅಕೌಂಟ್ ಎರಡೂ ಸೇರಿ ಸುಮಾರು ೪೫೮.೨೦ ಕೋಟಿ. ಇಷ್ಟು ದೊಡ್ಡ ಜವಾಬ್ದಾರಿ ಮಾನ್ಯ ದೇವೇಗೌಡರ ಇಲಾಖೆಗೆ ಸೇರಿದ್ದು. ಇದರ ಬಗ್ಗೆ ಸಾಕಷ್ಟು ಸಮಯ ಚರ್ಚೆ ಆಗುವುದರಿಂದ, ನಾನು ಹೇಳಿದ್ದನ್ನೇ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಹೊಸದಾಗಿ ಕೆಲವು ವಿಚಾರಗಳನ್ನು ಮಾತ್ರ ಅತ್ಯಂತ ಅಗತ್ಯವೆಂದು ಕಂಡುಬಂದಿದ್ದನ್ನು ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಸಣ್ಣ ನೀರಾವರಿ ಖಾತೆಗೆ ಸಂಬಂಧಪಟ್ಟಹಾಗೆ ನಾನು ಮಾತನಾಡಲು ಪ್ರಾರಂಭ ಮಾಡುತ್ತೇನೆ. ಈ ಸಣ್ಣ ನೀರಾವರಿ ಖಾತೆಗೆ ಸಂಬಂಧಪಟ್ಟಂತೆ ಖರ್ಚಿನ ಪಟ್ಟಿಯನ್ನು ನೋಡಿದರೆ, ತಾವು ಕೊಟ್ಟಂತಹ ಪುಸ್ತಕದಲ್ಲಿನ ಅಂಕಿಸಂಖ್ಯೆಗಳನ್ನೇ ನಾನು ಇಲ್ಲಿ ಉಲ್ಲೇಖ ಮಾಡುತ್ತಿರುವುದು. ಸನ್ಮಾನ್ಯ ಮುಖ್ಯಮಂತ್ರಿಯವರು ಏನು ಮಾಡುತ್ತಾರೆ ಎಂದರೆ, ಅವರು ಕೊಟ್ಟಂತಹ ಅಂಕಿಸಂಖ್ಯೆಗಳನ್ನು ನಾವು ಉದ್ಧರಿಸಿ ಮಾತನಾಡಿದರೂ ಸಹ, ಅವರು ಬೇರೆ ಒಂದು ಅಂಕಿಸಂಖ್ಯೆಗಳನ್ನು ತೆಗೆದು ಉದಾಹರಣೆ ಸಮೇತ ನಮಗೆ ಹೇಳಿಬಿಡುತ್ತಾರೆ. ಆದ್ದರಿಂದ ಅವರ ಪ್ರಕಾರವೇ, ೧೯೮೩-೮೪ರಲ್ಲಿ ೨೦.೨೪ ಕೋಟಿ ಯೋಜನೆ ಖರ್ಚು ಮಾತ್ರ. ೧೯೮೪-೮೫ರಲ್ಲಿ ೨೦.೬೪ ಕೋಟಿ ೧೯೮೬-೮೭ರಲ್ಲಿ ೨೭.೧೮ ಕೋಟಿ ಆಮೇಲೆ ಈಗ ತಾವು ಕೊಟ್ಟಿರತಕ್ಕಂಥಾದ್ದು ೩೪.೨೫ ಕೋಟಿ ಇಷ್ಟು ತಾವು ಖರ್ಚು ಮಾಡಿರತಕ್ಕಂಥದ್ದು, ಆದರೆ ಸಣ್ಣ ನೀರಾವರಿ ಕಾರ್ಯಕ್ರಮದಲ್ಲಿ ನೀವು ಹೆಚ್ಚು ಹಣ ಕೊಟ್ಟದ್ದು ಕಾಣುವುದಿಲ್ಲ. ಇದರಲ್ಲಿ ನಡೆದಂಥ ಪ್ರಗತಿಗೆ ಸಂಬಂಧಿಸಿದ ವಿಚಾರವನ್ನು ನಾನು ಆ ಮೇಲೆ ಪ್ರಸ್ತಾಪ ಮಾಡುತ್ತೇನೆ. ಆದರೆ ಹೆಚ್ಚುವರಿ ಹಣದ ಒಂದು ವಿಚಾರ ನೋಡಿದರೆ, ೧೯೮೫-೮೬ ಇರಿಗೇಷನ್ ಡಿಪಾರ್ಟ್‌ಮೆಂಟ್ ಪರ್ಫಾರ್ಮೆನ್ಸ್ ಬಜೆಟ್ ಪೇಜ್ ೬ರಲ್ಲಿ ತಾವು ಕೊಟ್ಟಿರತಕ್ಕಂಥ ಅಂಕಿಸಂಖ್ಯೆಗಳು. ಫೈನಾನ್ಸಿಯಲ್ ಅಂಡ್ ಫಿಸಿಕಲ್ ಡೆವಲಪ್‌ಮೆಂಟ್ ಸ್ಕೀಮ್‌ಗಳು. ಈ ಸಣ್ಣ ಪುಸ್ತಕವನ್ನು ನಮಗೆ ಕೊಟ್ಟಿದ್ದಾರೆ. ಇದು ವರ್ಷವರ್ಷ ಹೆಚ್ಚಾಗುತ್ತಲೇ ಇರುತ್ತದೆ. It has now become most icredible document. I cannot attribute much credibility to that document which is supplied along with the budget. ಏಕೆಂದರೆ ಅನೇಕ ಫಿಗರ್ಸ್ ಕಡಿಮೆ ಇರುತ್ತವೆ ಹೆಚ್ಚು ಇರುವುದಿಲ್ಲ. ಪ್ರೊಜೆಕ್ಷನ್‌ನನ್ನು ಎಕ್ಚ್ಯುಯಲ್‌ಟಿ ತಿಳಿದುಕೊಂಡು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ನಿಮಗೆ ಕೊಡುವುದರಿಂದ ಕೆಲವೊಮ್ಮೆ ಏನಾಗುತ್ತದೆ ಎಂದರೆ, ಅನೇಕ ವೇಳೆ ನಮ್ಮ ಕ್ರೆಡಿಬಿಲಿಟಿ ಎಲ್ಲಿ ತಪ್ಪಾಗುತ್ತದೋ ಎಂದು ಭಯವಾಗುತ್ತದೆ. ಇಲ್ಲಿ ನೋಡಿದರೆ ಸ್ಪಷ್ಟವಾಗಿದೆ. ೧೯೮೦-೮೧ ರಿಂದ ೧೯೮೪-೮೫ರವರೆಗಿನ ಫೈನಾನ್ಸಿಯಲ್ ಔಟ್‌ಲೇ ೨೧.೯೬ ಕೋಟಿ. ಇದು ೬ನೇ ನೀರಾವರಿ ಯೋಜನೆಯಲ್ಲಿ. ಏಕೆಂದರೆ ಮಾನ್ಯ ಮಂತ್ರಿಗಳು ಇದರಲ್ಲಿ ಪುಸ್ತಕ ಕೂಡ ಮಾಡಿದ್ದಾರೆ. ಜಾಸ್ತಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಐದು ವರ್ಷದಲ್ಲಿ ಮೂರು ವರ್ಷ ಖರ್ಚು ಏನೂ ಮಾಡಿಲ್ಲ. ನಾವೇ ಹೆಚ್ಚು ಖರ್ಚು ಮಾಡಿದ್ದು ಎಂದು ಅವರು ಹೇಳಿದ್ದಾರೆ. ಈ ಔಟ್‌ಲೇ ಫಾರ್ ಮೈನರ್ ಇರಿಗೇಶನ್ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ೧೯೮೧-೮೨ಕ್ಕೆ ಬಂದರೆ ೪ ಲಕ್ಷ ಕಡಿಮೆ ಆಯಿತು. ೧೯೮೨-೮೩ಕ್ಕೆ ಬರುವಾಗ ೮-೮.೨೬, ೧೯೮೩-೮೪ರಲ್ಲಿ ೧೭.೨೪ ಅಂದರೆ ೪.೩೮, ೧೯೮೫-೮೬ರಲ್ಲಿ ಅಂದರೆ ೨೧.೯೬ ಕೋಟಿ ಫೈನಾನ್ಸಿಯಲ್ ಔಟ್‌ಲೇ. ೧೯೮೬-೮೭ರಲ್ಲಿ ನಿಮ್ಮ ಪಿರೀಯಡ್‌ನಲ್ಲಿ ಬರುವಾಗ ಇದು ೧೯.೪೪ ಕೋಟಿ. ಅಂದರೆ ೫ನೇ

ಯೋಜನೆಯ ಪ್ರಾರಂಭದಲ್ಲಿ ಇದ್ದುದಕ್ಕಿಂತಲೂ, ಐದನೇ ವರ್ಷದ ಕೊನೆ ವರ್ಷದಲ್ಲಿ ಇದು ಕೆಳಗಿಳಿದು ಬಂದಿದೆ. There is a dip in the financial outlay So far as Minor Irrigation is concerned. ಹೀಗಾದರೆ ಎಲ್ಲಿ ಆದ್ಯತೆ ಇದೆ ? ಫಿಸಿಕಲ್ ಎಚೀವ್ ಮೆಂಟ್‌ನ್ನು ನೋಡಿದರೂ ಕೂಡ ೧೯೮೦-೮೧ರ ಫಿಸಿಕಲ್ ಎಚೀವ್‌ಮೆಂಟ್. ೨೨ ಹೆಕ್ಟೇರ್ ಇದ್ದರೆ, ೧೯೮೪-೮೫ರಲ್ಲಿ ಫಿಸಿಕಲ್ ಎಚೀವ್‌ಮೆಂಟ್. ೦೨ ಹೆಕ್ಟೇರ್ ಎಂದರೆ ೨ ಸಾವಿರ ಹೆಕ್ಟೇರ್ ಕಡಿಮೆ ಆಯಿತು ಇದಕ್ಕಿಂತ ಮುಂದೆ ತಾವು ಹೋಗಿಲ್ಲ. ಇದಕ್ಕೆ ನಿಮ್ಮ ಹತ್ತಿರ ಉತ್ತರ ಇರಬಹುದು. ಆದರೆ. ಸಂಪೂರ್ಣವಾಗಿ ಈ ಆದ್ಯತೆಯನ್ನು ಸಣ್ಣ ನೀರಾವರಿ ಮಟ್ಟಕ್ಕೆ ಕೈಬಿಟ್ಟಿದ್ದು ಇಲ್ಲಿ ಕಾಣುತ್ತಿದೆ. ಈಗ ಇದರಲ್ಲಿ ಕೂಡ ಪೇಜ್ ೧೭ ಟೇಬಲ್ ೧೧ ಕರ್ನಾಟಕ ಪಿಕ್ಚರ್ ಆಫ್ ಬಜೆಟ್ ಇದು ಅಧ್ಯಕ್ಷರೇ ನಿಮ್ಮ ಹತ್ತಿರ ಕೂಡ ಇರಬಹುದು. ೧೭ನೇ ಪುಟದಲ್ಲಿದೆ. ಇದನ್ನು ನಾನು ನಂತರ ಪ್ರಸ್ತಾಪ ಮಾಡುತ್ತೇನೆ. ಇಲ್ಲಿ ಪುಟ ೨೭ ಟೇಬಲ್ ೧೦ ಇದರಲ್ಲಿ ಮೈನರ್ ಇರಿಗೇಶನ್ ಬಗ್ಗೆ ಉಲ್ಲೇಖ ಇದೆ. ೧೯೮೦-೮೧ರಲ್ಲಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್‌ನಲ್ಲಿ Precentage contribution to the whole programme ೯.೨೮ ಇದ್ದರೆ, ೧೯೮೫-೮೬ರಲ್ಲಿ ೫.೨೫ಕ್ಕೆ ಬಂದಿದೆ. ಇಲ್ಲಿ ಕೂಡ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ಮೈನರ್ ಇರಿಗೇಶನ್‌ಗೆ ಆದ್ಯತೆ ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಯಾವ ಆಧಾರ ಕೂಡ ಇಲ್ಲ ಇದು ನಿಮ್ಮ ಬಜೆಟ್ ಚೌಕಟ್ಟಿನಲ್ಲಿ ನಡೆದಿಲ್ಲ. ೬ನೇ ಯೋಜನೆಯಲ್ಲಿ ಐ.ಡಿ.ಎ. ಮತ್ತು ನಾನ್ ಐ.ಡಿ.ಎ. ಎರಡನ್ನೂ ನೋಡಿದರೆ, ಐ.ಡಿ.ಎ.ನಲ್ಲಿ ಟಾರ್ಜೆಟ್ ೬ನೇ ಯೋಜನೆಯಲ್ಲಿ ೨೫ ಸಾವಿರ ಹೆಕ್ಟೇರ್ ಇರತಕ್ಕಂಥಾದ್ದು ೫೦ ಎಕರೆ ಮಾತ್ರ ಸಾಧನೆಯಾಗಿದೆ. ನಾನ್ ಐ.ಡಿ.ಎ.ನಲ್ಲಿ ಟಾರ್ಜೆಟ್ ಇದ್ದದ್ದು ೬೫ ಸಾವಿರ ಹೆಕ್ಟೇರ್ ಆದರೆ ಸಾಧನೆಯಾಗಿರುವುದು ೪೯ ಸಾವಿರ ಮಾತ್ರ. ಅಂದರೆ ೬ನೇ ಯೋಜನೆಯಲ್ಲಿ ಒಟ್ಟು ೯೦ ಸಾವಿರ ಹೆಕ್ಟೇರ್ ಮಾಡಬೇಕಾಗಿದ್ದುದರಲ್ಲಿ ೫೯.೫೦ ಸಾವಿರ ಹೆಕ್ಟೇರ್ ಅಷ್ಟು ಮಾತ್ರ ಸಾಧನೆಯಾಗಿದೆ. ಅಂದರೆ ೬೦ ಪರ್ಸೆಂಟ್‌ನಷ್ಟು ಅಚೀವ್‌ಮೆಂಟ್ ಆಗಿದೆ. ಐ.ಡಿ.ಎ. ಪ್ರಾಜೆಕ್ಟ್‌ನಲ್ಲಿ ಇದು ವರ್ಲ್ಡ್‌ಬ್ಯಾಂಕ್ ಪ್ರಾಜೆಕ್ಟ್ ೧೯೮೦-೮೧ರಲ್ಲಿ ಪ್ರಾರಂಭವಾಯಿತು. ನಾಲ್ಕು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಕೆಲಸ ಮಾತ್ರ ಆಗಿದೆ. Out of 65 works in World Bank Project works, only one work is completed Rest of the works are not completed. ಅದೂ ಕೂಡ ಒಂದು ಕೆಲಸದಲ್ಲಿ ೫೦ ಹೆಕ್ಟೇರ್‌ನಲ್ಲಿ ಮಾತ್ರ. ನೀರಾವರಿ ಯೋಜನೆಯಲ್ಲಿ ಟಾರ್ಜೆಟ್ ಇದ್ದದ್ದು ೨೫ ಸಾವಿರ ಎಂದು ಈಗಾಗಲೇ ನಾನು ಹೇಳಿದ್ದೇನೆ. ನಿಮ್ಮ ಈ ಸಣ್ಣ ನೀರಾವರಿ ಇಲಾಖೆಯಲ್ಲಿ ಇದಕ್ಕೆ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಎರಡು ಕ್ವಾಲಿಟಿ ಕಂಟ್ರೋಲ್ ಡಿವಿಜನ್ ಇದೆ. ಮತ್ತು ವರ್ಲ್ಡ್‌ಬ್ಯಾಂಕ್ ಪ್ರಾಜೆಕ್ಟ್ ನೋಡಲಿಕ್ಕೆ ಒಂದು ಸ್ಪೆಶಲ್ ಸೆಲ್ ಕೂಡ ಮಾಡಿದ್ದೀರಿ.

ಇದನ್ನು ನಾವು ದಕ್ಷತೆ ಎಂದು ಹೇಳಬೇಕೋ ಅಥವಾ ಅದಕ್ಷತೆ ಎಂದು ಹೇಳಬೇಕೋ ? ವಿಶ್ವ ಬ್ಯಾಂಕ್ ಪ್ರಾಜೆಕ್ಟ್‌ಗಳು ಇರಬಹುದು, ಅಥವಾ ಬೇರೆ ಪ್ರಾಜೆಕ್ಟ್ ಇರಬಹುದು, ಆದರೆ ಇಷ್ಟೊಂದು ನಿಧಾನವಾಗಲು ಕಾರಣವೇನು? ಪ್ಲಾನ್ ಮತ್ತು ಎಸ್ಟಿಮೇಟನ್ನು ಮಂಜೂರು ಮಾಡುವುದರಲ್ಲಿ ನಿಧಾನವಾಯಿತು ಅಥವಾ ಬೇರೆ ಕಾರಣದಿಂದ ನಿಧಾನವಾಯಿತು ಎಂದು ಹಳೆಯ ಕಥೆಯನ್ನೇ ಹೇಳಿಕೊಂಡು ತಮ್ಮ ಕರ್ತವ್ಯದಿಂದ ಜಾರಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ, ಅದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ ಈ ಒಂದು ಕಾರಣವನ್ನು ತಾವು ೧೯೮೪-೮೫ರ ಬಗ್ಗೆ ಕೊಡಬಹುದು ಮತ್ತು ೧೯೮೫-೮೬ನೇ ಸಾಲಿಗೆ ಹೇಳಬಹುದು. ಆದರೆ ಯಾವಾಗಲೂ ಇದನ್ನೇ ಹೇಳುವುದಕ್ಕಾಗುವುದಿಲ್ಲ. ತಾವು ಅಧಿಕಾರಕ್ಕೆ ಬಂದಮೇಲೆ ಇಲ್ಲಿಯವರೆಗೆ ೪ಬಜೆಟ್‌ಗಳನ್ನು ಮಂಡನೆ ಮಾಡಿದ್ದೀರಿ. ಆದ್ದರಿಂದ ಅನೇಕ ಯೋಜನೆಗಳ ಕೆಲಸ ಇಲ್ಲಿಯವರೆಗೆ ಮುಗಿಯಬೇಕಾಗಿತ್ತು. ಆದರೆ ಒಂದು ಮಾತ್ರ ಇಲ್ಲಿಯವರೆಗೆ ಮುಗಿದಿದೆ. ಈ ಕಾರಣದಿಂದ ಸಣ್ಣ ನೀರಾವರಿ ಕ್ಷೇತ್ರದಲ್ಲಿ ನಿಮ್ಮ ಇಲಾಖೆ ಎಷ್ಟರಮಟ್ಟಿನ ದಕ್ಷತೆಯಿಂದ ಕೆಲಸ ಮಾಡಿದೆ ಎಂಬುದನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ, ಈ ಬಗ್ಗೆ ತಾವು ಉತ್ತರ ಕೊಡುವಾಗ ಇತ್ತೀಚಿನ ಬೆಳವಣಿಗೆಗಳನ್ನು ತಿಳಿಸಬೇಕು. ಈ ಕೆಲಸಗಳು ಮುಗಿಯದಿರಲು ಕಾರಣಗಳು ಏನೇ ಇರಲಿ ಆದರೆ ಮೊದಲಿನಿಂದಲೂ ಇದ್ದಂಥ ಪದ್ಧತಿಯನ್ನು ತಾವಾದರೂ ಸಹ ಏತಕ್ಕೆ ಬದಲಾವಣೆ ಮಾಡಲಿಲ್ಲ? ಈ ಸಣ್ಣ ನೀರಾವರಿ ಯೋಜನೆಗಳು ಮುಗಿಯಲು ೫ ರಿಂದ ೧೮ ವರ್ಷಗಳು ಹಿಡಿಯಬಹುದು. ನಮ್ಮಲ್ಲಿ ಸಣ್ಣ ನೀರಾವರಿ ಯೋಜನೆಗಳೇ ಆಗಲೀ, ದೊಡ್ಡ ನೀರಾವರಿ ಯೋಜನೆಗಳೇ

ಆಗಲಿ, ೧೯೬೭ರಲ್ಲಿ ಪ್ರಾರಂಭವಾದಂಥ ಕೆಲಸಗಳು ಇಲ್ಲಿಯವರೆಗೆ ಸಹ ಮುಗಿದಿಲ್ಲ. ಈ ಒಂದು ನಿಧಾನಗತಿ ಕಾಂಗ್ರೆಸ್ ರೂಲ್ ಇದ್ದಾಗ ಆಗಿರಬಹುದು ಅಥವಾ ತಮ್ಮ ಕಾಲದಲ್ಲಿ ಆಗಿರಬಹುದು, ಆದರೆ ನಮ್ಮ ರಾಜ್ಯದ ಇಂಜಿನಿಯರ್‌ಗಳು ಇಡೀ ರಾಷ್ಟ್ರದಲ್ಲಿ ಹಾಗೂ ಇಡೀ ವಿಶ್ವದಲ್ಲಿ ಏನು ಒಂದು ಒಳ್ಳೆಯ ಹೆಸರನ್ನು ಗಳಿಸಿದ್ದಾರೆ ಮತ್ತು ಏನು ಒಂದು ಒಳ್ಳೆಯ ಪರಂಪರೆಯನ್ನು ಸ್ಥಾಪನೆ ಮಾಡಿದ್ದಾರೆ ಆದ್ದರಿಂದ We have got to question the efficacy or the efficiency in the management of Minor Irrigation projects. ಇದನ್ನು ಸರಿಪಡಿಸುವುದಕ್ಕೆ ನೀವು ಏನಾದರು ಮಾಡಿದ್ದೀರಾ ಎಂದರೆ, ಅಂತಹ ಶುಭಲಕ್ಷಣವೇನೂ ನಮಗೆ ಕಾಣುತ್ತಿಲ್ಲ. It is going on the reverse gear. ಈ ರೀತಿ ನಿಧಾನವಾಗಿರುವ ಬಗ್ಗೆ ಅನೇಕ ಕೆಲಸಗಳ ಬಗ್ಗೆ ಒಂದು ಪಟ್ಟಿಯನ್ನೇ ಮಾಡಿ ಹೇಳಬಹುದು. ಆ ರೀತಿ ಹೇಳಲು ಹೊರಟರೆ ಇಡೀ ದಿನ ಇದರ ಮೇಲೆಯೇ ಚರ್ಚೆ ಮಾಡಬೇಕಾಗುತ್ತದೆ. It is worthwhile making a debate on the floor of the House regarding Minor Irrigation. ಈ ರೀತಿ ವಿವರವಾಗಿ ಚರ್ಚೆ ಮಾಡುವುದರ ಮೂಲಕ ನೀವು ಎಲ್ಲಿ ಎಡವಿದ್ದೀರಿ ಎಂಬುದನ್ನು ನಾವು ಕಂಡುಹಿಡಿಯಬೇಕಾಗಿದೆ? ನಮ್ಮ ರಾಷ್ಟ್ರ ಮಟ್ಟದಲ್ಲಿ ಮೈನರ್ ಇರಿಗೇಷನ್‌ಗೆ ಇರುವಷ್ಟು ಕ್ರೆಡಿಬಿಲಿಟಿ ಮೀಡಿಯಂ ಮತ್ತು ಮೇಜರ್ ಇರಿಗೇಷನ್‌ಗಳಿಗೆ ಇಲ್ಲ. ಇದೇ ಮೈನರ್ ಇರಿಗೇಷನ್ ಬಗ್ಗೆ ಶ್ರೀ ಹೋರಾ ಅವರು ಬೆಂಗಳೂರಿಗೆ ಬಂದಿದ್ದಾಗ ಒಂದು ಹೇಳಿಕೆ ಕೊಟ್ಟರು. Chairman of Water and Power Commission Mr. Hora said "In view of the Mismanagement and in view of the delayed returns we must switch over from Major and medium irrigation to the minor irrigation." ಅವರು ಬಹಳ ಜವಾಬ್ದಾರಿಯಿಂದ ಈ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಬೇಜವಾಬ್ದಾರಿಯಿಂದ ಈ ಹೇಳಿಕೆ ಕೊಟ್ಟಿದ್ದಾರೆಂದು ನಾನು ಹೇಳುವುದಿಲ್ಲ. ಏಕೆಂದರೆ, ಅವರು ತಾಂತ್ರಿಕ ತಜ್ಞರಿದ್ದಾರೆ. ಅವರು ಕರ್ನಾಟಕ ರಾಜ್ಯದ ರಾಜಧಾನಿಯಾದಂಥ ಬೆಂಗಳೂರಿಗೆ ಬಂದು ಈ ಹೇಳಿಕೆ ಕೊಟ್ಟಿದ್ದಾರೆ, ಆದ್ದರಿಂದ ಇದರ ಹಿನ್ನೆಲೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗಳ ಬಗ್ಗೆ ಅಂತಹ ಸದಭಿಪ್ರಾಯ ಇಲ್ಲ ಎಂದು ಅವರ ಮಾತಿನಿಂದ ನಾವು ಪರೋಕ್ಷವಾಗಿಯಾದರೂ ಒಪ್ಪಿಕೊಳ್ಳಬೇಕಾಗುತ್ತದೆ. execution wise ಮತ್ತು maintenance wise ನಾವು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ಹಿನ್ನೆಲೆಯಲ್ಲಿ ಅವರು ಈ ಒಂದು ಹೇಳಿಕೆ ಕೊಟ್ಟಿದ್ದಾರೆಂಬುದರಲ್ಲಿ ಯಾವ ಅನುಮಾನವೂ ಉಳಿದಿಲ್ಲ. ಈ ಕಾರಣದಿಂದಲೇ ಅವರು ಎಲ್ಲ ನೀರಾವರಿ ಯೋಜನೆಗಳನ್ನು ಮೈನರ್ ಇರಿಗೇಷನ್‌ಗೆ ಪರಿವರ್ತನೆ ಮಾಡಿ ಎಂದು ಹೇಳಿದ್ದಾರೆ. That means he has pinned his hopes on the Minor Irrigation works and he must have studied the major and medium irrigation works.

ಮುಖ್ಯವಾಗಿ ಅವರು ಸಣ್ಣ ನೀರಾವರಿ ಬಗ್ಗೆ ಸಾಕಷ್ಟು ಅಧ್ಯಯನ ಮತ್ತು ಅಭ್ಯಾಸ ಮಾಡಿದ ನಂತರವೇ ಅವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಈಗ ನೀರಾವರಿ ಯೋಜನೆಗಳ ಕೆಲಸಗಳು ಅಷ್ಟೊಂದು ತೃಪ್ತಿಕರವಾಗಿ ಆಗಿಲ್ಲ, ಲಿಫ್ಟ್ ಇರಿಗೇಷನ್ ಮೂಲಕ ಕೂಡ ನಮ್ಮಲ್ಲಿರುವ ನೀರನ್ನು ಸರಿಯಾಗಿ ಉಪಯೋಗ ಮಾಡಿಲ್ಲ. ಈ ಬಗ್ಗೆ ನಿಮಗೂ ಮತ್ತು ಕೆ.ಇ.ಬಿ. ಅವರಿಗೂ ಸರಿಯಾದ ಹೊಂದಾಣಿಕೆ ಇದೆಯೋ ಅಥವಾ ಇಲ್ಲವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಮುಖ್ಯವಾಗಿ ಸಣ್ಣ ನೀರಾವರಿ ಯೋಜನೆಗಳ ಕೆಲಸ ನಮಗೆ ಅಷ್ಟೊಂದು ತೃಪ್ತಿ ತಂದಿಲ್ಲ ಎಂದು ಹೇಳಬಹುದು. ಆದರೂ ಸಹ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ನೀವು ಚೆನ್ನಾಗಿ ನೋಡಿಕೊಂಡಿದ್ದೀರಿ. ಅವರಿಗೆಲ್ಲಾ ಚೆನ್ನಾಗಿ ಬಡ್ತಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಆದರೆ ಅವರು ಈ ಇಲಾಖೆಗೆ ಏನು ಹೆಚ್ಚಿನ ಕೊಡುಗೆ ಕೊಟ್ಟಿದ್ದಾರೆಂಬುದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ, ಅವರ ದಕ್ಷತೆಯ ಬಗ್ಗೆ ಪ್ರಶ್ನೆ ಮಾಡಬೇಕಾಗಿದೆ?

ಇನ್ನು ಎರಡನೆಯದಾಗಿ flood control measures ಬಗ್ಗೆ ನೀವು ಏನೇನು ಕ್ರಮ ತೆಗೆದುಕೊಂಡಿದ್ದೀರಿ? anti-sea erosion ಬಗ್ಗೆ ನೀವು ಕೆಲವು ಹೇಳಿಕೆಗಳನ್ನು ಕೊಟ್ಟಿದ್ದೀರಿ. ಈ ಬಗ್ಗೆ

ಬಂದರು ಇಲಾಖಾ ಮಂತ್ರಿಗಳು ಕೆಲವು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಕೆಲವು ಯೋಜನೆಗಳನ್ನು ಕೇಂದ್ರದ ಒಪ್ಪಿಗೆಗೆ ಕಳುಹಿಸಿಕೊಟ್ಟಿದ್ದೇವೆಂದು ತಾವು ಹೇಳಬಹುದು. ಇಂತಹ ಎಷ್ಟು ಪ್ರಾಜೆಕ್ಟ್‌ಗಳನ್ನು ಕೇಂದ್ರದ ಒಪ್ಪಿಗೆಗೆ ಕಳುಹಿಸಿದ್ದೀರಿ? ಅವುಗಳ ಪೈಕಿ ಎಷ್ಟಕ್ಕೆ ಒಪ್ಪಿಗೆ ಸಿಕ್ಕದೆ ಮತ್ತು ಅವರಿಂದ ಸಾಲದ ರೂಪದಲ್ಲಿ ಎಷ್ಟು ಹಣ ಬಂದಿದೆ ಮತ್ತು ಸಹಾಯಧನದ ರೂಪದಲ್ಲಿ ಎಷ್ಟು ಹಣ ಬಂದಿದೆ ಎಂಬುದನ್ನು ತಾವು ತಿಳಿಸಬೇಕು. ಕೇಂದ್ರದವರು ಕೇರಳ ರಾಜ್ಯಕ್ಕೆ ಈ ವಿಚಾರದಲ್ಲಿ ಸಾಕಷ್ಟು ಸಹಾಯ ಮಾಡಿದ್ದಾರೆ. ನಮ್ಮಲ್ಲಿ ಪ್ರತಿ ಮಳೆಗಾಲದಲ್ಲಿಯೂ ಕೂಡ ಕಡಲಿನ ಕೊರೆತದಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮುದ್ರದ ಕೊರತೆ ಬಹಳ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಹಾಗೂ ಭಯಾನಕ ಪರಿಸ್ಥಿತಿಯನ್ನು ಜನರಿಗೆ ತಂದೊಡ್ಡುತ್ತಿದೆ. ಈ ಬಗ್ಗೆ ಯೋಜನೆಗಳನ್ನು ತಯಾರಿಸಿ ಕೇಂದ್ರಕ್ಕೆ ಕಳುಹಿಸಿಕೊಡಲಾಗಿದೆ ಎಂದು ನೀವು ಹೇಳುತ್ತಿದ್ದೀರೇ ಹೊರತು ಕೆಲಸ ಮಾತ್ರ ಆಗಲಿಲ್ಲ. ಈ ಕೆಲಸಕ್ಕೆ ಕೇಂದ್ರದಿಂದ ಹಣದ ಸಹಾಯ ಪಡೆಯುವುದರ ಜೊತೆಗೆ ರಾಜ್ಯದ ಬಡ್ಜೆಟ್‌ನಲ್ಲಿ ಸಹ ಹೆಚ್ಚಿನ ಹಣವನ್ನು ಒದಗಿಸಬೇಕಾಗುತ್ತದೆ. ಆದರೆ ನೀವು ಸಾಕಷ್ಟು ಹಣ ಒದಗಿಸದ ಕಾರಣದಿಂದ ಈ ಕೆಲಸ ಬಹಳ ನಿಧಾನವಾಗಿದೆ. ಈ ಬಾಬಿಗೆ ಅಲೋಕೇಷನ್ ಜಾಸ್ತಿ ಮಾಡಿಲ್ಲ ಎಂಬುದನ್ನು ನೀವು ಖಂಡಿತವಾಗಿಯೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಇನ್ನು ರಸ್ತೆ ಮತ್ತು ಸೇತುವೆ ಬಗ್ಗೆ ಸೂಕ್ಷ್ಮವಾಗಿ ಹೇಳುತ್ತೇನೆ. ಈ ವಿಚಾರದಲ್ಲಿ ಸಹ ನೀವು ಅಂಕಿಅಂಶಗಳನ್ನು ಕೊಡುತ್ತಿದ್ದೀರೇ ಹೊರತು ಕೆಲಸ ಮಾತ್ರ ಆಗಲಿಲ್ಲ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದಾಗ ನಾವು ಈ ವಿಚಾರದಲ್ಲಿ ಮೊದಲು ಎಲ್ಲಿದ್ದೆವೋ ಈಗಲೂ ಸಹ ಅಲ್ಲಿಯೇ ಇದ್ದೇವೆ, ಮುಂದಕ್ಕೆ ಹೋಗಿಲ್ಲ ಎಂದು ಹೇಳಬಹುದು. ತಮ್ಮ ಒಂದು ಮಾಸ್ಟರ್ ಪ್ಲಾನನ್ನು ನೋಡಿದಾಗ, ಅಂತಹ ಬದಲಾವಣೆ ಏನೂ ಆಗಲಿಲ್ಲ. ಈ ಕೆಲಸಗಳಿಗೆ ನೀವು ಇಟ್ಟಿರುವ ಹಣ ಸಹ ಕಡಿಮೆ, ಇದಕ್ಕೆ ಇಟ್ಟಿದ ಹಣವನ್ನು ನೀವು ಬೇರೆ ಕೆಲಸಗಳಿಗೆ ಉಪಯೋಗ ಮಾಡುತ್ತಿರಬಹುದು. There is total immobility so far as Master Plan is concerned,

ಬಡ್ಜೆಟ್ ಪ್ರಾವಿಜನ್‌ನಲ್ಲಿ ಇರಿಗೇಷನ್ ಹೆಚ್ಚು ಹಣವನ್ನು ಕೊಟ್ಟಿದ್ದೀರೇ ಹೊರತು ರಸ್ತೆ ಮತ್ತು ಸೇತುವೆಗಳ ಕೆಲಸಕ್ಕ ಹೆಚ್ಚು ಹಣವನ್ನು ಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ, ೧೯೮೩-೮೪ ರಲ್ಲಿ ರಸ್ತೆಗಳಿಗೆಂದು ೩೨.೮೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ೧೯೮೫-೮೬ರಲ್ಲಿ ಕೇವಲ ೨೪-೪೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅಂದರೆ ಸುಮಾರು ೮ ಕೋಟಿ ರೂಪಾಯಿಗಳಷ್ಟು ಕಡಿಮೆ ಆಗಿದೆ. ಆದರೂ ನೀವು ರಸ್ತೆ ಸೇತುವೆಗಳ ಕೆಲಸಗಳಿಗೆ ರಂಗುರಂಗಿನ ಹೆಸರುಗಳನ್ನು ಕೊಟ್ಟಿದ್ದೀರಿ. ಅನೇಕ ರಸ್ತೆ ಮತ್ತು ಸೇತುವೆಗಳ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಲಾಗಿದೆ ಎಂದು ನಿಮ್ಮ ಪಕ್ಷದವರು ಹೇಳಿಕೆಗಳನ್ನು ಕೊಟ್ಟಿದ್ದೇ ಕೊಟ್ಟಿದ್ದು. ಸೇತುವೆಗಳ ಕೆಲಸಕ್ಕೆ 'ಸೇತುಬಂಧನ' ಎಂಬ ಹೊಸ ಹೆಸರನ್ನು ಕೊಟ್ಟಿದ್ದೀರಿ. ನಾವು ಸಹ ಹೆಸರುಗಳನ್ನು ಕೊಡುತ್ತಿದ್ದೆವು ಮತ್ತು ಕೆಲಸಗಳನ್ನು ಸಹ ಮಾಡುತ್ತಿದ್ದೆವು, ಆದರೆ ನಿಮ್ಮ ಕಾಲದಲ್ಲಿ ಹೆಸರು ಕೊಡುತ್ತಿದ್ದೀರೇ ಹೊರತು ಕೆಲಸ ಮಾತ್ರ ಏನೂ ಆಗುತ್ತಿಲ್ಲ. ನಿಮ್ಮ ಕಾಲದಲ್ಲಿ ನಾಮಕರಣ ಆಗಿದೆ. ಆದರೆ ಮಗು ಮಾತ್ರ ಕಾಣುತ್ತಿಲ್ಲ. ಇಲ್ಲಿ ೮ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿರುವುದರಿಂದ, ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಟ್ಟದ್ದೇವೆ, ಆದ್ದರಿಂದ ರಸ್ತೆಗಳ ಕೆಲಸ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿಬಿಡಿ. ನೀವು ಅನೇಕ ರಸ್ತೆಗಳ ಕೆಲಸಗಳನ್ನು ತೆಗೆದುಕೊಳ್ಳುವುದಾಗಿ ಒಂದು ಪಟ್ಟಿ ಮಾಡಿದ್ದೀರಿ. ಆ ಕೆಲಸಗಳಿಗೆ ಆಡಳಿತಾತ್ಮಕವಾದ ಒಪ್ಪಿಗೆಯನ್ನು ಸಹ ಕೊಟ್ಟಿದ್ದೀರಿ. ಆದರೆ ಕೆಲಸ ಮಾತ್ರ ನಡೆದಿಲ್ಲ. ಇದರಿಂದ ನಾವು ಯಾವುದನ್ನೂ ನಂಬದ ಪರಿಸ್ಥಿತಿಗೆ ಬಂದಿದ್ದೇವೆ. ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ಅಲ್ಲಿನ ಜನರಿಗೆ ಇಂತಿಂಥ ಕೆಲಸಗಳು ಬಡ್ಜೆಟ್‌ನಲ್ಲಿ ಸೇರಿದೆ ಎಂದು ಹೇಳುತ್ತೇವೆ. ಮುಂದೆ ಆ ಕೆಲಸಗಳು ಆಗದಿದ್ದರೆ ನಾವು ಮತ್ತೆ ಅಲ್ಲಿಗೆ ಹೋಗಿ ಆ ಜನರಿಗೆ ನಮ್ಮ ಮುಖ ತೋರಿಸುವುದಕ್ಕಾಗುವುದಿಲ್ಲ.

Because it will be a false Statement. ಆ ರೀತಿ ಇದನ್ನು ಮಾಡಿದ್ದೀರಿ. ೧೯೮೬-೮೭ ನೇ ಸಾಲಿಗೆ ೩೧-೪೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಆದರೆ ಇದನ್ನು ಹೇಗೆ ಖರ್ಚು ಮಾಡುತ್ತಿರೋ ಎಂಬುದನ್ನು ಮುಂದೆ ನೋಡಬೇಕಾಗುತ್ತದೆ. ಪೇಜ್ ೧೮, ಟೇಬಲ್ ೧೦ ರಲ್ಲಿ ಕರ್ನಾಟಕದ ಬಜೆಟ್ ಪಿಕ್ಚರ್ ಹೀಗಿದೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರೋಡ್ಸ್ ಮತ್ತು ಬ್ರಿಡ್ಜಸ್‌ಗಳಿಗೆ ೧೯೮೦–೮೧ ರಲ್ಲಿ ೧೦.೬೪ ಪರ್‌ಸೆಂಟ್ ಕಾಂಟ್ರಿಬ್ಯೂಷನ್ ಇತ್ತು, ಅದೇ ೧೯೮೫–೮೬ರಲ್ಲಿ ೭.೬೦ಕ್ಕೆ ಇಳಿದಿದೆ. ಇದು ನಿಮ್ಮ ರೆಕಾರ್ಡ್‌ನಲ್ಲಿಯೇ ಇದೆ. ನೀವು ರಂಗು ರಂಗಿನ ಮಾತನ್ನು ಆಡುತ್ತೀರಿ, ನಾವು ಮಾಡಿರುವಂಥ ಕೆಲಸವನ್ನು ಇಡೀ ಪ್ರಪಂಚದಲ್ಲೇ ಯಾರೂ ಮಾಡಿಲ್ಲ, ಇಡೀ ದೇಶದಲ್ಲೇ ಯಾರು ಮಾಡಿಲ್ಲ ಎನ್ನುವ ಮಾತನ್ನು ಹೇಳುತ್ತೀರಿ. ರಂಗು ರಂಗಾಗಿ ಹೇಳುವಂಥ ಕಲೆಯನ್ನು ನೀವು ಸಾಧಿಸಿಕೊಂಡಿದ್ದೀರಿ. ರೋಡ್ಸ್‌ಗಳಿಗೆ ೧೯೮೦–೮೧ರಲ್ಲಿ ೧೦.೬೪ ಕೋಟಿ ರೂಪಾಯಿಗಳಿದ್ದರೆ ಅದು ೧೯೮೫–೮೬ಕ್ಕೆ ೭.೬೦ಕ್ಕೆ ಇಳಿದಿದೆ. ಇದು ಯಾರ ದೋಷ ? ಯಾವುದೇ ಕ್ಷೇತ್ರದಲ್ಲಿ ನೋಡಿದರು ಸಹ ಏನೂ ಕೆಲಸ ಆಗಿಲ್ಲ. ನೀರಾವರಿ ಬಗ್ಗೆಯೂ ಏನೂ ಆಗಿಲ್ಲ. ನೀವು ಸರಿಯಾಗಿ ಕೆಲಸ ಮಾಡುತ್ತಿದ್ದೀರೋ ಇಲ್ಲವೋ ಎಂಬುದನ್ನು ಪರಿಕ್ಷೆ ಮಾಡುವುದಕ್ಕೆ ಒಂದು ಸಂಸ್ಥೆಯನ್ನು ಮಾಡಬೇಕಾಗುತ್ತದೆಯೋನೋ ಗೊತ್ತಿಲ್ಲ. ಮುಖ್ಯ ಮಂತ್ರಿಯವರು, ಮಾನ್ಯ ಸದಸ್ಯರಾದ ಮೋಯಿನುದ್ದೀನ್ ಅವರ ನೇತೃತ್ವದಲ್ಲಿ ಒಂದು ಸಂಸ್ಥೆಯನ್ನು ತಯಾರು ಮಾಡಿದ್ದಾರೆ. ಅದರ ಕೆಲಸ ಏನು ಎಂದರೆ, ಟಿಪ್ಪೂ ಸುಲ್ತಾನ್‌ನ ಬಗ್ಗೆ ವರದಿಯನ್ನು ತಯಾರಿಸುವುದು. ಲಾರ್ಡ್ ವೆಲ್ಲೆಸ್ಲಿ ಇದ್ದ, ಅವನು ಮಹಾ ಶೂರ, ವೀರಾಧಿ ವೀರನಾದ ಟಿಪ್ಪೂ ಸುಲ್ತಾನನ್ನು ಹೇಗೆ ಕೊಂದ? ಟಿಪ್ಪೂ ಸುಲ್ತಾನನ ಮಕ್ಕಳು ಏನಾದರು ? ಅವರ ಮಕ್ಕಳನ್ನು ಯಾರು ಕೊಂದರು ಎಂಬ ಬಗ್ಗೆ ಅವರು ವರದಿ ತಯಾರು ಮಾಡುತ್ತಿದ್ದಾರೆ. ಈ ಸಂಸ್ಥೆಗೆ ನಮ್ಮ ಮುಖ್ಯ ಮಂತ್ರಿಯವರು ೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಸಂಸ್ಥೆಯ ತರಹವೇ ನಿಮ್ಮ ಸರ್ಕಾರ ಕೆಲಸ ಮಾಡಿಸುತ್ತಿರುವ ಬಗ್ಗೆ ವರದಿ ತಯಾರು ಮಾಡಲು ಇನ್ನೊಂದು ಸಂಸ್ಥೆಯನ್ನು ತಯಾರು ಮಾಡಿ ಅದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಬಹಳ ಒಳ್ಳೆಯದು. ಇಂತಹ ನಿಕೃಷ್ಟ ಕೆಲಸ ಮಾಡುವಂಥ ಪರಿಸ್ಥಿಗೆ ಇವತ್ತು ಸರ್ಕಾರ ಬಂದಿದೆ. ಇನ್ನು ನಾನ್ ಡೆವಲಪ್ ಮೆಂಟ್ ಎಕ್ಸ್‌ಪೆಂಡೇಚರ್ಸ್ ಬಗ್ಗೆ ನೋಡುವುದಾದರೆ, ಅದು ಪೇಜ್ ೨೧ ರಲ್ಲಿ ಹೀಗಿದೆ. ೧೯೮೦–೮೧ರಲ್ಲಿ ನಾನ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ೧.೫೬ ಇದ್ದರೆ, ಈಗ ಅದು ೩.೫ ಆಗಿದೆ. ಅಂದರೆ ಕಡಿಮೆ ಪ್ರಮಾಣದಲ್ಲಿ ಮಾತ್ರ ಹೆಚ್ಚಾಗಿದೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, It has become a maintenance department practically for the officers and not for the works. ಪಬ್ಲಿಕ್ ಎಂದು ಇರುವುದನ್ನು ತೆಗೆದುಹಾಕಿ, ಆಫೀಸರ್ಸ್ ಸರ್‌ವೀಸಿಂಗ್ ಡಿಪಾರ್ಟ್‌ಮೆಂಟ್ ಅಥವಾ ಆಫೀಸರ್ಸ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಅಂದರೆ O.W.D. ಎಂದು ಇಡಬೇಕಾಗುತ್ತದೆ. ಆ ಪರಿಸ್ಥಿತಿಗೆ ಇವತ್ತು ಈ ಇಲಾಖೆ ಬಂದು ನಿಂತಿದೆ. ರೋಡ್ಸ್‌ಗಳ ಕೆಲಸಕ್ಕೆ ಹಣವನ್ನು ಸರಿಯಾದ ಪ್ರಮಾಣದಲ್ಲಿ ಇನ್‌ಕ್ರೀಸ್ ಮಾಡಿಲ್ಲ. ಗ್ರೋತ್ ರೇಟ್ ಬಹಳ ಕಡಿಮೆಯಾಗಿದೆ ಎಂದು ನೋಡಿದಾಗ ಗೊತ್ತಾಗುತ್ತದೆ. ಇನ್ನು ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ಸ್ ಬಗ್ಗೆ ಹೇಳುವುದಾದರೆ, ೧೯೮೦–೮೧ ರಲ್ಲಿ ೫.೨೨ ಇದ್ದರೆ ೧೯೮೬–೮೭ ರಲ್ಲಿ ೪.೮೭ಗೆ ಇಳಿದಿದೆ. ಹೆಚ್ಚು ಮಾಡುವ ಬದಲು ಕಡಿಮೆ ಮಾಡಿದ್ದಾರೆ. ಒಟ್ಟಾರೆ ಇದರ ಬಗ್ಗೆ ಹೇಳುವುದಾದರೆ, ಇದು ನೆಗೆಟೀವ್ ಆಗಿದೆ. ಇನ್‌ಕ್ರೀಸ್ ಏನೇನೂ ಇಲ್ಲ. ಇವರು ಸಾಧನೆ ಮಾಡಿರುವುದು ಅತ್ಯಂತ್ಯ ಕಡಿಮೆಯಾಗಿದೆ. ಇವರ ಸಾಧನೆ ಹಿಂದೆ ಹೋಗುತ್ತಿದೆ ಎಂದು ಹೇಳುವುದಕ್ಕೆ ಯಾವ ಅನುಮಾನವೂ ಇಲ್ಲ. ಇನ್ನೂ ಒಂದು ಪಟ್ಟಿ ಇದೆ. ಅದರಲ್ಲಿ ಆಲ್‌ವೇದರ್ ರೋಡ್ಸ್ ಬಗ್ಗೆ ಹೇಳಿದ್ದಾರೆ. ಆಲ್ ವೆದರ್ ರೋಡ್ಸ್ ೧೯೮೨–೮೩ ರಲ್ಲಿ ೨೭ ಪರ್‌ಸೆಂಟ್ ಇದ್ದದ್ದು ೧೯೮೬ಕ್ಕೆ ೩೧ ಪರ್‌ಸೆಂಟ್ ಆಗಿದೆ. ಅಂದರೆ ೪ ಪರ್‌ಸೆಂಟ್ ಮಾತ್ರ ಜಾಸ್ತಿಯಾಗಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. There is a small improvement of 4%. It is practieally in the 6 th Five year Plan and so you cannot put a claim on that. There is equal contribution. ಕಚ್ಚಾ ರೋಡ್ಸ್‌ಗಳ ಬಗ್ಗೆ ಹೇಳುವುದಾದರೆ, ೧೯೮೨ರಲ್ಲಿ ೪೩ ಪರ್ ಸೆಂಟ್ ಇದ್ದದ್ದು ೧೯೮೬ರಲ್ಲಿ ೪೨ ಪರ್‌ಸೆಂಟಿಗೆ ಇಳಿದಿದೆ. ಅಂದರೆ ೧ ಪರ್‌ಸೆಂಟ್ ಕಡಿಮೆಯಾಗಿದೆ. Not connected with any road. There is a small improvement. ನಿಮ್ಮ ಮಾಸ್ಟರ್ ಪ್ಲಾನ್‌ನಲ್ಲಿ ಏನಾಗಿದೆ ಎಂದರೆ, ೧೯೮೨ರಲ್ಲಿ ೮೧೮ ಕೋಟಿ ರೂಪಾಯಿಗಳು ಇದ್ದರೆ ೧೯೮೬ನೇ ಇಸವಿಯಲ್ಲಿ ೯೪೯ ಕೋಟಿ ರೂಪಾಯಿಗೆ ರಿವೈಸ್ ಮಾಡಿದ್ದೀರಿ. ನಿಮ್ಮ ಪ್ಲಾನ್‌ನಲ್ಲಿ ಇನ್ನೂ ಹೆಚ್ಚು ಆಗುವುದೇ ಇಲ್ಲ. It has become a permanent feature. ಇದರಿಂದ ಗ್ರಾಮಾಂತರ ಪ್ರದೇಶಗಳಿಗೆ ಏನೇನು ಪ್ರಯೋಜನವಾಗುವುದಿಲ್ಲ. ತಾವುಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಏನೇನೋ ಹೆಸರುಗಳನ್ನು ಕಾರ್ಯಕ್ರಮಗಳಿಗೆ ಇಡುತ್ತೀರಿ. ಅದರಲ್ಲಿ 'ಸೇತುಬಂಧ' ಎನ್ನುವ ಕಾರ್ಯಕ್ರಮವು ನಿಮ್ಮ ಯೋಜನೆಯಲ್ಲಿ ಸೇರಿದೆ. ನೀವು ಹೆಸರನ್ನು ಕೊಡುತ್ತೀರೇ ವಿನಃ ಅದರಂತೆ

ನೀವು ಕಾರ್ಯವನ್ನು ಮಾಡುತ್ತಿದ್ದೀರಿ ಎಂದು ಗೊತ್ತಾಗುವುದಕ್ಕೆ ಒಂದು ಇಂಡಿಕೇಟರ್ ಸಹ ಇಲ್ಲದಾಗಿದೆ. ರೂರಲ್ ಏರಿಯಾ ಸುಮಾರು ೯೮ ಪರ್‌ಸೆಂಟ್ ಇದೆ ಎಂದು ತಮ್ಮ ವರದಿಯಲ್ಲಿ ಹೇಳುತ್ತೀರಿ, ಆದರೆ ಈ ರೂರಲ್ ಏರಿಯಾಗಳಲ್ಲಿ ರಸ್ತೆಗಳನ್ನು ಮಾಡುವುದಕ್ಕೆ ಹಣವನ್ನೇ ನೀವು ಸರಿಯಾಗಿ ಇಡುವುದಿಲ್ಲವೆಂದರೆ ಹೇಗೆ? ೧೯೮೪-೮೫ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುವುದಕ್ಕೆ ೯೧.೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇಷ್ಟು ಕಡಿಮೆ ಹಣದಿಂದ ನಮ್ಮ ರಾಜ್ಯದಲ್ಲಿ ಇರುವ ೯೮ ಪರ್‌ಸೆಂಟ್ ರೂರಲ್ ಏರಿಯಾದಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ಮಾನ್ಯ ನಜೀರ್‌ಸಾಬ್‌ರವರು, ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿ ಮಾಡುತ್ತಿದ್ದೇವೆಂದು ಹೇಳುತ್ತಲೇ ಇರುತ್ತಾರೆ. ಆದರೆ ಅಭಿವೃದ್ಧಿ ಮಾತ್ರ ಆಗಲಿಲ್ಲ. ಅನೇಕ ಬೃಹತ್ ಯೋಜನೆಗಳನ್ನು ತಯಾರು ಮಾಡಿ ಕೇಂದ್ರದವರು ಸಾಕಷ್ಟು ಧನ ಸಹಾಯವನ್ನು ಮಾಡಿದರೂ ಸಹ ರಾಜ್ಯ ಸರ್ಕಾರ ಸರಿಯಾಗಿ ಹಣವನ್ನು ಬಿಡುಗಡೆ ಮಾಡಿರುವುದನ್ನು ನಾನು ಕಂಡಿಲ್ಲ. ಅನೇಕ ಯೋಜನೆಗಳ ಹಣ ಈಗಾಗಲೇ ಲ್ಯಾಪ್ಸ್ ಆಗಿಹೋಗಿ, ಆರ್.ಎಲ್.ಇ.ಜಿ.ಪಿ. ಯೋಜನೆಯಲ್ಲಿ ಸರಿಯಾಗಿ ಕೆಲಸಗಳನ್ನೇ ಮಾಡಿಸಿಲ್ಲ. ಎಂ.ಎನ್.ಪಿ ರಸ್ತೆಗಳಿಗೆ ಕೇಂದ್ರ ಸರ್ಕಾರ ಹಣವನ್ನು ನೀಡುತ್ತದೆ. ನನ್ನ ಕಾನ್ಸ್ಟಿಟ್ಯೂಯೆನ್ಸಿಯಲ್ಲೂ ಒಂದು ಎಂ. ಎನ್. ಪಿ. ರಸ್ತೆ ಇದೆ. ಈ ರಸ್ತೆಯು ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ಸ್ಯಾಂಕ್ಷನ್ ಆಗಿದ್ದು. ಆದರೆ ಇದು ಇನ್ನೂ ಪೂರ್ತಿಯಾಗಿಲ್ಲ. ಅರ್ಧ ಫರ್ಲಾಂಗ್ ಕೆಲಸ ಉಳಿದಿದೆ. ಈ ಅರ್ಧ ಪರ್ಲಾಂಗ್ ಜಾಗವನ್ನು ಅಕ್ವೈಯರ್ ಮಾಡಿಕೊಂಡು ಕೆಲಸ ಪೂರ್ತಿ ಮಾಡುವುದಕ್ಕೆ ಈ ಸರ್ಕಾರದವರಿಂದ ಇನ್ನೂ ಆಗಿಲ್ಲ.

೧೨-೩೦ ಪಿ.ಎಂ.

ಮೂರು ವರ್ಷಗಳು ಆಯಿತು, ನಿಮ್ಮ ವಿಲ್‌ಪವರ್ ಎಲ್ಲಿ ಹೋಯಿತು? ನಾನು ಕೇಳುತ್ತಾ ಇದ್ದೇನೆ, ನಿಮ್ಮ ಮನಸ್ಸಿಗೆ ಬಂದಂತೆ ಮಾಡುತ್ತಾ ಇದ್ದೀರಿ. ಅರ್ಧ ಫರ್ಲಾಂಗ್‌ನ ಕೆಲಸ ಆಗಬೇಕಾಗಿತ್ತು ಅದನ್ನು ಮಾಡಬೇಕಾದರೆ ಇವರಿಗೆ ಮೂರು ವರ್ಷಗಳು ಬೇಕೇ? ಹಾಗಾದರೆ ಎಷ್ಟರಮಟ್ಟಿಗೆ ಇವರ ಧೈರ್ಯ ಇದೆ ಎಷ್ಟರಮಟ್ಟಿಗೆ ಇವರಿಗೆ ಕೆಲಸ ಮಾಡತಕ್ಕಂತಹ ಮನಸ್ಸು ಇದೆ ಎಂಬುದು ವೇದ್ಯವಾಗುತ್ತದೆ. ನಾನು ಅಂತಹ ಬೇಕಾದಷ್ಟು ಉದಾಹರಣೆಗಳನ್ನು ಉದಹರಿಸಬಹುದು. ಈ ವಿಚಾರವಾಗಿ ನಾನು ಕರ್‌ಸ್ಪಾಂಡೆನ್ಸ್ ಮಾಡಿ ಮಾಡಿ ಸೋತು ಹೋಗಿದ್ದೇನೆ. ಈಗ ಫ್ರೆಶ್ ವರ್ಕ್ಸ್ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ ಇದರ ಬಗ್ಗೆ ತಾವು ಈ ಸಾರಿ ಶಾಸಕರನ್ನು ನಿರಾಶೆ ಮಾಡಬಾರದು ಎಂದು ಮಾಡಿದ್ದೀರಿ. ಇದರಲ್ಲಿ ಅನುಭಂದ 'ಇ' ನಲ್ಲಿ ಇದನ್ನು ಬಜೆಟ್ ಡಾಕ್ಯುಮೆಂಟ್ಸ್‌ನಲ್ಲಿ ಕೊಟ್ಟಿದ್ದೀರಿ, This has got a sanctity. ಇದೊಂದು ಹೊಸದು ನಮ್ಮ ಕಡೆ ಕಳುಹಿಸಿದ್ದೀರಿ. ಅನೆಕ್ಸರ್ 'ಇ' ಗೆ ನಾವು ಪ್ರಿವಿಲೇಜ್ ಮೋಷನ್ ಮೂವ್ ಮಾಡುವ ಮಟ್ಟಕ್ಕೆ ಹೋಗುವುದಿಲ್ಲ. ಆದರೆ ಅದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ ಇವೆಲ್ಲ ಹೊಸ ವರ್ಕ್ಸ್‌ಗಳು ಆಗಿವೆ. ಇದನ್ನು ಹೇಳಬೇಕಾಗುತ್ತದೆ. ಈಗ ನಿನ್ನೆ ನಮಗೆ ಟಪಾಲಿನಲ್ಲಿ ಇದು ಬಂತು, ಬಜೆಟ್‌ನಲ್ಲಿ ಇದ್ದುದೆಲ್ಲಾ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಗಮನಕ್ಕೆ ಹೋಗಿದೆಯೋ ಇಲ್ಲವೂ ಎಂಬುದು ನಮಗೆ ಗೊತ್ತಿಲ್ಲ. How it could have been inserted? Any way it is not a part of the original document. ಅದನ್ನು ವಿಚಾರ ಮಾಡಬೇಕು. ಏಕೆಂದರೆ ಬಜೆಟ್ ಡೊಕ್ಯುಮೆಂಟ್ ಎಂದಮೇಲೆ ಅದಕ್ಕೆ ಒಂದು ನಿಯಮ ಇದೆ. ಆಯಾಯಾ ಇಲಾಖೆಗಳು ಹೀಗೇಯೇ ಮಾಡುತ್ತಾ ಹೋದರೆ ಮುಂದೆ ಹೇಗೆ ಆದೀತು? ಅದೇ ದಿವಸ ತಯಾರು ಮಾಡಿ, ಅದೇ ದಿವಸ ಕೊಟ್ಟಿದ್ದರೆ ನನ್ನ ಅಬ್ಜಕ್ಷನ್ ಇರುತ್ತಿರಲಿಲ್ಲ. If it is given only yesterday...it amounts to that. It it a part of this document, ಬಜೆಟ್ ಅಕೌಂಟಿಂಗ್ ಇದೆ. Finance Minister, why he should deliver the budget speech. The Social Welfare Minister could deliver his speech or the Industries Minister ಫೈನಾನ್ಸ್ ಮಂತ್ರಿಯವರ ಬದಲಾಗಿ ಕೈಗಾರಿಕಾ ಮಂತ್ರಿಗಳು ಭಾಷಣ ಮಾಡಬಹುದು. ಫೈನಾನ್ಸ್ ಮಂತ್ರಿಯವರು ಭಾಷಣ ಮಾಡತಕ್ಕಂತಹ ಅವಶ್ಯಕತೆ ಯಾದರೋ ಏನು ಇದೆ? ಅಧ್ಯಕ್ಷರೆ, ಹೊಸ ವರ್ಕ್ಸ್ ಬಗ್ಗೆ ನಾವು ಕೇಳುತ್ತಾ ಇರುವುದಕ್ಕೆ ನಮಗೆ ಉತ್ತರ ಬೇಕಾಗಿದೆ, ಅಡೆಂಡಮ್‌ನಲ್ಲಿ ಕೆಲಸಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ ಅಷ್ಟು ಇಲ್ಲಿ ಕೊಟ್ಟಿಲ್ಲ. There is adquate provision in the

budget. Nearly one third you have provided in this fresh paper which was circulated to us. ಇದರಲ್ಲಿ ವರ್ಕ್ಸ್‌ಗಳನ್ನು ಯಾವುದು ಕೊಟ್ಟಿದ್ದೀರಿ. ಅದರಲ್ಲಿ ಯಾರ್ಯಾರ ಕ್ಷೇತ್ರಕ್ಕೆ ಅವುಗಳು ಹೋಗಿವೆ ಎಂಬ ಬಗ್ಗೆ, ನಾನು ಅಸೂಯೆ ಪಡುವುದಿಲ್ಲ. ಕೆಲವು ಸಾರಿ ನಮ್ಮ ನಮ್ಮ ಕಡೆಯಲ್ಲಿ ಅಧಿಕಾರ ಇರುವಾಗ ನಾವು ಸಂಬಂಧಪಟ್ಟವರು ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತೇವೆ. you are entitled. That opportunity. We can always avail, I am not finding fault. ಅದರೆ ಇದರಲ್ಲಿ ಒಂದು ಉದಾಹರಣೆಗೆ ಹೇಳುವುದಾದರೆ. ಚಾಮರಾಜನಗರ ಡಿವಿಜನ್‌ಗೆ ಮೂರು ಲಕ್ಷ ರೂಪಾಯಿಗಳನ್ನು ಎಸ್ಟಿಮೇಟ್ ಕಾಸ್ಟ್ ಮಾಡಿ ಒಂದು ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಅಲ್ಲಿ ನಿಷ್ಪಕ್ಷಪಾತವಾಗಿ ಕಾಣುವುದಿಲ್ಲ. one third provision has been made. I have got to say. It looks as if it is a partisan attitude ಇದರಲ್ಲಿಯೂ ಕೂಡಾ ಅಷ್ಟೇ, ಆಪ್ರೋಚ್ ಲೋಡ್ ಮಂಡ್ಯದಲ್ಲಿ ನಾಲ್ಕು ಲಕ್ಷ ಐವತ್ತು ಸಾವಿರ ಬಜೆಟ್ ಎಸ್ಟಿಮೇಟ್ ಇದ್ದರೆ, ಒಂದು ಲಕ್ಷ ೫೦ ಸಾವಿರ ರೂ.ಗಳನ್ನು ಕಾಣಿಸಲಾಗಿದೆ. ಇದರ ಬಗ್ಗೆ ನಾವು ಮಾನ್ಯ ದೇವೇಗೌಡರವರ ಹತ್ತಿರ ಮಾತನಾಡತಕ್ಕಂತಹ ಅವಶ್ಯಕತೆ ಇಲ್ಲ ಎಂದು ಕಾಣುತ್ತದೆ. ಅದೇ ತರಹ ಅಡೆಂಡಮ್‌ನಲ್ಲಿ ಕೊಟ್ಟಿರತಕ್ಕಂತಾದ್ದು ಬಹಳ ಸ್ವಾರಸ್ಯಕರವಾಗಿದೆ. Administrative Approval can be granted immediatley. The department has been made and I must say this is an illegitimate document. It is a total gross violation of the budgetary control of this House. Will have to exercise over the department. Either they must withdraw it. ತಾವು ಮತ್ತೆ ಸಪ್ಲಿಮೆಂಟರಿ ಬಜೆಟ್ ತರಬಹುದು. ಗೌರ್ನಮೆಂಟ್ ಕ್ಯಾನ್ ಸ್ಯಾಂಕ್ಷನ್ ರೋಡ್ಸ್. ಆದರೆ ಬಜೆಟ್ ಸಂದರ್ಭದಲ್ಲಿ ಈ ವರ್ಕ್ಸ್‌ಗಳಿಗೆ ಕೊಟ್ಟಂತಹ ಹಣವನ್ನು ಅಪಹರಿಸಿ ಹೊಸ ಲಿಸ್ಟ್‌ನ್ನು ಪ್ರಾರಂಭ ಮಾಡಿದ್ದೀರಿ ಅಂದರೆ ತಪ್ಪಾಗುವುದಿಲ್ಲ. ಹಾಗಾದರೆ ಏನಾಗಿದೆ ಇದರಲ್ಲಿ ಯಾವ ತರಹ ಹಣವನ್ನು ಪ್ರೊವೈಡ್ ಮಾಡಿದ್ದೀರಿ ಅದನ್ನು ತೋರಿಸುತ್ತೇನೆ. ಇದರಲ್ಲಿ ರೋಡ್ಸ್‌ಗಳೂ ಕೂಡಾ ಇವೆ. ಉದಾಹರಣೆಗೆ ಹೇಳುವುದಾದರೆ ಎಸ್ಫಾಲ್ಟಿಂಗ್ ಆಫ್ ರೋಡ್ಸ್... ಮೂರು ಲಕ್ಷ ರೂ.ಗಳ ಪ್ರೊವಿಷನ್ ಇಟ್ಟಿದ್ದೀರಿ, ೬೫ ಸಾವಿರ ರೂ.ಗಳನ್ನು ಕೊಟ್ಟಿದ್ದಾರೆ. ಐದು ಲಕ್ಷ ಪ್ರೊವಿಷನ್ ಮಾಡಿ ೭೫ ಸಾವಿರ ಕೊಟ್ಟಿದ್ದಾರೆ. ಪುಟ ೭೫ರಲ್ಲಿ ಇದನ್ನು ತಾವುಗಳ ನೋಡಬಹುದು ಐಟಮ್ ನಂಬರ್ ಆರರಲ್ಲಿ ೮ ಲಕ್ಷ ಇದ್ದರೆ, ೧ ಲಕ್ಷದ ೨೦ ಸಾವಿರ ಕೊಟ್ಟಿದ್ದಾರೆ. None of these works can be granted the administrative approval ಅಪ್ರೂವಲ್ ಕೊಡಲಿಕ್ಕೆ ಆಗುವುದಿಲ್ಲ. reappropriation will have to be done. ಇಲಾಖೆಗೆ ಬರಬೇಕು, ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ವಿಮರ್ಶೆ ಆಗಬೇಕು, ಒಂದು ವೇಳೆ ಅದನ್ನು ಮಾಡತಕ್ಕಂತಹ ಛಲ ತಮಗೆ ಇರಬಹುದು. your intention may be better but there is no adequate provision at all. ಇದು ಮಂಗಳೂರಿಗೆಸಂಬಂಧಪಟ್ಟಂಥಾದ್ದು ಇರಬಹುದಾದರೆ, ಉಡುಪಿಗೆ ಸಂಬಂಧಪಟ್ಟಿರುವುದು ಪುಟ ೭೬ರಲ್ಲಿ ಇದೆ. ಎಲ್ಲಾ ಕಡೆಗಳಲ್ಲಿಯೂ ಕೂಡಾ ಅನ್ವಯ ಆಗುತ್ತದೆ. ಒಂದು ಲಕ್ಷದ ೫೦ ಸಾವಿರಕ್ಕೆ ೨೨ ಸಾವಿರ ಪ್ರೊವಿಷನ್ ಮಾಡಿದ್ದಾರೆ. There is exception. Improvements to selected reacher. ಎಂದು ಹೇಳುತ್ತೇನೆ ಕೆಲವು ಐಟಮ್ ಕೊಟ್ಟಿದ್ದೀರಿ, ಉಡುಪಿ ಡಿವಿಜನ್‌ಗೆ ಕೂಡಾ There is not even a single item as I could see where there is adequate provision or 1/3 provision to to take up that work in this year. ಒಂದು ಸಾವಿರ ಕೊಡುವುದನ್ನು ಜಾಸ್ತಿ ಮಾಡಿರಬಹುದು. that is different matter, Even in some of the bridge work. ನಾನು ಒಂದು ಸಂತೋಷಪಡುವಂತಹ ವಿಷಯ ಎಂದರೆ ಮಾನ್ಯ ಸಚಿವರು ಮೂರು ಬ್ರಿಜ್‌ಗಳನ್ನು ಇದರಲ್ಲಿ ಸೇರಿಸಿದ್ದಾರೆ. ನಾನು ನಾಲ್ಕು ವರ್ಷಗಳಿಂದ ಇವುಗಳ ಬಗ್ಗೆ ಪ್ರಯತ್ನ ಮಾಡುತ್ತಾ ಇದ್ದೆ. ಆದರೆ ಇಲ್ಲಿಯೂ ಅಡಿಕ್ವೇಟ್ ಪ್ರೊವಿಷನ್ ಇಲ್ಲ. ೮ ಲಕ್ಷ ರೂ.ಗಳಿಗೆ ೧ ಲಕ್ಷ ೨೦ ಸಾವಿರ ರೂ.ಗಳು ಕಾಣಿಸಿದ್ದಾರೆ. ಯಾವುದೇ ಕೆಲಸ ಇದ್ದರೂ ಕೂಡಾ ಅವುಗಳಿಗೆ ಒಂದು ಅಡಿಕ್ವೇಟ್ ಪ್ರೊವಿಷನ್ ಇರಬೇಕಾಗುತ್ತದೆ ಅದನ್ನು ಹೇಳ ಬೇಕಾಗುತ್ತದೆ. ತಾವು ಏನು ಕೆಲಸಗಳನ್ನು ತೆಗೆದುಕೊಳ್ಳುತ್ತೀರಿ ಆ ಕೆಲಸಗಳು ಇವೊತ್ತು ಆಗುತ್ತವೆ ಎಂದು ನಮಗೆ ನಂಬಿಕೆ ಬರುವುದಿಲ್ಲ. ಏಕೆಂದರೆ ಎರಡು ಮೂರು

ವರ್ಷಗಳಿಂದ ನಮಗೆ ಬಂದ ಅನುಭವದ ಪ್ರಕಾರ ಹಿಂದೆ ಏನು ಮಂಜೂರು ಆಗಿತ್ತು ಅದು ಈಗ ಇನಾಗ್ಯುರೇಶನ್ ಆಗುತ್ತದೆ. ಆದರೆ ಮೂರು ವರ್ಷಗಳಿಂದ ನಾವು ಕಾಣುತ್ತಾ ಇದ್ದೇವೆ, ನಿಮ್ಮ ವರ್ಕ್ಸ್ ಕಾಣುತ್ತಾ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಹೆಬ್ರಿಯಲ್ಲಿನ ಒಂದು ಕಾಲೇಜಿಗೆ ನಾಲ್ಕು ವರ್ಷದ ಹಿಂದೆ ಅಪ್ರೂವಲ್ ಬಂದಿದೆ. ಆದರೆ ಕೆಲಸ ಆಗುತ್ತಾ ಇಲ್ಲ. ಅದರ ಬಗ್ಗೆ ನಾನು ವಿದ್ಯಾ ಇಲಾಖೆಯ ಚರ್ಚೆಯ ಮೇಲೆ ಮಾತನಾಡುವಾಗ ಆ ವಿಚಾರಕ್ಕೆ ಬರುತ್ತೇನೆ. ಇದರಲ್ಲಿ ತಾವು ಎಷ್ಟರಮಟ್ಟಿಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುತ್ತೀರಿ ಎಂಬುದನ್ನು ಕಾದು ನೋಡ ಬೇಕಾಗಿದೆ. ತಾವುಗಳು ಅಡೆಂಡಂನಲ್ಲಿ ಏನು ಕಾಣಿಸಿದ್ದೀರಿ ಅದರಿಂದ ಕ್ಷೇತ್ರದ ಶಾಸಕರಿಗೆ ಸಮಾಧಾನ ಬಂದಿದೆ. We must find out who are those privileged few. I do not want to analyse it on the floor of the House. ಯಾರ್ಯಾರ ಕ್ಷೇತ್ರದಲ್ಲಿ ಸ್ಪೆಶಲ್ ಲಿಸ್ಟ್ ಬಂದಿದೆ ಅವರು ಸಮಾಧಾನ ಪಟ್ಟಿದ್ದಾರೆ.

ಇದರಲ್ಲಿ ಕೆಲವರಿಗೆ ಮಾತ್ರ ಸ್ಪೆಷಲ್ ಪ್ರಿವಿಲೇಜ್ ಇದೆ. ಅದು ಯಾರ್ಯಾರಿಗೆ ಇದೆ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. I must congratulate all of them for having got those privileges. ಇದು ಹೊಸದಾಗಿ ಈಗ ಹೇಗೆ ಬಂತು ? ಈ ರೆಕಾರ್ಡ್ ಅನ್ನು ಏತಕ್ಕೆ ಕೊಟ್ಟಿದ್ದೀರಿ ? ಇದು ಒಂದು ಇಲಾಖೆಗೆ ಸಂಬಂಧಪಟ್ಟಂತಹದ್ದು. There is adequate provision under the budget. This propriety is that all these documents have been produced along with the budget document. It is part of Annexure-E, addendum to E. I am questioning the propriety, In that case you need not purchase all these documents. ನಾನು ಮೊದಲೇ ಹೇಳಿದ ಹಾಗೆ ಈ ರೆಕಾರ್ಡ್‌ಗಳನ್ನು ಮೊದಲೇ ಏತಕ್ಕೆ ಕೊಟ್ಟಿದ್ದೀರಿ? ನಿನ್ನೆಯ ದಿವಸವೇ ಕೊಡಬಹುದಿತ್ತು. ಅದು ಸಹ a part of the component of the whole budget. ಈ ಎರಡೂ ಒಂದೇ ಇಲಾಖೆಗಳಿಗೆ ಸಂಬಂಧಪಟ್ಟಂಥಾದು. The whole budgetary system has been sabotaged or frustrated. ಇನ್ನು ಕೆಲವು ಡಾಕ್ಯುಮೆಂಟ್ಸ್ ಇವೆ. ಈ ಡಿಟೇಲ್ ಎಸ್ಟಿಮೇಟ್‌ನಲ್ಲಿ ಅನೇಕ ಕೆಲಸಕಾರ್ಯಗಳಿಗೆ ಆಡಳಿತಾತ್ಮಕ ಎಂಥ ಮಂಜೂರಾತಿ ಸಿಕ್ಕಿಲ್ಲ. ಪ್ರತಿಯೊಂದು ಐಟಂ ವೈಜ್ ನೋಡಿದಾಗ ಕೂಡ ಅದಕ್ಕೆ ಪ್ರಾವಿಜನ್ ಇಲ್ಲ. ೧೯೮೫-೮೬ನೇ ಸಾಲಿನ ಆನ್ ಗೋಯಿಂಗ್ ವರ್ಕ್ಸ್‌ಗೆ ಕೂಡ ಪ್ರಾವಿಜನ್ ಸಿಕ್ಕಿಲ್ಲ. ಅವುಗಳನ್ನು ಒಂದು ಸೀಮಿತದಲ್ಲಿ ಇಟ್ಟುಕೊಂಡಿದ್ದಾರೆ ಆ ಎಲ್ಲಾ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ನಾನು ಮೇಜರ್ ಇರಿಗೇಷನ್ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಈ ಮೇಜರ್ ಇರಿಗೇಷನ್‌ನಲ್ಲಿ ೧೯೮೩-೮೪ನೇ ಸಾಲಿನಲ್ಲಿ ಯೋಜನೆಗಳಿಗೆ ಸೀಮಿತವಾಗಿರುವಂತೆ ಹೇಳುವುದಾದರೆ ೮೪ ೪೫ ಕೋಟಿ ರೂಪಾಯಿಗಳು. ಅದೇ ೧೯೮೪-೮೫ ಮತ್ತು ೧೯೮೫-೮೬ನೇ ಸಾಲಿನಲ್ಲಿ ಸಹ ೮೪.೯೬ ಕೋಟಿ ರೂಪಾಯಿಗಳು ಮಾತ್ರ ಇದೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ, I hope it my not be a conspiracy against you by the Chief Minister ಆದರೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳುತ್ತಾರೆ ನಾವು ಯಾವಾಗಲೂ ಭಾರಿ ನೀರಾವರಿ ಯೋಜನೆಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದೇವೆಂದು. ಆದರೆ ಹಣವನ್ನು ಕೊಡದೆ ಇದ್ದರೆ It is indirectly making unpopular...........

ಶ್ರೀ ಕೆ.ಹೆಚ್. ಪಾಟೀಲ್.—ತಮಿಳುನಾಡಿನಲ್ಲಿ ಕಾಮರಾಜ್ ಪ್ಲಾನ್ ಎಂದು ಮಾಡಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ದೇವೇಗೌಡ ಪ್ಲಾನ್ ಎಂದು ಹೇಳಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದ್ದರೂ ಇರಬಹುದು. ಅದು ನಿಮ್ಮ ಪಕ್ಷಕ್ಕೆ ಬಿಟ್ಟಂತಹಂಥ ವಿಚಾರ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿರತಕ್ಕಂಥ ಪ್ರಶ್ನೆ ಇಷ್ಟೇ. You must come out. ಒಂದು ಪ್ರಾಮಾಣಿಕತೆಗೆ ತಾವು ಬರಬೇಕಾಗುತ್ತದೆ. ನಿಮಗೆ ಏನು ಕೊರತೆ

ಇದೆ ? ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಿಕೊಳ್ಳಲಿ. ಇಂತಹ ಕಾರಣಗಳಿಂದ ನಾನು ಈ ಯೋಜನೆಗಳಿಗೆ ಹಣವನ್ನು ಜಾಸ್ತಿ ಕೊಡುವುದಕ್ಕೆ ಆಗಲಿಲ್ಲ ಎಂದು. ನೀವು ಒಂದು ಕಡೆ ಭಾರಿ ನೀರಾವರಿ ಯೋಜನೆಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿ ಇಲ್ಲಿ ಹಣವನ್ನು ಕೊಡದಿದ್ದರೆ ಹೇಗೆ ? ನೀವು ಇತ್ತೀಚೆಗೆ ಯು.ಕೆ.ಪಿ. ಕಡೆ ಪ್ರಯಾಣ ಮಾಡಿಲ್ಲ. ತಾವು ಬಾಗಲಕೋಟೆಗೆ ಹೋಗಿದ್ದಾಗ ಅಲ್ಲಿ ಹೇಳಿದ್ದೀರಿ, ನಾನು ಈ ಯು.ಕೆ.ಪಿ. ಪ್ರಾಜೆಕ್ಟ್‌ಗೆ ೧೦೦ ಕೋಟಿ ರೂಪಾಯಿಗಳನ್ನು ಕೊಡದಿದ್ದರೆ ಈ ಕಡೆ ಮುಖನೇ ತೋರಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ಬಂದಿದ್ದೀರಿ. Hon'ble Chief Minister wants that Sri Deve Gowda should not show his face at Bagalkot or anywhere else. ಇಂತಹ ಪರಿಸ್ಥಿತಿ ತಮಗೇತಕ್ಕೆ ಬರಬೇಕು. ಇನ್ನು ನೀವು ಆ ಕಡೆ ಮುಖ ತೋರಿಸುವಂತೆ ಇಲ್ಲ. ನಿಮ್ಮ ಘರ್ಜನೆ ಈಗ ಎಲ್ಲಿ ಹೋಯಿತು ? ತಾವು ಹಿಂದೆ ವಿರೋಧಪಕ್ಷದ ನಾಯಕರಾಗಿದ್ದಾಗ ಈ ಬಗ್ಗೆ ಸಾಕಷ್ಟು ಭಾಷಣಗಳನ್ನು ಮಾಡಿರುವುದನ್ನು ನಾನು ನೋಡಿದ್ದೇನೆ. ಭಾರಿ ನೀರಾವರಿ ಯೋಜನೆಗಳ ಬಗ್ಗೆ ಅಧಿಕಾರವಾಣಿಯಿಂದ ಧೃಡ ಸಂಕಲ್ಪದಿಂದ ಧೃಡವಾದಂಥ ಒಂದು ಮನೋಭೂಮಿಕೆಯನ್ನು ಆಳವಡಿಸಿ ಕೊಂಡಿದ್ದೀರಿ. ಆದರೆ ಆ ಮನೋಭೂಮಿಕೆ ಈಗ ಕುಸಿದಂತೆ ಕಾಣುತ್ತದೆ. ಅಥವಾ ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಹಣವನ್ನು ಕೊಡುತ್ತಿಲ್ಲವೋ ಏನೋ ಗೊತ್ತಿಲ್ಲ. ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ, ಅದು ನಿಮಗೆ ಬಿಟ್ಟಿರತಕ್ಕಂಥ ವಿಚಾರ. ಇದರಲ್ಲಿ ೧೯೮೩-೮೪, ೧೯೮೪-೮೫ನೇ ಸಾಲಿನಲ್ಲಿ ಒಂದು ಪೈಸೆ ಸಹ ವ್ಯತ್ಯಾಸವಿಲ್ಲ. ಇದನ್ನೆಲ್ಲಾ ನಾವು ನೋಡಿದಾಗ ಒಂದು ೧೦ ಪರ್ಸೆಂಟ್ ಸಹ ಇನ್‌ಕ್ರೀಸ್‌ಆಗಿಲ್ಲಯಾವುದೇ ಒಂದು ವರ್ಷವನ್ನು ತೆಗೆದುಕೊಂಡರೂ ಸಹ ೧೦ ಪರ್ಸೆಂಟ್‌ನಷ್ಟು ಸಹ ಇನ್‌ಕ್ರೀಜ್ ಆಗಿಲ್ಲ. ಇದನ್ನು ನಾವು ನೋಡಿದಾಗ ನಮಗನಿಸುತ್ತದೆ ನಿಮ್ಮ ಹಿಂದಿನ ಘರ್ಜನೆ ಎಲ್ಲಿ ಹಿಂದಕ್ಕೆ ಹೋಗುತ್ತಿದೆಯೋ ಎನ್ನುವ ಭಯ ಉಂಟಾಗುತ್ತದೆ. ಇದೇ ಒಂದು ಪರಿಸ್ಥಿತಿಯಲ್ಲಿ ತಾವು ಯೋಜನೆಗಳನ್ನು ರೂಪಿಸುತ್ತಾ ಹೋದರೆ ಖಂಡಿತವಾಗಿ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. This has got to be admitted by them. ಆಮೇಲೆ ೧೯೮೪ರಿಂದ ೧೯೮೬ರವರೆಗೆ ಎಷ್ಟು ಹಣ ಕೊಟ್ಟಿದ್ದಾರೆಂದು ನೋಡಿದರೆ ಅದು ೮೫.೨೫ ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ ಒಂದು ಕೋಟಿ ರೂಪಾಯಿಗಳಷ್ಟು ಸಹ ಹೆಚ್ಚು ಕೊಟ್ಟಿಲ್ಲ. ಇದ್ದರೆ ಒಂದು ಕೋಟಿ ಅಥವಾ ಕೆಲವು ಲಕ್ಷ ರೂಪಾಯಿಗಳು ಕಡಿಮೆ ಇರಬಹುದು. ಆಮೇಲೆ ೧೯೮೫-೮೬ನೇ ಸಾಲಿನ ರಿವೈಜ್ಡ್ ಎಸ್ಟಿಮೇಟ್‌ನಲ್ಲಿ ಸಹ ಅಷ್ಟೇ ಹಣ ಕೊಟ್ಟಿದ್ದಾರೆ. ಮತ್ತೆ ೧೯೮೬-೮೭ನೇ ಸಾಲಿನಲ್ಲಿ ಸುಮಾರು ೧೧೪.೪೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. This is not a big increase. What is that big increase here ? ಇಲ್ಲೂ ಸಹ ೧೦ ಪರ್ಸೆಂಟ್ ಇನ್‌ಕ್ರೀಜ್ ಆಗಿಲ್ಲ. ಫೈನಾನ್‌ಷಿಯಲ್ ಔಟ್‌ಲೇ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಅಭ್ಯಾಸ ಇದೆ. ಅದು ಏನೆಂದರೆ ಸುಮಾರು ೩-೪ ವರ್ಷಗಳ ಟೋಟಲ್ ಮಾಡಿ ಹೇಳುವುದು. ಅಥವಾ ೨-೩ ವರ್ಷಗಳ ಟೋಟಲ್ ಮಾಡಿ ಹೇಳುವುದು. ಈ ರೀತಿ ಮಾಡಿದರೆ ಅಲ್ಲಿ ಕೆಲಸ ಆಗುವುದಿಲ್ಲ. ಗ್ರೋತ್ ರೇಟಿನಲ್ಲಿ ಮಾತ್ರ ಹಣ ಕೊಟ್ಟಿದ್ದಾರೆ. ಈಗ ವರ್ಷದಿಂದ ವರ್ಷಕ್ಕೆ ಯಾವುದೇ ವ್ಯತ್ಯಾಸವಾಗಿಲ್ಲ. ೧೯೮೧-೮೨ನೇ ಸಾಲಿನ ಹಿಂದಿನ ವರ್ಷದಲ್ಲಿ ನೋಡುವುದಾದರೆ ಪ್ಲಸ್ ೬.೧೩ ಕೋಟಿ ರೂಪಾಯಿಗಳು ಇದೆ. ಅದೇರೀತಿಯಲ್ಲಿ ೧೯೮೪-೮೫ನೇ ಸಾಲಿನಲ್ಲಿ ಮೈನಸ್ ೨೪.೨೪ ಕೋಟಿ ರೂಪಾಯಿಗಳು ಇದೆ. ಮತ್ತೆ ಅದೇ ೧೯೮೫-೮೬ ಅನ್ನು ತೆಗೆದುಕೊಂಡಾಗ ಮೈನಸ್ ೧೩.೦೯ ಕೋಟಿರೂಪಾಯಿಗಳು ಇದೆ. ಇದರಲ್ಲಿ ಯಾವ ವ್ಯತ್ಯಾಸ ಇದೆ. ಇನ್ನು ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಒಟ್ಟು ೧೧೫.೨೫ ಕೋಟಿ ರೂಪಾಯಿಗಳು. ಮತ್ತೆ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಹಿಂದಿನ ವರ್ಷ ತೆಗೆದುಕೊಂಡರೆ ೧೬೩.೩೪ ಕೋಟಿ ರೂಪಾಯಿಗಳು. ಅದೇ ಈ ವರ್ಷದ ನಾನ್ ಪ್ಲಾನ್ ಮತ್ತು ಪ್ಲಾನ್‌ನಲ್ಲಿ ಇರುವಂತಹ ಹಣ ೧೫೦.೦೨ ಕೋಟಿ ರೂಪಾಯಿಗಳು. There is Rs 13.09 crores plan and non-plan all put together. even this year there is Rs. 13 crores plan and non-plan all put together, where is Rs. 13.09 crores from that of last year. ವರ್ಷದಿಂದ ವರ್ಷಕ್ಕೆ ಹಣ ಕಡಿಮೆ ಯಾಗುತ್ತಾ ಬರುತ್ತಿದೆ. ಆದ್ದರಿಂದಲೇ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀ ಮಾನ್ ಕಡಪಟ್ಟಿಯವರು ಗಲಾಟೆ ಮಾಡುತ್ತಿದ್ದಾರೆಂದು ಕಾಣುತ್ತದೆ. ಯು.ಕೆ.ಪಿ. ಆಗಬೇಕು. ಮತ್ತೊಂದದು ಆಗಬೇಕೆಂದು ಹೇಳುತ್ತಿದ್ದರು. You are sabotaging the entire Major Irrigation

Psojects. This charge I will have to make against this Government. ೧೦೦೦ ಕೋಟಿ ರೂಪಾಯಿಗಳನ್ನು ಇರಿಗೇಷನ್‌ಗೆ ಜಾಸ್ತಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಎಲ್ಲಿ ಕೊಟ್ಟಿದ್ದೀರಿ ? ಇಲ್ಲಿ ಇರತಕ್ಕಂಥಾದ್ದು ಹಣದ ಕೊರತೆಯ ಪ್ರಶ್ನೆಯಲ್ಲ. ಇದು ಕರ್ನಾಟಕ ರಾಜ್ಯದ ಭವಿಷ್ಯದ ಪ್ರಶ್ನೆ. ಕರ್ನಾಟಕ ರಾಜ್ಯ ಇವತ್ತು ನಿಮ್ಮ ಕೈಯಲ್ಲಿ ಭದ್ರವಾಗಿಲ್ಲ. ಇದೇ ರೀತಿ ಮುಂದುವರಿಯುತ್ತಾ ಹೋದರೆ ಕರ್ನಾಟಕ ರಾಜ್ಯ ನಿಮ್ಮ ಕೈಯಲ್ಲಿ ಉಳಿಯುವುದಿಲ್ಲ. ಆ ಒಂದು ದಿಕ್ಕಿನಲ್ಲಿ, ಆ ಒಂದು ದೃಷ್ಟಿಯನ್ನು ಇಟ್ಟುಕೊಂಡು ತಾವು ಕೆಲಸ ಮಾಡಿಲ್ಲವೆಂದು ನಾನು ಈ ಸರ್ಕಾರದ ಮೇಲೆ ಚಾರ್ಜ್ ಮಾಡಬೇಕಾಗಿದೆ. ಇನ್ನು ತಾವು ಪುಟ ೧೮ ಟೇಬಲ್ ೧೦ರಲ್ಲಿ ಕರ್ನಾಟಕ ಪಿಕ್ಚರ್ ಆಫ್ ಬಜೆಟ್ ಪುಸ್ತಕದಲ್ಲಿರತಕ್ಕಂಥ ಕೆಲವು ಅಂಶಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೇಜರ್ ಇರಿಗೇಷನ್‌ಗೆ ಸೀಮಿತವಾಗಿ ಟೇಬಲ್ ೧೦ರಲ್ಲಿ ಏನಿದೆ ? What is their contribution. They talk about the legacy of the Congress regime, culture of the Congress regime. ಈಗ ಇದು ಯಾವ ಕಲ್ಚರ್ ? Irrigation, Navigation, Drainage and Flood Centrol Projects, alltogether contribution to the budget is Rs 18.43.%.

It has come down to 15.68% nearly about 3% has come down This is the percentage of the allocation as far as the major irrigation is concerned. With all this how do you say that you have given more ? we have maintained the growth rate, there is a big increase where is the increase? Don't talk about the total financial quantum Here it is the question of percentage of growth rate and the tempo of development which you have got to make ಜವಹರಲಾಲ್ ನೆಹರೂ ಅವರು ಕೂಡ ಫಸ್ಟ್ ಪ್ಲಾನ್ ಅಪ್ರೋಚ್‌ನಲ್ಲಿ "Once you choose to ride a tiger you have got to accelerate the speed and if you slowdown the tiger it will eat you away", ಎಂದು ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಪರಿಸ್ಥಿತಿಯೂ ಅದೇ ರೀತಿ ಆಗಿದೆ. ಯೋಜನಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಇಂಥ ಒಂದು ಪರಿಸ್ಥಿತಿ ಮಾನ್ಯ ದೇವೇಗೌಡರ ಕಾಲದಲ್ಲಿ ರಾಜ್ಯಕ್ಕೆ ಬಂದಿದೆ ಎಂದು ವ್ಯಥೆಯಾಗುತ್ತದೆ. Otherwise I would not have worried much. Keeping the interest of the State on one side with all the capacity you have with you, with all humility I must say that Sri Devegowda has failed to manage as far as major irrigation is concerned. This logical conclusion that we have got to give. ಇದು ಇಡೀ ಕರ್ನಾಟಕ ರಾಜ್ಯದ ಜನತೆಯ ವ್ಯಾಕುಲತೆ.

Whatever promise you hold down to the people of Karnataka, none of us going to believe it because your Government is incapable of managing the affairs of the major irrigation and you have no mind to do that *i.e.*, your Government has no mind to do it. I am sorry to say this. You have other diversions to do it, other better busines than major irrigation works. ಮೇಜರ್ ಇರಿಗೇಷನ್ ಮತ್ತು ಇತರ ಯಾವ ಕೆಲಸಗಳಲ್ಲೂ ನಿಮಗೆ ಆಸಕ್ತಿ ಇಲ್ಲ. so, there is a drip even in the capital expenditure... Now, let us see table-14 in the book called 'Karnataka Picture on Budget', even on the capital expenditure side as far as major irrigation is concerned ೧೯೮೦-೮೧ರಲ್ಲಿ ೫೬.೯೧ ಪರ್ಸೆಂಟ್, ಆಮೇಲೆ ವರ್ಷ, ವರ್ಷ

ಮೇಲೆ ಹೋಗುತ್ತಿದೆ ನಮ್ಮ ಕಾಲದಲ್ಲಿ. ನೀವು ಕಾಂಗ್ರೆಸ್ ಎಂದು ಯಾವಾಗಲೂ ದೂರುತ್ತೀರಿ, ಇದು ಹೇಗೆ ಬಂತು ? ೧೯೮೧–೮೨ ರಲ್ಲಿ ೬೧.೯೩, ೧೯೮೨–೮೩ ರಲ್ಲಿ ೬೧.೩೪, ೧೯೮೩–೮೪ ಇದು ನಿಮ್ಮ ಬಜೆಟ್ ಬಂದಾಗ ೫೨.೬೮. ಇದು ನಿಮ್ಮ ಲೆಕ್ಕ, ನಾನು ಹೇಳುವಂತಹ ಅಂಕಿ ಅಂಶ ಅಲ್ಲ. ಮತ್ತೆ ಸ್ವಲ್ಪ ಜಾಸ್ತಿಯಾಯಿತು. ೫೫.೬೮, ಮತ್ತೆ ೫೨.೨ ಪರ್ಸೆಂಟ್‌ಗೆ ಕೆಳಗೆ ಇಳಿಯಿತು, ಒಟ್ಟಾರೆ ೧೦ ಪರ್ಸೆಂಟ್ ಡೌನ್ ಆಯಿತು. ಹೀಗೆ ಅನೇಕ ಅಂಕಿ ಅಂಶಗಳನ್ನು ಬದಲಾವಣೆ ಮಾಡುತ್ತಿದ್ದೀರಿ. One thing I must appreciate, Hon'ble Minister has sincerely produced some documents on this. ಮತ್ತೊಂದು ಡಾಕ್ಯುಮೆಂಟ್ ಎಕನಾಮಿಕ್ ಸರ್ವೆಯನ್ನು ತಾವು ನೋಡಿರಬಹುದು, ಯಾವಾಗಲೂ ಅದನ್ನು ಉಪಯೋಗಿಸುತ್ತಾರೆ. It is used to be critical document, but to-day I just thrown to the waste paper basket it is a most distorted document – I am not using it, But I must appreciate you to certain extent. I am yet to see the document supplied to us. Of course this is also from the Finance Department and statistics fed by the irrigation department, This position will have to be definitely reversed, It doesn't make any efforts to rectify the defects. ಕಳೆದ ವರ್ಷ ಹೇಳಿದ್ದೇವೆ ಅದಕ್ಕಿಂತಲೂ ಹಿಂದೆ ಹೇಳಿದ್ದೇವೆ. ನಾವು ರಾಜಕೀಯ ಭಾಷಣ ಮಾಡುತ್ತೇವೆಂದು ಹೇಳಿದಿರಿ ಏನೇನೋ ಅಂಕಿ ಅಂಶಗಳನ್ನು ಕೊಟ್ಟು ಆತ್ಮ ವಂಚನೆ ಮಾಡುವುದಕ್ಕೆ ಮುಖ್ಯಮಂತ್ರಿಗಳತ್ತ ನೋಡುತ್ತಿದ್ದಾರೆ. Even on the question of management of these irrigation projects ತಾವು ನೋಡಿ, ಕಮರ್ಷಿಯಲ್ ಸೈಡ್‌ನಲ್ಲಿ ರಿಸಿಪ್ಟ್ಸ್ ಸೈಡ್‌ನಲ್ಲಿ ನೀವು ಏನು ರೆವಿನ್ಯೂ ವಸೂಲ್ಮಾಡಬೇಕು, ಅದರಲ್ಲೂ ಕೂಡ ಹಿಂದೆ ಇದ್ದೀರಿ ಇರಿಗೇಷನ್ ಪ್ರಾಜೆಕ್ಟ್ಸ್, ಪೇಜ್ ೧೬ ರಲ್ಲಿ ದಯಮಾಡಿ ನೋಡಿ. ಟೇಬಲ್ ೯ ರಲ್ಲಿ ಇರಿಗೇಷನ್ ಪ್ರಾಜೆಕ್ಟ್‌ನಿಂದ ಬರಬೇಕಾದ್ದು. ಇದರಲ್ಲೂ ತಾವು ಹಿಂದೆ ಬಿದ್ದಿದ್ದೀರಿ. ಇದರಲ್ಲಿ ತಾವು ಆಲೋಚನೆ ಮಾಡಿ. ೧೯೮೧–೮೨ರಲ್ಲಿ ಮೈನಸ್ ೫೨.೫೮ ಕೋಟಿ ರೂಪಾಯಿ ಡೆಪಿಸಿಟ್ ಇದ್ದರೆ. ಈಗ ೧೯೮೫–೮೬ ರಲ್ಲಿ ಮೈನಸ್ ೯೨.೦೬ ಕೋಟಿ ರೂಪಾಯಿಗಳು ಆಗಿದೆ. Where are we going ? Are we managing it at all ? ಇಂತಹ ಪ್ರವೃತ್ತಿ ನಡೆಯಲಿ ಎಂದು ನೀರಾವರಿ ಇಲಾಖೆಯಲ್ಲಿ ಬಿಟ್ಟಿದ್ದೀರೋ ? ಮೊಬಲೈಸೇಷನ್ ಆಫ್ ರಿಸೋರ್ಸಸ್ ಇಲ್ಲ. ಬೆಟರ್‌ಮೆಂಟ್ ಲೆವಿ ಆಗಲೇ ಬಿಟ್ಟಿದ್ದೀರಿ. ಇಲಾಖೆಯವರು ಏನು ಮಾಡುತ್ತಿದ್ದಾರೆ ? ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆ ? ೬೦ ಕೋಟಿ ರೂಪಾಯಿ ಡೆಪಿಸಿಟ್ ಇದೆ. Even in the irrigation projects it is being siphoned off. ನೀವು ಏನು ಹಣಕಾಸಿನ ವ್ಯವಹಾರ ಮಾಡುತ್ತಿದ್ದೀರಿ? ಇದಕ್ಕೆ ತಾವು ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗುತ್ತದೆ. ನಿಮ್ಮ ಸ್ವಚ್ಛಂದ ಪ್ರವೃತ್ತಿಯ ನೀತಿ ಏನಿದೆ, ಅದು ಹೀಗೆಯೇ ನಡೆದುಕೊಂಡು ಹೋಗುತ್ತದೆಯೇ ? ತಾವು ಏನು ಕಾರ್ಯನಿರ್ವಹಣೆ ಮಾಡುತ್ತಿದ್ದೀರಿ, ಅದು ಖಂಡಿತವಾಗಿಯು ಖಂಡನೀಯವೆಂದು ಹೇಳಬೇಕಾಗುತ್ತದೆ. ಅದೂ ಕೂಡ ತಾವು ಈ ಇಲಾಖೆಯ ಜವಾಬ್ದಾರಿ ಹೊತ್ತುಕೊಂಡಿರುವುದರಿಂದ ಸರಿಯಾಗಿ ಕೆಲಸ ಮಾಡಬೇಕಾದ್ದು ನಿಮ್ಮ ಆದ್ಯ ಕರ್ತವ್ಯವಲ್ಲವೇ ? ಈ ರೀತಿ ನಿಮ್ಮ ಇಲಾಖೆಯಲ್ಲಿ ಕಾರ್ಯನಿರ್ವಹಣೆ ಆಗುತ್ತಿದೆ. ಕಾಂಗ್ರೆಸ್ ಸರ್ಕಾರ ಬಿಟ್ಟು ಹೋದ ಸ್ಟೇಟಸ್ಕೊ ಮೇನ್‌ಟೇನ್ ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ. ಇದಕ್ಕೆ ನಿಮಗೆ ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ. ಇಷ್ಟಾದರೂ ನಮ್ಮದಿಯ ಮಾತಿನಲ್ಲಿ ಹೇಳುತ್ತಿದ್ದೇವೆ. ಇದನ್ನು ತಾವು ಮೈನ್‌ಟೇನ್ ಮಾಡಿದ್ದರೆ, we could have appreciated you, even that you have failed to do it. ನಿಮ್ಮ ಸರ್ಕಾರ ಇದನ್ನು ಕೂಡ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ತಾವು ಪ್ರತಿ ಸಾರಿಯೂ ಕೂಡ ಹೇಳುತ್ತೀರಿ. ತಾವು ರಿಸೋರ್ಸ್ ಮೊಬಲೈಸ್ ಮಾಡಿದ್ದು ಒಂದು ರೀತಿ ; ಅಲೊಕೇಷನ್ ಮಾಡಿದ್ದು ಇನ್ನೊಂದು ರೀತಿ ಆಂಧ್ರದಲ್ಲಿ ತಾವು ನೋಡಿರಬಹುದು, ಅವರು ಬಜೆಟ್‌ನಲ್ಲಿ ೪೦೦ ಕೋಟಿ ರೂಪಾಯಿಗಳನ್ನು ಇರಿಗೇಷನ್ ವರ್ಕ್ಸ್‌ಗೆ ಇಟ್ಟಿದ್ದಾರೆ. ನಾನು ಯಾವುದೋ ಒಂದು ಎಡಿಟೋರಿಯಲ್‌ನಲ್ಲಿ ಓದಿದ್ದೇನೆ ನಿಮಗೆ ಇಲ್ಲಿ ಆಸಕ್ತಿ ಇಲ್ಲ, ಮುಂದಿನ ಪೀಳಿಗೆ ಏನಾದರೂ ಆಗಬಹುದು, ಇವತ್ತು ನೀವು ಬದುಕಿದ್ದರೆ ಸಾಕು.

೧-೦೦ ಪಿ.ಎಂ.

ಈ ರೀತಿಯಾಗಿ ಒಂದು ಸ್ವಾರ್ಥದ ಕೇಂದ್ರೀಕೃತದ ಧೋರಣೆ ಇಟ್ಟುಕೊಂಡು ಸರ್ಕಾರ ಮಾಡಿದರೆ ಅದರ ಬಗ್ಗೆ ನಮ್ಮ ವಿರೋಧ ಬರುತ್ತದೆ. ಸನ್ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಒಂದು ಆಲೋಚನೆ ಮಾಡಿದ್ದರು. ರೀಸೋರ್ಸಸ್ ಸಂಗ್ರಹಣೆ ಮಾಡತಕ್ಕಂಥಾದ್ದು ಮತ್ತು ಎರಡನೆಯದಾಗಿ ಈ ಪ್ರಾಜೆಕ್ಟ್ ಮೇನ್‌ಟೇನ್ ಮಾಡತಕ್ಕಂಥ ಪ್ರಪೋಸಲ್ ಇತ್ತು. ಮತ್ತು ವಾಟರ್ ರೇಟನ್ನು ವಸೂಲ್ಮಾಡುವುದಕ್ಕೆ ನೇರವಾಗಿ ಸರ್ಕಾರದಿಂದ ಆಗುವುದಿಲ್ಲ ಏತಕ್ಕೆಂದರೆ ಅನೇಕ ಸಲ ಅವರ ಮೇಲೆ ಪ್ರಭಾವ ಬರುತ್ತದೆ ಎಂದು ಅವರು ಒಂದು ಪ್ರಪೋಸಲ್ ಮಾಡಿದ್ದರು. ಆ ಪ್ರಪೋಸಲ್ ಫೈಲನ್ನು ಈಗ ತಾವು ತೆಗೆದು ನೋಡಿದರೆ ಗೊತ್ತಾಗುತ್ತದೆ. ಇನ್ನು ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ದಾಮೋದರ್ ವ್ಯಾಲಿ ಕಾರ್ಪೊರೇಷನ್ ಮಾಡಬೇಕೆನ್ನುವುದು ಇತ್ತು. ಇದಕ್ಕೆ ಕೇಂದ್ರದ ಹಣ ಇಟ್ಟಿದ್ದಾರೆ. ಈ ಪ್ರಾಜೆಕ್ಟ್ ಅನ್ನು ಎಕ್ಸಿಕ್ಯೂಟ್ ಮಾಡಲಿಕ್ಕೆ ಡಿ.ವಿ.ಸಿ. ಇತ್ತು. It may be out of date ಇರಬಹುದು. ಸನ್ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಒಂದು ಮೇಜರ್ ಇರಿಗೇಷನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕೆನ್ನುವ ಆಲೋಚನೆಯೂ ಇತ್ತು. ತಾವು ಅದರ ಬಗ್ಗೆ ಆಲೋಚನೆ ಮಾಡಿ. ಈ ಪ್ರಾಜೆಕ್ಟ್‌ಗೆ ರಿಸೋರ್ಸಸ್ ಮೊಬಲೈಸ್ ಮಾಡುವುದಕ್ಕೆ ಪೂರ್ವಭಾವಿ ಸಿದ್ಧತೆಯೂ ಇತ್ತು. ಈ ಪ್ರಾಜೆಕ್ಟನ್ನು ಮೇನ್‌ಟೇನ್ ಮಾಡತಕ್ಕಂಥಾದ್ದು ವಿಚಾರದಲ್ಲಿ ಮತ್ತು ಅನುಷ್ಠಾನಕ್ಕೆ ತರತಕ್ಕಂಥಾ ವಿಚಾರದಲ್ಲಿ you can think of it. ಇನ್ನು ಕ್ಯಾಷ್ ಕ್ರಾಫ್ಸ್ ಬಗ್ಗೆ ಹೇಳುವುದಾದರೆ ಇದನ್ನು ನಿಷ್ಕರ್ಷೆ ಮಾಡಿದಾಗ ಈ ಬಗ್ಗೆ ಪವರ್ ಟ್ಯಾರಿಫ್ ಅನ್ನು ನಿಷ್ಕರ್ಷೆ ಮಾಡಿದಾಗ ಇದಕ್ಕೇ ಒಂದು ತರಹ ಸ್ಲ್ಯಾಬ್ ಇದೆ. ವಾಟರ್ ರೇಟ್‌ಗೇನೇ ಒಂದು ತರಹ ಸ್ಲ್ಯಾಬ್ ಇದೆ ಕ್ಯಾಷ್ ಕ್ರಾಫ್ಸ್‌ಗೆ ವಾಟರ್ ರೇಟ್ ಅನ್ನು ಜಾಸ್ತಿ ಮಾಡಿ. ಸೀಜನಲ್ ಕ್ರಾಫ್ಸ್‌ಗೆ ಭತ್ತ ಮುಂತಾದವಕ್ಕೆ ಕಡಿಮೆ ಛಾರ್ಜು ಮಾಡಿ. ಈಗ ಒಳ್ಳೆಯ ಸಮಯ. ಅದನ್ನು ತಾವು ಯೋಚನೆ ಮಾಡಿ.

ಇನ್ನು ನಮ್ಮ ಮುಂದೆ ಎರಡು ಇಂಟರ್‌ಸ್ಟೇಟ್ ರಿವರ್ಸ್‌ನ ವಾಟರ್ ಡಿಸ್‌ಪ್ಯೂಟ್ ಇದೆ. ಈ ಕಾವೇರಿ ಬೇಸಿನ್ ಮತ್ತು ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥಾ ನೀರನ್ನು ನಾವು ಇನ್ನು ೧೫ ವರ್ಷದೊಳಗೆ ಸಾಧನೆ ಮಾಡಿಕೊಳ್ಳಬೇಕಾಗುತ್ತದೆ. ಇಂಥಾ ಸಂದರ್ಭ ಇರುವಾಗ ನೀವು ಇದರ ಬಗ್ಗೆ ಮೊಬಲೈಸೇಷನ್ ಆಫ್ ರೀಸೋರ್ಸಸ್ ವಿಚಾರದಲ್ಲಿ ರಾಜ್ಯದ ಜನತೆಯನ್ನು, ರೈತರನ್ನು ಇವತ್ತು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯಬೇಕು. ಇಲ್ಲದೇ ಹೋದರೆ ನೀವು ಈ ಪ್ರಶ್ನೆಯನ್ನು ಸಾಲ್ವ್ ಮಾಡುವುದು ಕಷ್ಟವಾಗುತ್ತದೆ. ಸಾಲ್ವೇಷನ್ ಆಗುವುದಿಲ್ಲ. ಈ ಬಗ್ಗೆ ತಾವು ಹೆಚ್ಚು ಆಲೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ಪ್ರಾಜೆಕ್ಟ್‌ಗಳ ವಿಚಾರದಲ್ಲೂ ಸಹ ಆಲೋಚನೆ ಮಾಡಬೇಕಾಗಿದೆ. ಈ ಹೊತ್ತು ನಾನು ಈ ವಿಷಯದಲ್ಲಿ ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ಯೋಜನೆಗಳು ತಮ್ಮ ಮುಂದೆ ಇದೆ. ಈಗ ಕಾವೇರಿ ಬೇಸಿನ್ ಬಗ್ಗೆ ತಾವು ಹೆಚ್ಚು ಚುರುಕುಗೊಳಿಸಿಕೊಂಡು ಹೋಗುತ್ತಿದ್ದೀರಿ. ಈ ಕೆಲಸ ಬಹಳ ಚುರುಕಾಗಿ ನಡೆಯುತ್ತಾ ಇದೆ. ಈ ಕಾವೇರಿ ಬೇಸಿನ್‌ಗೆ ಅಲೋಕೇಷನ್ ಜಾಸ್ತಿ ಮಾಡಿದ್ದೀರಿ. ಅಷ್ಟೇ ಅಲ್ಲದೆ ಹೇಮಾವತಿ ಯೋಜನೆಗೂ ಸಹ ಈ ಸಲ ಧಾರಾಳವಾಗಿ ಹಣ ಇಟ್ಟಿದ್ದೀರಿ. ಹಾಗೆಯೇ ಇನ್ನೂ ಬೇರೆ ಬೇರೆ ಪ್ರಾಜೆಕ್ಟ್‌ಗಳೂ ಇವೆ. ಈ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥಾ ಯೋಜನೆಗಳು ಏನು ಇವೆ, ಅವನ್ನು ಪೂರ್ತಿ ಮಾಡಬೇಕಾಗಿದೆ. ಈ ಬಗ್ಗೆ ಸ್ವಲ್ಪ ವಿವರಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಇದರಲ್ಲಿ ಹಾರಂಗಿ ಇದೆ, ಹೇಮಾವತಿ ಇದೆ, ಕಬಿನಿ ಇದೆ, ವರಾಹಿ ಇದೆ. ಇದರ ಜೊತೆಗೆ moderenisation of K.R S. canal ಇದೆ. ಈ ಹಾರಂಗಿ ಯೋಜನೆಗೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೨೪ ಕೋಟಿ ರೂಪಾಯಿಗಳ ಪ್ರೋಗ್ರಾಂ ಹಾಕಿದ್ದರೆ, ಅದರ ಪ್ರೋಗ್ರೆಸ್ ನೋಡಿದರೆ ೩೬.೯೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಹತ್ತಿರ ಹತ್ತಿರ ೩೭ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ, ಫಿಜಿಕಲ್ ಪ್ರೋಗ್ರೆಸ್ ೨೧ ಸಾವಿರ ಹೆಕ್ಟೇರ್ಸ್. ಅದರಲ್ಲಿ ಇರಿಗೇಷನ್ ೧೫ ಸಾವಿರದ ೫೬ ಹೆಕ್ಟೇರ್ಸ್‌ನಲ್ಲಿ ಪ್ರೋಗ್ರೆಸ್ ಆಗಿದೆ. ಕಬಿನಿ ಪ್ರೋಗ್ರಾಮ್ ಪ್ರಕಾರ ೬ನೇ ಯೋಜನೆಯಲ್ಲಿ ೨೪ ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿತ್ತು, ಅದರಲ್ಲಿ ೩೮.೨೫ ಕೋಟಿ ರೂಪಾಯಿಗಳು ಖರ್ಚಾಗಿದೆ. ೩೬ ಸಾವಿರ ಎಕರೆ ನೀರಾವರಿ ಆಗಬೇಕಾಗಿತ್ತು, ಅದರಲ್ಲಿ ೨೫,೦೪೮ ಹೆಕ್ಟೇರ್ ಆಗಿದೆ. ವರುಣದಲ್ಲಿ ಅದರ ಪ್ರೋಗ್ರೆಸ್ ಏನೇನು ಸಾಲದು. ೯ ಕೋಟಿ ರೂಪಾಯಿ ಕಾರ್ಯಕ್ರಮದಲ್ಲಿ ಫಿಸಿಕಲ್

ಪ್ರೋಗ್ರೆಸ್ ೭.೪೫ ಕೋಟಿ ರೂಪಾಯಿಂಗಳು. ಆದುದರಿಂದ ಇದನ್ನು ನಾವು ಹೆಚ್ಚು ಮುತುವರ್ಜಿಯಿಂದ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಈ ಯೋಜನೆಯ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರೂ ಒಂದು ವರದಿಯನ್ನು ಕೊಟ್ಟಿದ್ದಾರೆ. ಬಾಗೂರ್ ನವಿಲೆ ಟನಲ್ ಬಗ್ಗೆ ಜ್ಯುಡಿಷಿಯಲ್ ಕಮೀಷನ್ ಬಗ್ಗೆ ಹೇಳಿದ್ದೀರಿ, ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏನೋ ಕೆಲವು irregularities ಆಗುತ್ತಾ ಇವೆ, ಪೀಸ್‌ವರ್ಕ್ ಮೇಲೆ ಅದರ ಕೆಲಸ ಮಾಗುಂತ್ತ ಇದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಹಾಗೆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ದಯುವಿಟ್ಟು ತಾವು ತಿಳಿಸಬೇಕು. There is a gross violation of the piece work system. ನಂತರ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಇರುವುದರಿಂದ ಆದಷ್ಟು ಮಟ್ಟಿಗೆ ವ್ಯಾಪಕವಾಗಿ ಫ್ಲೋ ಆಫ್ ವಾಟರ್‌ನ್ನು ಉಪಯೋಗ ಮಾಡಿಕೊಂಡು, ನಮ್ಮ ಯೋಜನೆಗಳನ್ನು ಪೂರ್ತಿಗೊಳಿಸಬೇಕು. ಮತ್ತು ಏನು ಕೆಲವು ಯೋಜನೆಗಳನ್ನು ಮಾಡಿದ್ದೀರಿ ಅದನ್ನು ಮಾಡಿದರೆ ಮಾತ್ರ ಕರ್ನಾಟಕದ ಹಿತವನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಎಲ್ಲೆಲ್ಲಿ ಬರಗಾಲ ಇದೆ, ಮತ್ತು ಕುಡಿಯುವ ನೀರಿನ ಅವಶ್ಯಕತೆ ಇದೆ ಅದನ್ನು examine ಮಾಡಿಕೊಂಡು, ಮಾಡದೆ ಹೋದರೆ ನಮ್ಮ ಸ್ಕಾರ್ಸ್ ರಿಸೋರ್ಸ್ ಏನು ಇದೆ ಅದನ್ನು ನಾವು ಸರಿಯಾಗಿ optimum utilisation ಮಾಡುವುದಕ್ಕಾಗುವುದಿಲ್ಲ. ಇದನ್ನು ಸ್ಪಷ್ಟವಾಗಿ ತಿಳಿದುಕೊಂಡು ಮುಂದೆ ಕೆಲಸ ಮಾಡಬೇಕು. ಕಾವೇರಿ ಬೇಸಿನ್‌ನಲ್ಲಿ ಕೆಲವು ಪ್ರಾಜೆಕ್ಟ್‌ಗಳು ಇವೆ. ಇವುಗಳ ವಿಚಾರದಲ್ಲೂ ಕೂಡ ತಾವು ಮುತುವರ್ಜಿ ತೆಗೆದುಕೊಳ್ಳಬೇಕು ಮತ್ತು ನೀರನ್ನು ಸರಿಯಾಗಿ ಉಪಯೋಗ ಮಾಡಬೇಕು. ಬರಗಾಲ ಪರಿಸ್ಥಿತಿ ಇರುವುದರಿಂದ ಆ ಕೆಲಸಗಳನ್ನು ತಾವು ತಕ್ಷಣ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಯು.ಕೆ.ಪಿ. ಬಗ್ಗೆ ಒಂದೆರಡು ಮಾತುಗಳನ್ನು ನಾನು ಇವತ್ತು ಹೇಳಬಯಸುತ್ತೇನೆ. ಇದು ಬಹಳ ಪ್ರಮುಖ್ಯವಾದಂತಹ ಯೋಜನೆಯಾಗಿದೆ. ಇದರ ಜೊತೆಗೆ ತೆಲುಗು-ಗಂಗಾ ಬಗ್ಗೆ ಕೂಡ ಸಾಕಷ್ಟು ಚರ್ಚೆ ಈ ಸದನದಲ್ಲಿ ನಡೆದಿದೆ. ಅದಕ್ಕೆ ತಾವು ಸಾಕಷ್ಟು ಉತ್ತರವನ್ನು ಕೂಡ ಕೊಟ್ಟಿದ್ದೀರಿ. ತೆಲುಗು ಗಂಗಾ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅನೇಕ ವರ್ಷಗಳಿಂದ ಆಂಧ್ರಪ್ರದೇಶದ ಸರ್ಕಾರವು ಕೇಂದ್ರದಿಂದ ಈ ಯೋಜನೆಗೆ ಒಪ್ಪಿಗೆ ಪಡೆಯಬೇಕೆಂದು ಹೊರಟಿದೆ. ಸುಮಾರು ಮುನ್ನೂರು ಟಿ.ಎಮ್.ಸಿ.ಎಫ್.ಟಿ. ನೀರನ್ನು ಸರ್‌ಪ್ಲಸ್ ವಾಟರ್‌ಯೆಂದು ಕೊಟ್ಟಿದ್ದಾರೆ. That is counted as a surplus water.

ಇದು ಶ್ರೀ ವೆಂಕಟರಾಮಯ್ಯನವರಿಗೆ ಗೊತ್ತಿದೆ, ಪೆನ್ನಾರ್‌ನಲ್ಲಿ ನೀರು ಇಲ್ಲ ಎಂದು. ಯಾವುದೇ ಒಂದು ಯೋಜನೆ ಮಾಡಬೇಕಾದರೆ ಅದು ರಾಷ್ಟ್ರಮಟ್ಟದಲ್ಲಿರಾಜ್ಯಮಟ್ಟದಲ್ಲಿ Dependable source of water ಇರಬೇಕು. ಸೋರ್ಸ್ ಆಫ್ ವಾಟರ್ ಯಾವುದೆಂದು ಬಚಾವತ್ ಅವಾರ್ಡ್‌ನಲ್ಲಿ ಹೇಳಿದ್ದೀರಿ, ಅದು ಸುಮಾರು ಎಂಟನೂರು ಟಿ. ಎಂ. ಸಿ. ಎಫ್. ಟಿ. ಡಿಪೆಂಡಬಲ್ ಷೇರ್‌ನಲ್ಲಿ ನಮ್ಮ ಷೇರ್ ಏನು ಎಂಬುದನ್ನು ನಿಷ್ಕರ್ಷೆ ಮಾಡಿದ್ದಾರೆ. ಆದರಲ್ಲಿ ಏನು ವಾದವಿಲ್ಲ ಎಂದರೆ ೨,೦೦೦ ಎ.ಡಿ. ಆದಮೇಲೆ ಅದನ್ನು ಚರ್ಚೆ ಮಾಡಬೇಕು. ಈಗ ಸರ್‌ಪ್ಲಸ್ ನೀರಿನ ಮೇಲೆ ಒಂದು ಯೋಜನೆ ಮಾಡಲು ಆಂಧ್ರಪ್ರದೇಶದವರು ಹೊರಟಿದ್ದಾರೆ. It is permissible under the Bachawat Award ? I am putting a very straigh question to Sri Ramakrishna Hegde... ಒಂದು ವೇಳೆ ಮಳೆ ಬಂದು ಸರ್‌ಪ್ಲಸ್ ವಾಟರ್ ಬಂದರೆ it is not dependable ಅದರ ಮೇಲೆ ಪ್ರಾಜೆಕ್ಟ್ ಕಟ್ಟುತ್ತೇವೆಂದು ಹೊರಟರೆ that means they are doing with an eye on the water of Maharashtra and Karnataka. ಇದನ್ನು ಯಾವ ತಾಂತ್ರಿಕ ತಜ್ಞರು ಹೇಳಬೇಕಾಗಿಲ್ಲ ಎಂಬುದನ್ನು ದೇವೇಗೌಡರು ಗಮನಿಸಬೇಕು. they are planning on our water. ನಮ್ಮ ನೀರಿನ ಮೇಲೆ ಇವತ್ತು ಅವರು ಯೋಜನೆ ಮಾಡಲಿಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಒಂದು ಪತ್ರಿಕೆಯಲ್ಲಿ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿರುವುದು ಬಂದಿದೆ. I was shocked to see certain reports alleged to be a statement from the Honble Chief Minister. I still believe that it is untrue and not correct. But this is highly shocking ನಾನು ಇದರಲ್ಲಿ ಬಂದಿರುವುದನ್ನು ಓದುತ್ತೇನೆ.

Deccan Herald, February 28, 1986.

"The question of Andhra Pradesh establishing its descriptive rights over the surplus water by going ahead with 300 TMCFT Telugu Ganga Project would be vaild only when Karnataka failed to utilise its share of water with in the time stiplted."

......there ends all the matter. The stand of the Hon'ble Cheif Minister is very clear. ಏನೂ ತಿಳಿದುಕೊಂಡಿದ್ದಾರೆ, ಮುಖ್ಯಮಂತ್ರಿಗಳು ಇನ್ನೊಸೆಂಟ್ ಪಾಪ, ಅವರಿಗೆ ಇದನ್ನು ತಿಳಿದುಕೊಳ್ಳುವುದಕ್ಕೆ ಟೈಮ್ ಇಲ್ಲವೆಂದು I gave margin to the Hon'ble Chief Minister but now the cat is out of mat. That means. you want Mr. N. T. Rama Rao to establish Telugu Ganga project and he will take away our water by 2000 AD. ಇದು ಯಾವ ತರಹವಾಗಿದೆಯೆಂದರೆ ವಿಧಾನಸೌಧದ ಎದುರುಗಡೆ ಒಂದು ಬೇಲಿ ಹಾಕಿಕೊಂಡು ಇದು ನನ್ನ ಜಾಗವೆಂದು ಹೇಳಿದ ಹಾಗೆ ಆಗುತ್ತದೆ. 2000 ಎ. ಡಿ. ಹೊತ್ತಿಗೆ ಇದು ಸಕ್ರಮವೆಂದು ತಿಳಿದುಕೊಂಡು ಅವರು ಹೀಗೆ ಮಾಡುತ್ತಾ ಇದ್ದಾರೆ. You are just allowing to regularise. But this Statement is not even in consouance with the international Law of Water Disputes. ಇದರ ಅರ್ಥ ಏನಾಗಿದೆಯೆಂದರೆ 2000 ಎಡಿ ವರೆವಿಗೂ ನಾವು ನಮ್ಮ ಪಾಲನ್ನು ಉಪಯೋಗ ಮಾಡಿಕೊಳ್ಳದಿದ್ದರೆ ಅದು ತೆಲುಗು-ಗಂಗಾ ಪರವಾಗಿ ಆಗುತ್ತದೆ ಮತ್ತು ಆಂಧ್ರಪ್ರದೇಶಕ್ಕೆ ಹೋಗುತ್ತದೆ ಎಂಬ ಒಂದು ಜವಾಬ್ದಾರಿ ಇಲ್ಲದಿರತಕ್ಕ ಹೇಳಿಕೆಯನ್ನು ಇವತ್ತು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆಂದು ನಾನು ಬಹಳ ವ್ಯಸನದಿಂದ ಹೇಳಲಿಚ್ಛಿಸುತ್ತೇನೆ. ನಮ್ಮ ಟೆರಿಟೋರಿಯಲ್ ನೀರಿನ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯದಿಂದ ಮಾತನಾಡುವುದುನಿಮ್ಮ ಸರ್ಕಾರಕ್ಕೆ ಖಂಡಿತವಾಗಿ ಬರಬಾರದು. That is totally detrimental to the interests of our State, You are just mortgaging the interest of the State. by this kind of statement, otherwise, you might have said "No" ನಾವು ಈ ವಾದವನ್ನು ಹಿಡಿದುಕೊಂಡು ಹೊರಟರೆ ಏನು ಅರ್ಥ ಬರುತ್ತದೆಂದರೆ ಆಂಧ್ರಪ್ರದೇಶದ ಪರವಾಗಿ ವಕಲತ್ತು ವಹಿಸತಕ್ಕ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದರೆಂದು ಹೇಳಬೇಕಾಗುತ್ತದೆ. ಇದಕ್ಕಿಂತಲೂ ದೊಡ್ಡದಾದ ಅನ್ಯಾಯ ಕರ್ನಾಟಕ ರಾಜ್ಯಕ್ಕೆ ಮತ್ತೊಂದು ಇಲ್ಲ ಎಂಬುದನ್ನು ನಾನು ಬಹಳ ವಿನಯದಿಂದ ಹೇಳುತ್ತೇನೆ. ಇವತ್ತು ರಾಜ್ಯದ ಹಿತಶಕ್ತಿಯ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ತೆಲುಗು-ಗಂಗಾ ಪ್ರಾಜೆಕ್ಟ್ ಸರ್‌ಪ್ಲಸ್ ವಾಟರ್ ಮೇಲೆ ಒಂದು ಪ್ರಾಜೆಕ್ಟ್ ಮಾಡಿಕೊಂಡರೆ ಅದು ಶಾಶ್ವತ ಕಮಿಟಿಮೆಂಟ್ ಆಗುತ್ತದೆ. Once a project is put up, that will be a permanent commitment as far as that water is concerned and how can there be a permanent commitment on tne basis of the surplus water? This is a question which nobody can answer. ಉದಾಹರಣೆಗೆ ತುಂಗ-ಭದ್ರ ದಲ್ಲಿ ಸರ್‌ಪ್ಲಸ್ ವಾಟರ್ ಬಂದರೆ ನಾವು ಏನು ಮಾಡುತ್ತೇವೆಂದರೆ ಸ್ವಲ್ಪ ಜಾಸ್ತಿ ನೀರನ್ನು ರೈತರಿಗೆ ಕೊಡುತ್ತೇವೆ. ಎಕ್ಸಸ್ ಬಂತು ಎಂದರೆ ಇನ್ನೊಂದು ಯೋಜನೆ ಮಾಡುವುದಕ್ಕೆ ಆಗುತ್ತದೆಯೋ ಆಗುವುದಿಲ್ಲ. ಈ ಸರ್‌ಪ್ಲಸ್ ವಾಟರ್ ಇಷ್ಟೇ ಅಂತಾ ನಿಗದಿ ಮಾಡುವುದಕ್ಕಾಗುವುದಿಲ್ಲ, ಅಪ್ರಾಕ್ಷಿಮೆಂಟ್ ಆಗಿ ನಿಗದಿ ಮಾಡಿದರೂ ಕೂಡ You cannot depend upon that water ಅಲ್ಲಿ ಪ್ರಾಜೆಕ್ಟ್ ಜೊತೆಯಲ್ಲಿ ಸರ್‌ಪ್ಲಸ್ ವಾಟರ್ ಸಿಗುತ್ತದೆಂದು ತಿಳಿದುಕೊಂಡು ಮತ್ತೊಂದು ಯೋಜನೆಯನ್ನು ಮಾಡುತ್ತೇವೆಂದು ಹೋದರೆ ಹೇಗೆ? ಉದಾಹರಣೆಗೆ ಮಲಪ್ರಭಾ ಪ್ರಾಜೆಕ್ಟ್ ಇದೆ. ಅದರ ಸರ್‌ಪ್ಲಸ್ ವಾಟರ್‌ಗೋಸ್ಕರ ಮತ್ತೊಂದು ಯೋಜನೆಯನ್ನು ಹಾಕಿಕೊಳ್ಳಲು ಸಾಧ್ಯವಿದೆ. ಆಮೇಲೆ ಸರ್‌ಪ್ಲಸ್ ವಾಟರ್ ಬಂದರೆ ಅದನ್ನು ಆಂಧ್ರಪ್ರದೇಶಕ್ಕೆ ಬೇಕಾದರೆ ಕೊಡೋಣ. ಅವರು ಇನ್ನು ಒಂದು ಬೆಳೆಯನ್ನು ಬೇಕಾದರೆ ಬೆಳೆದುಕೊಳ್ಳಲಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಇದನ್ನೇ ಒಂದು ಶಾಶ್ವತವಾದ ಕಮಿಟಿಮೆಂಟ್ ಮಾಡಿಕೊಂಡು

ಆ ಬೇಸ್ ಮೇಲೆ ಅವರು ಒಂದು ಯೋಜನೆಯನ್ನು ಕಟ್ಟತಕ್ಕಂತಹ ಪ್ರಯತ್ನ ಮಾಡಿದರೆ It is a gross violation of the provisions of the Bachawat Award. I did say the Hon'ble Minister should march either to Delhi or to the project. Power is not important. The interest of the State is more important. Next comes politics and the interest of the State comes first. This has got to be given most importance. ಇಂತಹ ಹೇಳಿಕೆಯನ್ನು ಕೊಡುತ್ತಾ ಇರುವುದರಿಂದಲೇ ಹಾಗೂ ಇಂತಹ ಸಡಿಲ ಧೋರಣೆಗಳನ್ನು ಇಟ್ಟುಕೊಂಡಿರುವುದರಿಂದಲೇ ಅವರಿಗೆ ಇಷ್ಟು ಧೈರ್ಯ ಬಂದಿರುವುದು, ಇಲ್ಲದಿದ್ದರೆ ೧೫ ವರ್ಷಗಳ ಹಿಂದೆ ಏತಕ್ಕೆ ಅವರು ಈ ರೀತಿ ಮಾಡಲಿಲ್ಲ ? They have been powerful at the Centre. Number of Ministers were there previously. ಈಗ ಏತಕ್ಕೆ ಮಾಡುತ್ತಿದ್ದಾರೆ ? ಏನೆಂದರೆ ನೀವು ಅವರಿಗೆ ಸಲಿಗೆ ಕೊಟ್ಟಿದ್ದೀರಿ, ನಮ್ಮ ಮುಖ್ಯ ಮುಖ್ಯ ಮಂತ್ರಿಗಳು ಕೊಟ್ಟ ಧೈರ್ಯದಿಂದ ಅವರು ತೆಲುಗು-ಗಂಗಾ ಯೋಜನೆ ಮಾಡುವ ಸನ್ನಾಹದಲ್ಲಿ ಸಹಕಾರಿಯಾಗಿದ್ದಾರೆ. What may come, we do,not allow the project to come-let the Hon'ble Chief Minister come out with a statement. We fully support him and we are behind him. When there is a gross violation of the award. you move the supreme Court and obtain a stay. Think about the legal remedy. Why cannot you do it ? ಈತರಹ ಲ್ಯಾಕ್‌ವರ್ಮ್ ಆಟಿಟ್ಯೂಡ್ ಇದ್ದರೆ ಹೇಗೆ ? I am afraid the Government of India may clear the project. Thy have already sent the study Team. The Govt. of India did not even think of sending a study team in all these 20 years. but to-day, they have sent a study team. I was told that they have sent a study team a couple months back to study the Telugu-Ganga Project. When there is absolutely no case for Telugu Ganga as far as Andhra Pradesh, is concerned, here is our Advocate for Andhra Pradesh, the Hon'ble Chief Minister who has made out a case, a convincing case for Andhra Pradesh to build up a Telugu-Ganga project. This is what has happened. ಈ ಹೊಸ ಪ್ರಾಜೆಕ್ಟನ್ನು ಇವತ್ತು ಅವರು ಈ ರೀತಿಯಿಂದ ಮಾಡಿಕೊಂಡು ಮುಂದೆ ಹೋಗುತ್ತಾ ಇದ್ದಾರೆ, ೨೦೦೦ ಎಡಿ ಹೊತ್ತಿಗೆ ನಾವು ನಮ್ಮ ಎಲ್ಲಾ ನೀರನ್ನು ಯುಟಿಲೈಸ್ ಮಾಡುತ್ತೇವೆಂದು ಮಾನ್ಯ ದೇವೇಗೌಡರು ಅಥವಾ ನಮ್ಮ ಮುಖ್ಯಮಂತ್ರಿಗಳು ಆಗಿಂದಾಗ್ಗೆ ಹೇಳುತ್ತಾ ಇದ್ದರು. ಆದರೆ ಈಗ ಆಗಿರುವುದು ಏನು ?

ಬಡ್ಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪವನ್ನು ಮಾಡಿದ್ದಾರೆ. ಈಗ ಯುಕೆಪಿ ಫಸ್ಟ್ ಸ್ಟೇಜಿಗೆ ೧೦೭೧ ಕೋಟಿ ಬೇಕು ಮತ್ತು 2nd stage ೧೨೦೦ ಒಟ್ಟು ೨೨೭೧ ಕೋಟಿ ತಮಗೆ ಬೇಕು. ೧೯೮೬-೮೭ ರಲ್ಲಿ ಕಾಡಾ ಎಲ್ಲಾ ಕೂಡಿ ೮೬ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಈಗ ಇದರಲ್ಲಿ ತಮ್ಮ ಪ್ರೊಜೆಕ್ಷನ್ ಪ್ರಕಾರ ೧೯೫೭-೬೦ ರಿಂದ ೧೯೯೫-೯೬ ರವರೆಗೆ ೧೦೭೧.೧೦ crores ಕೋಟಿ ರೂಪಾಯಿಗಳು ಕೊಡತಕ್ಕಂಥಾದ್ದು. For second stage you have to spend another 1200 crores. Are you spending it? ಇದನ್ನು ಖರ್ಚು ಮಾಡುತ್ತೇವೆ ಎಂದು ತಾವು ಹೇಳಿದರೆ ನಂಬತಕ್ಕಂಥ ಪುರಾವೆಗಳಾಗಲೀ, ಲಕ್ಷಣಗಳಾಗಲೀ ನಮಗೆ ಇವತ್ತು ಕಾಣುತ್ತಾ ಇಲ್ಲ. ನಂಬತಕ್ಕಂಥ ಮಾತನ್ನೇ ನಮಗೆ ಕೊಡುತ್ತಾ ಇಲ್ಲ. ಇವತ್ತು ತಾವು ಯುಕೆಪಿಗೆ ಇಷ್ಟು ಖರ್ಚು ಮಾಡುತ್ತೇವೆ ಎಂದು ಹೇಳಿದರೆ ಅದನ್ನು ಎಳ್ಳಷ್ಟು ನಂಬತಕ್ಕಂಥ ಒಂದು ಪರಿಸ್ಥಿತಿ ನಮಗೆ ಇಲ್ಲ ಏಕೆಂದರೆ, ೧೦ ಪರ್ಸೆಂಟ್ ಎಸ್ಕಲೇಷನ್ ಆದರೂ ಕೂಡ, year to year provision. I think it is 55 crores. ಎಸ್ಕಲೇಷನ್‌ಗೆ ೧೦ ಪರ್ಸೆಂಟ್ ಪ್ರೊವೈಡ್ ಮಾಡಿದರೂ ಕೂಡ ಕಡಿಮೆ ಪಕ್ಷ ೨೦೦ ಕೋಟಿ ರೂಪಾಯಿಯಾದರೂ ಕೊಡಬೇಕಾಗುತ್ತದೆ. ೧೫೦

ಕೋಟಿ ರೂಪಾಯಿ ಕೊಡುತ್ತೇವೆಂದು ವಿಶ್ವಬ್ಯಾಂಕಿಗೆ ಹೇಳಿದಿರಿ. ಇವತ್ತಿನ ದಿವಸ ತಮ್ಮ ಪ್ರಕಾರ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುತ್ತೇವೆ ಎಂದು ಹೇಳಿದರೆ ಅದನ್ನು ನಂಬಲಿಕ್ಕೆ ಆಗುವುದಿಲ್ಲ, ಅದನ್ನು ಒಪ್ಪಲೂ ಕೂಡ ತಯಾರಿಲ್ಲ. ತಾವು ಇದನ್ನು ೨೦೦೦ ಎ.ಡಿ.ಗೆ ಮುಗಿಸುತ್ತೇವೆ ಅಂದರೆ, what is your preparation even on physical terms? ೧೯೭೮ನೇ ಇಸವಿಯಲ್ಲಿ ಯು.ಕೆ.ಪಿ. ಪ್ರಾಜೆಕ್ಟನ್ನು ಏನು ರಿವೈಸ್ ಮಾಡಿ ಇಟ್ಟುಕೊಂಡಿದ್ದೀರೋ ಅದು ಸೆಲ್ಫ್‌ನಲ್ಲಿ ಬಿದ್ದಿದೆ. ಇವತ್ತಿನ ದಿವಸ ಹೊಸ ಪ್ರಾಜೆಕ್ಟನ್ನು ಮಾಡಿಲ್ಲ. ಇನ್ನು Almatti Right Bank Canal ಬಗ್ಗೆ Have you obtained clearance? Are you prepared for Upper Tunga? Are you prepared for Upper Bhadra? It was envisaged even at that time. ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ೧೨೦೦ ಟಿಎಂಸಿ ಸಿಗಬೇಕು ಎಂಬ ವಾದ ಇಟ್ಟೆವು. ಅವರು ೮೩೦ ಟಿಎಂಸಿ ಬರಬೇಕು ಎಂದು ಇದ್ದರೆ ನಾವು ೧೨೦೦ ಟಿಎಂಸಿ ಬರಬೇಕು ಎಂದು ಕೇಂದ್ರಕ್ಕೆ ಕಳಿಸೋಣ. ಏಕೆ ಅಡ್ವಾನ್ಸ್‌ನಲ್ಲಿ ನಮ್ಮನ್ನು ಹಾಕಿಕೊಳ್ಳುತ್ತೀರಿ. Let us ask them to clear our projects also. We will fight with the Government of India. We are one with you as far as State's interest is concerned. Let us get the clearance and let us get the commitment. If they claim 300 TMC, we can also claim another 300 TMC. If this is the game and mischief that one State can play with another, we are also prepared to beat them back with the same coin. ತೆಲುಗು ಗಂಗ ಯೋಜನೆಯ ಕ್ಲಿಯರೆನ್ಸ್ ಡೆಲ್ಲಿಯಲ್ಲಿ ಇರಲಿ. ನಮ್ಮ ಹೊಸ ಪ್ರಾಜೆಕ್ಟ್‌ಗಳನ್ನು ಮಾಡಿ ಅದು ಸಹ ಡೆಲ್ಲಿಗೆ ಕ್ಲಿಯರೆನ್ಸ್‌ಗೆ ಹೋಗಲಿ. If they clear those projects, let them clear this also. We are going to take this stand, We are interested in the people of Karnataka. ಆದುದರಿಂದ ಇವತ್ತಿನ ದಿವಸ ಈ ಕೆಲಸವನ್ನು ತಾವು ಮಾಡಬೇಕಾಗಿದೆ, ಇದರಲ್ಲಿ ಹಿಂದು ಮುಂದೆ ನೋಡಬೇಕಾದ ಪ್ರಶ್ನೆ ಇಲ್ಲ. We are prepared to fight along with you on this issue. We are not permanent here.

SRI M.S. KRISHNAN.—Sir, he said "we are prepared to fight along with you on this issue" ಎಂದು ಮಾನ್ಯ ಮೊಯಿಲಿಯವರು ಹೇಳುತ್ತಾರೆ. ಇಂತಹ ವಿಷಯಗಳು ಬಂದಾಗ ಒಂದು ರಾಜ್ಯಕ್ಕೂ, ಇನ್ನೊಂದು ರಾಜ್ಯಕ್ಕೂ ನೆಲ. ಜಲ ಸಮಸ್ಯೆಗಳು ಬಂದಾಗ ಆ ಸಮಸ್ಯೆಗಳನ್ನೆಲ್ಲಾ ಆದಷ್ಟು ಚರ್ಚೆ ಮಾಡಿ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಕೇಂದ್ರದಲ್ಲಿ ಹೇಳುತ್ತಾ ಇದ್ದಾರೆ. ಇಲ್ಲಿ ಚಳುವಳಿ, ಹೋರಾಟ ಫೈಟ್ ಅಂದರೆ ನನಗೆ ಗೊತ್ತಿಲ್ಲ. ಏನು ಮಾಡುತ್ತೀರಿ ಎನ್ನುವುದನ್ನು ಕಾಂಕ್ರೀಟಾಗಿ ಹೇಳಿದರೆ ಒಳ್ಳೆಯದು.

ಶ್ರೀ ಕೆ.ಎಚ್. ಪಾಟೀಲ್.—ಫೈಟ್ ಅಂದರೇ ಬರೀ ಬಡಿಗೆ ಹಿಡಿದುಕೊಂಡು ಬಡಿದಾಡತಕ್ಕಂಥದ್ದಲ್ಲ.

ಅಧ್ಯಕ್ಷರು.—ಒಂದೂವರೆ ತಾಸ್ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಕೃಷ್ಣನ್‌ರವರು ಈ ವಿಷಯದ ಗಂಭೀರತೆಯ ಬಗ್ಗೆ ತಿಳಿದುಕೊಂಡಿದ್ದಾರೆಂದು ನಾನು ಭಾವನೆ ಮಾಡುತ್ತೇನೆ. ಯಾವ ರೀತಿ ಫೈಟ್ ಮಾಡಬೇಕು ಎನ್ನುವುದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. We are not here to discuss over the Telugu Ganga project. ಡೆಲ್ಲಿಗೆ ಹೋಗಿ, ತೆಲುಗು ಗಂಗಾ ಪ್ರಾಜೆಕ್ಟ್ ಬಂದರೂ ನಮ್ಮ ಪ್ರಾಜೆಕ್ಟ್‌ಗಳನ್ನು ಕಳಿಸೋಣ. ನಮ್ಮ ಬರಗಾಲ ಪೀಡಿತ ಪ್ರದೇಶಗಳಿಗೆ ಪ್ರಾಜೆಕ್ಟ್ಸ್ ಬೇಕು. ನಮ್ಮಲ್ಲಿ ನೀರು ಇದೆ. We are entitled for 1200 TMC or still more and we cannot be deprived of this water. For this fight, we are with you. ಇದನ್ನು ದಯಮಾಡಿ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಇವರು ಶೂರತನದಿಂದ ಭಾಷಣ ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಶೂರತನ ಇದರಲ್ಲಿ ಕಾಣಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಇವರು ಮಾಡುವುದಕ್ಕೆ ತಯಾರಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ಹೆಚ್ಚಿನ ಹಣ ಕೊಡುತ್ತಾ ಇಲ್ಲ, ಅವರ ಸಪೋರ್ಟ್ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನಗೆ ಒಂದು ಆಶ್ಚರ್ಯ ಏನೆಂದರೆ, ಯಾವುದೇ ಒಂದು ಸಂದರ್ಭದಲ್ಲಿ ಇಂತಹ ತಾಂತ್ರಿಕ ವಿಚಾರ ಬಂದಾಗ, ಮತ್ತು ಕರ್ನಾಟಕ ರಾಜ್ಯದ ವಿಚಾರ ಬಂದಾಗ ತಂತ್ರಜ್ಞರು, ನಮ್ಮ ಇಂಜಿನಿಯರ್ಸ್ ಎಲ್ಲಾ ಸುಮ್ಮನೆ ಇದ್ದಾರೆ. No technical man is protesting and raising objections. No technical man, outside the Government or inside the Government, has come forward to protest when greatest injustice is being done to this State. ಇದು ಒಂದು ದುರವಸ್ಥೆಯಾಗಿದೆ. ಏಕೆಂದರೆ, ಇವತ್ತು ಆಂಧ್ರ ಪ್ರದೇಶದಲ್ಲಿ ಇದನ್ನು ಒಂದು ರಾಜಕೀಯ ಮಾಡುತ್ತಾ ಇದ್ದಾರೆ, ಕಾಂಗ್ರೆಸ್ಸಿನ ವೀರಪ್ಪ ಮೊಯಿಲಿಯವರು ರೈಸ್ ಮಾಡುತ್ತಾ ಇದ್ದಾರೆ ಎಂದು,

ಶ್ರೀ ಆರ್. ವೆಂಕಟರಾಮಯ್ಯ.—ಆಂಧ್ರ ಕಾಂಗ್ರೆಸಿನವರು ಗಲಾಟೆ ಮಾಡುತ್ತಾ ಇದ್ದಾರೆ. ಇವರ ಫ್ರೆಂಡ್ ರಾಜಶೇಖರ್ ರೆಡ್ಡಿಯವರೇ ಗಲಾಟೆ ಮಾಡುತ್ತಾ ಇರುವವರು.

SRI M. VEERAPPA MOILY.—We are raising this issue. I am not bothered about it.

1-30 P.M.

Our Prime Minister, our Party leader and our President have given absolute liberty to us to take our own stand as far as the State's interest is concerned. I am making this official statement. I am bold enough to face anything and I stand by my words. I am here to protect the interest of the State. This is concerning the people and we have got to be with the people as far as this issue is concerned. Let him go to Delhi. If that project is cleared this should also be cleared. He has got to realise this. He may be an honourable Chief Minister. I am not casting aspersions. He is a respectable person. But he should not take it for a ride. This is my humble submission to him. ಇದರ ಬಗ್ಗೆ ಬೇಕಾದರೆ ಓಪನ್ ಚರ್ಚೆಯಾಗಲಿ ಅಧಿಕಾರಿಗಳು ಅಥವಾ ವಿರೋಧಪಕ್ಷದವರು ಮಾತ್ರವಲ್ಲ. Our Hon'ble Chief Minister should stand up. Let there be an open debate on this matter as far as the utilisation of the water of Krishna basin is concerned and Krishna river is concerned. ಉದಾಹರಣೆಗೆ ಹೇಳುವುದಾದರೆ ಬಿ.ಡಿ.ಎ. ನಲ್ಲಿ ಒಂದೆರಡು ಸೈಟ್ ಇದೆ ಎರಡು ವರ್ಷದಲ್ಲಿ ಮನೆ ಕಟ್ಟಬೇಕೆಂದು ಅವರು ಹೇಳಿದರೆ ಕಟ್ಟುವುದಿಲ್ಲ. ಅಲ್ಲಲ್ಲಿ ಗೋಡೆ ಹಾಕುತ್ತಾರೆ. There are methods to utilise water. ಆದ್ದರಿಂದ ನಾವು ಇವತ್ತು ಈ ವಿಚಾರವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ೧೫ ವರ್ಷದಲ್ಲಿ ತಾವು ರಿಸೋರ್ಸಸ್ ಮೊಬಿಲೈಸ್ ಮಾಡಬೇಕು, ಹೊಸ ಪ್ರಾಜೆಕ್ಟ್‌ಗಳನ್ನು ಮಾಡಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ (UKP) ಕಾವೇರಿ ಬೇಸಿನ್ ತೆಗೆದುಕೊಂಡು ನಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡಬೇಕಾದುದು ಅಗತ್ಯವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಿಕ್ಸ್ತ್ ಪ್ಲಾನ್ ಪೀರಿಯಡ್‌ನಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಗೆ ನಾನು ಅಧ್ಯಕ್ಷನಾಗಿದ್ದೇನೆ. ಅದು ತನಿಖೆಯಾಗುತ್ತಿದೆ. ಆದ್ದರಿಂದ ಅದನ್ನು ವಿವರವಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. I will be handicapped in this behalf ನಾವು ಅಲ್ಲಿಗೆ ಹೋಗಿದ್ದೆವು. ೧೯೮೫ರಲ್ಲಿ ಆರ್ಬಿಟ್ರೇಷನ್ ಕೇಸನ್ನು ಸೆಟಲ್ ಮಾಡಿದ್ದಾರೆ. I am not going into the merits of those arbitration cases. ಇವತ್ತಿಗೂ ಕೂಡ ಅಲ್ಲಿ

ಕೆಲಸ ಮಾತ್ರ ನಿಧಾನವಾಗಿ ಆಗುತ್ತಿದೆ. ಕೆಲಸವನ್ನು ಚುರುಕುಗೊಳಿಸಲು ಯಾವ ಕಾರ್ಯಕ್ರಮಗಳೂ ಅಲ್ಲಿ ಕಾಣುತ್ತಿಲ್ಲ. ಅದನ್ನು ಚುರುಕುಗೊಳಿಸಬೇಕು. ಈ ತರಹ ಕೆಲಸ ನಡೆಯುತ್ತಿದ್ದರೆ ಬಹುಶಃ ೧೫ ವರ್ಷವಲ್ಲ ೫೦ ವರ್ಷವಾದರೂ ಕೂಡ ಈ ಪ್ರಾಜೆಕ್ಟ್‌ಗಳು ಮುಂದುವರಿಯಲು ಖಂಡಿತವಾಗಿ ಸಾಧ್ಯವಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಿಕ್ಸ್ತ್ ಪ್ಲಾನ್ ಪೀರಿಯಡ್‌ನಲ್ಲಿ ನಿಮಗೆ ಗೊತ್ತಿದೆ. There is heavy slippage to the extent of 60 percent. As against 4,76,310 hectares our achievement both in the approved and unapproved programmes plan and non-plan is 9,93,353 hectares. That means our achievement is nearly 40percent. ಕಳೆದವರ್ಷ ಮತ್ತು ಈವರ್ಷ ಈ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಈ ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ತಾವು ಏನು ಮಾಡಿದ್ದೀರಿ? ಇದು ಬಹಳ ಪ್ರಾಮುಖ್ಯವಾದ ವಿಚಾರ. ಉದಾಹರಣೆಗೆ ಹೇಳುವುದಾದರೆ, ಮಲಪ್ರಭಾ, ಘಟಪ್ರಭಾ ಯೋಜನೆ ಹಾಗೂ ಇನ್ನೂ ಅನೇಕ ಯೋಜನೆಗಳ ವಿವರವನ್ನು ನೋಡಿದಾಗ, ಇದರ ಬಗ್ಗೆ ಸಾಕಷ್ಟು ಗವರ್ನಮೆಂಟ್ ಹಾಗೆ ಕಾಣುವುದಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕೂಡ ೧೯೮೦–೮೧ರಲ್ಲಿ ೪೧.೯೪ ಕೋಟಿ ಅಲಾಟ್‌ಮೆಂಟ್ ಇದ್ದು ಎಕ್ಸ್‌ಪೆಂಡಿಚರ್ ೪೦.೧೧ ಕೋಟಿ ರೂಪಾಯಿ. For 1981-82 allotment is 41.90 crores and actual expenditure is 44.78 crores. For 1982–83 budget provision is 53.78 crores whereas expenditure is 40.84 crores. During that year therewas less expenditure because of arbitration cases. In 1983–84 50.60 crores is the allotment and expenditure is 49.10 crores. For 1984-85 provision made is 52.1! crores and expenditure is 49.10 crores. In 1984–8ɜ budget provision made is 52.11 crores and expenditure is 41.73 crores. There is heavy slippage. ನಾವು ಈ ತರಹ ಖರ್ಚು ಮಾಡುತ್ತಾ ಹೋದರೆ ಯಾವುದೇ ರೀತಿಯಲ್ಲಿ ಈ ಕೆಲಸವನ್ನು ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಇರಿಗೇಷನ್ ವಿಚಾರ ತೆಗೆದುಕೊಳ್ಳಿ ಅಥವಾ ಪಿಡಬ್ಲ್ಯುಡಿ. ಇಲ್ಲವೇ ಇನ್ನಿತರ ವಿಚಾರಗಳನ್ನು ತೆಗೆದುಕೊಂಡರೂ ಕೂಡ ಇವತ್ತಿನ ಪರಿಸ್ಥಿತಿ ಆಶಾದಾಯಕವಾಗಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಇವತ್ತು ನಮ್ಮ ನೀರಿನ ಹಕ್ಕನ್ನು ಕಳೆದುಕೊಳ್ಳುವುದು ಮಾತ್ರವಲ್ಲ, ನಮ್ಮ ಅಭಿವೃದ್ಧಿಯ ಗತಿಯನ್ನೇ ಸ್ಥಗಿತಗೊಳಿಸತಕ್ಕಂತಹ ಒಂದು ಪರಿಸ್ಥಿತಿ ಈ ಇಲಾಖೆಯಲ್ಲಿ ನಡೆಯುತ್ತಿದೆ. ಈ ಬೇಡಿಕೆ ವಿಚಾರದಲ್ಲಿ ನನಗೆ ಸಾಕಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಮಂತ್ರಿಗಳು ಈ ಇಲಾಖೆಯನ್ನು ಸಂಪೂರ್ಣವಾಗಿ ಸರ್ಜರಿ ಮಾಡಲಿಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೋ ಎಂದು ಅವರ ಉತ್ತರವನ್ನು ಕಾದು ನೋಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಲೋಕೋಪಯೋಗಿ ಇಲಾಖೆಯ ಮೇಲಿನ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾತನಾಡಿರತಕ್ಕಂತಹ ವೀರಪ್ಪಮೊಯಿಲಿಯವರು ಅನೇಕ ರೀತಿಯ ವಿಷಯವನ್ನು ಹೇಳಿದ್ದಾರೆ. ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ವಿಶ್ಲೇಷಣೆ ಕೊಟ್ಟಿದ್ದಾರೆ. ಸಣ್ಣ ನೀರಾವರಿ ಯೋಜನೆ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಅದರಿಂದಾಗಿ ಈ ದೇಶದ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಸಾಧ್ಯವಾಗುತ್ತದೆಂದು ನಂಬಿಕೊಂಡಿರತಕ್ಕಂತಹವರಲ್ಲಿ ನಾನೂ ಒಬ್ಬನಾಗಿ ಅದನ್ನು ಮತ್ತೆ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಹೆಚ್ಚು ಮಾಡಿದರೆ, ಈ ದೇಶದಲ್ಲಿ ಹರಿದು ಹೋಗತಕ್ಕಂಥಾ ನೀರನ್ನು ಅಲ್ಲಲ್ಲೇ ತಡೆಗಟ್ಟಿ ಅಂತರ್‌ಜಲವನ್ನು ಹೆಚ್ಚಿನ ಮಟ್ಟದಲ್ಲಿ ಸಂಗ್ರಹಿಸಲು ಅವಕಾಶವಾಗುತ್ತದೆ. ನಮ್ಮ ಇವತ್ತಿನ ಪರಿಸ್ಥಿತಿಯಲ್ಲಿ ಬೋರ್‌ವೆಲ್‌ಗಳು ೧೫೦–೨೦೦ ಅಡಿಗಳಿಗೆ ಹೋದರೂ

† ಈ ಚಿಹ್ನೆಯೂ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನೀರು ಸಿಗುತ್ತಿಲ್ಲ. ಅದಕ್ಕೆ ಕಾರಣವಾದರೂ ಇಷ್ಟೆ. ಬಿದ್ದ ನೀರು ಸಮುದ್ರವನ್ನು ಸೇರುತ್ತಿದ್ರೆ ಅದಕ್ಕೆ ತಾವು ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕು. ಅನೇಕ ಸಣ್ಣ ಸಣ್ಣ ಕೆರೆಗಳು ಮತ್ತು ಗುಂಟೆಗಳಿಗೆ ಪಿಕ್‌ಅಪ್‌ಗಳನ್ನು ಕಟ್ಟುವುದರಿಂದ ಅಲ್ಲಲ್ಲಿ ನೀರನ್ನು ತಡೆದು ನಿಲ್ಲಿಸಿ ಭೂಮಿಯಲ್ಲಿ ಅಂತರ್ಜಲವನ್ನು ಜಾಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡುವುದರಿಂದ ಕೇವಲ ಒಂದೆರಡು ಭಾಗಗಳಲ್ಲಿ ಈ ಸೌಲಭ್ಯವನ್ನು ಒದಗಿಸಬಹುದೇ ಹೊರತು ಎಲ್ಲ ಭಾಗಗಳಿಗೂ ಒದಗಿಸುವುದಕ್ಕಾಗುವುದಿಲ್ಲ. ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡುವುದರಿಂದ ದೇಶದ ಎಲ್ಲಾ ಭಾಗಗಳಿಗೂ ಅಂದರೆ ಬಡವನಿಂದ ಹಿಡಿದು ಶ್ರೀಮಂತನವರೆಗೂ ಅನುಕೂಲತೆ ಮಾಡಿಕೊಡುವುದಕ್ಕೆ ಅವಕಾಶವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿ ಹಳ್ಳಿಯಲ್ಲೂ ಕೂಡ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆ. ಮೇಜರ್ ಇರಿಗೇಷನನ್ನು ದೊಡ್ಡ ದೊಡ್ಡ ನದಿಗಳು ಹರಿಯುತಕ್ಕಂಥ ಪ್ರದೇಶಗಳಲ್ಲಿ ಮಾತ್ರ ಕಟ್ಟುವುದಕ್ಕೆ ಸಾಧ್ಯವಿದೆ. ಇದರಿಂದ ಹೆಚ್ಚಿನ ಜನಗಳಿಗೆ ಪ್ರಯೋಜನವಾಗುವುದಿಲ್ಲ. ಕೆಲವು ಭಾಗದ ಜನರಿಗೆ ಮಾತ್ರ ಪ್ರಯೋಜನವಾಗುತ್ತದೆ. ಆದರೆ ಮೈನರ್ ಇರಿಗೇಷನ್ ಮಾಡುವುದರಿಂದ ದೇಶದ ಎಲ್ಲಾ ಮೂಲೆಗಳಲ್ಲಿನ ಜನತೆಗೆ ಪ್ರಯೋಜನವಾಗುತ್ತದೆಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೈನರ್ ಇರಿಗೇಷನ್ ಈಗ ಬಹಳ ಕಡಿಮೆಯಾಗಿದೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದರ ಜೊತೆಗೆ ಅಲ್ಲಿ ಕ್ಯಾಚ್‌ಮೆಂಟ್ ಏರಿಯಾ ಕೂಡ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ಅರ್ಕಾವತಿ, ಕಣ್ವ, ನಲ್ಲಿಗುಡ್ಡೆಗಳಿಗೆ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿರುವುದರಿಂದ ಅದರ ಮೇಲ್ಭಾಗದಲ್ಲಿ ಯಾವ ಪಿಕಪ್‌ಅನ್ನಾಗಲೀ ಇಲ್ಲವೇ ಸಣ್ಣ ಕೆರೆಗಳನ್ನಾಗಲೀ ಕಟ್ಟುವ ಹಾಗಿಲ್ಲ. ಹಾಗೂ ಅಡ್ಡ ಬರತಕ್ಕಂತಹ ನೀರನ್ನು ತಡೆಯುವುದಕ್ಕೆ ಅವಕಾಶವಿಲ್ಲ ಕ್ಯಾಚ್‌ಮೆಂಟ್ ಏರಿಯಾ ಬರುತ್ತದೆಂದು ಹೇಳುತ್ತಾರೆ. ಆ ಪ್ರದೇಶದ ಜನರಿಗೆ ಅನ್ಯಾಯವಾಗದ ಹಾಗೆ ಕೆರೆ ಕಟ್ಟೆಗಳನ್ನು ಕಟ್ಟುವುದಕ್ಕಾಗುತ್ತಿಲ್ಲ. ನೀರಿಲ್ಲದೆ ಕ್ಷಾಮದ ದವಡೆಗೆತುತ್ತಾಗುತ್ತಿದ್ದಾರೆ.

ಈವತ್ತಿನ ದಿವಸ ನಮ್ಮ ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಅರ್ಕಾವತಿ ಮತ್ತು ಮಂಚನಬೆಲೆಯಿಂದ ಬರತಕ್ಕಂಥ ನದಿಗೆ ಯಾವ ಭಾಗದಲ್ಲೂ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಆಗಲಿ ಪಿಕಅಪ್‌ಗಳನ್ನು ಕಟ್ಟುವುದಕ್ಕೇ ಆಗಲಿ ಸಾಧ್ಯವಿಲ್ಲ. ಇದರಿಂದಾಗಿ ೧೫೦ ೨೦೦ ಅಡಿಗಳವರೆಗೆ ಬೋರ್‌ವೆಲ್‌ಗಳನ್ನು ಹಾಕಿದರು ನೀರಿನ ಮಟ್ಟ ಬಹಳ ಕೆಳಗೆ ಇರುವುದರಿಂದ ನೀರನ್ನು ಎತ್ತಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗದೆ ಬರಗಾಲ ದವಡೆಗೆ ಸಿಕ್ಕಿ ನರಳತಕ್ಕಂಥ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಈ ವರ್ಷವೇ ಮೈನರ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡು ಹೆಚ್ಚಿನ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅದೇರೀತಿ ಈಗಾಗಲೇ ಮಾತನಾಡಿ ಈ ವರ್ಷದ ಬಡ್ಜೆಟ್‌ನಲ್ಲಿ ೩-೪ ಕೋಟಿಯಷ್ಟು ಹಣವನ್ನು ಕಡಿಮೆ ಮಾಡಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಿದರು. ಇದಕ್ಕೆ ಕಾರಣವಾದರೂ ಇಷ್ಟೇ ಎಂದು ನಾನಾದರೂ ತಿಳಿದುಕೊಂಡಿರುತ್ತೇನೆ. ಕಳೆದ ೨-೩ ವರ್ಷಗಳಿಂದ ನಮ್ಮ ರಾಜ್ಯಕ್ಕೆ ಆರ್ಥಿಕ ಮುಗ್ಗಟ್ಟು ಉಂಟಾದುದು ಅಲ್ಲದೆ ಮಳೆಯಾಗದೆ ಬರಗಾಲ ಪರಿಸ್ಥಿತಿ ಉಂಟಾಯಿತು. ಮತ್ತೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣದಲ್ಲೂ ಕೂಡ ಕೊರತೆ ಯುಂಟಾಯಿತು, ನಮ್ಮಲ್ಲಿ ವಸೂಲುಮಾಡತಕ್ಕಂಥ ಹಣಕ್ಕೆಲ್ಲ ರೆಮಿಷನ್ ಕೊಡಬೇಕೆಂದು ಒತ್ತಾಯ ಬಂದುದರಿಂದ ರೈತರಿಂದ ಬರಬೇಕಾದ ರೆವಿನ್ಯೂವನ್ನು ವಸೂಲು ಮಾಡಲು ಸಾಧ್ಯವಾಗಲಿಲ್ಲ. ಇವೆಲ್ಲ ಕಾರಣಗಳಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಬೇಕಾಯಿತು. ಕೇಂದ್ರ ಹಣವನ್ನು ಒದಗಿಸದ ಕಾರಣ ನಮ್ಮ ಬಜೆಟ್‌ನಲ್ಲೂ ಹಣವನ್ನು ಒದಗಿಸಬೇಕಾಗಿರತಕ್ಕಂಥ ಬಾಬಿಗೆಲ್ಲ ಹಣವನ್ನು ಒದಗಿಸುವುದು ಕಡಿಮೆಯಾಯಿತು. ಅಲ್ಲದೆ ನಮ್ಮ ದುರ್ದೈವದಿಂದ ಕ್ಷಾಮದ ದವಡೆಯಲ್ಲಿ ಸಿಕ್ಕಿ ಮೂರು ವರ್ಷಗಳಿಂದ ನರಳಬೇಕಾದ ಪರಿಸ್ಥಿತಿ ಬಂದಿತು ಎಂದು ಹೇಳಿದರೆ ತಪ್ಪಾಗಲಾರದು. ಹಿಂದಿನ ವರ್ಷಗಳಲ್ಲಿ ಅಂದರೆ ೧೯೮೧–೮೨ನೇ ಇಸವಿಯಲ್ಲಿ ಇಂಥ ಒಂದು ಪರಿಸ್ಥಿತಿ ಈ ರಾಜ್ಯಕ್ಕೆ ಒದಗಿರಲಿಲ್ಲ. ಆ ಕಾಲದಲ್ಲಿ ಯಾವುದೇ ವಿಧವಾದ ರೆಮಿಷನ್ ಕೊಟ್ಟಿರಲಿಲ್ಲ. ಆರ್ಥಿಕ ಸ್ಥಿತಿ ಉತ್ತಮವಾಗಿದ್ದು ಸರ್ಕಾರ ಎಲ್ಲರಿಗೂ ಹಣವನ್ನು ಒದಗಿಸತಕ್ಕಂಥ ಸ್ಥಿತಿಯಲ್ಲಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜನತಾ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ರಸ್ತೆಗಳ ಕೆಲಸ ಮತ್ತು ಸೇತುವೆಗಳನ್ನು ಕಟ್ಟಿಸತಕ್ಕಂಥ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಹಣ ಬೇಕಾಗಿರುತ್ತದೆ. ರಾಜ್ಯವು ಕ್ಷಾಮದ ದವಡೆಗೆ ಸಿಲುಕಿರುವುದರಿಂದ ಹಣವನ್ನು ಒದಗಿಸಲು

ಸರ್ಕಾರಕ್ಕೆ ಕಷ್ಟವಾಗಬಹುದು. ಏತಕ್ಕೆಂದರೆ ಓವರ್‌ಡ್ರಾಫ್ಟನ್ನು ನಿಲ್ಲಿಸುವುದಕ್ಕೆ ಅವಕಾಶವಿಲ್ಲ. ಹಿಂದೆ ಓವರ್‌ಡ್ರಾಫ್ಟುಗಳು ಹೆಚ್ಚಿನ ಮಟ್ಟದಲ್ಲಿ ನಿಲ್ಲುತ್ತಿತ್ತು. ಆದರೆ ಈಗ ಓವರ್ ಡ್ರಾಫ್ಟನ್ನು ನಿಲ್ಲಿಸುವುದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಇದರಿಂದಾಗಿ ಸರ್ಕಾರದ ಎಲ್ಲಾ ಖಾತೆಗಳಿಗೂ ಹಣವನ್ನು ಒದಗಿಸುವುದರಲ್ಲಿ ಕುಂಠಿತವಾಗುತ್ತದೆ. ಈ ಒಂದು ಕಷ್ಟದಿಂದ ನಿವಾರಣೆಯಾಗಿ ಸುಭಿಕ್ಷ ಸ್ಥಿತಿಗೆ ಬರಬೇಕಾದರೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿದರೆ ರಾಜ್ಯದ ಎಲ್ಲ ಕಾರ್ಯಗಳು ಸರ್ವತೋಮುಖ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಸಮಂಜಸವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸರ್ಕಾರದವರು ಹಾಕಿಕೊಂಡಿರುವ ಅನೇಕ ಕಾರ್ಯಕ್ರಮಗಳು ಅಂದರೆ ಗಂಗಾ ಕಲ್ಯಾಣ ಸೇತುಬಂಧನ, ಹಳೆ ರಸ್ತೆಗಳು ಮತ್ತು ಹೆದ್ದಾರಿಗಳ ರಿಪೇರಿ ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಏನೇನು ಹಾಕಿಕೊಂಡಿದ್ದಾರೋ ಇದಕ್ಕೆಲ್ಲ ಹಣವನ್ನು ಒದಗಿಸಲು ನಮ್ಮಲ್ಲಿ ಅಷ್ಟೇ ಮಟ್ಟಿನ ಹಣದ ಉತ್ಪಾದನೆಯೂ ಕೂಡ ಇರಬೇಕು. ಆರ್ಥಿಕ ಕೊರತೆ ಇರುವುದರಿಂದ ಕೇಂದ್ರ ಸರ್ಕಾರವನ್ನು ಕೇಳಬೇಕಾಗಿದೆ. ಕೇಂದ್ರ ಸರ್ಕಾರವನ್ನು ಬರಪರಿಹಾರಕ್ಕಾಗಿ ೧೫೦ ಕೋಟಿ ರೂಪಾಯಿಗಳನ್ನು ಕೇಳಿದರೆ, ಕೇವಲ ೪೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧೦೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾದ ಪರಿಸ್ಥಿತಿ ಇರುವುದರಿಂದ ಈ ಯೋಜನೆಗಳಿಗೆ ಹಣವನ್ನು ಒದಗಿಸುವುದು ಕಷ್ಟವಾಗುತ್ತದೆಂದು ನಾನಾದರೂ ತಿಳಿದುಕೊಂಡಿರುತ್ತೇನೆ. ಈ ಯೋಜನೆಗಳಿಗೆ ಹಣ ಲಭ್ಯವಾಗಬೇಕಾದರೆ ರಾಜ್ಯದಲ್ಲಿ ಉತ್ಪಾದನೆಯ ಸಾಮರ್ಥ್ಯವನ್ನೂ ಕೂಡ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಗಂಗಾಕಲ್ಯಾಣದಂಥ ಯೋಜನೆಗಳ ಮುಖಾಂತರ ಕೆರೆಕಟ್ಟೆಗಳ ರಿಪೇರಿ, ಬೋರ್‌ವೆಲ್‌ಗಳನ್ನು ಹಾಕುವುದು, ಸಾಮೂಹಿಕ ಬೇಸಾಯ ಪದ್ಧತಿಯನ್ನು ಜಾರಿಗೆ ತಂದು ಅಭಿವೃದ್ಧಿಪಡಿಸುವುದು ಇದೆಲ್ಲ ಕೆಲಸಕಾರ್ಯಗಳೂ ಕೂಡ ಆಗತ್ಯವಾಗಿ ಆಗಬೇಕಾಗಿರುತ್ತದೆ. ಇದಕ್ಕೆಲ್ಲ ಹಣವನ್ನು ಒದಗಿಸಿದ್ದೇ ಆದರೆ ಉತ್ತಮಮಟ್ಟದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆಂದು ಹೇಳಿದರೆ ತಪ್ಪಾಗಲಾರದು. ಹಿಂದೆ ಸೇತುವೆಗಳ ಕೆಲಸ, ರಸ್ತೆಗಳ ರಿಪೇರಿ ಕೆಲಸಗಳು ನಾನಾ ಕಾರಣಗಳಿಂದಾಗಿ ನಿಂತು ಹೋಗಿತ್ತು. ಜನತಾ ಸರ್ಕಾರ ಬಂದಮೇಲೆ ಕಾರ್ಯಗತವಾಗಿದೆ, ಅನೇಕ ಪ್ರಾಜೆಕ್ಟುಗಳು ಮುಕ್ತಾಯವಾಗತಕ್ಕಂಥ ಸ್ಥಿತಿಗೆ ಬಂದಿದೆ. ಮುಂಚನಬೆಲೆ ಪ್ರಾಜೆಕ್ಟ್ ಸುಮಾರು ೧೨–೧೩ ವರ್ಷಗಳ ಹಿಂದೆಯೇ ಪ್ರಾರಂಭವಾದದ್ದು. ಕೆಲವಾರು ವರ್ಷಗಳು ನಿರ್ಮಾಣದ ಹಂತದಲ್ಲಿಯೇ ನಿಂತುಹೋಗಿತ್ತು. ಈಗ ಮುಕ್ತಾಯದ ಮಟ್ಟಕ್ಕೆ ಬಂದಿದೆ. ಇನ್ನು ಹೆಚ್ಚಿನ ಹಣದ ಸೌಕರ್ಯವಾದರೆ ನಿಂತಿರತಕ್ಕಂಥ ಎಲ್ಲಾ ಕೆಲಸಗಳನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ೧೨–೧೩ ವರ್ಷಗಳಾದರೂ ಮುಗಿಯದೆ ಇರತಕ್ಕಂಥ ಅನೇಕ ನೀರಾವರಿ ಯೋಜನೆಗಳು ಕೇವಲ ಇನ್ನು ೩–೪ ವರ್ಷದಲ್ಲಿಯೇ ಮುಗಿಯುತಕ್ಕಂಥ ಸ್ಥಿತಿಯಲ್ಲಿದೆ. ಇದಕ್ಕೆಲ್ಲ ಕೇಂದ್ರದಿಂದ ಹಣದ ಸಹಾಯ ದೊರೆಯಬೇಕು. ನಮ್ಮ ವಿರೋಧ ಪಕ್ಷದ ನಾಯಕರು ನಮ್ಮ ಯೋಜನೆಗಳಿಗೆ ಎಷ್ಟರಮಟ್ಟಿಗೆ ಹಣ ಬೇಕಾಗುತ್ತದೆ ಅಷ್ಟು ಹಣವನ್ನು ಒದಗಿಸಲು ಕೇಂದ್ರ ಸರ್ಕಾರದೊಡನೆ ಹೋರಾಟ ಮಾಡಿ ಅಷ್ಟು ಹಣವನ್ನು ಕೊಡಿಸಲು ಒತ್ತಾಯ ತರುವಂಥ ಮನಸ್ಸು ಮಾಡಿದರೆ, ನಾವೂ ಕೂಡ ನಮ್ಮ ರಾಜ್ಯವನ್ನು ಪ್ರಗತಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಯವ್ಯಯದಲ್ಲಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ಎಲ್ಲ ವಿಷಯಗಳನ್ನು ಹೇಳಿದ್ದಾರೆ. ಮೇಜರ್ ಇರಿಗೇಷನ್‌ಗಿಂತ ಹೆಚ್ಚಿನ ಮಟ್ಟಿಗೆ ಮೈನರ್ ಇರಿಗೇಷನ್‌ಗೆ, ಬೋರ್‌ವೆಲ್‌ಗಳಿಗೆ ಇಂಥ ಅನೇಕ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೈಗೊಳ್ಳುವುದರಿಂದ ದೇಶದ ಸ್ಥಿತಿ ಉತ್ತಮಪಡಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗಿರತಕ್ಕಂಥ ಬರದ ಪರಿಸ್ಥಿತಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವಂತೆ ಇಲ್ಲ. ಮತ್ತೆ ಓವರ್ ಡ್ರಾಫ್ಟನ್ನು ಇನ್‌ಕ್ರೀಸ್ ಮಾಡುವಂತೆಯೂ ಇಲ್ಲ. ನಮ್ಮ ರಾಜ್ಯದಲ್ಲಿರತಕ್ಕಂಥ ೧೯ ಜಿಲ್ಲೆಗಳಲ್ಲಿ ೧೬ ಜಿಲ್ಲೆಗಳು ಕ್ಷಾಮದ ದವಡೆಗೆ ಸಿಲುಕಿ ಕ್ಷಾಮವನ್ನು ಎದುರಿಸತಕ್ಕಂಥ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಈ ವರ್ಷದ ಬಜೆಟ್‌ನಲ್ಲಿ ಹಣ ಸ್ವಲ್ಪ ಕಡಿಮೆ ಪ್ರೊವೈಡ್ ಮಾಡಿದ್ದರೂ ತೆಗೆದುಕೊಂಡಿರತಕ್ಕಂಥ ಕೆಲಸಗಳನ್ನು ಮುಗಿಸುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಪಿ.ಡಬ್ಲ್ಯು.ಡಿ. ಇಲಾಖೆಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ದೇವೇಗೌಡರು ಬಹಳ ದಕ್ಷರು ಇದ್ದಾರೆ. ಅವರಿಗೆ ಬಹಳಷ್ಟು ಅನುಭವ ಇರುವುದರಿಂದ ಯಾವರೀತಿಯಿಂದಲಾದರೂ ಅವರು ಕೆಲಸ ಕಾರ್ಯಗಳನ್ನು ಸಾಧನೆ ಮಾಡುತ್ತಾರೆನ್ನುವ ಭರವಸೆ ಇದೆ. ಅವರು ಯಾವುದೇ ರೀತಿಯಲ್ಲಿ ತಮ್ಮ

ಇಲಾಖೆಯು ಕುಂಠಿತವಾಗುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಸನ್ಮಾನ್ಯ ಸಭಾಧ್ಯಕ್ಷರೇ ಈ ಖಾತೆ ಬಹಳ ಪ್ರಮುಖವಾದಂಥ ಖಾತೆಯಾಗಿರುತ್ತದೆ. ಕರ್ನಾಟಕದ ಅಭಿವೃದ್ಧಿ ಮಾನ್ಯ ದೇವೇಗೌಡರ ಮೇಲೆ ಅವಲಂಬಿಸಿದೆ. ಆದರೆ ದುರಾದೃಷ್ಟವಶಾತ್ ಇದಕ್ಕೆ ಎಷ್ಟು ಆದ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಆದ್ಯತೆಯನ್ನು ಕೊಡುತ್ತಿಲ್ಲ. ಇದು ನಮ್ಮ ದುರಾದೃಷ್ಟವಾಗಿದೆ. ಏತಕ್ಕೆಂದರೆ ಒಟ್ಟು ಇರಿಗೇಷನ್ ಪೊಟೆನ್‌ಷಿಯಾಲಿಟಿ ಜಾಸ್ತಿ ಮಾಡಬೇಕೆಂದು ಹೇಳಿ, ಪ್ಲಾನ್‌ನಲ್ಲಿ ಅವರು ಕೊಟ್ಟಿರುವಂತೆ ಐಟಮ್ ನಂಬರ್ (೪), ಟೇಬಲ್ ಒಂದು, ಇದರಲ್ಲಿ ನಮೂದಿಸಿದ್ದಾರೆ. ೧೩೨ ಕೋಟಿ ಆಂಟಿಸಿಪೇಟೆಡ್ ಎಕ್ಸ್‌ಪೆಂಡೀಚರ್ ಆದರೆ ಇವರಿಗೆ ಬಂದಿರತಕ್ಕಂಥ ಅಲಾಟ್‌ಮೆಂಟ್ ಇರಿಗೇಷನ್ ಅಂಡ್ ಫ್ಲಡ್ ಕಂಟ್ರೋಲ್‌ಗೆ ಕೇವಲ ೧೯.೬೩ ಕೋಟಿ. ಸರ್ಕಾರದವರು ಕೊಟ್ಟಿರತಕ್ಕಂಥ ಈ ಲಿಮಿಟ್‌ನಲ್ಲಿ ಮಾನ್ಯ ದೇವೇಗೌಡರು ಏನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡ ಬೇಕಾಗಿದೆ. ಅವರೇನೋ ಹೇಳಿಕೊಂಡು ತಿರುಗಾಡುತ್ತಿರುತ್ತಾರೆ. ಬಚಾವತ್ ಅವಾರ್ಡ್‌ನಲ್ಲಿ ಹೇಳಿರತಕ್ಕಂಥದ್ದನ್ನು ನಾವು ಓದಿದ್ದೇವೆ. ಅದರಲ್ಲಿ ವಾಟರ್ ರಿಡಿಸ್ಟ್ರಿಬ್ಯೂಷನ್‌ಗೆ ಅವಕಾಶಮಾಡಿ ಕೊಟ್ಟಿದ್ದಾರೆ. ನಾವಂತೂ ನಮ್ಮ ಪಾಲು ನೀರನ್ನು ಬಿಡುವುದಕ್ಕೆ ಸಾಧ್ಯವಿಲ್ಲ.

ಮಾನ್ಯ ಅಧ್ಯಕ್ಷರೆ, ಆಂಧ್ರದಲ್ಲಿ ನಮ್ಮ ಕಾಂಗ್ರೆಸ್ ಮಿತ್ರರು ಈ ಒಂದು ನಿರ್ಣಯವನ್ನು ಇಂಪ್ಲಿ ಮೆಂಟ್ ಮಾಡುತ್ತಿಲ್ಲ. ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ಈ ರಾಮಕೃಷ್ಣ ಹೆಗಡೆಯವರ ಮಾತು ಕೇಳಿ, ಇವರು ಇಂಪ್ಲಿಮೆಂಟ್ ಮಾಡುತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದೇನೆ. ಆಂಧ್ರದಲ್ಲಿರುವ ಕಾಂಗ್ರೆಸ್‌ನವರ ಧ್ಯೇಯಧೋರಣೆಗಳನ್ನು ತರ್ಕ ಮಾಡುತ್ತಿಲ್ಲ. ಈ ರೀತಿ ಅವರ ಮಾತನ್ನು ಹೋಲಿಸಿ ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಅವರನ್ನು ಟೀಕೆ ಮಾಡುತ್ತಿಲ್ಲ. ದುರಾದೃಷ್ಟವಶಾತ ನಾವು ಟೀಕೆ ಮಾಡೋಣ. ಇದು ರಾಷ್ಟ್ರೀಯ ಪಾರ್ಟಿಯಾದ್ದರಿಂದ .....

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮೊಯಿಲಿಯವರು ಹೇಳಿದರು ನಾವು ನಿಮಗೆ ಸಪೋರ್ಟ ಮಾಡುತ್ತೇವೆ, ಅಂದರೆ, ದೇವೇಗೌಡರಿಗೆ ಸಪೋರ್ಟ ಮಾಡುತ್ತೇವೆಂದು ಹೇಳಲಿಲ್ಲ. ದೇವೇಗೌಡರಿಗೆ ರಾಜ್ಯವನ್ನು ರಕ್ಷಣೆ ಮಾಡುವಂತಹ ಕಾರ್ಯಗಳಲ್ಲಿ ಸಪೋರ್ಟ್ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ರಾಜಕೀಯ ದುರುದ್ದೇಶ ಉಂಟು. ನಾನು ಒಂದು ಮಾತನ್ನು ಹೇಳುವುದೇನೆಂದರೆ, ಒಂದು ಸತ್ಯ ನಮ್ಮ ಸ್ಟೇಟ್ ಇಂಟರೆಸ್ಟ್ ಬಗ್ಗೆ ಕೆ. ಹೆಚ್. ಪಾಟೀಲ ರಿಗೆ ಒಂದಾಗಿದ್ದೇನೆ. ನಮ್ಮ ರಾಜ್ಯದಲ್ಲಿ ರಿಸೋರ್ಸಸ್ ಕಡಿಮೆ ಎಂದು ಹೇಳುತ್ತಾ, ಬೇರೆ ವಿಷಯ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತ ನಾಡುತ್ತಾ, ಕೆಲವು ವಿಷಯ ಹೇಳಬಯಸುತ್ತೇನೆ. ಮಾನ್ಯ ದೇವೇಗೌಡರು ಅಧಿಕಾರ ತೆಗೆದುಕೊಂಡಾಗ ಒಂದು ಪ್ರಯತ್ನ ಮಾಡಿದರು. ಏನೆಂದರೆ, ಕೆಲವು ಕರಪ್ಟ್ ಇಂಜಿನಿಯರ್ಸ್, ಅಂದರೆ ಎಲ್ಲರೂ ಕರಪ್ಟ್ ಎಂದು ನಾನು ಹೇಳುವುದಿಲ್ಲ. ಆದರೆ, ಅವರು ಮಾನ್ಯ ದೇವೇಗೌಡರು ಹೇಳಿದ ಹಾಗೆ ಶ್ರೀ ರಾಜಾಜಿ ಯವರು ಹೇಳಿದಹಾಗೆ, ಪಿಡಬ್ಲ್ಯೂಡಿ ದೇಶಕ್ಕೆ ಒಂದನೇ ಶತೃ ಎಂದು. ಈಗಲೂ ಅದನ್ನು ಅವರು ಸರಿಯೆಂದು ಒಪ್ಪಬೇಕಾಗಿದೆ. ಏಕೆಂದರೆ, ಸೋರಿಕೆ ಜಾಸ್ತಿಯಾಗಿದೆ. ಮಿನಿಮಮ್ ೩೦ ಪರ್ಸೆಂಟ್ ಸೋರಿಕೆ ಇದೆ. ನಮ್ಮಲ್ಲಿ ಅಲಾಟ್‌ಮೆಂಟ್ ಕಡಿಮೆ ಇದೆ. ಅದರಲ್ಲಿ ಸೋರಿಕೆ ಜಾಸ್ತಿಯಿದೆ. ಇವರು ಮೊದಲು ಒಂದು ಪ್ರಾಮಾಣಿಕ ಕೆಲಸ ಮಾಡಿದರು. ಕೆಲವರನ್ನು ಹಿಡಿದರು, ಕೆಲವರನ್ನು ಸಸ್ಪೆಂಡ್ ಮಾಡಿದರು. ಸುರಕ್ಷಿತವಾದ ಧ್ಯೇಯವನ್ನಿಟ್ಟುಕೊಂಡು, ಅವರ ತಂಟೆಗೆ ಹೋಗುವುದನ್ನು ಬಿಟ್ಟು ಬಿಟ್ಟಿದ್ದಾರೆ. ಅದು ಏಕೆಂದು ನಮಗೆ ಗೊತ್ತಿಲ್ಲ. ನಮ್ಮ ಬೈರೇಗೌಡರು ಹೇಳಿದ ಹಾಗೆ, "ಅಂದರಿಕಿ ಮಂಚಿವಾಡು ಅನಂತಯ್ಯ" ಎಂದು, ಆ ಪಾಲಿಸಿ ಶುರುಮಾಡಿದ್ದಾರೇನೋ ಎನಿಸುತ್ತದೆ. ನಮ್ಮ ಸಂಪನ್ಮೂಲ ಏನಿದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕು ಅದಕ್ಕಾಗಿ ಪ್ರಯತ್ನ ಮಾಡ ಬೇಕೆಂದು ನಾನು ಹೇಳುತ್ತೇನೆ. ನಾನು ಹೆಚ್ಚಾಗಿ ಮೇಜರ್ ಬಗ್ಗೆ ಮಾತನಾಡುವುದಿಲ್ಲ, ಈ ಮೈನರ್ ಇರ್ರಿಗೇಶನ್ ಬಗ್ಗೆ ಅವರು ಕೊಟ್ಟಿರುವ ಒಂದು ಅಲೋಕೇಶನ್ ಬಹಳ ಕಡಿಮೆ. ತಾವು ಅಂಕಿಅಂಶ

ಗಳನ್ನು ನೋಡಿ, ಟೋಟಲ್ ಕೊಟ್ಟಿರುವುದು ೧೯ ಕೋಟಿ ಎಂದು ಕಾಣುತ್ತದೆ. ಇಷ್ಟು ಹಣದಲ್ಲಿ ೧೭ ಜಿಲ್ಲೆಗಳಿಗೂ ಹಂಚಬೇಕಾಗುತ್ತದೆ. ಇನ್ನು, ನಮ್ಮನ್ನು ಅವರು ಹೇಗೆ ಉದ್ಧಾರ ಮಾಡುತ್ತಾರೆ ? ನಮಗಂತೂ ಗೊತ್ತಾಗುತ್ತಿಲ್ಲ. ಅವರು ಹೇಳುತ್ತಾರೆ. ಬರಗಾಲ ಪ್ರದೇಶ ಎಂದು. ಹಾಗಾದರೆ, ಇದು ಹೋಗಬೇಕಾದರೆ ನೀರು ಬೇಕು. ನೀರು ಇಲ್ಲದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದರೆ, ನ್ಯಾಯವಾಗಿ ಹಂಚಿದರೆ, ಬರಗಾಲ ಹೋಗುತ್ತದೆ, ಆದರೆ ದೇವೇಗೌಡರು ಒಂದು ತಪ್ಪು ತಿಳಿದುಕೊಂಡಿದ್ದಾರೆ, ನೀರು ಎಂದರೆ. ಕೆರೆಯಲ್ಲಿರುವ ನೀರೇ ಎಂದು. ಅಂಡರ್ ಗ್ರೌಂಡ್ ವಾಟರ್ ಬಗ್ಗೆ ಹೆಚ್ಚಿಗೆ ಗಮನಕೊಟ್ಟು, ಅದನ್ನು ಸರಿಯಾಗಿ ಉಪಯೋಗಿಸಬೇಕೆಂಬ ಯೋಚನೆಗೇ ಹೋಗಿಲ್ಲ, ಅಂತರ್ಜಲ ಶೇಖರಣೆ ಮಾಡುವುದಕ್ಕಾಗಲೀ, ಉಪಯೋಗಿಸುವುದಕ್ಕಾಗಲೀ ಚಿಂತಿಸಿಲ್ಲ. ನಾನು ಹೇಳಿದೆ ನಮ್ಮ ಬೆಂಗಳೂರು ಜಿಲ್ಲೆ ಒಂದು ಹಳ್ಳಿಗೆ ಹತ್ತು-ಹತ್ತು ಬೋರ್‌ವೆಲ್ಸ್ ಕೊಡಲಿ, ಟ್ಯಾಂಕ್ಸ್‌ನಲ್ಲಿ ನೀರು ಶೇಖರಣೆ ಮಾಡಬೇಕು. ಅವರು ಒಂದು ಮಾಸ್ಟರ್ ಪ್ಲಾನ್‌ನ್ನು ಇದಕ್ಕೆ ಹಾಕಬೇಕಾಗುತ್ತದೆ. ನೀರು ಶೇಖರಣೆ ಬಗ್ಗೆ ಪ್ರತಿಯೊಂದು ಟ್ಯಾಂಕ್ ಏನಿದೆ, ಕೆರೆಯ ಅಂಗಳ ಏನಿದೆ, ಅದನ್ನು ಡೀಪರ್ ಮಾಡಬೇಕು. ನಮ್ಮ ಕೆರೆಗಳನ್ನು ಕಟ್ಟಿ, ಸುಮಾರು ೧೦೦-೨೦೦ ವರ್ಷಗಳಾಗಿವೆ. ಅವು ಮುಕ್ಕಾಲು ಪಾಲು ಹೂತುಹೋಗಿವೆ. ಅದರಲ್ಲಿ ನೀರೇ ಇರುವುದಿಲ್ಲ. ಅವು ಹೆಸರಿಗೆ ಮಾತ್ರ ಕೆರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಆ ಬಗ್ಗೆ ದೇವೇಗೌಡರಿಗೆ ಆಗಾಗ ಹೇಳಿದ್ದೇನೆ. ತಾರತಮ್ಯ ಮಾಡುತ್ತೀರ, ನ್ಯಾಯವಾಗಿ ನಡೆದುಕೊಳ್ಳುತ್ತಿಲ್ಲ ಎಂದು ಹೇಳಿದ್ದೇನೆ. ಕೋಲಾರ, ಬೆಂಗಳೂರು, ತುಮಕೂರು, ಈ ಮೂರು ಅಂಕಿಅಂಶಗಳನ್ನು ಹೇಳಿದೆ. ಮೈಸೂರು, ಹಾಸನ, ಬೆಳಗಾಂ, ಈ ನಾಲ್ಕು ಜಿಲ್ಲೆಗಳಿಗೆ ಜಾಸ್ತಿ ಕೊಟ್ಟಿದ್ದಾರೆ. ಅದರಲ್ಲಿ ಕಾಲುಭಾಗ ನಮಗೆ ಕೊಟ್ಟಿದ್ದೀರಿ. ನಮ್ಮ ಕೋಲಾರ ಜಿಲ್ಲೆಗೆ ೬೦ ಲಕ್ಷ ಕೊಟ್ಟಿದ್ದೀರಿ. ಅದೇ ಬೆಂಗಳೂರು ಜಿಲ್ಲೆಗೆ ೪೦ ಲಕ್ಷ ಕೊಟ್ಟಿದ್ದೀರಿ. ಎಷ್ಟು ಅಭಿವೃದ್ಧಿ ಮಾಡುತ್ತೀರೆಂದು ಕೇಳಿದರೆ ಇನ್ನೂ ೧೬೦ ಎಕರೆಗೆ ಜಾಸ್ತಿ ನೀರು ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಇದು ಇನ್ನು ಒಂದು ಸಾವಿರ ವರ್ಷಕ್ಕೆ ಏನಾದರೂ ನಮಗೆ ಅನುಕೂಲವಾಗಬಹುದು. ದೇವೇಗೌಡರ ಬಳಿ ಹೋಗುವುದು, ಕಾಣುವುದು ಅವರು ಮಾಡುತ್ತೇವೆ ಎಂದು ಹೇಳುವುದು ಇದೇ ಆಗಿದೆ. ಇದನ್ನು ಕೇಳಿದರೆ, ನಿಮಗೆ ಯಾಕೆ, ಸುಮ್ಮನಿರಿ ಎಂದು ಸಮಾಧಾನಪಡಿಸುತ್ತಾರೆ. ಕೆಲಸ ಮಾತ್ರ ಆಗಿದ್ದಂತೂ ಪೂರ್ತಿ ಸೊನ್ನೆ. ದೇವೇಗೌಡರು ಈ ತಾರತಮ್ಯ ಬಿಡಬೇಕು. ದೇವೇಗೌಡರು ಹೇಮಾವತಿ ಒಂದಕ್ಕೇ ೬೫ ಕೋಟಿ ರೂಪಾಯಿ ಖರ್ಚು ಮಾಡಿಕೊಳ್ಳಲಿ, ಅವರು ಒರಿಜಿನಲ್ ಟ್ಯಾಂಕ್ಸ್ ೨೭ ಕಟ್ಟಿದ್ದಾರೆ. ಮೈಸೂರಿನಲ್ಲಿ ೮೦ ಕಟ್ಟಿದ್ದಾರೆ. ನಿಜವಾಗಿಯೂ ಇದರಿಂದ ಏನಾಗುತ್ತಿದೆ ಎಂದರೆ, ನಿಮಗಂತೂ ಪರ್ಮನೆಂಟ್ ಬರಗಾಲ. ನಾವು ಬರೀ ಬರಗಾಲ ಎಂದು ಅಳುವುದೇ ಆಗಿದೆ. ಇದರಿಂದ ಕೆಲವರು ಬೆಂಗಳೂರು, ತಿರುಪತಿ ಸೇರಿದ್ದಾರೆ. ಇರುವ ಕೆಲವು ಟ್ಯಾಂಕ್‌ಗಳನ್ನಾದರೂ ಅಭಿವೃದ್ಧಿ ಪಡಿಸಬೇಕು. ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಪಾಲಾರ್ ನದಿ ಇದೆ. ಉತ್ತರ ಕನ್ನಾರ್, ದಕ್ಷಿಣ ಕನ್ನಾರ್ ಇದೆ, ಬಾಪಾನ್ನಿ, ಚಿತ್ರಾವತಿ ಇದೆ. ಮಂದಮೂರ್ ನದಿ ಇದೆ. ಬೇಕಾದಷ್ಟು ನದಿ ಇವೆ. ೧೮೪೫ ರಲ್ಲಿ ರಾಮಸಾಗರ ಪ್ರಾಜೆಕ್ಟ್ ಎಂದು ಕಟ್ಟಿದರು, ನಮ್ಮ ತಾತನ ಕಾಲದಲ್ಲಿ. ಆಗಿನಿಂದ ಈಗಿನ ವರೆಗೂ, ಆ ಒಂದು ಸೀರೀಸ್‌ನಲ್ಲಿ ಒಂದು ಕೆರೆಯಾಗಲೀ, ಒಂದು ಅಣೆಕಟ್ಟನ್ನಾಗಲೀ ಕಟ್ಟಲಿಲ್ಲ. ಆಗ ಬ್ರಿಟಿಷ್ ಸಾಮ್ರಾಜ್ಯ ಇತ್ತು. ಈಗ ನಮಗೆ ಸ್ವಾತಂತ್ರ್ಯ ಬಂದಿದೆ. ಸ್ವತಂತ್ರ ಭಾರತದಲ್ಲಿ ನೀರಿನ ಸಮಸ್ಯೆ ಇರುವುದೇ ಇಲ್ಲ ಎಂದು ನಾವು ತಿಳಿದುಕೊಂಡೆವು. ಆದರೆ ೩೯ ವರ್ಷಗಳೇ ಆಗಿವೆ ಎಂದು ಕಾಣುತ್ತದೆ. ಇವರು ೩೯ ಟ್ಯಾಂಕ್‌ಗಳನ್ನೂ ಕೂಡ ಕಟ್ಟಲಿಲ್ಲ ಈ ಮಹಾನುಭಾವರು. ಹೀಗಾದರೆ, ನಮ್ಮ ಜನಗಳಿಗೆ ನಾವು ಏನು ಹೇಳಬೇಕು ? ನಮ್ಮ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೆ ?

೨-೦೦ ಪಿ. ಎಂ.

ಇಂಥ ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ನಿಜವಾಗಿಯೂ ಕೂಡ ನಾವು ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ಅವರು ಹೇಳಿದ ಮಾತೇನೆಂದರೆ ಇದರಲ್ಲಿ ಇಂಟರ್‌ಸ್ಟೇಟ್ ಅಗ್ರಿಮೆಂಟ್ ಇನೆ ಎಂಬುದು. ಇದು ನಮ್ಮ ಕೋಲಾರದ ನದಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಕಾವೇರಿಗೂ ಇದೆ, ಹೇಮಾವತಿಗೂ ಇದೆ. ತಮಿಳುನಾಡಿನವರು ಹೋ ಎನ್ನುತ್ತಾರೆ. ತೆಲುಗು ಗಂಗಾದಲ್ಲೂ ಇದೇ ಆಗಿರುವುದು. ಆದರೆ ಇಂಟರೆಸ್ಟ್ ತೆಗೆದುಕೊಳ್ಳುವ ಮಂತ್ರಿಗಳಿದ್ದರೆ ಯಾವ ಅಗ್ರಿಮೆಂಟೂ ಅಡ್ಡ

ಬರುವುದಿಲ್ಲ. ಕೆಲಸ ನಡೆಯುತ್ತದೆ. ಮೇಲುಗಡೆ ಕೆಲಸವಾಗುತ್ತಲೇ ಇರುತ್ತದೆ. ಕೆಳಗಡೆ ಇರುವವರು ಬಾಯಿ ಬಾಯಿ ಬಡಿದುಕೊಳ್ಳುತ್ತಾರೆ. ಕರ್ನಾಟಕದವರು ತೆಲುಗು ಗಂಗಾ ಬಗ್ಗೆ ಮಾಡುತ್ತಿಲ್ಲವೇ ಹಾಗೆ. ಮಂತ್ರಿಗಳಿಗೆ ಮನಸ್ಸಿದೆಯೋ ಇಲ್ಲವೋ ಅದು ಬೇರೆ ಪ್ರಶ್ನೆ ಒಟ್ಟಿನಲ್ಲಿ ನಮ್ಮ ಯೋಜನೆಗಳಿಗೆ ದುಡ್ಡು ಕೊಟ್ಟಿಲ್ಲ. ಎಲ್ಲದಕ್ಕೂ ಇಂಟರ್‌ಸ್ಟೇಟ್ ಅಗ್ರಿಮೆಂಟ್ ಎಂದು ಹೇಳಿ ತಪ್ಪಿಸಿಕೊಳ್ಳುತ್ತಾರೆ ಇದನ್ನು ಬಿಡಬೇಕು.

ಮೊನ್ನೆ ನಾನು ಮೂರು ಅರ್ಜಿ ಕೊಟ್ಟಿದ್ದೆ. ಅದರಲ್ಲಿ ನಮಗೂ ಕೆಲವು ಪ್ರೋಜೆಕ್ಟ್‌ಗಳನ್ನಾದರೂ ಕೊಡಿ ಎಂದಿದ್ದೆ. ಅದನ್ನು ಅಧ್ಯಕ್ಷರೇ ನೀವು ನೋಡಬೇಕು. ೧೦ ಲಕ್ಷ ಕೆಳಗೆ ಬರುವುದನ್ನು ಕೊಟ್ಟು, ಮೀರುವಂಥವನ್ನು ಬಿಟ್ಟುಬಿಟ್ಟಿದ್ದಾರೆ. ಈಗ ನಾವು ಬಾಯಿ ಬಡಿದುಕೊಳ್ಳಬೇಕೇ ? ದಯವಿಟ್ಟು ಇಂಥದಕ್ಕೆ ಅವಕಾಶ ಕೊಡಬೇಡಿ. ದಯವಿಟ್ಟು ನಮ್ಮ ಜಿಲ್ಲೆ ಬಗ್ಗೆ ಕನಿಕರ ಇಟ್ಟುಕೊಂಡು ಕೆಲಸ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಆಗಲೇ ಹೇಳಿದಂತೆ ನೀರಿನ ಬಳಕೆ ಬಗ್ಗೆ ಇವರು ಯೋಚನೆನೇ ಮಾಡಿಲ್ಲ. ಬೆಳೆಗಳ ಬಗ್ಗೆಯಂತೂ ಮಾಡಲೇ ಇಲ್ಲ. ಇರುವ ನೀರನ್ನಾದರೂ ಸೈಂಟಿಫಿಕ್ಕಾಗಿ ಉಪಯೋಗಿಸಿಕೊಂಡು ಒಳ್ಳೆಯ ಬೆಳೆ ಬೆಳೆಸುವ ಬಗ್ಗೆ ಯೋಚಿಸಬೇಕು. ಅದೇನೋ ಇತ್ತೀಚೆಗೆ ಡ್ರಿಪ್ ಇರಿಗೇಷನ್ ಎಂದು ಶುರುವಾಗಿದೆ. ಅದರ ಬಗ್ಗೆ ಕೂಡ ಹೆಚ್ಚಿನ ಗಮನ ಕೊಡುತ್ತಿಲ್ಲ. ಇದರ ಮೂಲಕ ಹೆಚ್ಚು ಗಮನ ಕೊಟ್ಟು ಕ್ರಾಪಿಂಗ್ ಪ್ಯಾಟರ್ನ್ ಬಗ್ಗೆ ಗಮನಹರಿಸಬೇಕು.

ಇವರು ಆದ್ಯತೆ ಮೇಲೆ ಏನು ತೆಗೆದುಕೊಳ್ಳಬೇಕೆಂದರೆ ಟ್ಯಾಂಕ್ಸನ್ನು ಡೀಸಿಲ್ಟ್ ಮಾಡುವುದು. ಇನ್ನು ರೋಡ್ಸ್ ಬಗ್ಗೆ ಹೇಳುವುದಾದರೆ ತಾವೇನಾದರೂ ಕೋಲಾರದಲ್ಲೇ ಆಗಲಿ, ಕರ್ನಾಟಕದಲ್ಲೇ ಆಗಲಿ ಹಳ್ಳಿಗಳಲ್ಲಿ ಪ್ರವಾಸ ಮಾಡಿದರೆ ಗೊತ್ತಾಗುತ್ತದೆ. ರಸ್ತೆಗಳನ್ನು ಮಾಡೇ ಇಲ್ಲ ಅದೇ ತಮಿಳುನಾಡಿಗೆ ಹೋದರೆ ನಿಜವಾಗಿಯೂ ಸಂತೋಷವಾಗುತ್ತದೆ. ರೋಡ್ಸ್ ಅಷ್ಟು ಚೆನ್ನಾಗಿದೆ. ಒಂದು ಪಕ್ಷ ೮ ತಿಂಗಳ ಬಸುರಿ ಏನಾದರೂ ನಮ್ಮ ಡಿಸ್ಟ್ರಿಕ್ಟನ ರೋಡ್‌ಗಳಲ್ಲಿ ಬಸ್‌ಗಳಲ್ಲಿ ಹೋಗಿಬಿಟ್ಟರೆ ಇಲ್ಲ ಅಬಾರ್ಷನ್ ಆಗುತ್ತದೆ, ಅಥವಾ ಡೆಫಿನೆಟ್ಟಾಗಿ ಹೆರಿಗೇನೇ ಆಗಿಬಿಡುತ್ತದ. ಇಂಥ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೫೦ ಮೈಲಿ ಅಸ್ಫಾಲ್ಟಿಂಗ್ ಕೂಡ ಹಾಕಿಲ್ಲ. ಜೊತೆಗೆ ನ್ಯಾಷನಲ್ ಹೈವೇಸ್‌ನಲ್ಲೂ ಹಾಕಿಲ್ಲ. ನಮ್ಮಲ್ಲಿ ಎನ್.ಹೆಚ್.೪ ಬರುತ್ತದೆ. ಅಲ್ಲೂ ಕೂಡ ಕೆಲಸವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಇದರ ಬಗ್ಗೆ ಗಮನಕೊಡಬೇಕು.

ಆಮೇಲೆ ಈ ಜನತಾ ಸರ್ಕಾರ ಬಂದ ಮೇಲೆ ಹಳ್ಳಿಹೆದ್ದಾರಿ ಸ್ಕೀಮ್ ಶುರುಮಾಡಿದರು. ನಮ್ಮ ಜಿಲ್ಲೆಯಲ್ಲಿ ಒಂದೊಂದು ಹಳ್ಳಿಗೆ ಕನಿಷ್ಠ ಒಂದೊಂದೆ ಐಟಮ್‌ನ್ನೂ ಮಾಡಿಲ್ಲ. ಇದರ ಬಗ್ಗೆ ಕೂಡ ಗಮನ ಕೊಡಬೇಕು.

ಈಗ ತಾಲ್ಲೂಕು ಬೋರ್ಡ್‌ಗಳು ರೋಡ್ಸ್ ಎಂದು ಇವೆ. ಈಗ ತಾಲ್ಲೂಕ್ ಬೋರ್ಡ್ ಇಲ್ಲ. ಪಿಡಬ್ಲ್ಯೂಡಿಗೆ ಸೇರಿಸಿಕೊಳ್ಳುತ್ತೇವೆ, ಸೇರಿಸಿಕೊಳ್ಳುತ್ತೇವೆ ಎಂದು ಬಹಳ ಕಾಲದಿಂದ ಹೇಳುತ್ತಿದ್ದಾರೆ ಅವನ್ನು ಪಿಡಬ್ಲ್ಯೂಡಿ.ಗಾದರೂ ಸೇರಿಸಿಕೊಳ್ಳಲಿಲ್ಲ. ಈ ತಾಲ್ಲೂಕ್ ಬೋರ್ಡ್‌ನವರನ್ನು ಕೇಳಿದರೆ ನಮ್ಮ ಹತ್ತಿರ ಗ್ರಾಂಟ್ಸ್ ಇಲ್ಲ. ಗ್ರಾಂಟ್ಸ್ ಇಲ್ಲ ಎಂದು ಹೇಳುತ್ತಾರೆ ರೋಡ್ ಡೆವೆಲಪ್‌ಮೆಂಟ್ ಆಗದೆ ಹಳ್ಳಿ ಡೆವಲಪ್‌ಮೆಂಟ್ ಆಗಲಿಕ್ಕೇ ಸಾಧ್ಯವಿಲ್ಲ ಆದುದರಿಂದ ಇದಕ್ಕೆ ತಾವು ಹಣವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಜೊತೆಗೆ, ನಮ್ಮ ಹಳ್ಳಿಗಳ ಕೆರೆಗಳಲ್ಲಿ ನೀರಿಲ್ಲದಿದ್ದರೂ ಕೂಡ ಬ್ರಿಡ್ಜಸ್ ಆದರೂ ಬೇಕು. ಮಳೆಗಾಲದ ಎರಡು ಮೂರು ತಿಂಗಳು ನಾವು ಹೊಳೆ ದಾಟಿ ಹೋಗುವ ಹಾಗಿಲ್ಲ. ಇಂಥ ಪರಿಸ್ಥಿತಿ ಬಗ್ಗೆ ಬೇರೆ ಜಿಲ್ಲೆಗಳಲ್ಲಿ ಒಂದು ಕೋಟಿವರೆಗೂ ಖರ್ಚು ಮಾಡಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಇವರು ಅಷ್ಟನ್ನು ಕೊಟ್ಟಿದ್ದಿದ್ದರೆ ಇವರಿಗೆ ಮೆರವಣಿಗೆಯನ್ನೇ ಮಾಡಿಬಿಡುತ್ತಿದ್ದೆವು. ಹಾಗೆ ಮಾಡಿ ಕೆರೆಗೆ ಹಾಕುತ್ತಿದ್ದೆವು. ಆದರೆ ಏನು ಮಾಡುವುದು ಕೆರೆಗಳಲ್ಲಿ ನೀರೇ ಇಲ್ಲವಲ್ಲ. ಮಾನ್ಯ ಅಧ್ಯಕ್ಷರೇ ಇದನ್ನು ಗಮನಿಸಿ ಪಿಡಬ್ಲ್ಯೂಡಿಗೆ ಏನು ಗ್ರಾಂಟ್ಸನ್ನು ದೇವೇಗೌಡರು ತೆಗೆದುಕೊಂಡಿದ್ದಾರೆ ಇದು ಕಡಿಮೆ. ಆದ್ದರಿಂದ ಹೆಚ್ಚಾಗಿ ತೆಗೆದುಕೊಳ್ಳಬೇಕು.

ಇನ್ನು ಜೂನಿಯರ್ ಇಂಜಿನಿಯರ್ಸ್ ಬಗ್ಗೆ ಕೇಳುತ್ತಾ, ಈ ೩ನೇ ತಾರೀಖಿನಿಂದ ಸ್ಟ್ರೈಕ್ ಮಾಡು ತ್ತಿದ್ದಾರೆ. ಅದೇನೋ ಈಕ್ವಲ್ ಪೇ ಫಾರ್ ಈಕ್ವಲ್ ವರ್ಕ್ ಎಂದು ಅವರದು ಡಿಮ್ಯಾಂಡ್. ಹೋದ ಸಲವೂ ನಾನು ಈ ಬಗ್ಗೆ ಕ್ವಶ್ಚನ್ ಹಾಕಿದ್ದೆ, ಅವರಿಗಿರುವ ಪ್ರಮೋಷನ್ ಅವೆನ್ಯೂಸ್ ಕೂಡ ತುಂಬಾ ಕಡಿಮೆ. ಅಂದರೆ ಕೇವಲ ೫ ಪರ್ಸೆಂಟ್ ಇದು ಕಡಿಮೆ. ಶೇಕಡ ೫೦ಕ್ಕೆ ಬೇಕೆಂದು ಕೇಳುತ್ತಿದ್ದಾರೆ. ಮೊನ್ನೆಯೂ ಸ್ಟ್ರೈಕ್ ಮಾಡಿದ್ದರು. ಇವರ ಬಗ್ಗೆ ಹೆಚ್ಚಿನ ಗಮನಕೊಡಿ. ಆಮೇಲೆ ಆಕ್ಟ್ ಪ್ರಕಾರ ಕೆಲಸವನ್ನು ಈ ಇಲಾಖೆಯು ಕೆಳದರ್ಜೆ ನೌಕರರಿಗೆ ಕೊಡಬೇಕೆಂದು ಸುಪ್ರೀಮ್ ಕೋರ್ಟ್ ಆದೇಶವೇ ಬಂತು, ಈಗ ಇವರು ಏನು ಟ್ರಿಕ್ ಮಾಡುತ್ತಿದ್ದಾರೆಂದರೆ ಕೆಲಸಕ್ಕೆ ಮತ್ತೆ ತೆಗೆದುಕೊಳ್ಳಬೇಕೆಂದರೆ ೧೨೦೦ ದಿವಸ ಆಗಿರಬೇಕು, ೩೬೦ ದಿವಸ ಕೆಲಸ ಮಾಡಿರಬೇಕು ಹೀಗೆ ಏನೇನೋ ಕಂಡೀಷನ್ಸ್ ಹಾಕುತ್ತಾ ಕೊನೆಗೆ ಇವರು ಯಾರಿಗೂ ಕೆಲಸ ಕೊಡುವುದಿಲ್ಲ. ಪುನಃ ಅವರು ಸುಪ್ರೀಮ್ ಕೋರ್ಟಿಗೆ ಹೋಗುತ್ತಾರೇನೋ. ಅವರೆಲ್ಲ ಬಡವರು. ಕೆಲಸ ಕೊಡಿ. ಇವರ ಜೊತೆಗೆ ರೋಡ್ ಗ್ಯಾಂಗ್ಸ್ ಎಂದು ಗುಂಪು ಇದೆ. ಇವರು ಬಡವರು. ದಿನಕ್ಕೆ ೧೦ ರೂ. ಕೂಲಿ ಕೊಡು ತ್ತಿದ್ದಾರೆ. ಕೆಲವರಿಗೆ ೮ ಕೊಡುತ್ತಿದ್ದಾರೆ. ನಾನು ಹೇಳುವುದೇನೆಂದರೆ ಅವರ ಬಡತನ ನೀಗುವಂಥ ಸಂಬಳ ಕೊಟ್ಟು ಅವರ ಕೈಲಿ ಚೆನ್ನಾಗಿ ಕೆಲಸ ಮಾಡಿಸಿಕೊಳ್ಳಿ ಎಂದು. ಕೆಲಸ ಮಾಡಿಸುವುದರ ಬಗ್ಗೆ ಸರ್ಕಾರದ ಜೊತೆಯಲ್ಲೂ ಸಂಬಳ ಹೆಚ್ಚಿಗೆ ಕೇಳುವುದರಲ್ಲಿ ವರ್ಕರ್ಸ್ ಜೊತೆಯಲ್ಲೂ ನಾನಿದ್ದೇನೆ. ಅವರಲ್ಲಿ ಪೂರ್ತಿಯಾಗಿ ಖಾಯಂ ಮಾಡಬೇಕು.

ಇಷ್ಟು ಹೇಳಿ, ಮಾನ್ಯ ದೇವೇಗೌಡರು ನಮ್ಮ ಜಿಲ್ಲೆಯ ಬಗ್ಗೆ ತಾರತಮ್ಯ ಮನೋಭಾವನೆ ಬಿಟ್ಟು ಜಾಸ್ತಿ ಗ್ರಾಂಟ್ ಕೊಡಬೇಕು. ಇಲ್ಲದಿದ್ದರೆ ಇನ್ನು ೫೦ಕ್ಕೋ ೧೦೦ ವರ್ಷಕ್ಕೋ ಕೋಲಾರವೆಲ್ಲ ಬೆಂಗಾಡಾಗಿ ಥಾರ್ ಮರುಭೂಮಿಯಾಗುತ್ತದೆ. ಇದನ್ನು ಗಮನಿಸಬೇಕು, ಇಲ್ಲದಿದ್ದರೆ ಅವರ ಮನೆ ಮುಂದೆ ಸತ್ಯಾಗ್ರಹ ಮಾಡುತ್ತೇನೆಂದು ಹೇಳಿ, ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ). — ಮಾನ್ಯ ಅಧ್ಯಕ್ಷರೇ, ನೀರಾವರಿ ಯೋಜನೆಗಳ ಬಗ್ಗೆ ಹಲವಾರು ವಿಷಯಂಗಳನ್ನು ಶ್ರೀ ಮೊಯ್ಲಿಯವರು ಪ್ರಸ್ತಾಪಿಸಿದ್ದಾರೆ. ನಮ್ಮ ವಿಚಾರಧಾರೆಗೂ ಅವರ ವಿಚಾರಧಾರೆಗೂ ಬಹಳ ಹೊಂದಾಣಿಕೆ ಇಲ್ಲಿ ಮಾತ್ರ ಆಗಿದ್ದರಿಂದ ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ವೇಳೆಯೂ ಇಲ್ಲ. ಪೀಠಿಕೆಯಾಗಿ ಒಂದು ಮಾತನ್ನು ಹೇಳಬೇಕಾಗಿದೆ. ವರದಿಗಳನ್ನು ತಾವು ಮೊದಲೇ ಕಳಿಸಿಕೊಡದಿದ್ದರೆ ತೊಂದರೆಯಾಗುತ್ತದೆ. ಓದಿಕೊಂಡು ಬರುವಂಥ ನಮಗೆ ಇದರಿಂದ ಜಾಸ್ತಿ ತೊಂದರೆ. ಇಲ್ಲದಿದ್ದರೆ ನೀವು ಹೇಳುವುದನ್ನೇ ವೇದವಾಕ್ಯ ಎಂದು ನಂಬಬೇಕಾಗುತ್ತದೆ. ಅಧ್ಯಕ್ಷರೇ, ತಾವು ರಕ್ಷಣೆಗೆ ಬರಬೇಕು, ಒಂದೆರಡು ದಿವಸ ಮುಂಚಿತವಾಗಿ ಬಂದರೆ ಒಳ್ಳೆಯದು. ಇದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದೇನೆಂದರೆ ಅಂಕಿ ಅಂಶಗಳು ಏನು ಕೊಟ್ಟಿದ್ದಾರೆ ಅವುಗಳ ಬಗ್ಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಕೊಟ್ಟಿದೆ ಎಂದು ಮಾತ್ರ ಹೇಳಬಲ್ಲೆ. ಏತಕ್ಕೆ ಹೇಳುತ್ತೇನೆಂದರೆ ೧೯೮೬-೮೭ರ ಬಡ್ಜೆಟ್ ಭಾಷಣದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಪುಟ-೧೩ರಲ್ಲಿ ಏನು ಹೇಳಿದ್ದಾರೆಂದರೇ. —

> "By 2000 AD we are determined to fully utilise our entire irrigation potential. Even after doing this, it is estimated that a large extent of land in the State will continue to be rainfed. For undertaking agricultural development of this order, a modest estimate of the institutional credit requirement shows that we will need more than Rs. 2,000 crores. After taking into account the credit to be provided by the commercial banks, cooperative institutions, etc., there will still be a substantial gap which will have to be filled by direct assistance from NABARD."

ಅಂದರೆ ೨೧ನೇ ಶತಮಾನಕ್ಕೆ ಬರುವಾಗ ಎಲ್ಲವನ್ನು ಫುಲ್‌ಫಿಲ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದೇರೀತಿ ಇರಿಗೇಷನ್ ಪೊಟೆನ್‌ಶಿಯಲ್ ೧೯೮೫–೮೬ರ ಬಜೆಟ್ ಭಾಷಣದಲ್ಲಿ ಸಹ ೧೯೮೬–೮೭ರಲ್ಲಿ ಏನು ಹೇಳಿದ್ದಾರೆ ಅದನ್ನೆ ಹೇಳಿದ್ದಾರೆ. ಎರಡನ್ನು ಹೋಲಿಸಿ ನೋಡಿದರೆ ಅಲೋಕೇಷನ್ ಎಷ್ಟು ಇದೆ, ಔಟ್‌ಲೇ ಎಷ್ಟು ಇದೆ ಈ ಎರಡೂ ಅಂಕಿ ಅಂಶಗಳನ್ನು ನೋಡಿದರೆ ೨ ಕೋಟಿ ರೂಪಾಯಿ ವ್ಯತ್ಯಾಸವಿದೆ. ೧೯೮೫–೮೬ರಲ್ಲಿ ಮೇಜರ್ ಅಂಡ್ ಮೈನರ್ ಇರಿಗೇಷನ್‌ಗೆ ೧೬೧.೧೮ ಕೋಟಿ ರೂಪಾಯಿ ಔಟ್‌ಲೇ. ಮೈನರ್ ಇರಿಗೇಷನ್‌ಗೆ ೨೬.೨೯ ಕೋಟಿ ರೂಪಾಯಿ ಇದೆ. ೧೯೮೬–೮೭ರಲ್ಲಿ ೧೧೪.೯೭ ಕೋಟಿ ರೂಪಾಯಿ ಇದನ್ನು ತಾವು ಗಮನಿಸಬೇಕು ಮೈನರ್ ಇರಿಗೇಷನ್‌ಗೆ ೩೪.೧೫ ಕೋಟಿ ರೂಪಾಯಿ. ೧೯೮೬–೮೭ರ ಬಜೆಟ್ ಭಾಷಣದ ಪುಟ–೧೮ನ್ನು ತೆಗೆದುಕೊಂಡರೆ ಅವರು ಏನೋ ಹೇಳುತ್ತಾರೆ. ಏನು ಹೇಳುತ್ತಾರೆಂದರೆ.—

> "The House will be happy to know that the next year's plan outlay for major and medium irrigation will be Rs. 114.97 crores, as against an outlay of Rs. 85.70 crores in 1985-86, i.e., an increase of 34.1%."

ರಾಮಕೃಷ್ಣ ಹೆಗಡೆಯವರು ೧೯೮೫–೮೬ರಲ್ಲಿ ಮಾಡಿದಂತಹ ಭಾಷಣದಲ್ಲಿ ಅವರು ಏನು ಹೇಳಿದ್ದಾರೆಂದರೆ ಪುಟ–೧೬ರಲ್ಲಿ

> "It is proposed to create a fresh potential of about one lakh hectares under major and medium irrigation projects and 13,000 hectares under minor irrigation projects during 1985-86 for which outlays of Rs. 163.18 crores and Rs. 26.29 crores are being provided respectively."

ಇಲ್ಲಿ ಕಡಿಮೆಯಾಗಿದೆ ಹೀಗೆ ಆಗುವುದಕ್ಕೆ ಕಾರಣವೇನು ? ಕಡಿಮೆ ಮಾಡುವುದರಿಂದ ಏನು ಬರುತ್ತದೆ? ಶೇಕಡ ೨೫ರಷ್ಟು ನಾವು ಮಾಡುತ್ತಿದ್ದೇವೆ ಇರಿಗೇಷನ್ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡುತ್ತೇವೆಂದು ಟೋಟಲ್ ಪ್ಲಾನ್ ಔಟ್‌ಲೇ ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. It is earmarked for this major and minor irrigation of our State. ಅದು ಕೂಡ ಆಗಿಲ್ಲ ಶೇಕಡ ೨೫ ರಷ್ಟು ಏನಿದೆ ಅದನ್ನು ಕೂಡ ಲೆಕ್ಕಚಾರ ಹಾಕಿದರೆ ಅದಕ್ಕಿಂಥ ಕಡಿಮೆ ಬರುತ್ತದೆ. ಆದ್ದರಿಂದ ನಾವು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಬೆಣ್ಣೆತೊರೆ ಪ್ರಾಜೆಕ್ಟ್ ಕಾರಂಜ ಪ್ರಾಜೆಕ್ಟ್ ಅದು ಯಾವುದೇ ಪ್ರಾಜೆಕ್ಟ್ ಆಗಲಿ ಈ ಒಂದು ಆಧಾರದ ಮೇಲೆ ಮುಂದು ವರಿಸಲಿಕ್ಕೆ ಸಾಧ್ಯವಿಲ್ಲ. ಹಲವಾರು ಅಂಕಿ ಅಂಶಗಳನ್ನು ಇಲ್ಲಿ ಕೊಟ್ಟಿದ್ದಾರೆ, ನಾನು ಹೇಳುವುದು ಇಷ್ಟೆ, ಫೈನಾನ್ಸಿಯಲ್ ಪೊಟೆನ್‌ಶಿಯಲ್ ಫಸ್ಟ್ ಇಯರ್‌ನಲ್ಲೇ ಹೀಗಾದರೆ ೭ನೆಯ ಪಂಚ ವಾರ್ಷಿಕ ಯೋಜನೆಯ ಆನ್ಯುಯಲ್ ಪ್ಲಾನ್‌ನಲ್ಲಿ ೧೯೮೬–೮೭ನೇ ವರ್ಷವನ್ನೆ ತೆಗೆದುಕೊಂಡರೆ ಪುನಃ ನಿಮ್ಮ ದೃಷ್ಟಿಕೋನ ಯಾವರೀತಿ ಇದೆ ಎಂಬುದು ಗೊತ್ತಾಗುತ್ತದೆ ೨೦೦೦ ಇಸವಿಯ ಹೊತ್ತಿಗ ಮುಗಿಸುತ್ತೇವೆಂದು ಹೇಳುತ್ತೀರಿ, ಸರಿಯಾದ ಅಲಾಟ್‌ಮೆಂಟ್ ಇಲ್ಲದಿದ್ದರೆ ಯಾವರೀತಿ ಮುಗಿಸುತ್ತೀರಿ ? ಡ್ರಾಫ್ಟ್ ಅನ್ಯುಯಲ್ ಪ್ಲಾನ್‌ನಲ್ಲಿ ೨೦೦೦–೨೦೦೧ ಇಸವಿಯ ಹೊತ್ತಿಗೆ ಡ್ರಾಫ್ಟ್ ಅನ್ಯುಯಲ್ ಪ್ಲಾನ್ ಪ್ರಕಾರ ೧೯೮೫–೮೬ರಲ್ಲಿ ಫೈನಾನ್ಸಿಯಲ್ ಮತ್ತು ಪೊಟೆನ್ಸಿಶಿಯಲ್ ಟಾರ್ಗೆಟ್ ಮೇಜರ್ ಅಂಡ್ ಮೈನರ್ ಇರಿಗೇಷನ್ ಪೊಟೆನ್‌ಶಿಯಲ್ ಟಾರ್ಗೆಟ್ ೪೧ ಲಕ್ಷದ ೩೫ ಸಾವಿರ ಮೈನರ್ ಇರಿಗೇಷನ್ ಫೈನಾನ್ಸಿಯಲ್ ಟಾರ್ಗೆಟ್ ೨೬.೧೮ ಕೋಟಿ ರೂಪಾಯಿ ಇರಿಗೇಷನ್ ಪೊಟೆನ್‌ಶಿಯಲ್ ೫ ೦೦ ಲಕ್ಷ ಹೆಕ್ಟೇರ್. ಅಚೀವ್‌ಮೆಂಟ್ ೧ ೬೫ ಲಕ್ಷ ಹೆಕ್ಟೇರ್. ಒಟ್ಟು ೧೧೨.೫೫ ಫೈನಾನ್ಸಿಯಲ್ ಟಾರ್ಗೆಟ್ ಪೊಟೆನ್ಸಿಯಲ್ ಟಾರ್ಗೆಟ್ ೪೬.೮೫. ಮೈನರ್ ಇರಿಗೇಷನ್‌ಗೆ ಫೈನಾನ್ಸಿಯಲ್ ಟಾರ್ಗೆಜ್ ೬೫ ಕೋಟಿ ರೂಪಾಯಿ ಪೊಟೆನ್ಸಿಯಲ್ ಟಾರ್ಗೆಟ್ ೨೨.೬೫. ೧೯೮೫–೮೬ರಲ್ಲಿ ಫೈನಾನ್ಸಿಯಲ್ ಟಾರ್ಗೆಟ್ ೧೧೭.೫೫ ಕೋಟಿ ರೂಪಾಯಿ. ಪೊಟೆನ್ಸಿಯಲ್ ಟಾರ್ಗೆಟ್ ೬೯.೦೦ ಕೋಟಿ ರೂಪಾಯಿ. ೧೯೮೬-೮೭ರಲ್ಲಿ ಫೈನಾನ್ಸಿಯಲ್ ಮತ್ತು ಪೊಟೆನ್ಸಿಯಲ್ ಟಾರ್ಗೆಟ್ ತೆಗೆದುಕೊಂಡರೆ ಒಟ್ಟು ಎಷ್ಟು ಬರುತ್ತದೆ ಅಂದರೆ ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್‌ಗೆ ಫೈನಾನ್ಸಿಯಲ್ ಟಾರ್ಗೆಟ್ ೯೦.೩೦ ಕೋಟಿ ರೂಪಾಯಿ. ಪೊಟೆನ್ಸಿಯಲ್ ಟಾರ್ಗೆಟ್

೪೩.೯೦. ಪೊಟೆನ್ಸಿಯಲ್ ೫ ಲಕ್ಷ ಹೆಕ್ಟೇರ್. ಅದೇರೀತಿ ಮೈನರ್ ಇರಿಗೇಷನ್ ಫೈನಾನ್ಸಿಯಲ್ ಟಾರ್ಗೆಟ್ ೨೭.೦೩ ಕೋಟಿ ರೂಪಾಯಿ. ಪೊಟೆನ್ಸಿಯಲ್ ಟಾರ್ಗೆಟ್ ೫.೦೦ ಲಕ್ಷ. ಫ್ಲಡ್ ಕಂಟ್ರೋಲ್ ವರ್ಕ್ಸ್‌ನಲ್ಲಿ ೦.೬೫, ಮತ್ತೊಂದರಲ್ಲಿ ೦.೪೭ ಒಟ್ಟು ೧೯೮.೪೫ ಕೋಟಿ ರೂಪಾಯಿ. ಅಪ್ರೂವಲ್ ಪ್ರಾಜೆಕ್ಟ್‌ನಲ್ಲಿ ಮೇಜರ್ ಅಂಡ್ ಮೀಡಿಯಂ ಇರಿಗೇಷನ್‌ನಲ್ಲಿ ಫೈನಾನ್ಸಿಯಲ್ ಟಾರ್ಗೆಟ್ ೬೫.೦೦ ಕೋಟಿ ರೂಪಾಯಿ. ಪೊಟೆನ್ಸಿಯಲ್ ಟಾರ್ಗೆಟ್ ೧೮೩.೪೫. ಪೊಟೆನ್ಸಿಯಲ್ ೭೦ ಸಾವಿರ ಹೆಕ್ಟೇರ್ ನೀರಾವರಿಯಾಗುತ್ತದೆ ಎನ್ನುವ ಅಭಿಪ್ರಾಯ ನಿಮ್ಮದು ಇದೆ. ಎರಡನ್ನೂ ಕಂಪೇರ್ ಮಾಡಿದರೆ ನಿಮಗೆ ೧೭೭.೫೫ ಇದ್ದದ್ದು, ೧೯೮೫-೮೬ರಲ್ಲಿ ಸಾಧನೆ ೧೮೩.೪೫ ಅಂದರೆ ೫.೯೦ ಲಕ್ಷ ಜಾಸ್ತಿ ಕೊಟ್ಟಿದ್ದೀವೆಂದು ಹೇಳುತ್ತೀರಿ. ಅಂದರೆ ೫ ಕೋಟಿ ರೂಪಾಯಿ ಮಾತ್ರ ಜಾಸ್ತಿ ಕೊಟ್ಟಿದ್ದೀರಿ. ಫೈನಾನ್ಸಿಯಲ್ ಟಾರ್ಗೆಟ್, ಪೊಟೆನ್ಸಿಯಲ್ ಟಾರ್ಗೆಟ್ ೬೯ ಲಕ್ಷ ಹೆಕ್ಟೇರ್ ನೀರಾವರಿಯಾಗಬೇಕಾಗಿತ್ತು. ೧೯೮೫-೮೬ರಲ್ಲಿ ಇರಿಗೇಷನ್ ಪೊಟೆನ್ಸಿಯಲ್ ಕ್ರಿಯೇಟ್ ಮಾಡಿದ್ದು ೭೦ ಲಕ್ಷ ಹೆಕ್ಟೇರ್. ಅಂದರೆ ೧ ಲಕ್ಷ ಹೆಕ್ಟೇರ್ ಮಾತ್ರ ಜಾಸ್ತಿಯಾಗಿದೆ. ನಿಮ್ಮ ಗುರಿಗಿಂತ ೧ ಲಕ್ಷ ಹೆಕ್ಟೇರ್ ಜಾಸ್ತಿ ಮಾಡಿದ್ದೀರಿ. ರಾಜ್ಯದ ಕಳಕಳಿಯನ್ನು ಅರಿತುಕೊಂಡು ನಮ್ಮ ರಾಜ್ಯದಲ್ಲಿ ಇರಿಗೇಷನ್ ಜಾಸ್ತಿ ಮಾಡಬೇಕು. ಈ ಯೋಜನೆಗಳಿಗೆ ಜಾಸ್ತಿ ಹಣವನ್ನು ಒದಗಿಸಿಕೊಳ್ಳಬೇಕು ನಾನು ಈ ಯೋಜನೆಯ ಬಗ್ಗೆ ಬಹಳಷ್ಟು ಭಾಷಣಗಳನ್ನು ಕೇಳಿದ್ದೇನೆ. ಮಾನ್ಯ ದೇವರಾಜ ಅರಸ್‌ರವರು ಇದರ ಬಗ್ಗೆ ಅಮೋಘ ಭಾಷಣ ಮಾಡಿದ್ದಾರೆ. ಅದು ಕಾರ್ಯರೂಪಕ್ಕೆ ಬಂದಾಗ ಏನಾಗುತ್ತದೆಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ತಾವುಗಳು ವಿರೋಧ ಪಕ್ಷದಲ್ಲಿದ್ದಾಗ ತಮ್ಮ ವಿಚಾರಧಾರೆ, ಯೋಚನೆ ಧೈರ್ಯ ಇವುಗಳೆಲ್ಲ ತಾವು ಸರ್ಕಾರ ನಡೆಸಲಿಕ್ಕೆ ಬಂದ ತಕ್ಷಣ ಏನಾಗುತ್ತವೆ ? ತಾವು ಏತಕ್ಕೆ ಹೆಚ್ಚಿಗೆ ಹಣವನ್ನು ಖರ್ಚು ಮಾಡುತ್ತಿಲ್ಲ? ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಆಗಿರುವಷ್ಟು ಅನ್ಯಾಯ ಮತ್ತಾವ ಪ್ರಾಜೆಕ್ಟ್‌ಗೂ ಆಗಿಲ್ಲವೆಂದು ಹೇಳಬಹುದು. ನಾನು ಈ ಮನೆಯಲ್ಲಿ ಹಲವಾರು ವರ್ಷಗಳಿಂದ ಸದಸ್ಯನಾಗಿದ್ದೇನೆ, ಅಪರ್‌ಕೃಷ್ಣಾ ಯೋಜನೆ ಪೂರ್ತಿಯಾದರೆ ಬಿಜಾಪುರದ ಜನತೆಗೆ ಬಹಳ ಅನುಕೂಲವಾಗುತ್ತದೆ. ಅಲ್ಲಿರತಕ್ಕ ಬರಗಾಲ ಹೊರಟು ಹೋಗುತ್ತದೆ. ತಾವು ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತೀರಿ, ನನಗೆ ಬಹಳ ಆಶ್ಚರ್ಯ ಕಂಡುಬರುತ್ತಿದೆ, ಅಪ್ಪರ್ ಕೃಷ್ಣಾ ಕಂಪ್ಲೀಟ್ ಆದರೆ ಎರಡೂವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—೨೦ ಲಕ್ಷ ಎಕರೆ ನೀರಾವರಿಯಾಗುತ್ತದೆ,

ಶ್ರೀ ಎಂ. ಎಸ್. ಕೃಷ್ಣನ್ —ಬಿಜಾಪುರ ಜಿಲ್ಲೆಯಲ್ಲಿ ಎರಡೂವರೆ ಲಕ್ಷ ಎಕರೆ ಮಾತ್ರ ನೀರಾವರಿಯಾಗುತ್ತದೆ. ಎರಡೂವರೆ ಲಕ್ಷ ಎಕರೆ ನೀರಾವರಿ ಪ್ರದೇಶವನ್ನು ಪಡೆಯಲಿಕ್ಕೆ ಎರಡು ಲಕ್ಷ ಎಕರೆ ಭೂಮಿ ಮುಳುಗಡೆಯಾಗುತ್ತದೆ. ಇದು ಬಹಳ ಮುಖ್ಯ. ಬಾಗಲಕೋಟೆ ಬೇರೆ ಕಡೆ ಹೋಗುವುದು ಮಾತ್ರವಲ್ಲ, ೨ ಲಕ್ಷ ಎಕರೆ ಭೂಮಿಯನ್ನು ಕಳೆದುಕೊಳ್ಳಬೇಕಾಗುತ್ತದೆ ೨೬ ಲಕ್ಷ ಎಕರೆ ನೀರಾವರಿ ಬೇರೆ ಕಡೆಯಾಗುತ್ತದೆ. ಹೀಗಾದರೆ ಬಿಜಾಪುರ ಜಿಲ್ಲೆ ಹೇಗೆ ಮುಂದೆ ಬರುವುದಕ್ಕೆ ಸಾಧ್ಯ ? ಪ್ಲಾನಿಂಗ್‌ನವರು ಯೋಜನೆಯ ವೈಫಲ್ಯವನ್ನು ಮೊದಲಿನಿಂದಲೂ ಯೋಚಿಸಿದ್ದಾರೆ. ನೀವು ಅದನ್ನು ಕಂಟಿನ್ಯೂ ಮಾಡುತ್ತಿದ್ದೀರಿ. ಅದಕ್ಕೂ ನಿಮಗೂ ವ್ಯತ್ಯಾಸ ಏನು ಕಂಡುಬರಲಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಇದರ ಬಗ್ಗೆ ಹೆಚ್ಚು ಆಸ್ಥೆ ವಹಿಸಬೇಕಾಗಿದೆ. ನಮ್ಮ ಸ್ನೇಹಿತರಾದ ಪಾಟೀಲ್ ಎಂಬುವರು ಮತ್ತೆ ಯಾವ ವಿಷಯದ ಬಗ್ಗೆ ಮಾತನಾಡುತ್ತಿರಲಿಲ್ಲ, ಅವರು ಮಾತನಾಡುತ್ತಿದ್ದುದು ಅಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾತ್ರ. ಇದರಲ್ಲಿ ನಿಜವಾಗಿಯೂ ಬಹಳ ಅನ್ಯಾಯವಾಗಿದೆ ಆಶ್ಚರ್ಯ ಮಾತ್ರವಲ್ಲ ಖೇದವಾಗುತ್ತದೆ. ಸರ್ಕಾರದ ವೈಫಲ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಆದ್ದರಿಂದ ಇವತ್ತು ಏನಾಗಿದೆ ಎಂದರೆ ಕಾರಂಜ ಪ್ರಾಜೆಕ್ಟ್ ತೆಗೆದುಕೊಳ್ಳಿ, ಬೆಣ್ಣೆತೊರ ಪ್ರಾಜೆಕ್ಟ್ ತೆಗೆದುಕೊಳ್ಳಿ, ಮಲಪ್ರಭಾ-ಘಟಪ್ರಭಾ ಇರಬಹುದು. ಮಾನ್ಯ ಮೊಯ್ಲಿಯವರು ಹೇಳಿದ್ದಾರೆಂದು ನಾನೂ ಟೀಕೆ ಮಾಡುತ್ತಾ ಇಲ್ಲ. ಒಂದೊಂದು ಯೋಜನೆಯೂ ಏನಾಗಿದೆ ಎಂಬುದನ್ನು ಎಕನಾಮಿಕ್ ಪ್ಲಾನಿಂಗ್ ಕೌನ್ಸಿಲ್‌ನವರು ಒಂದು ಮಾತು ಹೇಳಿದ್ದಾರೆ. ಅದೇ ನಿಮ್ಮ ಥಿಂಕ್‌ಟ್ಯಾಂಕ್ ಇದೆಯಲ್ಲ ಅದು.

"As per the document on "Irrigation Projects" (Major & Medium), published by the Irrigation Department, Government, of Karnataka in 1983, the ultimate irrigation potential of Karnataka from all sources has been estimated at about 55 lakh hectares. Out of this, the ground water potential is of the order of 10 lakh hectares. The potential created under major and medium irrigation by 1983 has been of the order of 19.72 lakh hectares."

೧೯೮೩ರಕ್ಕೆ ಬಂದಿದ್ದರೂ ಜಾಸ್ತಿ ಏನೂ ಆಗಿಲ್ಲ. ೧೯-೭೨ ಇದ್ದದ್ದು ಇವತ್ತು ೨೨ ಲಕ್ಷ ಜಾಸ್ತಿ ಮಾಡಿದ್ದೀರಿ. ಅದಕ್ಕಿಂತ ಜಾಸ್ತಿಯಾಗಿಲ್ಲ.

"The annual expansion of irrigation facilities is of the order of 50 to 60 thousand hectares including about 10,000 hectares under ground water resources. At the present pace of expansion of irrigation, it is feared that it would take nearly 80 years more to realise the full potentialities of irrigation from 15 lakh hectares as at present to 55 lakh hectares of the ultimate potential, unless the pace of work is substantially stepped up."

ಇವುಗಳನ್ನು ಮುಗಿಸುವುದಕ್ಕೆ ಇನ್ನೂ ೮೦ ವರ್ಷಗಳು ಬೇಕಾಗುತ್ತದೆ, ಎಂಬುದಾಗಿ ಹೇಳಿದ್ದಾರೆ. This is what the experts have said. ಅಷ್ಟರವರೆಗೆ ನಾವ್ಯಾರೂ ಬದುಕಿರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ೮೦ ವರ್ಷಗಳವರೆಗೂ ನಮ್ಮ ಬರಗಾಲ ತಪ್ಪುವುದಿಲ್ಲವೆಂಬ ಸಂಶಯ ರೈತರಲ್ಲಿದೆ. ಆದರೆ ನೀವು ೨೦೦೦ನೇ ಇಸವಿಯ ಒಳಗೆ ಮುಗಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ನೀವು ಹೇಳಿದ ಆಶ್ವಾಸನೆ ಆಶ್ವಾಸನೆಯಾಗಿರುತ್ತದೆಯೇ ವಿನಃ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಎಕನಾಮಿಕ್ ಪ್ಲಾನಿಂಗ್ ಕೌನ್ಸಿಲ್‌ರವರು ಏನು ಅಭಿಪ್ರಾಯ ಕೊಟ್ಟಿದ್ದಾರೆ, ಅದರ ಬಗ್ಗೆ ಗಮನ ಹರಿಸದಿದ್ದರೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಏತಕ್ಕೆ ಹೀಗಾಗುತ್ತದೆ ಎಂದು ಹೇಳುವುದಾದರೆ, ಅದರ ಬಗ್ಗೆ ನಿಮ್ಮ ಇಲಾಖೆಯವರು ಯೋಜನೆ ಮಾಡಿದ್ದಾರಾ? ಎಂಬುದರ ಬಗ್ಗೆ ಸಮಿತಿಗಳ ಅಭಿಪ್ರಾಯ ಅಂದರೆ, ಪಿ.ಎ.ಸಿ. ಅಥವಾ ಬೇರೆ ಸಮಿತಿಗಳು ಕೊಟ್ಟಿರುವಂತಹ ಅಭಿಪ್ರಾಯಗಳನ್ನು ಗಮನಿಸಿರಬಹುದು. ಅದನ್ನು ತಾವು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೀರಿ ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ಈಗಿರುವ ಪಿ.ಎ.ಸಿ.ಗಿಂತ ಹಿಂದೆ ಇದ್ದಂತಹ ಪಿ.ಎ.ಸಿ. ಇದರ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಏಕೆ ಹೀಗಾಗಿದೆ ಎಂಬುದನ್ನು ಹೇಳಿದ್ದಾರೆ. ಅದರ ಮುಖ್ಯ ವಿವರಗಳನ್ನು ಮಾತ್ರ ತಮ್ಮ ಗಮನಕ್ಕೆ ಸದನದ ಮೂಲಕ ತರುತ್ತಿದ್ದೇನೆ. ಅದರಲ್ಲಿ ಏನು ಹೇಳಿದ್ದಾರೆಂದರೆ,

ಅದರ ಪೇಜ್ ೨೧೧.

"While appreciating the necessity to fully utilise the Irrigation potential the various rivers of the State, the Committee consider that there can be no planned development if the scope of the projects is frequently revised after starting the work. This has contributed to the many-fold increase in the cost of the projects."

There are umpteen number of cases. ಯು.ಕೆ.ಪಿ. ತೆಗೆದುಕೊಳ್ಳಿ. ಹಾರಂಗಿ ತೆಗೆದುಕೊಳ್ಳಿ, ಹೇಮಾವತಿ ತೆಗೆದುಕೊಳ್ಳಿ. ಒಂದು ಸಾರಿ ಟೆಂಡರ್ ಕರೆದ ಮೇಲೆ ಅದು ಕಡಿಮೆ

ಯಾಗುತ್ತಾ ಹೋಗಬೇಕು, ಆದರೆ ರಿವೈಸ್ ಆಗುತ್ತಾ ಹೋಗುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ.

"Increase in the cost of each and every project by several crores of rupees has evidently upset any plan that might have been drawn up to finance them. Also such tentative formulation of projects inevitably leads to a half-hearted approach in their execution, resulting in delay and escalation of cost. The Committee view that revision in the scope of the project has come as an excuse for the Irrigation Department for their failure to complete the projects expeditiously and for incurring huge excess expenditure."

ಇದಕ್ಕಿಂತ ಡೀಟೈಲ್ ಆದ ವಿವರ ಮತ್ತೊಂದು ಬೇಕಿಲ್ಲ. ನನಗೆ ಸಮಯ ಕೂಡ ಇಲ್ಲ. ಇಲ್ಲದಿದ್ದರೆ ಎಲ್ಲವನ್ನೂ ಹೇಳಬೇಕಾಗುತ್ತದೆ.

"Unplanned outlay on canal excavation:
While noting the corrective action taken by Government recently, the Committee are surprised that no thought had been bestowed in the matter all these years and several crores had been spent on digging canals extensively without planning and without regard to the progress of other works there has been inordinate delay in the execution of important major works in the earlier reaches."

ಇದು ಹಾರಂಗಿಯಲ್ಲಿ ಆಗಿಲ್ಲವೇ? ಹೇಮಾವತಿಯಲ್ಲಿ ಆಗಿಲ್ಲವೇ? ಕಬಿನಿಯಲ್ಲಿ ಆಗಿಲ್ಲವೇ? ಯು.ಕೆ.ಪಿ. ಯಲ್ಲಿ ಆಗಿಲ್ಲವೇ? ಪ್ರತಿಯೊಂದರಲ್ಲೂ ಇದು ನಡೆಯುತ್ತಿದೆ. There is a continuity. There is no method in madness. ಆ ರೀತಿ ನಡೆದುಕೊಂಡು ಬರುತ್ತಿದೆ. ಅದೇ ರೀತಿ ಇನ್ನೊಂದು ಮಾತು ಏನು ಹೇಳಿದ್ದಾರೆ ಎಂದರೆ...

"Delay in preparation/approval of revised estimates:
The committee consider that the Irrigation Department has followed an irregular procedure of keeping the estimates open for indefinite period and incurring expenditure on fresh items not originally contemplated only to cloud the real reasons for excess expenditure and to help the officers to escape from their responsibility for such unauthorised excess expenditure."

ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಏನು ಮಾಡಿದ್ದೀರಿ? ಇವರ ಬಗ್ಗೆ ತಾವು ಗಮನ ಹರಿಸಿದ್ದೀರಾ? I want to know how much of this has been tackled by you. ಯಾವುದನ್ನೂ ಮಾಡುವುದಕ್ಕಾಗಿಲ್ಲ ಎಂಬುದು ಮಾತ್ರ ಬಹಳ ಸ್ಪಷ್ಟ. If you had not tackled those officers who might have clouded these reasons according to the PAC how can you complete any of these things? 2000ನೇ ಇಸವಿಯೊಳಗೆ ಇದನ್ನು ಮುಗಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ಕೂಡ ಬಹಳ ಚನ್ನಾಗಿ ಮಾತನಾಡುತ್ತೀರಿ. ಆದರೆ ಖಂಡಿತವಾಗಿ ಇದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಎನ್ನುವ ಮಾತನ್ನು ಮೇಜರ್ ಅಂಡ್ ಮೀಡಿಯಂ ಇರಿಗೇಷನ್ ಇಲಾಖೆಯ ಬಗ್ಗೆ ಸಾಕಷ್ಟು ಅಭಿಪ್ರಾಯ ಪಟ್ಟಿದ್ದಾರೆ.

"1) Government should immediately review the position in each case and ensure that the estimates/revised estimates of all the projects are got approved without further delay.

2) Government should arrange for the execution of the incomplete projects in a phased manner with proper priorities so that projects which are in an advanced stage of execution may be tackled to yield immediate benefits progressively.

3) A higher priority should be given to projects costing Rs. 2 crores and less which can be completed expeditiously, particularly those intended to benefit backward areas, so the benefits are derived by the people quickly and escalation in costs is avoided.

4) A proper and realistic programme for execution and completion of the projects should be drawn up for each project. Funds should be released with reference to such approved programme. Slippages in the physical progress and in the targets set for the year should be investigated and action taken against the officers responsible for the same. The Committee is of the firm view that unless this is done, planning will have no meaning and there can be no planned development commensurate with the expenditure."

ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇಂತಹ ಯೋಜನೆಗಳನ್ನು ಯಾವ ರೀತಿ ಸರ್ಕಾರ ಮಾಡುತ್ತಿದೆ ಎಂಬುದನ್ನು ಹೇಳಬೇಕು. ಈ ಮಾತನ್ನು ಈಗ ಇರುವಂತಹ ಪಿ.ಎ.ಸಿ. ಹೇಳಿಲ್ಲ. ಅದರ ಹಿಂದೆ ಇದ್ದಂತಹ ಪಿ.ಎ.ಸಿ. ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಬಸವಲಿಂಗಪ್ಪನವರು ಅಧ್ಯಕ್ಷರಾಗಿದ್ದರು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಮಂತ್ರಿಯಾಗಿದ್ದಾಗ ಏನು ಮಾಡಿದರು?

SRI B. BASAVALINGAPPA.—Whatever the acts of Basavalingappa as Minister are subject to public scrutiny. All my acts are subject to public scrutiny. Come on. Tell us one by one.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿ ಶ್ರೀಮಾನ್ ಬಸವಲಿಂಗಪ್ಪನವರು ಅಧ್ಯಕ್ಷರಾಗಿದ್ದಾಗ ಹೇಳಿದ್ದರು. ನಂತರ ಶ್ರೀಮಾನ್ ಮೊಯ್ಲಿಯವರು ಅಧ್ಯಕ್ಷರಾಗಿರುವಂತಹ ಸಮಿತಿ ಇನ್ನೂ ಬಹಳ ಕಠೋರವಾಗಿ ಹೇಳಿದೆ. ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬಯಸುತ್ತೇನೆ.

"The Committee observe that there can be no satisfactory explanation for the huge shortfall of 60 percent in achieving the plan target. It seems that apart from several short comings in the implementation of the projects (which have been discussed in the succeeding paragraphs), even the

plan target is adhoc, and not fixed with any rationale. The Committee consider that there can be no meaning to planning, if unrealistic targets are fixed or projected in the plan. Fixing such targets will amount to misleading the people. Further, this would also have undesirable effect on the performance of the department. The officers cannot be expected to work with zeal, unless the goal before them is clear and definite. When the implementing authorities find that the targets fixed in the plan are unattainable, even what could be achieved may not be achieved and monitoring the plan performance will have no meaning at all. The Committee recommend that this basic defect in fixing plan targets should be set-right."

ಆ ರೀತಿಯ ಇಂಟರೆಸ್ಟ್ ಅವರಿಗೆ ಇರುವುದಿಲ್ಲ ಎನ್ನುವ ಅಭಿಪ್ರಾಯವನ್ನು ಸಮಿತಿ ಕೊಟ್ಟಿದೆ. ಅದರ ಬಗ್ಗೆ ತಾವು ಏನು ಮಾಡಿದ್ದೀರಿ?

೨-೩೦ ಪಿ.ಎಂ.

ಮತ್ತೆ ಘಟಪ್ರಭ ಬೆಣ್ಣೆತೊರೆ ಮತ್ತಿತರ ಟನಲ್ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಅದನ್ನು ಓದುವುದಕ್ಕೆ ಹೋದರೆ ನಾಚಿಕೆಯಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಓದಿ, ಏತಕ್ಕೆ ನಾಚಿಕೆ ಪಡುತ್ತೀರಿ ? ನಾವಂತೂ ನಾಚಿಕೆಪಟ್ಟು ಕೊಳ್ಳುವಂಥ ಕೆಲಸ ಮಾಡಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಅದನ್ನೆಲ್ಲ ಓದಬೇಕಾದರೆ ಬಹಳ ಸಮಯ ಬೇಕಾಗುತ್ತದೆ. ಕೆಲವನ್ನು ಮಾತ್ರ ಹೇಳಬಯಸುತ್ತೇನೆ. The Malaprabha project which is due to complete in December 1979 is still incomplete and hence 14 hectare left behind don't get the contemplated irrigation. This is regarding Hemavathy Project.

'The Committee observe that due to the following departmental lapses, the cost of the tunnel has increased 100 per cent from 3.46 crores to Rs. 6.85 crores, besides its completion has been delayed resulting in denial benefit of irrigation for over 4 years'

೩.೧ ಇದ್ದದ್ದು ೬.೮೫ ಆದರೆ ೧.೨ ಆಯಿತು. ಇದಕ್ಕೆ ಯಾರು ಕಾರಣ ? ಇದಕ್ಕೆ ಏನು ಹೇಳುತ್ತಾರೆಂದರೆ. All these because of bad planning and monitaring work. What action you have taken in regard to the PAC Report. Have you taken any action? If so, let us know about it? There is no point in just going in same oldmanner. ಬಾಗೂರು ನವಿಲೆ ಟನಲ್ ಬಗ್ಗೆ ಏನಾಯಿತೆಂಬುದು ಗೊತ್ತಿದೆ. ಅದರ ಬಗ್ಗೆ ಮೋಲ್ಮನೆ ಯಲ್ಲಿ ಚರ್ಚೆಯಾಗಿದೆ, ಅದರ ಬಗ್ಗೆ ಏನು ಹೇಳುತ್ತಾರೆಂದರೆ.

"The Committee are surprised that the Chief Engineer thought it fit to recommend enhanced rates even for the work already done and paid for since 1979, based on the representation submitted by the contractor in January 1983, He has not kept in mind the sanctity of the

> agreement executed by the contractor. Even on the face of it, he should not have even entertained the contractors' request for payment of enhanced rates from 1979, as the contractor had not made any representation for increased payment till January 1983.'

Contractor had not made any representation but they have paid ಬಹುಮರ್ಯಾದೆಯಿಂದ ಕೊಟ್ಟುಬಿಟ್ಟಿದ್ದಾರೆ. Further it says :

> The manner in which the Chief Engineer Hemavathy Project and the Secretary to Government-II Public Works Department have dealt with this matter deserves a special mention. The Technical Committee have repeatedly advised that revision of the rates before expiry of the periodof the contract would not be in order and that escalation couldbe added on the tender rates beyond October 1984 when the tender period expired.''

ಇದನ್ನು ಬೇಕಾದರೆ ತಾವೇ ಓದಿ. ನಡೆದದ್ದನ್ನು ನಾನು ಓದುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ಜ್ಯುಡಿಶಿಯಲ್ ಎನ್‌ಕ್ವೈರಿ ಆಗಲಿ ಅದರಿಂದ ತಪ್ಪಿಸಿಕೊಂಡು ಹೋಗಬೇಡಿ. ನಿಜಾಂಶ ಇದೆಯೋ ಇಲ್ಲವೋ ಎಂಬ ಬಗ್ಗೆ ವಿಚಾರಣೆ ಆಗಲಿ, ನೋಡೋಣ. ಕೆಲವು ಅಧಿಕಾರಿಗಳ ಬಗ್ಗೆ ಹೇಳಿರುವ ಅಂಶಗಳನ್ನು ಗಮನಿಸಿದ್ದೇನೆ ಎಂಬುದಕ್ಕೆ ಹೇಳುತ್ತಿದ್ದೇನೆ. ಹಾರಂಗಿ, ಕಾರಂಜಿ ಮುಂತಾದ ಪ್ರಾಜೆಕ್ಟ್‌ಗಳ ಬಗ್ಗೆ ಹೇಳಿದ್ದಾರೆ. ಮಲಪ್ರಭ ಪ್ರಾಜೆಕ್ಟ್ ಬಗ್ಗೆಯೂ ಹೇಳಿದ್ದಾರೆ. ಇದೊಂದು ಕರ್ಮಕಾಂಡ ಇದನ್ನು ಓದಿದರೆ ಪ್ರೈಜಂ ಅನ್ನುತ್ತದೆ. ದೇವೇಗೌಡರು ಇದರಿಂದ ನೆಮ್ಮದಿ ಕಳೆದುಕೊಂಡಿದ್ದಾರೆಂದು ಸಂಕಟವಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಿಮ್ಮನ್ನು ಕಿತ್ತು ಹಾಕಿ ನಿಮ್ಮ ಜಾಗಕ್ಕೆ ಬೇರೆಯವರು ಬರಬೇಕೆಂದು ಇಲ್ಲ. ನಿಮ್ಮ ಕೈತಪ್ಪಿ ಆ ಮಟ್ಟಕ್ಕೆ ಹೋಗಿದೆ. ಅದನ್ನು ಸರಿ ಮಾಡದಿದ್ದರೆ ಹಣ ಕೊಟ್ಟದ್ದು ಹೋಗುತ್ತದೆ. ಈಗ ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಪ್ರಾಜೆಕ್ಟ್‌ಗಳು ಬರುತ್ತಿಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು, ಮತ್ತು ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ತೆಲುಗುಗಂಗಾ ಪ್ರಾಜೆಕ್ಟ್ ಬಗ್ಗೆ ಮೊಯಿಲಿಯವರು ಮಾತನಾಡಿದರು. ನಮ್ಮ ರಾಜ್ಯದ ಹಿತವನ್ನು ನಾವು ರಕ್ಷಿಸಬೇಕೆಂಬುದು ನಿಜ ಅಂದಾಗ ನಮ್ಮ ರಾಜ್ಯದ ಹಿತ ಅಂದರೆ ಏನು ಮಾಡಬೇಕೆಂದು ಮುಖ್ಯವಾದ ವಿಷಯ. ನಮ್ಮ ಪಕ್ಷದ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ನಾನು ನ್ಯಾಷನಲ್ ಪಾಲಿಸಿ ಬಗ್ಗೆ ವೈಯಕ್ತಿಕವಾಗಿ ಹೇಳುತ್ತೇನೆ. ಅನಂತರ ನಾವೆಲ್ಲ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ. ಹಾಗೆ ಎಲ್ಲಾ ಪಕ್ಷಗಳು ಬಂದರೆ ಒಳ್ಳೆಯದು. ಆ ಮೇಲೆ ನಾವು ಒಂದು ಹೇಳುವುದು, ಅವರೊಂದು ಹೇಳುವುದು ಬೇಡ ಎಂದು ನಾನು ಈ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಅದೇ ಸಮಯಕ್ಕೆ ರಾಜೀವ ಗಾಂಧಿಯವರು ವಾಟರ್ ರಿಸೋರ್ಸಸ್ ಕೌನ್ಸಿಲ್ ಎಂದು ಮಾಡಿದ್ದಾರೆ. ಅಲ್ಲಿ ಇದನ್ನು ತೆಗೆದುಕೊಳ್ಳಬೇಕೇ ಬೇಡವೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ನೆಲ, ಜಲ ರಾಷ್ಟ್ರೀಯ ಸಮಸ್ಯೆಯಾಗಿರುವುದರಿಂದ ಕೇಂದ್ರ ಸರ್ಕಾರದವರು ಇದರ ಬಗ್ಗೆ ಗಮನ ಹರಿಸಬೇಕು. ಆ ಪಕ್ಷ ಈ ಪಕ್ಷ ಎನ್ನದೆ ಎಲ್ಲ ಪಕ್ಷವನ್ನು ಕರೆಸಿ ಇತ್ಯರ್ಥ ಮಾಡುವ ಮನೋಭಾವನೆ ಅವರಲ್ಲಿ ಬರಬೇಕು ಹಾಗೆ ಮಾಡದಿದ್ದರೆ ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಕೊಡುತ್ತಾರೆ. ನಾವು ನೀರನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರೆ ಅವರು ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಹೀಗೆ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡಿದ್ದರೆ ಏನು ಪ್ರಯೋಜನ ? ತೆಲುಗು, ಆಂಧ್ರ, ಕರ್ನಾಟಕದವರಿಗೆ ಕಾದಾಟವಾಗುತ್ತದೆ. ಭಾವೋದ್ರೇಕದಿಂದ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಕೇಂದ್ರದವರು ಇದರ ಬಗ್ಗೆ ಗಮನ ಹರಿಸುವಂತೆ ಮಾಡಬೇಕು ಮೊಯಿಲಿಯವರು, ಬಸವಲಿಂಗಪ್ಪನವರು, ನಾಗರತ್ನಮ್ಮನವರು ಎಲ್ಲರೂ ಬೆಂಬಲ ಕೊಟ್ಟು ಇಬ್ಬರೂ ಕುಳಿತು ಚರ್ಚೆ ಮಾಡಿ ಇತ್ಯರ್ಥ ಮಾಡುವ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮನ್‌ಗಳ ಬಗ್ಗೆ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ಕೋರ್ಟ್ ತೀರ್ಮಾನವನ್ನು ಏತಕ್ಕೆ ಜಾರಿಗೆ ತರಲಿಲ್ಲ ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ. ಗುಲ್ಬರ್ಗ ಬೀದರ್‌ನಲ್ಲಿರತಕ್ಕ ಗ್ಯಾಂಗ್‌ಮನ್‌ಗಳ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ. ಅವರು ಕೆಲವು ಅನುಕೂಲಗಳನ್ನು ಕೇಳಿದ್ದಾರೆ. ಹೈಕೋರ್ಟ್ ತೀರ್ಮಾನ ಏನಿದೆ ಅದನ್ನು ನಿಮ್ಮ ಇಲಾಖೆ ಏತಕ್ಕೆ ಜಾರಿಗೆ ತರುತ್ತಿಲ್ಲ ? ಅದನ್ನು ಕೂಡಲೇ ಜಾರಿಗೆ ತರಬೇಕು. ಅವರಿಗೆ ೩೦೦ ರೂಪಾಯಿ ಮಾಡಿರುವುದು ಸ್ವಾಗತ. ಅದನ್ನು ಮಂಜೂರ್ಮಾಡದೆ ಏಕೆ ಬಿಟ್ಟಿದ್ದಾರೋ ಗೊತ್ತಿಲ್ಲ. ಅವರಿಗೆ ಕೊಡುವ ಬಟ್ಟೆ ಚನ್ನಾಗಿರುವುದಿಲ್ಲ. ಸಂಡೂರು ತಾಲ್ಲೂಕಿನ ಪರಿಸ್ಥಿತಿಯನ್ನು ಭೂಪತಿಯವರು ಹೇಳಿದ್ದಾರೆ. ಅವರಿಗೆ ಏನೇನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡಿಕೊಡಬೇಕೆಂದು ಕೇಳಿಕೊಂಡು ರಾಜ್ಯದಲ್ಲಿ ಇರಿಗೇಷನ್ನಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ ಮಾನ್ಯ ಮೊಯಿಲಿಯವರು ತಮ್ಮ ಮುಂದೆ ವಿಷದವಾಗಿ ಅಂಕಿ ಅಂಶಗಳನ್ನು ಇಟ್ಟಿದ್ದಾರೆ. ಸರ್ಕಾರದವರು ವೈಫಲ್ಯವಾಗುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎಂಬ ಬಗ್ಗೆ ವಿಷದವಾಗಿ ಹೇಳಿದ್ದಾರೆ. ವೆಂಕಟರಾಮಯ್ಯನವರು ಮತ್ತು ಕೃಷ್ಣನ್‌ರವರು ಇರಿಗೇಷನ್ ಮತ್ತು ಪಿ.ಡಬ್ಲ್ಯು.ಡಿ.ಯ ಹಿನ್ನೆಲೆ ಏನಿದೆ ಅದನ್ನು ಸದನದ ಮುಂದಿಟ್ಟಿದ್ದಾರೆ. ಸರ್ಕಾರದವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಿಮ್ಮ ಬಗ್ಗೆ ಹೇಳಿದ್ದಾರೆ. ನಾನು ಅಂಕಿ ಅಂಶಗಳಿಗೆ ಹೋಗುವುದಿಲ್ಲ ಹೋದ ವರ್ಷ ಲೋಕೋಪಯೋಗಿ ಇಲಾಖೆ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದೇನೆ. ನೀವು ಏನು ಮಾಡಿಲ್ಲ ಎಂಬ ಬಗ್ಗೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಹಿಂದೆ ರಾಜಾಜಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಲೋಕೋಪಯೋಗಿ ಇಲಾಖೆಗೆ ಒಂದು ಹೆಸರಿಟ್ಟಿದ್ದರು. ಅದೇನೆಂದರೆ, ಪಬ್ಲಿಕ್ ಎನಿಮಿ ನಂ. ೧ ಎಂದು ಈ ಮಾತನ್ನು ಅವರು ಆ ಕಾಲದಲ್ಲೇ ಹೇಳಿದರು ಅಲ್ಲಿಂದ ಇಲ್ಲಿಯವರೆಗೆ ಏನು ಮಾಡಿದ್ದಾರೆಂಬ ವಿಚಾರ ಮಾಡಬೇಕಾಗಿದೆ.

ನಾನು ಅದನ್ನು ವಿಚಾರ ಮಾಡಿದರೆ ಅದು ಅವರು ಹೇಳಿದ್ದು ಸರಿ ಅನಿಸುತ್ತದೆ. ಕರ್ನಾಟಕದಲ್ಲಿ ನಾವು ಏನು ಇರಿಗೇಷನ್‌ನ ಕಲ್ಯಾಣಕ್ಕೋಸ್ಕರ, ಜನಗಳ ಕಲ್ಯಾಣಕ್ಕೋಸ್ಕರ ಹಣವನ್ನು ಇಟ್ಟಿರುತ್ತೇವೆ. ಅದರಲ್ಲಿ ಮುಕ್ಕಾಲು ಭಾಗ ಹಣವನ್ನು ಅವರೇ ತಿಂದುಹಾಕುತ್ತಾರೆ ಕಂಟ್ರಾಕ್ಟರ್ ಮತ್ತು ಇಂಜಿನಿಯರಿಂಗ್ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳೇ ತಿಂದುಹಾಕುತ್ತಾರೆ. ಒಂದು ನೂರು ರೂಪಾಯಿ ಖರ್ಚು ಮಾಡಿದರೆ ಅದರಲ್ಲಿ ೧೫—೨೦ ಪರ್‌ಸೆಂಟ್‌ರವರೆಗೂ ಕಂಟ್ರಾಕ್ಟರ್‌ಗಳು ತಿಂದಿರುತ್ತಾರೆ. ಅಧಿಕಾರಿಗಳು ೧೫ ಪರ್‌ಸೆಂಟ್‌ವರೆಗೂ ತಿನ್ನುತ್ತಾರೆ. ಎಸ್ಕಲೇಷನ್ ಆಫ್ ಪ್ರೈಸಸ್. ಮೆಟೀರಿಯಲ್ಸ್ ಇದಕ್ಕಾಗಿ ಖರ್ಚು ಮಾಡತಕ್ಕಂಥ ೨೦ ಪರ್‌ಸಂಟ್ ಹೋಗುತ್ತದೆ. ಇನ್ನು ಉಳಿದದ್ದು ೬೦ ಪರ್‌ಸೆಂಟ್. ಇವರಿಗೆ ಡಿಸ್ಟ್ರಿಬ್ಯೂಷನ್. ಜನಗಳ ಕಲ್ಯಾಣಕ್ಕೋಸ್ಕರ ೪೦ ಪರ್‌ಸೆಂಟ್ ಮಾತ್ರ ಉಳಿಯುತ್ತದೆ. ಇದರಲ್ಲಿ ಕೂಡ ಖರ್ಚು ಮಾಡುತ್ತಾರೋ, ಇಲ್ಲವೋ ಎನ್ನತಕ್ಕಂಥ ಅನುಮಾನ ಕೂಡ ಬರುತ್ತದೆ. ಮಾನ್ಯ ಸದಸ್ಯರಾಗಿರತಕ್ಕಂಥ ಜನತಾಪಾರ್ಟಿ ಸದಸ್ಯರೂ ಕೂಡ ಇದನ್ನು ಒಪ್ಪುತ್ತಾರೆ. ಕಾಂಗ್ರೆಸ್ ಪಾರ್ಟಿಯವರೂ ಒಪ್ಪುತ್ತಾರೆ. ನಾನು ಇದನ್ನು ವೈಯುಕ್ತಿಕವಾಗಿ ಅನುಭವದಿಂದ ಮಾತನಾಡುತ್ತಿದ್ದೇವೆ. ಈ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ಲೋಕಕಲ್ಯಾಣ ಇಲಾಖೆ ಎಂದು ಏನು ಹೇಳುತ್ತೇನೆ. ಅದು ಲೋಕಕಲ್ಯಾಣ ಅಲ್ಲ. ಲೋಕದ ಕಲ್ಯಾಣದ ವಿರುದ್ಧವಾದ ಚಟುವಟಿಕೆಗಳು ಏನು ಇದ್ದಾವೆ. ಈ ಭೋಗಜೀವನ, ಆಸ್ತಿಗಳನ್ನು ಮಾಡಿಕೊಳ್ಳುವುದು, ಇಂಥವುಗಳನ್ನು ಮಾಡುತ್ತಾರೆ, ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ ಬಗ್ಗೆ ನನಗೆ ಗೊತ್ತಿದೆ. ಸಾಕ್ಷಿಸಮೇತ ಮೇಲೆ ಬೇಕಾದರೆ ತೋರಿಸುತ್ತೇನೆ, ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ, ಮನೆಗಳನ್ನು ಕಟ್ಟಿದ್ದಾರೆ, ವೈಭವದ ಜೀವನ ನಡೆಸುತ್ತಿದ್ದಾರೆ ಎಂಬುದನ್ನು ತೋರಿಸುತ್ತೇನೆ ಹೆಂಡತಿ ಮತ್ತು ಮಕ್ಕಳ ಮೇಲೆ ಎಷ್ಟೆಷ್ಟು ಬಂಗಾರಗಳು, ವಜ್ರ ವೈಡೂರ್ಯಗಳು ಇರುತ್ತವೆ ಎನ್ನುವುದನ್ನು ನಾನೇ ಸ್ವತಃ ನೋಡಿದ್ದೇನೆ. ಬಡತನದಲ್ಲಿರುವ ಅಧಿಕಾರಿಗಳು ಒಂದು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಒಬ್ಬ ಅಧಿಕಾರಿಯವರ ಮನೆಯಲ್ಲಿ ವಜ್ರ ವೈಡೂರ್ಯಗಳು ಹೇಗೆ ಬರುತ್ತದೆ ? ಭೋಗ ಜೀವನ ಮಾಡಲಿಕ್ಕೆ ಹೇಗೆ ಅವಕಾಶ ಬರುತ್ತದೆ ? ಇದಕ್ಕೆ ನಾನು ಸತ್ಯ ಸಾಕ್ಷಿಯಾಗಿ ಕೊಡಲಿಕ್ಕೆ ಸಿದ್ಧನಾಗಿದ್ದೇನೆ. ಲೋಕಕಲ್ಯಾಣದ ಕೆಲಸ ಮಾಡುವಾಗ ತಮ್ಮ ಹಣ ಎನ್ನುವ ಭಾವನೆಯಿಂದ ಕೊಡುತ್ತಾರೆ, ಆ ಹಿನ್ನೆಲೆಯಲ್ಲಿ

ಈ ಹಣವನ್ನು ವಸೂಲು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ನಾವು ಈ ರಾಜಕೀಯ ಜೀವನದಲ್ಲಿ ಹೇಗೋ ಜೀವನ ಮಾಡಿದ್ದೇವೆ, ನಾವು ಕೈ ಒಡ್ಡಬೇಕೆಂದಿಲ್ಲ ಲಂಚ ರುಷುವತ್ತು ತೆಗೆದುಕೊಂಡು ಸಾರ್ವಜನಿಕರ ಹಣವನ್ನು ತೆಗೆದುಕೊಂಡು ನಾವು ಜೀವನ ಮಾಡಬೇಕು ಎಂದು ಹೇಳಿ ನನ್ನ ಮನಸ್ಸಿಗೆ ಏನೂ ಬಂದಿಲ್ಲ, ಹಾಗೂ ನನ್ನ ಗಮನಕ್ಕೂ ಬಂದಿಲ್ಲ. ಸಾರ್ವಜನಿಕ ಹಣ ಅದು ಧರ್ಮದತ್ತಿ ಹಣ. ಧರ್ಮದತ್ತಿ ಹಣವನ್ನು ಖರ್ಚು ಮಾಡುವಾಗ ಧರ್ಮದತ್ತಿಯಾಗಿ ಖರ್ಚು ಮಾಡಬೇಕು. ಭೋಗ ಜೀವನ ಮಾಡಲಿಕ್ಕಲ್ಲ. ಆಸ್ತಿ ಮಾಡಲಿಕ್ಕಲ್ಲ. ನಾನು ದೇವೇಗೌಡರವರಿಗೆ ಹೇಳುತ್ತೇನೆ. ಯಾರ್‍ಯಾರು ಅಧಿಕಾರಿಗಳು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ. ಎಷ್ಟು ವೈಭವದ ಜೀವನ ನಡೆಸುತ್ತಿದ್ದಾರೆ, ಇವೆಲ್ಲವನ್ನೂ ತನಿಖೆ ಮಾಡಿಸಲಿ ಆ ರೀತಿ ಸಿಕ್ಕದವರನ್ನು ಜೈಲಿಗೆ ಹಾಕಲಿ, ಒಂದು ಹತ್ತು ಜನರನ್ನು ಜೈಲಿಗೆ ಹಾಕಿದರೆ ಆಗ ಈ ಪಿ.ಡಬ್ಲ್ಯೂ.ಡಿ. ಇಲಾಖೆ ಸರಿ ಹೋಗುತ್ತದೆ. ಬರೀ ಮಾತನಾಡಿದರೆ ಸರಿ ಹೋಗುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ನಾನು ಛೇರ್ಮನ್ ಆಗಿದ್ದೆ, ಮೊಯಿಲಿಯವರು ಈಗ ಆ ಕಮಿಟಿಗೆ ಛೇರ್ಮನ್ ಆಗಿದ್ದಾರೆ. ಬಜೆಟ್ ಭಾಷಣ ಎಂದು ಮಾಡುತ್ತಾರೆ, ಯಾವುದಕ್ಕೂ ಮಾನ್ಯತೆ ಇಲ್ಲ. ಅಪ್ರೋಪ್ರಿಯೇಷನ್ ಅಕೌಂಟ್ಸ್ ಎಂದು ಮಾಡುತ್ತಾರೆ. ಅದಕ್ಕೆ ಕಾಲದ ನಿಗಧಿಯೇ ಇಲ್ಲ, ನಿಯಮ ಇಲ್ಲ. ಅಕೌಂಟೆಂಟ್ ಜನರಲ್‌ರವರು ಕೊಟ್ಟಂಥ ವರದಿಯನ್ನು ನಾವು ನೋಡಬೇಕು. ಈ ಪಿ.ಡಬ್ಲ್ಯೂ.ಡಿ.ಯಲ್ಲಿ ಎಷ್ಟೋ ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ. ಮಿಸ್ ಅಪ್ಲಿಕೇಷನ್ ಆಫ್ ಫಂಡ್ಸ್ ಮಾಡಿದ್ದಾರೆ. ಇದಕ್ಕೆ ಬಜೆಟ್ ಲೆಕ್ಕವೂ ಇಲ್ಲ, ಅಸೆಂಬ್ಲಿಯ ಲೆಕ್ಕವೂ ಇಲ್ಲ. ಈ ರೀತಿ ಖರ್ಚು ಮಾಡತಕ್ಕಂಥದ್ದು ಏನು ಇದೆ. ಇದನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ವರದಿಯನ್ನು ಓದುತ್ತೀರಾ ? ಇದನ್ನು ಮಂತ್ರಿಗಳೂ ಓದಬಾರದು, ಅಧಿಕಾರಿಗಳೂ ಓದಬಾರದು ಹಾಗೂ ಸರ್ಕಾರದವರು ಪರಿಶೀಲನೆಯನ್ನೂ ಸಹ ಮಾಡಬಾರದು. ಸಾರ್ವಜನಿಕರ ಅವಗಾಹನೆಗೆ ಮಾತ್ರ ಇದನ್ನು ತರಬೇಕು. ನಾನು ವಿನಯದಿಂದ ಹೇಳುತ್ತಿದ್ದೇನೆ. ಅಧ್ಯಕ್ಷರೇ, ಈ ಸಾರ್ವಜನಿಕ ಹಣವನ್ನೂ ಸರಿಯಾದ ರೂಪದಲ್ಲಿ ಖರ್ಚು ಮಾಡಲಿಕ್ಕೆ ಮನಸ್ಸು ಮಾಡದೇ ಹೋದರೆ ನೀವು ಈ ದೇಶವನ್ನು ಕಟ್ಟಲಿಕ್ಕೆ ಆಗುವುದಿಲ್ಲ. ನೀವು ಹಾಕಿಕೊಂಡಿರತಕ್ಕಂಥ ಕೆಲಸಕಾರ್ಯಗಳನ್ನು ನಿರ್ವಹಿಸಲಿಕ್ಕೆ ಸಂಪೂರ್ಣ ಮಾಡಲಿಕ್ಕೆ ಆಗುವುದಿಲ್ಲ. ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಜನಗಳ ಕಣ್ಣಿಗೆ ಮಣ್ಣು ಎರಚಿ ನೀವು ಭೋಗ ಜೀವನ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಯಾರೂ ನಿಮ್ಮನ್ನು ಮೆಚ್ಚರು. ಹೋದ ವರ್ಷ ಬಜೆಟ್ ಮಾಡಿದರು. ಹೋದ ವರ್ಷ ೬೭೬ ಕೋಟಿ ರೂಪಾಯಿ ಹಂಗಾಮಿಯಾಗಿ ಬಜೆಟ್‌ನಲ್ಲಿ ಘೋಷಿತಾ ಆಯಿತು. ಎರಡನೇ ಬಜೆಟ್‌ನಲ್ಲಿ ೭೩ ಕೋಟಿ ರೂಪಾಯಿಗೆ ನಿಲ್ಲಿಸಿದ್ದೀರಿ. ಇದರ ಅರ್ಥ ಏನು ? ಈ ನಾಲ್ಕೈದು ತಿಂಗಳಲ್ಲಿ ೬೭೩ ಕೋಟಿ ರೂಪಾಯಿಗಳನ್ನು ಸರ್ವ ಸಮಾನವಾಗಿ ಹಂಚಿಕೆ ಮಾಡಿದ್ದೀರಾ ? ಏನು ಮಾಡಿದ್ದೀರಿ ? ಖರ್ಚು ಮಾಡಲಿಲ್ಲ. ಯಾವ ಭಾಗದಲ್ಲೂ ಖರ್ಚು ಮಾಡಿಲ್ಲ. ಇರಿಗೇಷನ್. ಪ್ರಾಜೆಕ್ಟ್‌ಗಳು ಏನು ಇದೆ ಹಾಗೂ ಪಿ.ಡಬ್ಲ್ಯೂ.ಡಿ, ಇಲಾಖೆಯಲ್ಲಿ ನಿಮ್ಮ ಇಲಾಖೆಯ ಇನ್ನಿತರ ಕೆಲಸ ಕಾರ್ಯಗಳು ಏನು ಇದೆಯೋ ಅದಕ್ಕೆ ನೀವು ಹಣವನ್ನು ಖರ್ಚು ಮಾಡಲಿಲ್ಲ. ಖರ್ಚು ಮಾಡದೇ ಹಾಗೇ ಹಣವನ್ನು ಉಳಿಸಿಕೊಂಡು ಡಿಫಿಸಿಟ್ ಇಲ್ಲ ಎಂದು ಎರಡನೇ ಬಜೆಟ್‌ನಲ್ಲಿ ಹೇಳಿದ್ದೀರಿ. ನಿಮ್ಮ ಯೋಜನೆಯ ಕಾರ್ಯಗಳು ಏನು ಇದೆ ಅದಕ್ಕೆ ಹೋದ ವರ್ಷದ ಬಜೆಟ್‌ನಲ್ಲಿ ಇಟ್ಟಿರತಕ್ಕಂಥ ಹಣವನ್ನು ಖರ್ಚು ಮಾಡದೇ ಇವತ್ತಿನ ದಿವಸ ಬಜೆಟನ್ನು ತಯಾರು ಮಾಡಿ ನಮ್ಮ ಮುಂದಿಟ್ಟಿದ್ದೀರಿ ಇದರಿಂದ ಇದಕ್ಕೆ ಏನು ಮಾನ್ಯತೆ ಉಂಟು ? ಗೌರವ ಉಂಟು ? ಶ್ರೀ ವಿಶ್ವನಾಥ ಪ್ರತಾಪಸಿಂಗ್ ಅವರು ೮-೧೦ ದಿವಸಗಳ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ತ್ರೈಮಾಸಿಕವಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದರಿಂದ ಎಷ್ಟು ಆದಾಯ ಬಂತು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ ಎಂದು ಅವರು ಭಾಷಣ ಮಾಡಿದ್ದಾರೆ. ಅದರ ಪ್ರಕಾರ ಈ ಬಜೆಟ್‌ಗೆ ಏನು ಮಾನ್ಯತೆ, ಗೌರವ ಬಂತು ಎಂದು ಕೇಳುತ್ತೇನೆ. ಈ ಬಜೆಟನ್ನು ತಯಾರು ಮಾಡಿ ಎಷ್ಟು ಖರ್ಚು ಮಾಡಿದ್ದೀರಿ ಅದರಿಂದ ಎಷ್ಟು ಪ್ರಗತಿ ಆಯಿತು ಎಂಬುದನ್ನು ಹೇಳಿ. ಆ ರೀತಿ ಮಾಡಿದಂಥ ಕೆಲಸಕಾರ್ಯಗಳನ್ನು ನಮ್ಮ ಮುಂದೆ ಇಡಿ. ಇದರಿಂದ ಜನಗಳಿಗೆ ಸಂತೋಷವಾಗುತ್ತದೆ. ಕೆಲಸಕಾರ್ಯಗಳನ್ನು ನೋಡಿ ಜನ ಸಂತೋಷಪಡುತ್ತಾರೆ. ನಾವು ಅದನ್ನು ಮಾಡುತ್ತೇವೆ. ಇದನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ ಏನ್ನು ಕೆಲಸ ಮಾಡಿದ್ದೀರಿ ಮಾನ್ಯ ದೇವೇಗೌಡರು ಈ ಕಡೆ ಇದ್ದಾಗ ಬಹಳ ಕೇಳುತ್ತಿದ್ದರು. ಬಹಳ ವರ್ಷಗಳಿಂದಲೂ ಅವರು ಈ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದರು. ಅವರು ಯಾವಾಗಲೂ ಪಿ.ಡಬ್ಲ್ಯೂ.ಡಿ.ಯ ಮೇಲೆಯೇ ಮಾತನಾಡುತ್ತಿದ್ದರು ಅದರಲ್ಲೂ ಇರಿಗೇಷನ್ ಮೇಲೆಯೇ ಮಾತನಾಡುತ್ತಿದ್ದರು,

ಇದರಿಂದ ನನಗನ್ನಿಸಿತು ಇವರು ಇದರ ಮೇಲೆ ಪ್ರಾವೀಣ್ಯತೆಯನ್ನು ಹೊಂದಿದ್ದಾರೆ. ಆದುದರಿಂದ ಅವರು ಅಧಿಕಾರಕ್ಕೆ ಬಂದರೆ ಕೆಲಸಕಾರ್ಯಗಳು ಸರಿ ಹೋಗಬಹುದು ಎಂದು ನಿರೀಕ್ಷಣೆ ಮಾಡಿದ್ದೆ. ಈಗ ತಾವು ಸದಸ್ಯರಾಗಿಲ್ಲ. ಇಲ್ಲಿದ್ದಾಗ ತಮ್ಮ ಏನು ಭಾವನೆಗಳು, ಧ್ಯೇಯಧೋರಣೆಗಳು ಇದ್ದವು. ಆ ಧ್ಯೇಯ ಧೋರಣೆ ಮಾಯವಾಗಿ ರೂಲಿಂಗ್ ಪಕ್ಷದ ಒಬ್ಬ ಮಂತ್ರಿಯಾಗಿ ಕೆಲಸ ಮಾಡುವುದಾದರೆ ತಾವು ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳನ್ನು ತಾವು ರಕ್ಷಣೆ ಮಾಡಿಕೊಂಡು ಅವರು ಮಾಡಿದ ಕೆಲಸಕಾರ್ಯಗಳೇ ಸರಿ ಎಂದು ಹೇಳುತ್ತಾ ಹೋಗುತ್ತಿದ್ದರೆ, ಹೇಗೆ ಕೆಲಸ ಮಾಡುತ್ತೀರಿ ? ಯಾವ ರೀತಿಯಾದಂಥ ಕೆಲಸ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಅಪ್ಪರ್‌ಕೃಷ್ಣದ ಬಗ್ಗೆ ಒಂದು ವಿಚಾರವನ್ನು ಹೇಳಬೇಕು. ಅಪ್ಪರ್‌ಕೃಷ್ಣಾದಲ್ಲಿ ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಹೇಳುತ್ತೀರಿ. ನಿಮ್ಮ ಸಾಧನೆ ಏನು ಎಂದು ಹೇಳಬೇಕಲ್ಲ. ಸಾಧನೆಗಳು ಏನೇನು ಆಗಿವೆ ? ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಎಷ್ಟು ಖರ್ಚಾಯಿತು ? ನಿಮ್ಮ ಬಜೆಟ್ ನನಗೆ ಬೇಕಾಗಿಲ್ಲ, ಫಲಾನುಭವಿಗಳಿಗೆ ಏನು ಸಾರ್ಥಕ ಆಯಿತು ಎನ್ನುವುದು ನಮಗೆ ಬೇಕು. ಎಷ್ಟು ಹೆಕ್ಟೇರ್‌ಗಳನ್ನು ನೀರಾವರಿಯಾಗಿ ಕೊಟ್ಟಿದ್ದೀರಿ ? ಎಷ್ಟು ಕೊಟ್ಟಿಲ್ಲ ? ಮತ್ತೆ ಎಷ್ಟು ಗುರಿ ಇತ್ತು ? ಅನ್ಯುಯಲ್ ರಿಪೋರ್ಟ್‌ನ ೩೨ನೇ ಪೇಜ್‌ನಲ್ಲಿ ಹೇಳಿದ್ದೀರಿ. ಅದನ್ನು ತಾವು ತೆಗೆದು ನೋಡಿ. ತಮ್ಮ ಸಾಧನೆ ಪ್ರಯೋಜನವಾಗಿದೆಯೇ? ಎಂಬುದನ್ನು ನೋಡಿ. ಅಪ್ಪರ್‌ಕೃಷ್ಣಾದಲ್ಲಿ ೪.೨೫ ಲಕ್ಷದಲ್ಲಿ ನೀವು ಮಾಡಿರತಕ್ಕಂಥದ್ದು ೪೫ ಸಾವಿರ. ಈ ರೀತಿ ಆದರೆ ನೀವು ಸಾಧನೆ ಮಾಡುವುದು ಯಾವಾಗ ? ಯೋಜನೆಯನ್ನು ಪೂರೈಸುವುದು ಯಾವಾಗ ? ಪೂರೈಸಲಿಕ್ಕೆ ಎಷ್ಟು ಹಣ ಆಯಿತು ? ಎಸ್ಕಲೇಷನ್ ಎಷ್ಟಾಯಿತು ? ಇನ್ನು ಎಷ್ಟು ಸಹಸ್ರ ಕೋಟಿ ರೂಪಾಯಿಗಳು ಬೇಕು ? ಯಾವಾಗ ಪೂರೈಸುತ್ತೀರಿ ? ಏನು ನಿಮ್ಮ ಯೋಜನೆ ಎಂಬುದನ್ನು ದಯಮಾಡಿ ಹೇಳಿ.

ಇಂಜಿನಿಯರುಗಳನ್ನು ಕಟ್ಟಿಕೊಂಡು ರಿವೈಸ್ಡ್ ಎಸ್ಟಿಮೇಟ್ ಮಾಡುತ್ತೀರಿ. ಒಂದು ಸಾರಿ ಎಸ್ಟಿಮೇಟ್ ಮಾಡುವುದಕ್ಕಾಗುವುದಿಲ್ಲವೇ? ಎಸ್ಟಿಮೇಟ್ ಮಾಡಿದ ಮೇಲೆ ರಾಂಗ್ ಎಸ್ಟಿಮೇಟ್ ಹೇಗೆ ಬಂತು? ರಾಂಗ್ ಲೊಕೇಷನ್ ಆಫ್ ಪ್ಲೇಸಸ್ ಹೇಗೆ ಬರುತ್ತದೆ? ಎಸ್ಟಿಮೇಟ್ ಆದತಕ್ಷಣ ರಾಂಗ್ ಲೊಕೇಷನ್ ಆಫ್ ಪ್ಲೇಸಸ್. ಅದಕ್ಕೆ ರಿವೈಸ್ಡ್ ಎಸ್ಟಿಮೇಟ್, Revised estimate and Re-revised estimate, Going on revising estimate and knocking the money. ಹಾಗಾದರೆ ಇದು ಎಲ್ಲಿ ಕೊನೆ ಮುಟ್ಟುತ್ತದೆ? ಹಾಗೆಯೇ ಅಪ್ಪರ್‌ಕೃಷ್ಣಾ, ಘಟಪ್ರಭ ಮತ್ತು ಮಲಪ್ರಭದಲ್ಲಿ ಆಗಿದೆ. ಏನು ಉದ್ದೇಶ ಸಾಧನೆ ಮಾಡಬೇಕೆಂದು ಹೇಳಿದ್ದೇವೆ ಅದಾಗಿದೆಯೇ? ತಾವು ನೋಡಿ ಏನು ಉದ್ದೇಶ ಸಾಧನೆ ಮಾಡಿದ್ದೀರಿ? ಏನು ಸಾಧನೆ ಮಾಡಿದ್ದೀರಿ? ಪವಿತ್ರವಾದ ಭಾವನೆಗಳನ್ನು ಜನಗಳ ಮುಂದೆ ಇಟ್ಟು, ಇದನ್ನು ಸಾಧನೆ ಮಾಡುತ್ತೇವೆ ಜನಗಳಿಗೆ ನೀರಾವರಿ ಕೊಡುತ್ತೇವೆ ಎಂದು ಹೇಳತಕ್ಕ ಭಾಷೆ, ಭಾಷಣಗಳನ್ನು ದಯಮಾಡಿ ಮುಗಿಸಿ. ಕೆಲಸ ಮಾಡಿ ತೋರಿಸಿ. ಇಂತಿಂಥ ಕೆಲಸಗಳನ್ನು ಮಾಡಿದ್ದೇವೆ. ಬರೀ ಭಾಷಣ ಮಾಡುವುದಿಲ್ಲ ಎಂದು ಹೇಳತಕ್ಕ ಪ್ರವೃತ್ತಿ ಮನೋಧಾರ್ಢ್ಯತೆ ತಮ್ಮಲ್ಲಿ ಬರಬೇಕು. ಇಲ್ಲದೇಹೋದರೆ ಈ ಕೆಲಸ ಆಗುವುದಿಲ್ಲ. ನೂರಾರು ವರ್ಷಗಳಿಂದ ಇರಿಗೇಷನ್ ಪ್ರಾಜೆಕ್ಟ್‌ಗಳು ಬಂದಿವೆ. ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ಬಂದಿವೆ. ಇವತ್ತೂ ಇದೆ ನಾಳೆಯೂ ಇದೇರೀತಿ ಇರುತ್ತದೆ. ನೀವಿದ್ದರೂ ಇದೇ ಕೆಲಸ. ಇಲ್ಲದೇ ಇದ್ದರೂ ಇದೇ ಕೆಲಸ ನಡೆಯುತ್ತದೆ. ನೀವಿದ್ದರೂ ಇಲ್ಲದೇ ಹೋದರೂ ಅಧಿಕಾರಿಗಳು ಇದೇರೀತಿ ಮಂಕುಬೂದಿ ಹಾಕಿ, ಸರ್ಕಾರಕ್ಕೆ ಮತ್ತು ಮಂತ್ರಿವರ್ಗಕ್ಕೆ ಮಂಕುಬೂದಿ ತೂರಿ ಸುಖವಾಗಿರುತ್ತಾರೆ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್ ಆಗಲೀ, ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಆಗಲೀ ಮೈನರ್ ಇರಿಗೇಷನ್ ಪ್ರಾಜೆಕ್ಟ್ ಆಗಲೀ ಇವೆಲ್ಲವನ್ನೂ ನೋಡಿದರೆ ನನಗಂತೂ ಸಂಕಟವಾಗುತ್ತದೆ. 'ಕಾಡಾ' ನಾಲ್ಕು ಡಿವಿಷನ್ ಮಾಡಿದ್ದೀರಿ. 'ಕಾಡಾ' ಏತಕ್ಕೆ ಇಟ್ಟುಕೊಂಡಿದ್ದೀರೊ ನನಗಂತೂ ಗೊತ್ತಿಲ್ಲ. ಅಲ್ಲಿ ಅಧಿಕಾರಿಗಳು ಏನು ಕೆಲಸ ಮಾಡುತ್ತಾರೋ ನನಗೆ ಗೊತ್ತಿಲ್ಲ, ಸ್ವಾಮಿ, ಎಲ್ಲ ಮೇಜರ್ ಪ್ರಾಜೆಕ್ಟ್ಸ್ ಮಾಡುತ್ತಿದ್ದೀರಿ. ಕಾಡಾ ಪ್ರಾಜೆಕ್ಟ್‌ಗಳಲ್ಲಿ ಏನೇನು ಮಾಡಬೇಕು ಎಂಬುದನ್ನು ವಿವರವಾಗಿ ಹೇಳಿದ್ದೀರಿ. ಎಷ್ಟು ಸಾಧನೆ ಅದರಲ್ಲಿ ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಕಾಡಾಗೆ ನಾಲ್ಕು ಡಿವಿಷನ್‌ಗೆ ೨೩ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಅದರಲ್ಲಿ ಖರ್ಚು ಮಾಡಿರುವುದು ೧೭ ಕೋಟಿ ರೂಪಾಯಿ. ೨೩ ಕೋಟಿಯಲ್ಲಿ ೬ ಕೋಟಿ ರೂಪಾಯಿ

ಉಳಿತಾಯ ಮಾಡಿದ್ದೀರಿ. ಈ ರೀತಿ ಮಾಡಿಕೊಂಡು ಖೋತಾ ಬಜೆಟ್ಟಿಗೆ ಸೇರಿಸಿಕೊಂಡು ಸರ್ಕಾರ ನಡೆಸುತ್ತಾ ಇದ್ದರೆ ಜನಗಳು ಯಾವರೀತಿಯಾಗಿ. ಎಲ್ಲಿಯುವರೆಗೆ ಕಾಯಬೇಕು? ಕಾದು ನೋಡುತ್ತಾರೆ ಕಾಯುತ್ತಿದ್ದಾರೆ. ವಿರೋಧಪಕ್ಷದವರಾದ ನಾವು ಸಹ ಕಾಯುತ್ತಿದ್ದೇವೆ ನೀವು ಏನು ಮಾಡುತ್ತಿದ್ದೀರಿ ಎಂದು. ನಮ್ಮನ್ನು ಟೀಕೆ ಮಾಡಿ. ಅದಕ್ಕೆ ಅಭ್ಯಂತರ ಇಲ್ಲ. ಕಾಂಗ್ರೆಸ್ ಸರ್ಕಾರದವರು ಏನು ಮಾಡುತ್ತಿದ್ದರು ಎಂಬುದನ್ನು ಟೀಕೆ ಮಾಡಿಕೊಂಡು ನೀವು ಅಧಿಕಾರಕ್ಕೆ ಬಂದಿರಿ. ಆದರೆ ನೀವು ಏನು ಮಾಡಿದ್ದೀರಿ? ನಮಗಿಂತ ತಮ್ಮ ಕಾರ್ಯಚಟುವಟಿಕೆಯನ್ನು ದ್ವಿಗುಣಗೊಳಿಸಿ ಉದ್ದೇಶ ಸಾಧನೆ ಮಾಡಿ. ನನಗೆ ಬೇರೆ ಏನೂ ಉದ್ದೇಶ ಇಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಕಟ್ಟಡ ಕಟ್ಟುವ ವಿಚಾರದಲ್ಲಿ ಇಲ್ಲಿ ಹೇಳಿದ್ದಾರೆ ಪರ್ಫಾರ್ಮೆನ್ಸ್ ಬಜೆಟ್ಟಿನಲ್ಲಿ ಪಿ ಡಬ್ಲ್ಯು.ಡಿ. ರೆಸಿಡೆನ್‌ಷಿಯಲ್ ಮತ್ತು ನಾನ್ ರೆಸಿಡೆನ್‌ಷಿಯಲ್‌ಗೋಸ್ಕರ ಇನ್ನೂ ೨೧ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. ಮೆಡಿಕಲ್ ಡಿಪಾರ್ಟ್‌ಮೆಂಟಿಗೆ ನೀವು ೨೬ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ. ನನ್ನ ಸಲಹೆ ಏನೆಂದರೆ ಆರೋಗ್ಯ ಇಲಾಖೆಯಲ್ಲಿ ಹೆಚ್ಚು ಕಟ್ಟಡಗಳನ್ನು ನಿರ್ಮಾಣ ಮಾಡಿ ಡಾಕ್ಟರುಗಳು ಇರುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರ ಕಡೆ ಹೆಚ್ಚು ಗಮನ ಕೊಡತಕ್ಕದ್ದು ಬಹಳ ಅವಶ್ಯವಿದೆ ಎಂದು ಹೇಳುತ್ತಿದ್ದೇನೆ. ಎಜುಕೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕಾದರೆ ಬಹಳ ಕಡಿಮೆ ಶಾಲೆಗಳಿಗೆ ಕಟ್ಟಡಗಳಿವೆ. ಈಗ ಅರ್ಧ ಕಟ್ಟಡಗಳನು ಮುಗಿಸಿದ್ದಾರೆ ಪೂರ್ತಿ ಮುಗಿಸುವುದಕ್ಕೆ ಇನ್ನೂ ೧೦ ವರ್ಷಗಳು ಬೇಕು. ಮಕ್ಕಳೆಲ್ಲಾ ಬಯಲಿನಲ್ಲಿ ಇರುತ್ತಾರೆ. ವರ್ಷೇವರ್ಷೇ ಜನ ಜಾಸ್ತಿಯಾಗುತ್ತಿರುತ್ತಾರೆ. ಮಕ್ಕಳ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿಗೆ ಅನುಗುಣವಾಗಿ ನಾವು ಬಿಲ್ಡಿಂಗ್ ಕಟ್ಟದೇಹೋದರೆ ಹೇಗೆ? ಮಕ್ಕಳೇ ಭವಿಷ್ಯದ ಪ್ರಜೆಗಳು ಎಂದು ಭಾಷಣ ಮಾಡುತ್ತಿರುವುದು. ಆಮೇಲೆ ಸರಿಯಾಗಿ ವ್ಯವಸ್ಥೆ ಮಾಡದೇ ಇರತಕ್ಕದ್ದು ಸರಿಯಲ್ಲ ಎಂದು ನನ್ನ ಭಾವನೆ. ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿನಲ್ಲಿ ಕಟ್ಟಡ ಕಟ್ಟತಕ್ಕದ್ದು ಒಂದು ವೈಶಿಷ್ಟ್ಯ. ಅದರಲ್ಲಿ ಎಸ್ಟಿಮೇಟ್ ಎಷ್ಟು ಮಾಡುತ್ತಾರೋ, ರಿವೈಸ್ಡ್ ಎಸ್ಟಿಮೇಟ್ ಎಷ್ಟು ಮಾಡುತ್ತಾರೋ? ಮೈಸೂರು ಹಾಸ್ಪಿಟಲ್‌ದೇ ಒಂದು ಉದಾಹರಣೆ ತೆಗೆದುಕೊಳ್ಳಿ, ಅದು ಬಿದ್ದು ಹೋಯಿತು. ಯಾರುಯಾರು ಅದಕ್ಕೆ ಪಾಲುದಾರರು ಇದ್ದಾರೆ? ಅಧಿಕಾರಿಗಳು ಶಾಮೀಲಾಗದೇ ಹೋದರೆ ಕಂಟ್ರಾಕ್ಟರುಗಳು ಏತಕ್ಕೆ ತಪ್ಪು ಮಾಡುತ್ತಾರೆ? ಮೊದಲಿನಿಂದ ಅಧಿಕಾರಿಗಳು ನೋಡಿಕೊಂಡು ಹೋಗಿದ್ದರೆ ಹೇಗೆ ತಪ್ಪಾಗುತ್ತದೆ? ಮೈಸೂರಿನಲ್ಲಿ ಒಂದು ರಂಗಮಂದಿರ ಎಂದು ಕಟ್ಟಿದ್ದಾರೆ ರಂಗಮಂದಿರ ಮತ್ತು ಕಟ್ಟಡಗಳಿಗೆ ಸುಮಾರು ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಬಿಲ್‌ಗಳನ್ನು ಯಾವರೀತಿಯಾಗಿ ಕೊಟ್ಟಿದ್ದಾರೆ? ಎಷ್ಟು ಅವಸರಅವಸರವಾಗಿ ಕೊಟ್ಟಿದ್ದಾರೆ? ವಿಶ್ವ ಕನ್ನಡ ಸಮ್ಮೇಳನ ಎಂದು ಮಾಡಿದ್ದಾರೆ. ವಿಶ್ವವೂ ಇಲ್ಲ ಕರ್ನಾಟಕವೂ ಇಲ್ಲ. ನಾವೇ ಹೋಗದಿದ್ದ ಮೇಲೆ ವಿಶ್ವ ಎಲ್ಲಿ ಬಂತು? ವಿಶ್ವದಿಂದ ೬೦ ಜನ ಬಂದಿದ್ದರಂತೆ. ಬರಲಿ. ಅದರ ಮೇಲೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಎಷ್ಟು ಕೊಟ್ಟಿದ್ದಾರೆ ಕಟ್ಟಡಕ್ಕೆ ಎಂಬುದನ್ನು ಮಾನ್ಯ ದೇವೇಗೌಡರೇ ವೈಯಕ್ತಿಕವಾಗಿ ಹೋಗಿ ಪರಿಶೀಲನೆ ಮಾಡಲಿ ಕೊಟ್ಟಿರುವುದು ಸರಿ ಎಂದು ಹೇಳಲಿ ನಿಮಗೆ ಒಪ್ಪಿಗೆಯಾದರೆ, ಮನವರಿಕೆಯಾದರೆ ಹೇಳಿ. ನಾವೂ ಒಪ್ಪಿಕೊಳ್ಳುತ್ತೇವೆ. ಮೂರು ಪಟ್ಟು ನಾಲ್ಕೈದು ಪಟ್ಟು ಜಾಸ್ತಿ ಕೊಟ್ಟಿದ್ದಾರೆ. ಅವಸರ ಅವಸರವಾಗಿ ಪೂರೈಸುವುದಕ್ಕೆ ಕೊಟ್ಟಿದ್ದಾರೆ. ಹೀಗೆ ಕಟ್ಟಡಗಳು ನಿರ್ಮಾಣವಾಗುವಾಗ ಯಾವರೀತಿ ಆಗುತ್ತಿದೆ ಎಂದು ಕೈಹಾಕಿ ನೋಡಿ. ಐರನ್ ಹ್ಯಾಂಡ್ ಎಂದು ಹೇಳುತ್ತಾರಲ್ಲ ಹಾಗೆ ಹಾಕಿ ಇಂಥ ಅವಿವೇಕಕ್ಕೆ ಎಡೆ ಕೊಡಬಾರದು. ಕಣ್ಣು ಮುಚ್ಚಿಕೊಂಡು ಕೂತರೆ ಕಬ್ಬಿಣವೂ ಇಲ್ಲ ಕೈಯೂ ಇಲ್ಲ. ನೂರಾರು ಯೋಜನೆಗಳನ್ನು ಮಾಡುತ್ತಿದ್ದಾರೆ. ನಿಂತ ನೀರುಗಳು ಎಷ್ಟಿವೆ? ಸಾವಿರಾರು ಹೆಕ್ಟೇರ್ ಭೂಮಿ ನಿಂತ ನೀರಿನ ಭೂಮಿ ಇದೆ ನಿಂತ ನೀರನ್ನು ಉಪಯೋಗಿಸಿದರೆ ಬರಗಾಲದಲ್ಲಿ ಎಷ್ಟು ಅನುಕೂಲವಾಗುತ್ತದೆ? ೧೦ ಸಾವಿರ ಹೆಕ್ಟೇರ್ ಭೂಮಿ ನಿಂತನೀರಿನ ಭೂಮಿಯಾಗಿದೆ. ಮೂರು ಕಾಸಿನ ಬೆಳೆ ಅಲ್ಲಿ ಬೆಳೆಯುತ್ತಿಲ್ಲ. ಅದಕ್ಕೆ ಏನು ಯೋಜನೆ ಮಾಡಿದ್ದೀರಿ? ಹೋದಸಾರಿಯೂ ಇದನ್ನು ಹೇಳಿದೆ. ಈ ಸಾರಿ ಬರಗಾಲ ಬಂದಿದೆ. ಆದ್ದರಿಂದ ಇನ್ನಾದರೂ ಗಮನ ಕೊಟ್ಟು ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಅಧಿಕಾರಿಗಳಿಗೆ ಏನು ತಾಕೀತು ಮಾಡಿದ್ದೀರಿ? ಅವರು ಏನು ಕೆಲಸ ಮಾಡಿದ್ದಾರೆ ಎಂಬುದನ್ನು ನೀವೇನಾದರೂ ನೋಡಿದ್ದೀರಾ? ಕೆಲಸ ಮಾಡಿದ್ದರೆ ಪರಿಶೀಲನೆ ಮಾಡಿದ್ದೀರಾ? ಒಟ್ಟಿನಲ್ಲಿ ನಿಂತ ನೀರಿನ ಉಪಯೋಗ ಜಾಗ್ರತೆ ಆಗಬೇಕು. ಮಾನ್ಯ ಕೃಷ್ಣನ್ ಅವರು ಹೇಳಿದಹಾಗೆ ಬಾಗಲಕೋಟೆ

ಮುಳುಗಿಸಬೇಕೇ ಬೇಡವೇ ಎಂಬ ಪ್ರಶ್ನೆ ಇದೆ. ಬಿಜಾಪುರ ಬರಗಾಲಕ್ಕೆ ಸಿಕ್ಕಿದೆ ಇವತ್ತು ಯೋಜನೆಯಿಂದ ಬಿಜಾಪುರಕ್ಕೆ ಅನುಕೂಲವಾಗಬೇಕು. ಯಾವರೀತಿ ಅನುಕೂಲವಾಗಬೇಕೋ ಅದು ಆಗಿದೆಯೆ? ನೀವೆಲ್ಲಾ ಸೇರಿಕೊಂಡು ಯೋಜನೆಗಳನ್ನು ಹಾಕಿ ಬಾಗಲಕೋಟೆ ಮುಳುಗಿಸಬೇಕೆಂದು ಹೊರಟಿದ್ದೀರಿ. ಅದಕ್ಕೆ ೧೦೦ ಕೋಟಿ ರೂಪಾಯಿ ಖರ್ಚು ಮಾಡಬೇಕು. ಅಲ್ಲಿ ಖರ್ಚು ಮಾಡುವ ಬದಲು ಅದೇ ೧೦೦ ಕೋಟಿ ರೂಪಾಯಿಗಳನ್ನು ಡ್ರೈ ಲ್ಯಾಂಡ್ ಇರಿಗೇಷನ್‌ಗೆ ಕೊಡಿ. ಬಾಗಲಕೋಟೆ ಉಳಿಸಿ. ಏತಕ್ಕೋಸ್ಕರ ಮುಳುಗಿಸುತ್ತೀರಿ? ಯಾರಿಗೋಸ್ಕರ ಮುಳುಗಿಸುತ್ತೀರಿ? ಅದರಿಂದ ಎಷ್ಟು ಉಪಕಾರ ಆಗುತ್ತದೆ ಎಂಬುದನ್ನು ದಯಮಾಡಿ ಹೇಳಿ. ನಾವು ಅದಕ್ಕೆ ವಿರೋಧವಾಗಿದ್ದೇವೆ. ಜನ ವಿರೋಧವಾಗಿದ್ದಾರೆ. ಕೆಲವು ಪ್ರತಿಷ್ಠೆಗೆ ಒಳಗಾಗಿರುವ ಜನ ನಾವು ಮಾಡೇ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಂಥವರ ಬಾಯಿಗೆ ಕಿವಿ ಕೊಟ್ಟು ಬಾಗಲಕೋಟೆಯನ್ನು ಮುಳುಗಿಸುವುದಕ್ಕೆ ೧೦೦ ಕೋಟಿ ರೂಪಾಯಿ ಕಾಂಪೆನ್‌ಸೇಷನ್ ಕೊಡಬೇಕೆಂದು ಹೇಳುತ್ತೀರಿ. ಈಗ ಅಂದಾಜು ಮಾಡಿರುವುದು ೧೦೦ ಕೋಟಿ. ಇನ್ನೂ ೧೦೦ ಕೋಟಿ ಆಗಬಹುದು. ಅದು ಯಾರ ಉದ್ಧಾರಕ್ಕೋಸ್ಕರ ಎಷ್ಟು ಜನ ಬಡವರು ಉದ್ಧಾರವಾಗುತ್ತಾರೆ ಹೇಳಿ. ಸಾಹುಕಾರರೇ ಇದ್ದಾರೆ ಅಲ್ಲಲ್ಲಾ. ನೀರಾವರಿ ಯೋಜನೆಯು ವೆಚ್ಚವಾಗಲೀ, ಪಿ.ಡಬ್ಲ್ಯು.ಡಿ. ಇಲಾಖೆ ವೆಚ್ಚವಾಗಲೀ ಯಾವ ವೆಚ್ಚವೇ ಆಗಲೀ ಬಡವರಿಗೆ, ನಿರ್ಗತಿಕರಿಗೆ, ಜಮೀನು ಇಲ್ಲದವರು ಯಾರಿದ್ದಾರೆ. ಜಮೀನನ್ನು ನಂಬಿಕೊಂಡು ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಉಪಕಾರ ಆಗುವಂಥ ಕೆಲಸವಾಗಿದೆಯೇ? ಒಂದು ಡ್ಯಾಂ ಕಟ್ಟಿದರೆ ಯಾರು ಯಾರದು ಜಮೀನಿದೆ ಅವರಿಗೆ ಉಪಕಾರವಾಗುತ್ತದೆ. ಯಾರು ವ್ಯವಸಾಯ ಕಾರ್ಮಿಕರಿದ್ದಾರೆ, ದಿಕ್ಕಿಲ್ಲದ ಮನುಷ್ಯ ಯಾರಿದ್ದಾನೆ, ಯಾರು ಆಧಾರ ಇಲ್ಲದೆ ಜೀವನ ಮಾಡುತ್ತಿದ್ದಾನೆ ಅಂಥವನ ಜೀವನ ಸುಗಮವಾಗಬೇಕು. ಅಂಥವನು ಸುಖವಾಗಿರಬೇಕು. ಅಂಥದ್ದನ್ನು ಅಳವಡಿಸಿಕೊಂಡು ನಾವು ಯೋಜನೆ ಹಾಕಬೇಕು. ಯಾರು ಯಾರು ಸಾಹುಕಾರರಿದ್ದಾರೆ ಅಂಥವರನ್ನು ಇನ್ನು ಸಾಹುಕಾರರನ್ನಾಗಿ ಆಗುವ ಹಾಗೆ ಮಾಡಿಕೊಂಡು ಯಾರು ಯಾರು ಅವರ ಜಾತಿಯವರಿದ್ದು ಆಸ್ತಿವಂತರಾಗುತ್ತಾರೆ ಅಂಥವರು ಮುಂದೆ ಬರಬೇಕು. ನಿರ್ಗತಿಕ ಜಾತಿಯವರು ಶೇಕಡ ೭೫–೮೦ ಪರ್ಸೆಂಟ್ ಏನಿದ್ದಾರೆ ಅವರು ನಿರ್ಗತಿಕರಾಗಿಯೇ ಜೀವನ ಮಾಡಬೇಕು ಎಂದು ಹೇಳುತ್ತೀರಾ? ಈ ಬಜೆಟ್ಟಿನಲ್ಲಿ ಎಷ್ಟು ಯೋಜನೆಗಳಿವೆ? ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ? ಇದೆಲ್ಲಾ ಹಣವಂತರಿಗೆ ಇದ್ದವರಿಗೆ, ಆಫೀಸರಿಗೆ ಸಂಬಳ ಕೊಡುವುದಕ್ಕೆ, ಅಡ್ಮಿನಿಸ್ಟ್ರೇಷನ್‌ಗೆ ಉಪಯೋಗಿಸುತ್ತೀರಿ. ಬಡವರು ಹಾಗೇ ಇದ್ದಾರೆ, ಆದಿ ಕಾಲದಿಂದಲೂ ಇದುವರೆಗೂ ದಾಸಾನುದಾಸರಾಗಿ ಇದ್ದಾರೆ. ಪುರಂದರ ದಾಸರ ಭಾಷಣವನ್ನು ಕೇಳಿ ಬಡವರು ಬಡವರಾಗಿಯೇ ಇದ್ದಾರೆ, ಸಾಹುಕಾರರು ಸಾಹುಕಾರರಾಗಿಯೇ ಇದ್ದಾರೆ. ಇವತ್ತಿನ ದಿವಸ ಬಡವರು ಏನಾಗಿದ್ದಾರೆ ಇವತ್ತು ಅವರು ಬರಗಾಲದ ದವಡೆಗೆ ಸಿಕ್ಕಿ ನರಳುತ್ತಿದ್ದಾರೆ. ಅವರಿಗೆ ಗತಿ ಇಲ್ಲ. ಬೇರೆ ಜೀವನದ ಮಾರ್ಗವಿಲ್ಲ ಈ ಹಣ ಸುಖವಾಗಿರುವ ಕೆಲವೇ ಜನರಿಗೆ ಹೋಗುತ್ತಿದೆ. ಈ ಹಣ ಯಾರ ಕೈಗೆ ಹೋಗುತ್ತದೋ ಅವರು ಸುಖವಾಗಿದ್ದಾರೆ. ನೀವು ಡ್ರೈ ಲ್ಯಾಂಡ್ ಇರಿಗೇಷನ್ ಪ್ರಾಜೆಕ್ಟ್ ತರುತ್ತೇವೆಂದು ಹೇಳಿದಿರಿ. ೧ ವರ್ಷಕ್ಕೆ ಸುಮಾರು ೩೦೦ ರಿಂದ ೪೦೦ ಕೋಟಿ ರೂಪಾಯಿಗಳನ್ನು ಇರಿಗೇಷನ್‌ಗೆ ಖರ್ಚು ಮಾಡುತ್ತಿದ್ದೀರಿ. ಬಡವರಿಗಾಗಿ ಡ್ರೈ ಲ್ಯಾಂಡ್ ಇರಿಗೇಷನ್‌ಗಾಗಿ ಇದರಲ್ಲಿ ಅರ್ಧದಷ್ಟು, ಕಾಲು ಭಾಗದಷ್ಟು ಖರ್ಚು ಮಾಡಿ ಎಂದು ಹೇಳುತ್ತೇನೆ. ಸಮಾಜ ಹೀಗೆ ವೈಪರೀತ್ಯದಿಂದ ಕೂಡಿರತಕ್ಕ ಸಮಾಜ ಆಗಿದೆ. ಇದು ಹಣವಂತರ ಸಮಾಜ ಮತ್ತು ಬಡವರ ಸಮಾಜ. ಇದು ಹೀಗೇ ಮುಂದುವರಿಯುತ್ತಿದೆ, ನೀವು ಒಂದೆರಡು ಎಕರೆ ಜಮೀನು ಇಟ್ಟುಕೊಂಡಿರುವ ಬಡವರು ಇದ್ದಾರೆ ಅಂಥವರಿಗೆ ಪ್ರಯೋಜನ ಆಗುವಂತಹ ಕೆಲಸ ಮಾಡಿ, ಗಂಗಾ ಯೋಜನೆಯನ್ನು ಮಾಡುತ್ತಿದ್ದೀರಿ. ಈ ಗಂಗಮ್ಮನನ್ನು ಕರೆದು ಕೊಂಡು ಬಂದು ಯಾವ ಯಾವ ತಾಲ್ಲೂಕುಗಳಿಗೆ ಹರಿಸುತ್ತೀರಿ ? ನಮ್ಮ ತಾಲ್ಲೂಕಿನಲ್ಲಿ ೪–೫ ಎಕರೆಗೆ ಮಾತ್ರ ನೀರು ಸಿಕ್ಕಿದರೆ ಅದರಿಂದ ಏನು ಸಾರ್ಥಕವಾಗುತ್ತದೆ ? ಏಕೆ ಈ ಒಂದು ಕೆಲಸ ? ಇವತ್ತು ಒಂದು ಯೋಜನೆ ಮಾಡಿ ೨೦೦–೩೦೦ ಜನರಿಗೆ ಮಾತ್ರ ಸಹಾಯ ಮಾಡುವುದರಿಂದ ಏನು ಪ್ರಯೋಜನ ? ಇವತ್ತು ಸಾರ್ವತ್ರಿಕವಾಗಿ ಸರ್ವೇ ಸಾಧಾರಣವಾಗಿ ಎಲ್ಲರಿಗೂ ಅನುಕೂಲ ಆಗುವ ಹಾಗೆ ಮಾಡಬೇಕು. We must work incessently and ceaslessly for the general happiness of all people of this State. This should be our aim and motto. ನಾವು ಎಷ್ಟೇ ಖರ್ಚು ಮಾಡಿದರೂ ಅದು ಎಲ್ಲರ ಸುಖಕ್ಕೋಸ್ಕರ ಆಗಬೇಕು.

ಎಲ್ಲರೂ ಆ ಹಣದಲ್ಲಿ ಸುಖದಲ್ಲಿ ಭಾಗಿಯಾಗಬೇಕು. ಅಂತಹ ಒಂದು ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲರ ಸುಖಕ್ಕೋಸ್ಕರ ಹೇಗೆ ಯೋಜನೆಗಳನ್ನು ಹಾಕಿಕೊಳ್ಳುವುದು ?

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಕೈಯಲ್ಲಿ ಅಧಿಕಾರ ಬಂದರೆ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ.—ಹಿಂದೆ ನೀವೂ ಕೂಡಾ ಅಧಿಕಾರದಲ್ಲಿ ಇದ್ದಿರಿ. ಆಗ ಏನು ಮಾಡಿದಿರಿ ? ನಿನ್ನೆಯ ದಿವಸ ಕೇಂದ್ರದ ಬಜೆಟ್ ಬಂದಿದೆ. ಅದರಲ್ಲಿ ನಿಮ್ಮ ಯೋಜನೆಗಳನ್ನು ಎಷ್ಟರಮಟ್ಟಿಗೆ ಅಳವಡಿಸಿದ್ದಾರೆಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಬಿ. ಜಿ. ಕೊಟ್ರಪ್ಪ.—ನೀವು ಅಧಿಕಾರದಲ್ಲಿ ಇದ್ದಾಗ ಇದನ್ನೆಲ್ಲಾ ಮಾಡಬಹುದಿತ್ತಲ್ಲವೇ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹಾಗೂ ಮಂತ್ರಿಮರ್ಯರು ಒಳ್ಳೆಯ ಪ್ರಶ್ನೆಗಳನ್ನು ಕೇಳಿದ್ದಾರೆ. ಈ ಸಮಾಜದಲ್ಲಿ, ಈ ದೇಶದಲ್ಲಿ ಯಾರು ಶೋಷಕರು ಇದ್ದಾರೆ, ಬಡವರನ್ನು ಶೋಷಣೆ ಮಾಡುತ್ತಿದ್ದಾರೆ ಅವರು ಅಧಿಕಾರದಲ್ಲಿ ಇರುವವರೆಗೂ ಏನೂ ಆಗುವುದಿಲ್ಲ. ಬಡವರ ಕೈಗೆ ರಾಜ್ಯದ ಅಧಿಕಾರ ಹೋಗಲಿ. ಯಾವತ್ತು ಅಧಿಕಾರ ಅವರ ಕೈಗೆ ಹೋಗುತ್ತದೋ ಅವತ್ತು ಬಡವರ ಕಲ್ಯಾಣವಾಗುತ್ತದೆ. ಇದೇ ರೀತಿ ಭಾಷಣ ಮಾಡುವುದು, ಇದೇ ರೀತಿ ಕತೆ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನೀವು ಹೇಳಿದ ಕತೆಯನ್ನು ಅವರು ಕೇಳಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ. ನಿಮ್ಮ ಹತ್ತಿರ ಅಧಿಕಾರ ಇರುವುದರಿಂದ ಹೇಗೆ ಬಡವರ ಕಲ್ಯಾಣವಾಗುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರದಲ್ಲಿ ಇದ್ದವರು ಶೋಷಣೆಯ ಬಗ್ಗೆ ಹೇಳುತ್ತಿದ್ದಾರೆ. ಆ ಗುಂಪಿಗೆ ಅವರೂ ಸೇರಿದವರಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಇದರಲ್ಲಿ ವಿನಾಯಿತಿಯನ್ನು ತೆಗೆದುಕೊಳ್ಳುತ್ತಾ ಇಲ್ಲ. ನೀವು ಆ ರೀತಿ ತೆಗೆದುಕೊಂಡರೆ ನಮ್ಮ ಪಾರ್ಟಿಯಲ್ಲಿರುವವರು ಎಲ್ಲರು ಬಡವರು, ಬಡವರೇ ಆಗಿರುತ್ತಾರೆ. ಇವರ ಮನಸ್ಸಿನ ಪರಿವರ್ತನೆ ಆಗಬೇಕು. ಎಲ್ಲರ ಸುಖಕ್ಕೋಸ್ಕರ ಶ್ರಮಪಡಬೇಕು ಎನ್ನುವ ಭಾವನೆ ಇದೆ. ಆ ರೀತಿ ಬದಲಾವಣೆ ಆಗಬೇಕು. ಇವತ್ತು ಜನತಾ ಪಕ್ಷವಾದರೆ ಏನು, ಕಮ್ಯುನಿಸ್ಟ್ ಪಕ್ಷವಾದರೆ ಏನು, ಕಾಂಗ್ರೆಸ್ ಪಕ್ಷವಾದರೆ ಏನು ? ಇವತ್ತು ವಿಶೇಷವಾಗಿರತಕ್ಕ ಬದಲಾವಣೆ ಆಗಬೇಕು ಇವತ್ತಲ್ಲಾ ನಾಳೆ ಅದು ಬರುತ್ತದೆ. ಬಡವರು ಅಧಿಕಾರಕ್ಕೆ ಬಂದಾಗ ನಾವು ಭಾಷಣವನ್ನು ಕೇಳುವುದಿಲ್ಲ. ನಾವು ಮಾಡಿ ತೋರಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಹೀಗೆ ಹೇಳುವ ಇವರು ಪದೇ ಪದೇ ಏತಕ್ಕೆ ಕಂಟೆಸ್ಟ್ ಮಾಡುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಜಾಲಪ್ಪನವರು ಏಕೆ ಕೇಳಬೇಕು ? ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಗೆದ್ದುಬರಲೇಬೇಕು. ಇಷ್ಟಾದರೂ ನಾನು ಹೇಳತಕ್ಕ ಅವಕಾಶ ಸಿಗಬೇಕು. ಇಲ್ಲದಿದ್ದರೆ ಇದನ್ನು ನೀವು ಕೇಳತಕ್ಕ ಅವಕಾಶ ನಿಮಗೆ ಎಲ್ಲಿ ಸಿಗುತ್ತದೆ ? ನಾನು ಒಬ್ಬ ಹೇಳಬೇಕು, ನೀವು ಎಲ್ಲರೂ ಕೇಳಬೇಕು.

ಶ್ರೀ ಯು. ಭೂಪತಿ.—ಬಡವರ ಪಕ್ಷ ಅಧಿಕಾರಕ್ಕೆ ಬಂದರೆ ಮಾನ್ಯ ಬಸವಲಿಂಗಪ್ಪನವರು ರೂಲಿಂಗ್ ಕಡೆಯೂ ಇರುವುದಿಲ್ಲ, ಅಪೊಸಿಷನ್ ಕಡೆಯೂ ಇರುವುದಿಲ್ಲ. ಕಾರಣ ಇವರು ಬಡವರು ಅಲ್ಲದ್ದರಿಂದ ಹೊರಗಡೆಯೇ ಇರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಭಾಷಣ ಮಾಡುವುದಕ್ಕಿಂತ ಮೊದಲು ಒಂದು ವಿಷಯವನ್ನು ಹೇಳುತ್ತೇನೆ. ಒಂದು ಕಡೆ ಕೀರ್ತನೆ ನಡೆಯುತ್ತಿತ್ತು, ಆಗ ಕೀರ್ತನೆ ಕೇಳುತ್ತಿದ್ದ ಜನರು ಒಬ್ಬೊಬ್ಬರೂ ಹೊರನಡೆಯುತ್ತಿದ್ದರು. ಕೊನೆಗೆ ಒಂದೆ ಒಬ್ಬ ಮಾತ್ರ ಕುಳಿತಿದ್ದನನ್ನು ನೋಡಿ ಕೀರ್ತನೆ ಮಾಡುತ್ತಿದ್ದವನು ಸಂತೋಷಗೊಂಡು ತಮ್ಮ ಕೀರ್ತನೆ ಬಗ್ಗೆ ಕೇಳಿದ. ಆಗ ಆತ ನೀವು ನಿಂತಿರುವ ಕಂಬಳಿ ನನ್ನದು ಅದಕ್ಕೋಸ್ಕರ ನಿಂತಿದ್ದೇನೆ ಎಂದು ಹೇಳಿದನಂತೆ. ಹಾಗೆ

ಇವತ್ತು ಜನತೆಯ ಹಿತವನ್ನು ರಕ್ಷಣೆ ಮಾಡತಕ್ಕ ಪಿ.ಡಬ್ಲ್ಯು.ಡಿ. ಇಲಾಖೆಯ ಬಗ್ಗೆ ಚರ್ಚೆ ನಡೆಯುವ ಸಂದರ್ಭದಲ್ಲಿ ಈ ಕಡೆಯ ಮತ್ತು ಆ ಕಡೆಯ ಸದಸ್ಯರ ಆಸ್ತಿ ಎಷ್ಟು ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ನಿಜವಾಗಿಯೂ ಈ ಖಾತೆ ಚರ್ಚೆಗೆ ಬಂದಾಗ ಬಹಳ ಜನರು ಈ ಬಗ್ಗೆ ಹೇಳಬೇಕಾಗಿತ್ತು. ಈ ಬಗ್ಗೆ ನನಗೆ ಮಾತನಾಡುವ ಇಚ್ಛೆ ಇರಲಿಲ್ಲ. ಈ ಬಗ್ಗೆ ಮಾನ್ಯ ಮೊಯ್ಲಿಯವರು ಬಹಳ ಚೆನ್ನಾಗಿ ಮಾತನಾಡಿದರು. ಹಾಗೂ ಬಸವಲಿಂಗಪ್ಪನವರು ತಮ್ಮ ಅನುಭವಗಳನ್ನು ಹೇಳಿದ್ದಾರೆ. ಆದರೆ ಈ ಪಿ.ಡಬ್ಲ್ಯು.ಡಿ.ಯಲ್ಲಿ ಯಾರೂ ಭಾಷಣ ಮಾಡಿಲ್ಲ ಎಂದಾದೀತು ಎನ್ನುವ ದೃಷ್ಟಿಯಿಂದ ನಾನು ಒಂದೆರಡು ಮಾತುಗಳನ್ನು ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರು ಬಹಳ ಮುತ್ಸದ್ದಿಗಳು. ಅವರು ಎಫಿಶಿಯೆಂಟೂ ಹೌದು ಇಲ್ಲ ಎಂದು ಹೇಳುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಇದ್ದರೂ ಕೂಡಾ ಇವರಲ್ಲಿ ಇರತಕ್ಕ ಗುಣಕ್ಕೆ ಮತ್ಸರ ಮಾಡುವುದಿಲ್ಲ. ಈ ಕಡೆ ಅವರು ಕುಳಿತು ಮಾತನಾಡುತ್ತಿದ್ದಾಗ ಆ ಕಡೆ ಇದ್ದವರು ನಡುಗುತ್ತಿದ್ದರು. ಅವರು ಈ ಕಡೆ ಇದ್ದಾಗ ನಿಜವಾಗಿಯೂ ಅವರ ಭಾಷಣವನ್ನು ಕೇಳಿದರೆ ಅವರು ಆಡಳಿತ ಪಕ್ಷದವರನ್ನು ನಡುಗಿಸುವ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು. ಆದರೆ ಈಗ ಯಾಕೋ ಅವರಲ್ಲಿ ಆ ಒಂದು ಶೌರ್ಯ ಕೂಡಾ ಉಳಿದಿಲ್ಲ. ಇದು ಕಾಲದ ಮಹಿಮೆಯೋ ಅಥವಾ ಆ ಸ್ಥಾನದ ಮಹಿಮೆಯೋ ನನಗೆ ಗೊತ್ತಾಗುತ್ತಾ ಇಲ್ಲ. ಇವತ್ತು ನಾವು ಮತ್ತು ದೇವೇಗೌಡರು ಬಡಿದಾಡಿ ಮಾನ್ಯ ಕೃಷ್ಣನ್ ಅವರಿಂದ ಬುದ್ಧಿವಾದವನ್ನು ಹೇಳಿಸಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದೇವೆ. ಇವತ್ತು ದೇಶದ ಹಿತದ ರಕ್ಷಣೆ ಬಹಳ ಮುಖ್ಯವಾಗಿದೆ, ಈ ದೇಶದಲ್ಲಿ ಹುಟ್ಟಿರುವ ನಾವುಗಳು ಯಾವುದೋ ಒಂದು ಪಕ್ಷದಲ್ಲಿದ್ದೇವೆಂದು ಹೇಳಿ ಪಕ್ಷದ ಇಕ್ಕಟ್ಟಿಗೆ ಬಿದ್ದು ದೇಶದ ಹಿತವನ್ನು ತ್ಯಾಗ ಮಾಡುವುದಕ್ಕಾಗುವುದಿಲ್ಲ. ನಾವು ಇವತ್ತು ಕರ್ನಾಟಕದ ಅನ್ನವನ್ನು ಉಣ್ಣುತ್ತಿದ್ದೇವೆ. ಇವತ್ತು ಜಾತಿಮತ ಬೇಧವನ್ನು ಬಿಟ್ಟಿದ್ದೇವೆ. ಯಾವುದೇ ಒಂದು ಪಕ್ಷ ಜನತೆಯ ಹಿತಕ್ಕೆ ಧಕ್ಕೆ ತಂದರೂ ಅದನ್ನು ಗಮನಿಸದೇ ಜನತೆಯ ಹಿತ ರಕ್ಷಣೆ ಮಾಡಬೇಕೆಂದು ಮಾನ್ಯ ಮೊಯ್ಲಿಯವರು ಹೇಳಿದ್ದಾರೆ. ಅದನ್ನು ನಾನು ಸ್ಪಷ್ಟೀಕರಿಸುತ್ತೇನೆ. ಮಾನ್ಯ ದೇವೇಗೌಡರು, ಕರ್ನಾಟಕದ ಹಿತವನ್ನು ರಕ್ಷಣೆ ಮಾಡುವ ದೃಷ್ಟಿಯಲ್ಲಿ ತೆಲುಗು ಗಂಗಾ ಯೋಜನೆಗೆ ಕಾನೂನು ಬದ್ಧವಾಗಿಯಾಗಲೀ ಅಥವಾ ಇನ್ನಾವುದೇ ಮಾರ್ಗದಿಂದಾಗಲೀ ಯಾವುದೇ ರೀತಿಯ ಹೋರಾಟವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಯಾವುದೇ ರೀತಿಯ ಮಂಡನೆ ಮಾಡುವುದಕ್ಕೆ ಇಷ್ಟಪಟ್ಟರೆ ಅದರಲ್ಲಿ ನಾವು ಆ ಪಕ್ಷ ಈ ಪಕ್ಷ ಎಂದು ವರ್ಗೀಕರಣ ಮಾಡದೇ ಯಾವುದು ನ್ಯಾಯ ಇದೆ ಅದಕ್ಕೆ ನಾವು ಸಹಕಾರ ಕೊಡುತ್ತೇವೆ. ಹಾಗೂ ಅವರೇನಾದರೂ ಅನ್ಯಾಯ ಮಾಡುವುದಾದರೆ ಅದಕ್ಕೆ ನಾವು ಬಹಿಷ್ಕಾರ ಕೂಡಾ ಹಾಕುತ್ತೇವೆ. ಅಥವಾ ಅವರು ಬುದ್ಧಿಕೆಟ್ಟು ವರ್ತಿಸಿದರು ಎಂದರೆ ಅವರಿಗೆ ಬುದ್ಧಿವಾದವನ್ನು ಹೇಳುತ್ತೇವೆ. ಇವತ್ತು ನಾನು ಅಂಕಿಸಂಖ್ಯೆಗಳನ್ನು ಮುಂದೆ ಇಟ್ಟುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳುತ್ತೇನೆ. ನಾವೂ ಹಿಂದೆಯೂ ನೋಡಿದ್ದೇವೆ, ಇಂದೂ ಕೂಡಾ ನೋಡುತ್ತಿದ್ದೇವೆ. ನಾವು ಇಲ್ಲಿ ಯಾರೋ ಹೇಳಿದ್ದನ್ನು ಬಿಡೋಣ. ಇವತ್ತು ರಸ್ತೆಗಳ ಬಗ್ಗೆ ನಾವು ಗಮನಹರಿಸುವುದಾದರೆ, ಅವು ರಾಜ್ಯ ಹೆದ್ದಾರಿಗಳು ಇರಲಿ, ಜಿಲ್ಲಾ ಹೆದ್ದಾರಿಗಳು ಇರಲಿ, ಆ ರಸ್ತೆಗಳಲ್ಲಿ ಒಬ್ಬ ಮನುಷ್ಯ ಆತ ಕಾರಿನಲ್ಲಿ ಹೋಗಲಿ ಅಥವಾ ಚಕ್ಕಡಿಯಲ್ಲಿ ಹೋಗಲಿ ಆತ ಯಾವ ರೀತಿಯ ಕಷ್ಟವನ್ನು ಪಡುತ್ತಾನೆ ಎಂಬುದನ್ನು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ಗಮನಿಸಿದ್ದರೆ ಅವರು ಇವತ್ತು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗದೇ ಇರುವುದು ಯೋಗ್ಯವಾಗಿತ್ತು ಎಂದು ನಾನು ಹೇಳಬೇಕಾಗುತ್ತದೆ.

ನಮ್ಮ ಕಡೆ ಹಳ್ಳಿಯವರು ಒಂದು ಮಾತನ್ನು ಹೇಳುತ್ತಾರೆ. ಪಿ.ಡಬ್ಲ್ಯು.ಡಿ ರಸ್ತೆಯಲ್ಲಿ ಯಾರಾದರೂ ಒಬ್ಬ ಬಸಿರಿ ಹೆಣ್ಣುಮಗಳನ್ನು ಚಕ್ಕಡಿಯಲ್ಲಿ ಕರೆದು ಕೊಂಡು ಹೋದರೆ ಆ ಹೆಣ್ಣುಮಗಳು ಆಸ್ಪತ್ರೆಗೆ ಹೋಗುವ ಮೊದಲೇ ಹಡೆಯುತ್ತಾರೆ ಎಂದು. ಅವರು ಸುಮ್ಮನೆ ಹೇಳುತ್ತಾರೆಂದು ನಾನು ಭಾವಿಸಿದ್ದೆ. ಆದರೆ ನಾನು ಸ್ವತಃ ನೋಡಿದ ಮೇಲೆ ಅವರ ಮಾತು ನಿಜವಾಗಿ ಸತ್ಯವಾದ ಮಾತು ಎಂದೆನಿಸಿತು. ಇದು ಖರೆ ಮಾತು. ಒಮ್ಮೊಮ್ಮೆ ನಾವು ಕಾರ್‌ನಲ್ಲಿ ಕೂತರೆ ನಮ್ಮ ಬೆನ್ನುಮೂಳೆ ಕೂಡ ಮುರಿಯುತ್ತವೇನೋ ಎಂದೆನ್ನಿಸುತ್ತದೆ. ಚಕ್ಕಡಿಯಲ್ಲಿ ಕೂತವರ ವಿಷಯಬೇಡ, ನಾವು ಕಾರ್‌ನಲ್ಲಿ ಕೂತವರ ಪಾಡು ಕೂಡ ಹೀಗಿದೆ ಎಂದರೆ ಚಕ್ಕಡಿಯವರ ಪರಿಸ್ಥಿತಿ ಏನು ಎಂಬುದನ್ನು ನೀವೇ ತಿಳಿದುಕೊಳ್ಳಬೇಕು. ಇದು ಏತಕ್ಕೆ ಈರೀತಿ ಆಗುತ್ತದೆ. ರಸ್ತೆಗಳ ರಿಪೇರಿಗೋಸ್ಕರ ಬಜೆಟ್‌ನಲ್ಲಿ ಹಣವನ್ನು ಖರ್ಚು ಮಾಡುತ್ತೀರಿ, ಆ ಇಲಾಖೆಗೆ ಎಷ್ಟೆಷ್ಟು ಹೋಗಬೇಕೋ ಅಷ್ಟಷ್ಟು ಹಣವನ್ನು

ನಿಮ್ಮಿಂದ ಮಂಜೂರಾತಿ ತೆಗೆದುಕೊಳ್ಳುತ್ತೀರಿ ಆದರೂ ರಸ್ತೆಗಳು ಹೀನ ಸ್ಥಿತಿಯಲ್ಲಿರುತ್ತವೆ. ನಿಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರ್‌ಗಳು ಬಹಳ ಮಂದಿ ಬೆಳೆದಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಎಕ್ಸಿಕ್ಯುಟಿವ್ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಹೀಗೆ ಬಹಳ ಮಂದಿ ಬೆಳೆದಿದ್ದಾರೆ. ನಿಮ್ಮ ಇಂಜಿನಿಯರ್ ಕೆಲಸ ಏನಾಗಿದೆ ಎಂದರೆ ಕೇವಲ ಕಾಗದದ ಮೇಲೆ ಜಮಾಖರ್ಚು ಮಾಡುವುದು ಆಗಿದೆಯೇ ಹೊರತು ಬೇರೆ ಯಾವುದೇ ಕೆಲಸವೂ ಇಲ್ಲ. ಇವತ್ತು ಯಾವುದಾದರೊಂದು ಅಂದಾಜನ್ನು ತಯಾರು ಮಾಡಿ ಎಂದು ನಿಮ್ಮ ಇಂಜಿನಿಯರ್‌ಗಳಿಗೆ ಹೇಳಿದರೆ ಅವರು ಹಿಂದೆ ಯಾವುದೋ ಒಂದು ಹಳೆಯ ಅಂದಾಜನ್ನು ತೆಗೆದುಕೊಂಡು ಅದರಲ್ಲಿ ಇರತಕ್ಕ ಕೆಲವು ಅಂಕಿಸಂಖ್ಯೆಗಳನ್ನು ಬದಲಾವಣೆ ಮಾಡಿ ತಯಾರು ಮಾಡುತ್ತಾರೆಯೇ ಹೊರತು ಹೊಸದಾಗಿ ಲೆಕ್ಕಾಚಾರ ಹಾಕಿ ಅಂದಾಜನ್ನು ತಯಾರು ಮಾಡುವುದಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಅಂಶ ನೆನಪಿಗೆ ಬರುತ್ತದೆ. ಅದೇನೆಂದರೆ, ಮಂಡ್ಯದ ಹತ್ತಿರ ಮಾನ್ಯ ವಿಶ್ವೇಶ್ವರಯ್ಯನವರು ಕಟ್ಟಿದ ಒಂದು ಸೇತುವೆಯನ್ನು ನೋಡಿದರೆ ಅದು ಇಷ್ಟು ವರ್ಷಗಳಾದರೂ ಸಹಿತ ಒಂದು ಕಟ್ಟಿಗೆಯ ಮೇಲೆ ನಿಂತಿದೆ. ಅಷ್ಟೇ ಅಲ್ಲ ಇನ್ನೂ ಭದ್ರವಾಗಿಯೂ ಇದೆ, ಆದರೆ ನಿಮ್ಮ ಈಗಿನ ಇಂಜಿನಿಯರ್‌ಗಳು ಹೇಗೆ ಮಾಡುತ್ತಾರೆ ಎನ್ನುವುದನ್ನು ಹೇಳುವುದಾದರೆ, ಈ ಇಲಾಖೆಯಲ್ಲಿ ಸಾಕಷ್ಟು ಹಣ ಖರ್ಚಾಗಿದೆ, ರೀಸರ್ಚ್ ಕೆಲಸವಾಗಿದೆ, ಉತ್ತಮ ವಿದ್ಯಾಭ್ಯಾಸವಾಗಿದೆ, ಸೇತುವೆ ಕಟ್ಟಲು ಸಿಮೆಂಟ್‌ನ್ನು ಉಪಯೋಗಿಸುತ್ತಾರೆ, ಕಬ್ಬಿಣವನ್ನು ಉಪಯೋಗಿಸುತ್ತಾರೆ, ಆದರೂ ಕೂಡ ಇವರು ಕಟ್ಟಿದ ಬ್ರಿಡ್ಜ್‌ಗಳಾಗಲಿ, ಕಟ್ಟಡಗಳಾಗಲಿ ಕೇವಲ ಕೆಲವೇ ದಿವಸದಲ್ಲಿ ಬೀಳುತ್ತಾ ಹೋಗುತ್ತಿವೆ. ನಮ್ಮ ಕ್ಷೇತ್ರದಲ್ಲಿ ಹಡ್ಡಿ ಮತ್ತು ಗದಗ್‌ನ ನಡುವೆ ನಿಮ್ಮ ಲೋಕೋಪಯೋಗಿ ಇಲಾಖೆಯವರು ಒಂದು ಸಣ್ಣ ಕಲ್ವರ್ಟ್‌ನ್ನು ಕಟ್ಟಿದ್ದಾರೆ. ಅದು ಇನ್ನೂ ಸರಿಯಾಗಿಲ್ಲ. ಈ ಕಡೆಯಿಂದ ಇವರು ಕಟ್ಟಿಕೊಂಡು ಹೋದಂತೆಲ್ಲಾ ಹಿಂದಿನಿಂದ ಬೀಳುತ್ತಾ ಹೋಗುತ್ತಿದೆ. ಇದು ಏತಕ್ಕೆ ಹೀಗಾಯಿತು ಎಂದು ನೋಡಿದರೆ, ಇವರು ಮಾಡಿರತಕ್ಕ ಕೆಲಸ, ಉಪಯೋಗಿಸಿರತಕ್ಕ ಸಿಮೆಂಟ್, ಇನ್ನೂ ಮುಂತಾದವು ಕಾರಣ. ಏಕೆಂದರೆ ಇದು ಕಾಂಟ್ರ್ಯಾಕ್ಟ್ ಕೆಲಸ. ಇವತ್ತು ಪಿ. ಡಬ್ಲ್ಯು. ಡಿ. ಇಲಾಖೆ ಎಂದರೆ ಕಂಟ್ರ್ಯಾಕ್ಟರ್‌ಗಳ ಇಲಾಖೆಯಾಗಿದೆಯೆಂದು ಸ್ಪಷ್ಟವಾಗಿ ನಾವು ಹೇಳಬಹುದು. ಆದರೆ ವಿನಾಕಾರಣ ನಾವು ಎಲ್ಲಾ ಇಂಜಿನಿಯರ್‌ಗಳನ್ನೂ ಬೈಯುವುದು ತಪ್ಪಾಗುತ್ತದೆ. ನಿಮ್ಮಲ್ಲೂ ಅನೇಕ ಪ್ರಾಮಾಣಿಕ ಇಂಜಿನಿಯರ್‌ಗಳಿದ್ದಾರೆ. ಇವತ್ತು ನಿಮ್ಮಲ್ಲಿ ಕಾರ್ಯದರ್ಶಿಯಾಗಿರುವವರೂ ಕೂಡ ಒಬ್ಬ ಪ್ರಾಮಾಣಿಕ ಇಂಜಿನಿಯರ್. ಅವರು ಮೊದಲು ಇಂಜಿನಿಯರ್ ಆಗಿದ್ದು ಈಗ ಕಾರ್ಯದರ್ಶಿಯಾಗಿದ್ದಾರೆ. ನಿಜವಾಗಿಯೂ ಕೆಲವು ವಿಚಾರದಲ್ಲಿ ನಾವು ನಿಮ್ಮನ್ನು ಅಭಿನಂದಿಸಬೇಕಾಗುತ್ತದೆ. ಒಳ್ಳೆಯ ಕೆಲಸವನ್ನು ಮಾಡತಕ್ಕ ಅಧಿಕಾರಿಗಳು ತಮಗೆ ಬೇಕು. ಇವತ್ತು ಲೋಕೋಪಯೋಗಿ ಇಲಾಖೆಯೆಂದು ತಾವು ಏನು ಹೇಳುತ್ತಿದ್ದೀರಿ ಇದನ್ನು ತೆಗೆದು ಕಂಟ್ರ್ಯಾಕ್ಟರ್‌ಗಳ ಇಲಾಖೆ ಎಂದು ಕರೆಯಿರಿ. ಈ ಕಂಟ್ರ್ಯಾಕ್ಟರ್‌ಗಳು ಎಷ್ಟೇ ಚೆನ್ನಾಗಿ ಕೆಲಸ ಮಾಡಿದರೂ ಕೂಡ ಮೊದಲು ತನ್ನ ಮತ್ತು ತನ್ನ ಕುಟುಂಬದವರ ಹಿತವನ್ನು ನೋಡಿಕೊಂಡು ಅನಂತರ ಸಾರ್ವಜನಿಕರ ಹಿತವನ್ನು ನೋಡುತ್ತಾನೆ. ಈ ಕೆಲಸದಲ್ಲಿ ತನಗೆ ಹೆಚ್ಚಿಗೆ ಹಣ ಉಳಿದೀತು ಎನ್ನುವ ಭಾವನೆಯಿಂದ ಆ ಕೆಲಸಕ್ಕೆ ಬರುತ್ತಾರೆ. ಅವನು ಅದರಲ್ಲಿ ಹಣವನ್ನು ಉಳಿಸಿಕೊಳ್ಳುವುದು ಸ್ವಾಭಾವಿಕ. ನಮ್ಮ ದೇಶದಲ್ಲಿ ಬಡತನ ಇರುವುದಕ್ಕೆ ಕಾರಣ ಎಂದರೆ, ನಾವು ಅಪ್ರಾಮಾಣಿಕತೆಗೆ ಹೆಚ್ಚಿನ ಮಹತ್ವವನ್ನು ಕೊಡತಕ್ಕ ಗುಣವನ್ನು ಬೆಳೆಸಿಕೊಂಡು ಬಂದಿರುವುದು. ಇದರಿಂದಾಗಿ ಕಂಟ್ರ್ಯಾಕ್ಟರ್‌ಗಳು ಏನು ಮಾಡುತ್ತಾರೆಂದರೆ ಸಿಮೆಂಟ್‌ನ ಜೊತೆಗೆ ಮಣ್ಣನ್ನೂ ಕೂಡಿಸುತ್ತಾರೆ. ಮಣ್ಣನ್ನು ಕೂಡಿಸುವುದರಿಂದ ಕೆಲಸ ಮಾಡಿದ್ದು ಹಾಳಾಗುತ್ತದೆ. ದೇಶದ ಅಭಿವೃದ್ಧಿಯ ಬಗ್ಗೆ ಅವನಿಗೆ ಗಮನವೇ ಇರುವುದಿಲ್ಲ. ಕೇವಲ ಹಣ ಗಳಿಕೆಯೇ ಅವನ ಗುರಿಯಾಗಿರುತ್ತದೆ. ಇದರಿಂದಾಗಿ ಸಿಮೆಂಟ್‌ನ ಜೊತೆಗೆ ಮಣ್ಣನ್ನೂ ಕೂಡಿಸಿ ಕಟ್ಟಿದಂಥ ಸೇತುವೆಗಳು ಕಟ್ಟಿದ ಕೆಲವೇ ದಿವಸಗಳಲ್ಲಿ ಮುರಿದು ಬೀಳುತ್ತವೆ. ತಾವು ಒಂದು ಯೋಚನೆಯನ್ನು ಮಾಡಬೇಕು. ಹಿಂದೆ ಬ್ರಿಟಿಷರ ಕಾಲದಲ್ಲಿ ಕಟ್ಟಿದ ಬ್ರಿಡ್ಜ್‌ಗಳು ಇನ್ನೂ ಉತ್ತಮ ಸ್ಥಿತಿಯಲ್ಲಿವೆ, ಆದರೆ ನಮ್ಮ ಇಂಜಿನಿಯರ್‌ಗಳು ಕಟ್ಟಿರತಕ್ಕ ಬ್ರಿಡ್ಜ್‌ಗಳು ಬೀಳುವುದಕ್ಕೆ ಹತ್ತಿವೆ ಇದನ್ನು ತಾವು ಗಮನಿಸಬೇಕು. ಇದರ ಬಗ್ಗೆ ನಾವು ಯಾವ ತನಿಖೆಯನ್ನು ಮಾಡಿದ್ದೀರಿ ? ಇದರ ಬಗ್ಗೆ ನಾವು ಇಲ್ಲಿ ತಕರಾರು ಮಾಡುವುದೂ ಬೇಡ. ನೀವು ನಮ್ಮ ಕಡೆ ತೋರಿಸಿ ಹೇಳುವುದೂ ಬೇಡ. ನೀವು ಅಧಿಕಾರಕ್ಕೆ ಬಂದು ೩-೪ ವರ್ಷಗಳಾದುವು. ಈ ಅವಧಿಯಲ್ಲಿ ನೀವು ಒಂದು ಬ್ರಿಡ್ಜ್‌ನ್ನೂ ಕಟ್ಟಿಲ್ಲ. ನಾವು ಹಿಂದೆ ಏನು ಕಟ್ಟಿದ್ದೆವು ಅವುಗಳನ್ನು ಉದ್ಘಾಟನೆ ಮಾಡುವುದರಲ್ಲೇ ನೀವು ಇನ್ನೂ ಇದ್ದೀರಿ. ಆದ್ದರಿಂದ ನಾವು ನಿಮ್ಮನ್ನು ಬೈಯುವುದಕ್ಕಾ

ಗುವುದಿಲ್ಲ. ನೀವು ಹೊಸದಾಗಿ ಏನಾದರೂ ಕಟ್ಟಿದ್ದಿದ್ದರೆ ನಾವು ಕೇಳಬಹುದಿತ್ತು. ಕೆಲವನ್ನು ನಾವು ಹಿಂದೆ ಅರ್ಧಂಬರ್ಧ ಮಾಡಿದ್ದುದನ್ನು ನೀವು ಈಗ ಪೂರ್ತಿ ಮಾಡಲಿಕ್ಕೆ ಹತ್ತಿದ್ದೀರಿ. ಈ ಕೆಲಸವನ್ನು ಬಿಟ್ಟರೆ ಬೇರೆ ಯಾವುದೇ ಕೆಲಸವೂ ಆಗಿಲ್ಲ. ಆದುದರಿಂದಲೇ ನಾನು ಹೇಳಿದ್ದು ಈ ಪಿ. ಡಬ್ಲ್ಯು. ಡಿ. ಇಲಾಖೆಯನ್ನು ಕಂಟ್ರಾಕ್ಟರ್‌ಗಳ ಇಲಾಖೆಯೆಂದು ಕರೆಯಿರಿ ಎಂದು ನಾವು ಭಾಷಣ ಮಾಡುವಾಗ ನಾವು ಮಾಡಿದ್ದು ಶ್ರೇಷ್ಠ, ನೀವು ಮಾಡಿದ್ದು ಕೆಟ್ಟದ್ದು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಟ್ಟ ಕೆಲಸವನ್ನು ಮಾಡುವವರು ನಮ್ಮಲ್ಲೂ ಇರಬಹುದು, ನಿಮ್ಮಲ್ಲೂ ಇರಬಹುದು, ಅದೇರೀತಿ ಭಲೋ ಕೆಲಸವನ್ನು ಮಾಡುವವರು ನಿಮ್ಮಲ್ಲೂ ಇರಬಹುದು, ನಮ್ಮಲ್ಲೂ ಇರಬಹುದು. ಇವರಿಬ್ಬರನ್ನೂ ಸೇರಿಸಿ ಯಾರ್ಯಾರು ಭಲೋ ಕೆಲಸವನ್ನು ಮಾಡುವವರಿದ್ದಾರೆ ಅವರನ್ನು ಹುಡುಕಬೇಕು. ಕೆಟ್ಟದನ್ನು ಮಾಡಿದವರನ್ನು ಮನೆಗೆ ಕಳುಹಿಸೋಣ. ಮಾನ್ಯ ಸಚಿವರು ಈ ಕಡೆಗೆ ತಮ್ಮ ಲಕ್ಷ್ಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ದೇವೇಗೌಡರು ಒಂದು ಉತ್ತಮವಾದ ಅನುಭವವನ್ನು ಇಟ್ಟುಕೊಂಡು ಈ ಖಾತೆಯಲ್ಲಿರುವುದರಿಂದ ನಾನು ಒಂದು ಮಾತನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ನಾನು ಈ ವಿಷಯದಲ್ಲಿ ಮಾತನಾಡಬೇಕೆಂದು ಬಾರದೇ ಇರುವುದರಿಂದ ಇಲ್ಲಿ ಯಾರ ಹೆಸರನ್ನೂ ಇಚ್ಛೆಪಡುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇಂಜಿನಿಯರ್‌ಗಳು ಏನು ಕೆಲಸವನ್ನು ಮಾಡುತ್ತಾರೆಂದು ನಾನು ಹೇಳಬೇಕಾಗಿಲ್ಲ. ಏಕೆಂದರೆ ನಿಮಗೂ ಅನೇಕ ಸಂದರ್ಭಗಳಲ್ಲಿ ಬಹಳಷ್ಟು ಅನುಭವ ಆಗಿದೆ. ದುರ್ದೈವದಿಂದ ನೀವು ಇವತ್ತು ಆ ಸ್ಥಾನದಲ್ಲಿ ಕುಳಿತಿರುವುದರಿಂದ ನಿಮ್ಮ ಬಾಯಿಂದ ನೀವು ಹೇಳಲಾರದ್ದನ್ನು ನಾವು ನಮ್ಮ ಬಾಯಿಂದ ಇವತ್ತು ಹೇಳಬೇಕಾಗಿದೆ ರಸ್ತೆಗೆ ಕಾಂಕ್ರೀಟ್ ಹಾಕಬೇಕಾದರೆ ಕಲ್ಲನ್ನು ಕೂಡಿ ಹಾಕಿರುತ್ತಾರೆ. ಒಂದೆರಡು ದಿವಸ ಬಿಟ್ಟು ನೋಡಿದರೆ ಅದೇ ಕಲ್ಲುಗಳು ಮುಂದಿನ ಮೈಲಿ ಕಲ್ಲಿಗೆ ಹೋಗಿ ಬಿದ್ದಿರುತ್ತವೆ. ಇಂಥಾದ್ದು ನಮ್ಮ ಬಿಜಾಪುರದಲ್ಲಿ ಬಹಳಷ್ಟು ಆಗಿದೆ. ಬಾದಾಮಿ ಮತ್ತು ಬಾಗಲಕೋಟೆ ನಡುವೆ ಇಂಥಾದ್ದು ಬಹಳಷ್ಟು ನಡೆದಿದೆ. ಮಾನ್ಯ ಸಚಿವರು ಈ ವಿಷಯಗಳ ಕಡೆಗೆ ವಿಶೇಷ ಲಕ್ಷ್ಯವನ್ನು ಕೊಡಬೇಕು. ಇನ್ನೂ ಸ್ವಲ್ಪ ಮುಂದೆ ಹೋಗಿ ಹೇಳಬೇಕೆಂದರೆ ಯಾರೋ ಒಬ್ಬರು ಮಾಡಿರತಕ್ಕ ಕಲಸವನ್ನು ಮೆಷರ್‌ಮೆಂಟ್ ಮಾಡಲು ಹೋದಾಗ ಯಾವನು ತಪ್ಪು ಮಾಡಿರುತ್ತಾನೆ ಅವನು ಮೆಲ್ಲಗೆ ಪಾರಾಗುತ್ತಾನೆ. ಅವನು ಸಿಕ್ಕಿಹಾಕಿಕೊಳ್ಳುವುದೇ ಇಲ್ಲ. ಏಕೆಂದರೆ ಅವನು ಈ ತಪ್ಪು ಕೆಲಸವನ್ನು ಮಾಡುವಾಗಲೇ ನಾನು ತಪ್ಪು ಮಾಡುತ್ತಿದ್ದೇನೆ ನನಗೆ ಶಿಕ್ಷೆಯಾಗುತ್ತದೆ ಎಂದು ತಿಳಿದುಕೊಂಡಿರುತ್ತಾನೆ. ಆದ್ದರಿಂದ ಅವನು ಆದಷ್ಟು ಸಿಕ್ಕಿಕೊಳ್ಳದ ರೀತಿಯಲ್ಲಿ ಮಾಡುತ್ತಾನೆ. ಇಂಥ ಸಂದರ್ಭಗಳಲ್ಲಿ ಅವನ ಕೈಕೆಳಗೆ ಇರತಕ್ಕವನೋ ಅಥವಾ ಯಾವನು ಅದಕ್ಕೆ ಸಹಿ ಹಾಕುತ್ತಾನೋ ಅವನನ್ನು ನೀವು ಹಿಡಿದುಕೊಂಡು ಶಿಕ್ಷೆ ಕೊಡುತ್ತೀರಿ. ನಿಜವಾಗಿ ತಪ್ಪು ಮಾಡಿರತಕ್ಕ ಖದೀಮನನ್ನು ಬಿಟ್ಟುಬಿಡುತ್ತೀರಿ. ಹೀಗಾಗಿ ನಿರಪರಾಧಿಗಳು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಯಾರು ಕೆಟ್ಟ ಕೆಲಸಮಾಡಿದರು, ದುಷ್ಕರ್ಮಿಗಳಿರುತ್ತಾರೆ ಅವರು ಪಾರಾಗುತ್ತಾರೆ. ಇಂಥಾದ್ದು ನಡೆಯುತ್ತಿರುವುದು ಕೇವಲ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರವೇ ಅಲ್ಲ. ಎಲ್ಲ ಇಲಾಖೆಗಳಲ್ಲೂ ಇಂಥಾದ್ದು ಆಗುತ್ತಿದೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು.

ಇನ್ನು ಗೆಸ್ಟ್ ಹೌಸ್‌ಗಳ ವಿಚಾರವನ್ನು ಹೇಳುವುದಾದರೆ, ಗೆಸ್ಟ್ ಹೌಸ್‌ಗಳಲ್ಲಿ ಎಷ್ಟು ತರಹದವು ಇವೆ ? ಯಾವ ಯಾವ ತರಗತಿಯ ಗೆಸ್ಟ್ ಹೌಸ್‌ಗಳಿವೆ ಎಂಬುದನ್ನು ಬಹುಶಃ ತಾವು ನೋಡಿಲ್ಲವೆಂದು ಕಾಣುತ್ತದೆ. ಸ್ವಾಮಿ. ಚಿತ್ರದುರ್ಗ ಒಂದು ಕೇಂದ್ರ ಸ್ಥಳ. ಈಕಡೆಯವರಿಗೂ ಮತ್ತು ಆಕಡೆಯವರಿಗೂ ಇದು ಕೇಂದ್ರಸ್ಥಾನ ಆಗಿದೆ. ಯಾರು ಹೋದರೂ ಅಲ್ಲಿಗೆ ಹೋಗಿಯೇ ಬರುತ್ತಾರೆ. ಆದರೆ ಆ ಗೆಸ್ಟ್ ಹೌಸ್‌ಗೆ ಯಾರಾದರೂ ಹೋಗಿ ಬಾಗಿಲನ್ನು ತೆರೆದರೆ ಒಳಗಡೆಯಿಂದ ಘಂ ಎಂದು ವಾಸನೆ ಬರುತ್ತದೆ. ದುರ್ವಾಸನೆ ಮೂಗಿಗೆ ಬಡಿಯುತ್ತದೆ. ನೀವು ಹೇಳಬಹುದು. ಯಾರೋ ಅಲ್ಲಿಗೆ ಹೋದವರು ಕುಡಿದರೆ ಅದಕ್ಕೆ ನಾವು ಏನು ಮಾಡುವುದಕ್ಕೆ ಬರುತ್ತದೆ ಎಂದು ಅದಕ್ಕೆ ನೀವು ಏನು ಮಾಡಬೇಕೆಂದರೆ ಕುಡಿತದ ಛಟ ಇರುವವರಿಗೆ, ಕುಡಿಯುವವರಿಗೆ ಎಂದು ಒಂದು ರೂಮನ್ನು ಪ್ರತ್ಯೇಕವಾಗಿ ಮಾಡಿ ಅವರು ಅಲ್ಲಿ ಹೋಗಿ ಕುಡಿಯಲಿ ಇಲ್ಲದಿದ್ದರೆ ಅವರು ಕುಡಿದು ಹೋದಮೇಲೆ ಆ ರೂಮಿನಲ್ಲಿರತಕ್ಕ ಗಲೀಜನ್ನೆಲ್ಲಾ ತೆಗೆದು ಸ್ವಚ್ಛ ಮಾಡುವ ವ್ಯವಸ್ಥೆಯನ್ನಾದರೂ ಮಾಡಿ. ಇವತ್ತು ಲೋಕೋಪಯೋಗಿ ಇಲಾಖೆಯ ಬೇಡಿಕೆ ಇರುವುದರಿಂದ ನಾವು ಇದರ ಬಗ್ಗೆ ಹೇಳಲೇಬೇಕಾಗುತ್ತದೆ. ಈ ಗೆಸ್ಟ್

ಹೌಸ್‌ಗಳಲ್ಲಿ ವಾಚ್‌ಮನ್ ಅಥವಾ ಮೇಟಿ ಎಂದು ಇಟ್ಟಿರುತ್ತಾರೆ, ಆ ಮೇಟಿಯ ಕೆಲಸ ಏನೆಂದರೆ ಚಹಾ ಮಾಡಿ ತಂದುಕೊಡುವುದು, ಅಡಿಗೆ ಮಾಡುವ ಕೆಲಸ ಇಂಥಾದ್ದು ಹಚ್ಚಿರುತ್ತಾರೆ. ಆದರೆ ಇನ್ನೂ ಕೆಲವು ದೊಡ್ಡವರು ಹೋದಾಗ ಅವರಿಗೆ ಬಾಟಲು ತಂದುಕೊಡತಕ್ಕ ಕೆಲಸವನ್ನೂ ಮಾಡಬೇಕಾಗುತ್ತದೆ. ಆ ಬಾಟಲನ್ನು ಕುಡಿದಮೇಲೆ ಅದರ ಜೊತೆಗೆ ಇನ್ನೂ ಏನೇನು ಮಾಡಬೇಕೋ ಅದನ್ನೆಲ್ಲಾ ಒದಗಿಸುವ ಕೆಲಸ ಮಾಡಬೇಕಾಗುತ್ತದೆ. ಆದರೆ ಈ ವಿಚಾರವನ್ನು ದೊಡ್ಡದು ಮಾಡುವಂತಿಲ್ಲ. ಆ ಮೇಟಿಯನ್ನು ಕೆಲಸದಿಂದ ತೆಗೆಯಲಿಕ್ಕೆ ಬರುವುದಿಲ್ಲ. ಏಕೆಂದರೆ ಆ ಮೇಟಿಯನ್ನು ತೆಗೆದರೆ ನಮ್ಮ ಹುಳುಕುಗಳೂ ಹೊರಗೆ ಬರುತ್ತವೆ ಎನ್ನತಕ್ಕ ಖದೀಮರು ನಾವಾಗಿದ್ದೇವೆ. ಈ ಮನೋಭಾವನೆ ನಮ್ಮಲ್ಲಿ ಬದಲಾಗಬೇಕು. ಇದನ್ನು ಮಾನ್ಯ ದೇವೇಗೌಡರು ಏನಾದರೂ ಬದಲಾವಣೆ ಮಾಡುತ್ತಾರೋ ಏನೋ ನೋಡಬೇಕು. ನಾವು ಸತ್ಯ ಹರಿಶ್ಚಂದ್ರರು. ಹರಿಶ್ಚಂದನ ಅಪರಾವತಾರ ಎಂದು ಯಾರೂ ಹೇಳಿ ಕೊಳ್ಳುವುದು ಬೇಡ. ಇದು ಹೇಗಾಗಿದೆ ಎಂದರೆ ಯಾರೋ ಒಬ್ಬ ತನ್ನ ಮೂಗನ್ನು ಕೆರೆದುಕೊಂಡನಂತೆ. ಅದನ್ನು ನೋಡಿದ ಇನ್ನೊಬ್ಬ ನನ್ನನ್ನು ಇವನು ಮೂಗ ಎಂದು ಹೇಳುತ್ತಿದ್ದಾನೆಂದು ತಿಳಿದ ಕೊಂಡು ಅವನ ಜೊತೆ ಜಗಳಕ್ಕೆ ಹೋದನಂತೆ. ಸ್ವಾಮಿ, ಕೆಲವುಕಡೆ ಗೆಸ್ಟ್ ಹೌಸ್ ಗಳನ್ನು ಕಟ್ಟಿಸಿದ್ದೀರಿ ನಮ್ಮ ಗದಗ್‌ನಲ್ಲಿರತಕ್ಕದ್ದನ್ನೇ ತೆಗೆದುಕೊಂಡರೆ ಅದು ಊರಿನಿಂದ ಹೊರಗೆ ಇದೆ. ಅಲ್ಲಿಗೆ ನೀರಿನ ವ್ಯವಸ್ಥೆ ಇಲ್ಲ. ನಾವು ಯಾರಾದರೂ ಅಲ್ಲಿಗೆ ಹೋದಾಗ ನಮ್ಮ ಸಲುವಾಗಿ ಅಲ್ಲಿ ರುವವರು ಗದಗ್‌ನಿಂದಲೋ ಅಥವಾ ಬೇರೆ ಎಲ್ಲಿಂದಲೋ ನೀರನ್ನು ತಂದು ಹಾಕುತ್ತಾರೆ. ಇದನ್ನು ನಾನು ನಾಚಿಕೆಗೆಟ್ಟತನವೆಂದು ಹೇಳುವುದಿಲ್ಲ. ಆದರೆ ಇದು ಅದಕ್ಷತೆಯ ಪರಮಾವಧಿ ಎಂದು ಹೇಳು ತ್ತೇನೆ. ಏಕೆಂದರೆ, ಅಲ್ಲಿ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಇರತಕ್ಕ ಜಾಗದಲ್ಲಿ ಈ ಇಂಜಿನಿಯರ್‌ಗಳ ಮನೆಗಳಿಗೆ ನೀರು ಬರುತ್ತದೆ. ಆದರೆ ಗೆಸ್ಟ್ ಹೌಸ್‌ನಲ್ಲಿ ನೀರು ಬರು ವುದಿಲ್ಲ ಎಂದರೆ ಇದಕ್ಕೆ ನಾವು ಏನು ಹೇಳಬೇಕು ? ಇದು ಅಧಿಕಾರಿಗಳ ಅದಕ್ಷತೆ ಅಲ್ಲವೆ ? ಯಾರಾ ದರೂ ಶಾಸಕರು, ಮಂತ್ರಿಗಳು ಹೋದಾಗ ಎಲ್ಲಿಂದಲೋ ನೀರನ್ನು ತಂದು ಹಾಕಬೇಕು ಎಂದರೆ ಅಲ್ಲಿನ ವ್ಯವಸ್ಥೆ ಯಾವರೀತಿ ಇದೆ ಎಂಬುದನ್ನು ತಾವೇ ಯೋಚನೆ ಮಾಡಿ. ಇದನ್ನು ಭಲೋ ಎಂದು ಹೇಳು ತ್ತೀರೋ. ಅಥವಾ ಬೇರೆ ಇನ್ನೇನಾದರೂ ಹೇಳುತ್ತೀರೋ ? ಮುಖ್ಯ ಮಂತ್ರಿಯವರು ಬರುತ್ತಾರೆಂದು ಭಾರಿಭಾರಿ ವ್ಯವಸ್ಥೆ ಮಾಡುತ್ತಾರೆ. ಅವರು ಬಂದು ಹೋದಮೇಲೆ ಅದನ್ನೆಲ್ಲಾ ಮಾರಿಕೊಂಡು ಮತ್ತೆ ಹಳೆಯದನ್ನೇ ತಂದು ಹಾಕುತ್ತಾರೆ ಇಂಥ ದುರ್ವ್ಯವಹಾರಗಳೆಲ್ಲಾ ನಡೆಯುತ್ತಿವೆ. ಇದನ್ನು ಸಚಿವರು ಗಮನಿಸಬೇಕು. ಇನ್ನೊಂದು ವಿಚಾರ ಹೇಳಬೇಕೆಂದರೆ ಗೆಸ್ಟ್ ಹೌಸ್‌ಗಳಲ್ಲಿ ಟೆಲಿಫೋನ್‌ನ ವ್ಯವಸ್ಥೆ ಬಹಳಷ್ಟು ಕಡೆಗಳಲ್ಲಿ ಇನ್ನೂ ಇಲ್ಲ. ಸರ್ಕಾರದವರು ತಮಗೆ ಬೇಕುಬೇಕಾದ ಕಡೆಗಳಲ್ಲಿ ಟೆಲಿಫೋನ್ ಇಟ್ಟಿರುತ್ತಾರೆ. ಎಂ.ಎಲ್.ಎ. ಗಳಿಗೆ ಕೊಡುತ್ತಾರೆ, ಮಂತ್ರಿಗಳಿಗೆ ಟೆಲಿಫೋನ್ ಕೊಡು ತ್ತಾರೆ. ಆದರೆ ಗೆಸ್ಟ್ ಹೌಸ್‌ಗಳಲ್ಲಿ ಇಟ್ಟಿರುವುದಿಲ್ಲ. ಅನಾವಶ್ಯಕವಾಗಿ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಈ ಗೆಸ್ಟ್ ಹೌಸ್‌ಗಳಿಗೆ ಶಾಸಕರು, ಮಂತ್ರಿಗಳು ಅಥವಾ ಜರ್ನಲಿಸ್ಟ್‌ಗಳು ಹೀಗೆ ಯಾರಾದರೂ ದೊಡ್ಡವರು ಬಂದಾಗ ಒಂದು ಟೆಲಿಫೋನ್ ಇಲ್ಲದಿದ್ದರೆ ಅವರು ಏನು ಅಂದುಕೊಳ್ಳು ತ್ತಾರೆಂಬುದನ್ನು ಮಾನ್ಯ ಸಚಿವರು ಗಮನಿಸಬೇಕು. ನಮ್ಮ ಗದುಗಿನ ಗೆಸ್ಟ್ ಹೌಸ್‌ನ ಸಲುವಾಗಿ ನಾನು ಹೇಳುತ್ತಿದ್ದೇನೆಂದು ತಾವು ದಯವಿಟ್ಟು ತಿಳಿದುಕೊಳ್ಳಬೇಡಿ. ನಮ್ಮ ಗದಗ್ ಗೆಸ್ಟ್ ಹೌಸ್‌ನಲ್ಲಿ ಟೆಲಿಫೋನ್ ಇದೆ. ಇದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರಾಜ್ಯದಲ್ಲಿರತಕ್ಕ ಎಲ್ಲ ಗೆಸ್ಟ್ ಹೌಸ್‌ಗಳಲ್ಲೂ ಟೆಲಿಫೋನ್‌ನ ವ್ಯವಸ್ಥೆ ಇರುವಂತೆ ಮಾಡಿ ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಇನ್ನು ಮಾನ್ಯ ಅಧ್ಯಕ್ಷರೇ, ಇರಿಗೇಷನ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಇರಿಗೇಷನ್ ನಮಗಂತೂ ಕೊಡಬಾರದೆಂಬ ನಿರ್ಧಾರ ಮಾಡಿದಂತೆ ಕಾಣುತ್ತದೆ. ಮಂತ್ರಿಗಳ ಪ್ರದೇಶಗಳಿಗೆ ಮಾತ್ರ ಇರುತ್ತದೆ. ಅವರೂ ನಮ್ಮ ಜನರೇ ನಮ್ಮ ಮುಖಂಡರೇ. ಅವರ ಕಡೆಯದೆಂದು ಅದನ್ನು ಮಾಡಬೇಡಿ ಎಂದು ಹೇಳುವುದಿಲ್ಲ ಮಾನ್ಯ ದೇವೇಗೌಡರು ಬಡ್ಜೆಟ್ ತಯಾರು ಮಾಡುವಂಥ ಕೆಲಸದಲ್ಲಿ ಮರೆತಿರಬಹುದು. ನಮ್ಮ ಭಾಗದಲ್ಲಿ ಯಾವುದೇ ನೀರಾವರಿ ಯೋಜನೆಗಳನ್ನು ಹಾಕಿಕೊಡದಿದ್ದರು ನಿಮ್ಮ ಭಾಗದಲ್ಲಿ ಹಾಕಿ ಕೊಂಡಿರುವುದಕ್ಕೆ ಸಂತೋಷ.

ಶ್ರೀ ಹೆಚ್. ಡಿ. ದೇವೇಗೌಡ.—ವಿಷಯ ತಿಳಿಯದೆ ಉತ್ತರ ಹೇಳಲಿಕ್ಕೆ ನಾನು ಹೋಗುವುದಿಲ್ಲ. ಅಂಥ ಒಂದು ಪರಿಪಾಠವನ್ನು ನಾನು ಬೆಳೆಸಿಕೊಂಡು ಬಂದಿಲ್ಲ. ಬಜೆಟ್ ತಯಾರು ಮಾಡುವಾಗ

ಅಮೌಂಟ್ ನೋಡಿಕೊಂಡೇ ಮಾಡಿದ್ದೇವೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಪ್ರಿಂಟಿಂಗ್ ಪ್ರೆಸ್‌ಗೆ ಕಳುಹಿಸಿಕೊಡುವಾಗ ೨ ಪೇಜುಗಳು ಬಿಟ್ಟು ಹೋಗಿದೆ. ಮತ್ತೆ ಅದನ್ನು ಪ್ರಿಂಟ್ ಮಾಡಿಸಿ ಸರ್ಕ್ಯುಲರ್ ಕಳುಹಿಸಿ ಕೊಟ್ಟಿದ್ದೇವೆ. ದಯವಿಟ್ಟು ನೋಡಿ.

ಶ್ರೀ ಕೆ. ಎಚ್. ಪಾಟೀಲ್.—ಯಾವಾಗ ತೆಗೆಯಬೇಕೆಂದರೆ ಆವಾಗ ತೆಗೆಯುತ್ತೀರಿ. ಯಾವಾಗ ಬೇಕೆಂದರೆ ಆವಾಗ ಹಾಕುತ್ತೀರಿ. ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂದು ಹೇಳುವ ಹಾಗೆ ಮಂತ್ರಿಗಳ ಕೆಲಸವಾಗಬಾರದು.

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ನಿಮಿಷ ಮಾನ್ಯ ಸದಸ್ಯರು ಕೇಳಿ, ಆದರೆ ಹೇಳುತ್ತೇನೆ. ಮಂತ್ರಿಗಳ ಪ್ರದೇಶಗಳಲ್ಲಿ ಮಾತ್ರ ಇರುತ್ತದೆ ಎಂದು ಹೇಳತಕ್ಕಂಥದ್ದು ಸರಿಯಾದುದಲ್ಲ. ಬಡ್ಜೆಟ್‌ನ ಕೊನೆಪುಟದಲ್ಲಿ ಶ್ರೀಮಾನ್ ವೀರಪ್ಪಮೊಯಿಲಿಯವರ ಎಂ.ಎಸ್.ಪಿ. ವರ್ಕ್ಸ್‌ಗೆ ಸಂಬಂಧಪಟ್ಟಂತೆ ಮಾತ್ರ ಇದೆ. ಒಂದೇ ಒಂದು ಹೊಸ ಕೆಲಸ ಕೂಡ ಆಗಿಲ್ಲ. ಪ್ರಿಂಟ್‌ಗೆ ಹೋಗತಕ್ಕಂಥ ಕಾಲದಲ್ಲಿ ಬಿಟ್ಟು ಹೋಗಿತ್ತು. ಮತ್ತೆ ಪರಿಶೀಲನೆ ಮಾಡಿ ಸೇರಿಸಲಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಈ ದೃಷ್ಟಿಯಿಂದ ನಿಮ್ಮನ್ನು ಮಾಡಬೇಡಿ ಎಂದು ಹೇಳಲಿಲ್ಲ. ಆದರೆ ಇಲ್ಲದವರ ಕಡೆ ಕೂಡ ಲಕ್ಷ ಕೊಡಬೇಕೆಂದು ಹೇಳುತ್ತೇನೆ. ಮಂತ್ರಿ ಮಂಡಲದಲ್ಲಿರತಕ್ಕವರ ಕ್ಷೇತ್ರಕ್ಕೆ ಯಾವರೀತಿ ಪ್ರಾಶಸ್ತ್ಯ ಕೊಡುತ್ತೀರೋ ಅದೇರೀತಿಯಾಗಿ ಎಲ್ಲರ ಕಡೆಗೂ ತಮ್ಮ ಲಕ್ಷ್ಯವನ್ನು ಕೊಡಿ ಎಂದು ಹೇಳುತ್ತೇನೆ. ಏತಕ್ಕೆಂದರೆ ತುಮಕೂರಿಗೆ ನೀರು ಬರುತ್ತದೆ ಎಂದು ಹೇಳಿದರೆ, ಹಿರೆಕೆರೂರು, ರಾಣೆಬೆನ್ನೂರಿಗೆ ನೀರು ಬರಲಿಕ್ಕೆ ಆಗುತ್ತದೆಯೋ ? ಆದರೆ ಅದರಂತೆ ಎಲ್ಲಕಡೆ ಮಾಡಲು ದೇವರು ತಮ್ಮ ಮನಸ್ಸಿಗೆ ಬುದ್ಧಿ ಕೊಡಲಿ ಎಂದು ಅಷ್ಟೇ ನಮ್ಮ ಕೋರಿಕೆ, ನಾವು ಯಾರು ಒತ್ತಾಯ ಮಾಡಿದರು ಮಾಡುವಂಥ ಸ್ಥಿತಿಯಲ್ಲಿಲ್ಲ ನಿಮ್ಮಲ್ಲಿ, ನಾನು ಕಂಪೆಲ್ ಮಾಡುವುದಾದರು ಇಷ್ಟೇ. ತಮ್ಮಲ್ಲಿರತಕ್ಕಂಥ ಉದಾತ್ತಭಾವನೆ, ವಾದ ಸರಣಿ, ಬುದ್ಧಿವಂತಿಕೆಯ ನಿರ್ಣಯಾವು ಎಲ್ಲ ಜನರಿಗೂ ಕಲ್ಯಾಣವಾಗುವಂಥ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಅನೇಕ ದಿವಸಗಳಿಂದ ಬಹಳ ಉಗ್ರವಾಗಿ ಟೀಕೆ ಮಾಡುತ್ತಿದ್ದೇವೆ. ಈವತ್ತು ಅಣೆಕಟ್ಟು ಕಟ್ಟುವ ವಿಷಯದಲ್ಲಿ ಜನರನ್ನು ಬಹಳಷ್ಟು ತಪ್ಪುದಾರಿಗೆ ಎಳೆದಿದ್ದೀರಿ. ಬಗಾಲಕೋಟೆ ಬೆಳೆಯುವುದನ್ನು ಬಂದ್ ಮಾಡಿದ್ದೀರಿ. ಬಾಗಲಕೋಟೆಗೆ ನೀರು ಕೊಡುವ ಬಗ್ಗೆ ಒಂದು ಕಮಿಟಿ ಮಾಡಿ ಚೇರ್‌ಮನ್ ಮಾಡಿದ್ದೀರಿ. ಅವರಿಗೆ ಗೂಟದ ಕಾರೊಂದನ್ನು ಕೊಟ್ಟಿದ್ದೀರಿ. ಉಳಿದ ಕೆಲಸ ಇರಲಿ ಗೂಟದ ಕಾರು ಸಿಕ್ಕಿದರೆ ಸಾಕು. ಈವತ್ತಿನ ದಿವಸ ಈ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ಏನು ಕೆಲಸ ಮಾಡುತ್ತಿದೆ ಎಂದು ಪ್ರಶ್ನೆ ಮಾಡುತ್ತಿದ್ದೇನೆ. ಯಾವುದೋ ಯೋಜನೆಗಳ ಬಗ್ಗೆ ಕಾಳಜಿ ಮಾಡುತ್ತಾರೆಯೋ ಹೊರತು ಕೇವಲ ಈ ಯೋಜನೆಯ ಸಲುವಾಗಿ ಅವರು ಏನು ಹೇಳಿದರು ಸಹಿತ ನೀರಾವರಿ ಯೋಜನೆಗಳನ್ನು ಕರ್ನಾಟಕದಲ್ಲಿ ಉತ್ತಮವಾದ ರೀತಿಯಲ್ಲಿ ಮುಗಿಸಬೇಕಾದರೆ ಕನಿಷ್ಟ ಮೂರುಸಾವಿರ ಕೋಟಿ ರೂಪಾಯಿಗಳನ್ನಾದರೂ ಅವರಿಗೆ ಕೊಡಬೇಕು. ಅದನ್ನು ಕೊಡುವಂಥ ಸ್ಥಿತಿಯಲ್ಲಿಲ್ಲ, ನೀವು ಇಲ್ಲಿ ಯಾವುದಾದರೂ ನಿರ್ದಿಷ್ಟವಾದ ನಿಲುವನ್ನು ತಳೆಯಬೇಕು. ಯಾವ ಯೋಜನೆಯನ್ನು ತೆಗೆದುಕೊಂಡರೆ ದೇಶಕ್ಕೆ ಈವತ್ತಿನ ದಿವಸ ಮೊದಲು ಪ್ರತಿಫಲ ಕೊಡುತ್ತದೆಯೋ ಅದನ್ನು ತಾವು ಮೊದಲು ತೆಗೆದುಕೊಳ್ಳಬೇಕು. ಎಲ್ಲವನ್ನು ಕಟ್ಟು ಮಾಡುತ್ತೇವೆಂದು ಹೇಳಿ ೨೦ ಕೋಟಿರೂಪಾಯಿಗಳ ಬಡ್ಜೆಟ್ ಪ್ರಾವಿಷನ್ ಮಾಡಿ ಅದರಲ್ಲಿಯೇ ಎಲ್ಲರಿಗೂ ಹಂಚುತ್ತೇವೆಂದು ಹೋದರೆ ಸಾಧ್ಯವಾಗುವುದಿಲ್ಲ. ಯಾವ ಯೋಜನೆಯನ್ನು ಪ್ರಥಮವಾಗಿ ತೆಗೆದುಕೊಂಡರೆ ನಮ್ಮ ದೇಶದ ಹಿತವನ್ನು ಕಾಪಾಡುವುದಕ್ಕೆ ಸಾಧ್ಯವೋ ಅಂಥ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಹಣವನ್ನು ಒದಗಿಸಬೇಕು. ೨-೩ ವರ್ಷ ಎಲ್ಲ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ನ್ನು ಬಿಟ್ಟುಬಿಡಬೇಕು. ಸೀರೆ, ಧೋತಿ, ಪಠ್ಯಪುಸ್ತಕಗಳನ್ನು ಹಂಚುವಂಥ ಎಲ್ಲ ಕೆಲಸವನ್ನು ಬಿಟ್ಟುಬಿಡಬೇಕು. ನೀವು ಕೂಡ ಮೂರುಸಾವಿರ ಕೋಟಿ ರೂಪಾಯಿಗಳಿಗೆ ಎಲ್ಲಾ ನೀರಾವರಿ ಯೋಜನೆಯನ್ನು ಮಾಡುತ್ತೇವೆಂದು ಹೇಳಿ ನಿರ್ಣಯವನ್ನು ತರುವುದರೊಳಗೆ ತೆಲಗುಗಂಗಾ ಯೋಜನೆಯನ್ನು ಆಂಧ್ರದವರು ಮುಗಿಸಿರುತ್ತಾರೆ. ನೀವು ಕೇಂದ್ರ ಸರ್ಕಾರದ ಜೊತೆ ಈ ವಾದವನ್ನು ಮಂಡಿಸಿದ್ದೇ ಆದರೆ ಅದಕ್ಕೆ ನಾವು ಸಹ ಸಂಪೂರ್ಣವಾಗಿ ಸಪೋರ್ಟ್ ಮಾಡುತ್ತೇವೆ. ಅದು

ಮಾಡದಿದ್ದರೆ ಕನ್ನಡಿ ಒಳಗಿನ ಗಂಟನ್ನು ನೋಡಿದಂತಾಗುತ್ತದೆ. ನಿಮ್ಮನ್ನು ನೋಡಿ ಪಿ.ಡಬ್ಲ್ಯು.ಡಿ. ಸಮಾಧಾನವಾಗಿ ಇದೆ ಎಂದು ಹೇಳಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ನಮ್ಮನ್ನು ಅಡ್ಡದಾರಿಗೆ ಎಳೆಯಬೇಡಿ ಎಂದು ಕೇಳಿಕೊಳ್ಳುತ್ತೇನೆ. ಅನೇಕ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ಟೀಕೆ ಮಾಡುತ್ತಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಟೀಕೆ ಮಾಡಲೇಬೇಕು. ಯಾವುದು ಸರಿ, ಯಾವುದು ಸರಿಯಲ್ಲ ಎನ್ನುವುದನ್ನು ಟೀಕೆ ಮಾಡಲೇಬೇಕಾಗುತ್ತದೆ. ಈವತ್ತಿನದಿವಸ ಕೇಂದ್ರ ಸರ್ಕಾರ ಬಜೆಟ್ ಮಾಡಿರತಕ್ಕಂಥದ್ದು ಸರಿಯಲ್ಲವೆಂದು ಹೇಳಿದ್ದೀರಿ. ಆದರೆ ಅವರು ಜನರಿಗೆ ಉತ್ತಮವಾಗ ಬೇಕೆಂದು ಹೇಳಿ ಯೋಗ್ಯವಾಗಿರುವುದನ್ನು ತೆಗೆದುಕೊಂಡು ಅಯೋಗ್ಯವಾಗಿರುವುದನ್ನು ಬಿಟ್ಟು ಕೇಂದ್ರ ಸರ್ಕಾರವು ತನ್ನ ಧೋರಣೆಗೆ ಒಳಪಟ್ಟು ಮಾಡಿದ್ದಾರೆ. ನಿಮ್ಮ ಸರ್ಕಾರದವರು ತೆಗೆದುಕೊಂಡ ಕಾಡ ಯೋಜನೆಯು ಮಹತ್ವದ್ದು ಎಂದು ಹೇಳಬೇಕಾದರೆ ನಿರ್ದಾಕ್ಷಿಣ್ಯವಾಗಿ ಎಲ್ಲ ಕೆಲಸಗಳು ಆಗಬೇಕು. ಅನೇಕ ಲೋಪ ದೋಷಗಳು ಬರುತ್ತವೆ ಎನ್ನುವದೃಷ್ಟಿಯಿಂದ ಯಾವುದೇ ಮಿತಿ ಇಲ್ಲದೆ ಖರ್ಚುಮಾಡಹತ್ತಿದ್ದೀರಿ. ಇಷ್ಟು ಖರ್ಚು ಮಾಡುತ್ತಿರುವುದು ಸಮಂಜಸವಾಗಿದೆಯೋ ಎನ್ನುವುದನ್ನು ನೋಡಿದ್ದೀರಾ? ಹೋದವರ್ಷ ಖರ್ಚು ಮಾಡಿರತಕ್ಕಂಥ ಹಣದ ಸ್ಥಿತಿಗತಿ ಏನಾಗಿದೆ. ಎಷ್ಟು ಮಾತ್ರ ರೈತರು ಬೆನಿಫಿಟ್ ಪಡೆದಿದ್ದಾರೆ ಈ ಎಲ್ಲ ವಿಷಯಗಳನ್ನು ತಾವು ಕೂಲಂಕಷವಾಗಿ ವಿಚಾರ ಮಾಡತಕ್ಕಂಥದ್ದು ಬಹಳ ಅವಶ್ಯಕವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಾಡ ಯೋಜನೆಯಲ್ಲಿ ಏನೇನು ಕೆಲಸ ಮಾಡಿದ್ದೀರಿ ಎನ್ನುವ ಬಗ್ಗೆ ವಿವರಣೆ ಕೊಡಬೇಕು. ಈ ಕೆಲಸಗಳಲ್ಲಿ ಒಂದನ್ನಾದರೂ ಮಾಡಬೇಕು ಎನ್ನುವ ಬಗ್ಗೆ ಲಕ್ಷ್ಯ ಕೊಡಬೇಕು. ಕೆಲವು ಕಾಲ ಡೆಪ್ಯುಟಿ ಕಮೀಷನರಿಗೆ ಈ ಕೆಲಸ ಹಚ್ಚಿದ್ದೀರಿ. ಅವರು ಕೆಲಸ ಮಾಡಲಿಕ್ಕೆ ಆಗಲಿಲ್ಲ. ಹಾಗಾದರೆ ಅವರು ಈ ಕೆಲಸವನ್ನು ಮಾಡಲು ಅಸಮರ್ಥರು ಎಂದು ತಿಳಿದಮೇಲೆ ಮತ್ತೆ ಏತಕ್ಕೆ ಅವರಿಗೇ ಈ ಕೆಲಸಕ್ಕೆ ಹಚ್ಚಿದ್ದೀರಿ?

೩–೩೦ ಪಿ. ಎಂ.

ಐ. ಎ. ಎಸ್. ಅಧಿಕಾರಿಗಳು ಏಕೆ? ಡೆಪ್ಯುಟಿ ಅಗ್ರಿಕಲ್ಚರಲ್ ಆಫೀಸರನ್ನು ಮಾಡಿದರೆ ಸಾಲದೇನು? ಡಿವಿಜನಲ್ ಕಮಿಷನರ್ ಅನ್ನು ಮೆಂಬರನ್ನಾಗಿ ಮಾಡಿ ಯಾವ ಯೋಗ್ಯ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ? ಅಸಿಸ್ಟೆಂಟ್ ಇಂಜಿನಿಯರುಗಳಿಗೆ ನಿಮ್ಮ ಎದುರು ನಿಂತು ಮಾತನಾಡುವುದಕ್ಕೆ ಆಗುವುದಿಲ್ಲ ಅಲ್ಲವೇನು? ಇಂಥ ದೊಡ್ಡ ಅಧಿಕಾರಿಗಳನ್ನು ಹಾಕಿದರೆ, ಅವರಿಗೆ ಹತ್ತಿ ಎಂದರೆ ಏನು ಎಂದು ಗೊತ್ತಿರುವುದಿಲ್ಲ. ಇಂತಹವರನ್ನು ಕಾಡಾಕ್ಕೆ ಚೇರ್ಮನ್ ಮಾಡಿ ಅದನ್ನು ಯಾವ ರೀತಿ ಉದ್ಧಾರ ಮಾಡಲಿಕ್ಕೆ ಸಾಧ್ಯವಿದೆ? ಈಗ ಒಂದು ಹೊಸ ಯೋಜನೆಯನ್ನು ಮಾಡಿದ್ದೀರಿ. ಯಾರನ್ನು ವಿಧಾನಸಭಾ ಚುನಾವಣೆಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಯಾರು ಜನಬೆಂಬಲ ಪಡೆಯುವುದಕ್ಕೆ ಅಸಮರ್ಥರಾಗಿದ್ದಾರೆ. ಅಂತಹವರನ್ನು ಚೆರ್ಮನ್‌ರನ್ನಾಗಿ ಮಾಡುವುದು. ಇಂತಹವರು ಯಾವ ರೀತಿಯಿಂದ ಕಾಡಾ ಕೆಲಸ ಮಾಡುತ್ತಾರೆ? ನಮ್ಮನ್ನು ಬಿಟ್ಟುಬಿಡಿ. ಒಬ್ಬರೂ ಅಧ್ಯಕ್ಷರೂ ಇಲ್ಲ. ಇಂತಹವರನ್ನು ಕಾಡಾಕ್ಕೆ ಚೇರ್ಮನ್ ಮಾಡಿದ್ದೀರಲ್ಲ? ಇವರು ಎಷ್ಟು ದಿವಸಗಳಿಂದ ಈ ಕೆಲಸಗಳಲ್ಲಿ ಆಸಕ್ತಿ ವಹಿಸಿದ್ದಾರೆ? ಹಿಂದೆ ಇವರು ಈ ದಿಸೆಯಲ್ಲಿ ಮಾಡಿರತಕ್ಕಂಥ ಕಾರ್ಯಕ್ರಮಗಳು ಏನು? ಸಾಮಾನ್ಯವಾಗಿ ಯಾವುದೇ ಸರ್ಕಾರ ಇರಲಿ, ಕೇಂದ್ರದ್ದೇ ಇರಲಿ ನಾಮಿನೇಶನ್ ಮಾಡಬೇಕಾದರೆ ಬಯೋಡ್ಯಾಟಾಸ್ ಕೇಳುತ್ತಾರೆ. ಈಗ ಈ ಪ್ರಶ್ನೆಯೇ ಇಲ್ಲ. ನಮ್ಮ ಜೆ. ಎಚ್. ಪಟೇಲ್‌ರಿಗೆ ಯಾವ ಬಯೋಡ್ಯಾಟಾವೇ ಬೇಕಾಗಿಲ್ಲ. ಏಕೆಂದರೆ ನಿಮ್ಮ ಪಾರ್ಟಿಯಲ್ಲಿ ಭಲೋ ಜನರು ಇದ್ದಾರೆ. ಈ ದಿಶೆಯಲ್ಲಿ ಮಾಡಿರತಕ್ಕಂಥ ತಜ್ಞರು ಇದ್ದಾರೆ. ಅಂತಹವರನ್ನು ನೇಮಿಸಿದರ ನಿಮಗೆ ಕೀರ್ತಿ ಬರುತ್ತದೆ, ನಮಗೂ ಕೂಡ ಸಮಾಧಾನ ಆಗುತ್ತದೆ. ಒಳ್ಳೆಯವರು, ಸಮರ್ಥರಾದವರನ್ನು ನೇಮಿಸಿದರೆ ನಾವು ಏಕೆ ಅಸೂಯೆ ಪಡಬೇಕು? ನನ್ನನ್ನು ಯಾವುದಾದರೂ ಗಾಯನ ಪರೀಕ್ಷೆಗೆ ನೇಮಿಸಿದರೆ ಅದು ಸಾಧ್ಯವೆ? ಎಲ್ಲಾ ಅಮಂಗಳಕರ ಆದೀತು. ನಮ್ಮ ಆಳ್ವಾರಂಥವರು ಇದ್ದಾರೆ. ಅಂತಹವರನ್ನು ಇದಕ್ಕೆ ನೇಮಿಸಬಹುದು. ದೂರದರ್ಶನದಲ್ಲಿ ಭಾರತದ ಪ್ರಧಾನ ಮಂತ್ರಿ ಶ್ರೀ ರಾಜೀವ ಗಾಂಧಿಯವರ ಚಿತ್ರ ಒಂದು ದಿವಸವಾದರೂ ತಪ್ಪಬಹುದು, ಆದರೆ ಶ್ರೀ ಆಳ್ವರವರು ತಪ್ಪಿಸಿಕೊಂಡ ದಿನವೇ ಇಲ್ಲ. ಇಂತಹ ಪ್ರಚಾರವನ್ನು ಕರ್ನಾಟಕ ರಾಜ್ಯ ಸರ್ಕಾರ, ನಿಮ್ಮ ಸರ್ಕಾರ ಮಾಡಬೇಕೆಂದು ಹೊರಟಿದೆ. ಈ ಪಿಡಬ್ಲ್ಯುಡಿಗೂ ಸ್ವಲ್ಪ ಪ್ರಚಾರ ಮಾಡಲಿಕ್ಕೆ ಹೋದರೆ ಒಳ್ಳೆಯದಾಗಬಹುದು ಎಂದೆನಿಸುತ್ತದೆ. ಸನ್ಮಾನ್ಯ ಶ್ರೀ ದೇವೇಗೌಡರು ಈ ದಿಸೆಯಲ್ಲಿ

ವಿಚಾರ ಮಾಡಿ ಈ ಕಾಡಾ ಯೋಜನೆಗೆ ಸ್ಪಷ್ಟವಾದ ಒಂದು ನಿಲುವನ್ನು ತಾಳಬೇಕು, ಇಲ್ಲದಿದ್ದರೆ ದುಷ್ಪರಿಣಾಮ ಅನುಭವಿಸಬೇಕಾಗುವಂತಹ ಪರಿಸ್ಥಿತಿ ಈಗಾಗಲೇ ಬಂದಿದೆ. ಮಲಪ್ರಭಾ ಕಾಡಾ ಯೋಜನೆಯ ಚೇರ್ಮನ್ ಬಗ್ಗೆ ನಾನು ಹೇಳುವುದಿಲ್ಲ. ಅವರು ನನ್ನ ವಿರೋಧಿಯಾಗಿರುವುದರಿಂದ ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಅನೇಕ ವರ್ಷಗಳ ಸಹಿತ ಶ್ರೀ ಯಾವಗಲ್ ಅವರು ಕಾಡಾ ಚೇರ್ಮನ್ನರು ಇದ್ದರು. ಅವರು ಆ ಸ್ಥಳಕ್ಕೆ ಮಾಡಿರುವ ಕೆಲಸವಾದರೂ ಏನು ? ಎನ್. ಬಿ. ಪಾಟೀಲ್ ತಜ್ಞರ ಸಮಿತಿಯವರು ಸಾಯಿಲ್ ಕನ್ಸರ್ವೇಷನ್ ಹೇಗೆ ಮಾಡಬೇಕು. ಯಾವ ತರಹ ಬದವು ಹಾಕಬೇಕು, ಯಾವ ಸಲಕರಣೆಗಳನ್ನು ಉಪಯೋಗಿಸಬೇಕು ಎಂಬುದರ ಬಗ್ಗೆ ಹೇಳಿದ್ದಾರೆ. ಅದನ್ನು ಅಮಲು ತರುವಂತಹ ಯಾವುದೇ ಪ್ರಯತ್ನ ನಡೆದಿದೆಯೆ ? ಅನೇಕ ಯೋಜನೆಗಳು, ಇನ್ನೂ ತನಕ ಸಂಪೂರ್ಣವಾಗಿ ಸಾಯಿಲ್ ಟೆಸ್ಟ್ ಮಾಡಿಲ್ಲ, ಇದರ ಮೇಲೆ ಏನು ಕಾಡಾ ಮಾಡುತ್ತೀರಿ ? ಇವತ್ತು ಸ್ಪಷ್ಟವಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಕಾಡಾದಲ್ಲಿ ಹಾಕಿರುವ ಹಣ ವೇಸ್ಟ್ ಆಗುತ್ತದೆ. ಒಬ್ಬರು ಚೇರ್ಮನ್‌ರ ಸಲುವಾಗಿ ಎಷ್ಟು ಖರ್ಚು ಮಾಡುತ್ತೀರಿ ? ಯಾರಿಗೆ ಬೇಕೋ ಅವರಿಗೆ ಮಾಸಾಶನ ಕೊಡುತ್ತಾರಲ್ಲ, ಹಾಗೆ ಏಕೆ ಕೊಟ್ಟು ಬಿಡಬಾರದು ? ಅವರಿಗೆ ಕೊಡುವಂತಹ ಹಣ ಕೊಟ್ಟು ಮನೆಯಲ್ಲೇ ಕುಂಡ್ರಿಸಿರಿ. ಒಬ್ಬರಿಗೆ ಸ್ಥಾನ ಕೊಡುವ ನಾಟಕಕ್ಕೆ ಮತ್ತೆ ಐವತ್ತು ಮಂದಿ ಅಧಿಕಾರಿಗಳನ್ನು ಮಾಡುತ್ತೀರಿ. ಕೆಲಸ ಮಾತ್ರ ಏನೂ ಆಗುವುದಿಲ್ಲ. ಅಧಿಕಾರಿಗಳನ್ನು ನೋಡುವುದಕ್ಕೆ ಹೋದರೆ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಹೇಳುವವರಿಲ್ಲ, ಕೇಳುವವರಿಲ್ಲ. ಈ ರೀತಿಯಾದಂಥ ವಿಪರ್ಯಾಸಕರ ಪರಿಸ್ಥಿತಿ ಬಂದಿದೆ. ಇದು ಕೇಂದ್ರದಿಂದ ಆಗಿದ್ದರೂ ತಪ್ಪು ತಪ್ಪೇ. ರಾಜ್ಯದಿಂದ ಆದರೂ ತಪ್ಪೇ. ಈ ದೋಷ ನಿವಾರಣೆಗಾಗಿ ಪರಿಶೀಲನೆ ಮಾಡಿ ತಪ್ಪಿಸಬೇಕೆಂದು ನಾನು ಆಶೆ ಮಾಡುತ್ತೇನೆ; ಮತ್ತೆ ನಮ್ಮ ತಾಲ್ಲೂಕಿಗೆ, ಜಿಲ್ಲೆಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳು ಇದ್ದರೂ ಕೂಡ ನೀವು ಹಾಕಿಲ್ಲ. ಅದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ಕೆ. ಎಚ್. ಪಾಟೀಲರ ಕೆಲಸ ಬೇಡ, ಕೊನೆಯ ಪಕ್ಷ ಶ್ರೀ ಬಣಕಾರ್ ಅವರ ಕೆಲಸಗಳನ್ನಾದರೂ ಸೇರಿಸಬೇಕಾಗಿತ್ತು. ಧಾರವಾಡ ಜಿಲ್ಲೆಯ ಬಗ್ಗೆ ಬಹಳ ನಿರ್ಲಕ್ಷ್ಯ ಭಾವನೆ ಇದೆ,

ಅಧ್ಯಕ್ಷರು,—ಧಾರವಾಡ ಜಿಲ್ಲೆಯದು ಹಾಕಿದ್ದಾರೆ. ಹಿರೇಕೆರೂರಿನಲ್ಲಿ ಹಾಕಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮೂರು ಮೂರು ಸಲ ನೋಡಿದ್ದೇನೆ. ಆದರೆ ಯಾವುದು ಹಾಕಬೇಕೋ ಅದನ್ನು ಹಾಕಿಲ್ಲ. ಗದಗ್ ತಾಲ್ಲೂಕಿನಲ್ಲಿ ಮೂರು ಕಾರ್ಯಕ್ರಮ ಹಾಕಿದ್ದಾರೆ. ಆದರೆ ನಾನು ಸೂಚಿಸಿದ್ದು ಯಾವುದೂ ಇಲ್ಲ. ನಾಳೆ ಜನ ನಮ್ಮನ್ನು ಕೇಳುತ್ತಾರೆ. ಬರೇ ಗದಗ್ ಅಲ್ಲ, ಧಾರವಾಡ್ ಬೆಳಗಾಂ, ಬಿಜಾಪುರ, ಕಾರವಾರ, ಬೀದರ್, ಗುಲ್ಬರ್ಗ ಆಗಲಿ ಎಲ್ಲಾ ಜಿಲ್ಲೆಗಳಿಗೂ ಸಹಿತ ಈ ಹಳೆ ಮೈಸೂರು ಹಾಗೆ ಪ್ರಾಧಾನ್ಯತೆ ಕೊಟ್ಟರೆ ಪರವಾಗಿಲ್ಲ, ದೇವೇಗೌಡರು ನಮ್ಮವರು ಎಂದುಕೊಳ್ಳುತ್ತೇವೆ. ನಮ್ಮವ ನಿಮ್ಮವ ಎಂಬುದನ್ನು ಮರೆತು ಕರ್ನಾಟಕ ಜನತೆಯ ಹಿತದೃಷ್ಟಿಯನ್ನು ಎದುರು ಇಟ್ಟುಕೊಳ್ಳಬೇಕು. ಹಿಂದೆ ನಮಗೆ ಬೇಕಾದಂಥ ಕಾರ್ಯಕ್ರಮಗಳು ಪಟ್ಟಿಯಲ್ಲಿ ತಪ್ಪಿದ್ದು ಇಲ್ಲ. ಮಹತ್ವವಾದ ಕಾರ್ಯಕ್ರಮಗಳು ಹಿಂದಿನ ಲಿಸ್ಟ್‌ನಲ್ಲಿ ಇವೆ. ಸಾವಿರ ರೂಪಾಯಿ ಯೋಜನೆಯ ಅನೇಕ ಕಾರ್ಯಕ್ರಮಗಳು ಇವೆ. ಈ ಕಾರ್ಯಕ್ರಮಗಳನ್ನು ಮೊದಲು ತೆಗೆದುಕೊಂಡು, ಈಗಿನ ಕಾರ್ಯಕ್ರಮಗಳನ್ನು ಹಿಂದುಗಡೆ ಇಟ್ಟು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತೀರೆಂದು ನಾನು ಆಶೆ ಮಾಡುತ್ತಿದ್ದೇನೆ. ಕೊನೆಯದಾಗಿ, ಈ ನೌಕರರು ಏನು ಇದ್ದಾರೆ, ಟೆಂಪರ್‍ವರಿ ಕೆಲಸಗಾರರಾಗಿ ಬಹಳ ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆ. ನಾನು ಹಾಸನ ಜಿಲ್ಲೆಗೆ ಹೋದಾಗ ಪ್ರವಾಸಿ ಮಂದಿರದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುವ ಅನೇಕ ಜನ ಕೆಲಸಗಾರರು ಬಂದು ನನ್ನನ್ನು ನೋಡಿದರು ೧೫–೨೦ ವರ್ಷಗಳಿಂದ ಕೆಲಸ ಮಾಡಿದಂಥ ಈ ನೌಕರರು ಇನ್ನೂ ತನಕ ಖಾಯಂ ಆಗಿಲ್ಲ, ಇವತ್ತು ಮನೆಗೆ ಹೋಗುವ ಪರಿಸ್ಥಿತಿಯಲ್ಲಿದ್ದಾರೆ. ಯಾರ್‍ಯಾರಿಗೋ ಎರಡು ಮೂರು ಭತ್ಯೆಗಳನ್ನು ಕೂಡಲೇ ಕೊಟ್ಟುಬಿಡುತ್ತೀರಿ. ಬಡವರನ್ನು ಸಹಿತ ಕಲ್ಯಾಣ ಮಾಡುವ ದೃಷ್ಟಿಯಿಂದ ಇವರುಗಳ ಸೇವೆಯನ್ನು ಖಾಯಂ ಮಾಡುವ ವಿಷಯಕ್ಕೆ ಸಹಿತ ಆದ್ಯತೆಯನ್ನು ಕೊಡಬೇಕು. ಈ ಕೆಲಸವನ್ನು ಕೂಡ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಸದನದ ಮುಂದೆ ಮಂಡನೆ ಮಾಡಿರುವಂತಹ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ಆದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಈಗಾಗಲೇ ನಮ್ಮ ಹಿರಿಯ ಶಾಸಕರಾದಂಥ ಶ್ರೀ ವೀರಪ್ಪಮೊಯ್ಲಿ ಅವರು ಹಾಗೂ ಇನ್ನಿತರ ಮಾನ್ಯ ಸದಸ್ಯರುಗಳು ಬಹಳ ಚೆನ್ನಾಗಿ ಮತ್ತು ಸವಿಸ್ತಾರವಾಗಿ ಮಾತನಾಡಿದ್ದಾರೆ. ಈ ಕಾರಣದಿಂದ ನಾನು ಅವರುಗಳು ಮಾತನಾಡಿದ್ದನ್ನೇ ಪುನಃ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಲೋಕೋಪಯೋಗಿ ಇಲಾಖೆ ಸರ್ಕಾರದಲ್ಲಿ ಅತಿ ಮುಖ್ಯವಾದಂಥ ಒಂದು ಅಂಗ. ಇದು ಮನುಷ್ಯನಿಗೆ ನರನಾಡಿ ಇದ್ದಂತೆ ಇದೆ. ಈ ದೇಶದ ನರನಾಡಿಯಂತಿರುವ ಈ ಇಲಾಖೆಗೆ ಜೀವ ತುಂಬುವವರು ಈ ಇಲಾಖೆಯ ಮಂತ್ರಿಗಳಾಗಿದ್ದಾರೆ. ಈ ಬಹು ಮುಖ್ಯವಾದಂಥ ಖಾತೆಯನ್ನು ಹೊಂದಿರುವಂತಹ ಶ್ರೀ ದೇವೇಗೌಡರು ಬಹಳ ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾರೆ ಎಂಬತಕ್ಕಂಥ ಅಭಿಪ್ರಾಯದ ಬಗ್ಗೆ ಹೇಳಬೇಕೆಂದರೆ, ಅವರು ಎಷ್ಟೇ ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ನಡೆದುಕೊಂಡರೂ ಸಹ ಮತ್ತು ಒಳ್ಳೆಯ ಯೋಜನೆಗಳನ್ನು ರೂಪಿಸಿದರೂ ಕೂಡ, ಆ ಯೋಜನೆಗಳನ್ನು ಜಾರಿ ಮಾಡುವ ಹಂತದಲ್ಲಿ ದಕ್ಷತೆ ಬರಬೇಕಾಗುತ್ತದೆ, ದಕ್ಷತೆ ಎಂಬುದು ಇಲ್ಲದಿದ್ದರೆ ಇವರು ಎಷ್ಟೇ ಕೆಲಸಗಳನ್ನು ಮಾಡಿಸಿದರೂ ಸಹ ಅವು ಶಾಶ್ವತವಾಗಿ ಉಳಿಯುವುದಿಲ್ಲ. ಇದರಿಂದ ನಮ್ಮ ಜನತೆಗೆ ನ್ಯಾಯವನ್ನು ದೊರಕಿಸಿಕೊಟ್ಟಂತೆ ಆಗುವುದಿಲ್ಲ. ಈ ಇಲಾಖೆಯಲ್ಲಿ ನಡೆಯುವಂತಹ ಕೆಲಸಗಳು ಏನಿವೆ, ಅವು ಇಂಪ್ಲಿಮೆಂಟೇಷನ್ ಸ್ಟೇಜ್‌ನಲ್ಲಿ ದಕ್ಷತೆಯಲ್ಲಿ ಕಡಿಮೆ ಇವೆ ಎಂದು ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಶೇಕಡಾ ೯೫ ರಷ್ಟು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಈ ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾಗಿರುವುದು ನೀರು. ಆದ್ದರಿಂದ ನಾವು ಹೆಚ್ಚಾಗಿ ನೀರಾವರಿಗೆ ಆದ್ಯತೆ ಕೊಡಬೇಕಾಗಿದೆ. ನಾವು ರಸ್ತೆಗಳ ಕೆಲಸಗಳನ್ನು ಕಡಿಮೆ ಮಾಡಬಹುದು ಹಾಗೂ ಇನ್ನಿತರ ಪ್ರಾಮುಖ್ಯವಲ್ಲದ ಕೆಲಸಗಳನ್ನು ಕಡಿಮೆ ಮಾಡಬಹುದು, ಆದರೆ ನೀರಾವರಿ ಕೆಲಸಗಳ ಬಗ್ಗೆ ಹೆಚ್ಚಿನ ಒಂದು ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ, ನಮ್ಮ ರೈತರೆಲ್ಲರೂ ಇಂದು ವ್ಯವಸಾಯವನ್ನೆ ಅವಲಂಬಿಸಿದ್ದಾರೆ. ಮಾನ್ಯ ಮಂತ್ರಿಗಳು ಕೆರೆಕುಂಟೆಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕೆಂಬ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ದೊಡ್ಡ ನೀರಾವರಿ ಯೋಜನೆಗಳನ್ನು ಕೆಲವು ಕಡೆಗಳಲ್ಲಿ ತೆಗೆದುಕೊಳ್ಳಲು ಫೀಜಿಬಿಲಿಟಿ ಇರುತ್ತದೆ ಮತ್ತೆ ಕೆಲವು ಕಡೆಗಳಲ್ಲಿ ಇರುವುದಿಲ್ಲ. ಎಲ್ಲಿ ಫೀಜಿಬಿಲಿಟಿ ಇರುವುದಿಲ್ಲ, ಅಂತಹ ಕಡೆಗಳಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನಾದರೂ ಅಭಿವೃದ್ಧಿಪಡಿಸಲು ಮಾನ್ಯ ಮಂತ್ರಿಗಳು ಹೆಚ್ಚು ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಮೊದಲೇ ಹೇಳಿದಂತೆ ಈ ಇಲಾಖೆ ಮೂಲಕ ನಡೆಯುವ ರಸ್ತೆಗಳ ಕೆಲಸಗಳಾಗಲೀ, ಕೆರೆಕುಂಟೆಗಳ ಕೆಲಸಗಳಾಗಲೀ, ಇರಿಗೇಷನ್‌ಗಳ ಕೆಲಸಗಳಾಗಲೀ, ಹೆಚ್ಚು ದಕ್ಷತೆಯಿಂದ ಕೂಡಿರಬೇಕು. ಇದರ ಜೊತೆಗೆ ರಿಪೇರಿ ಕೆಲಸಗಳು ಸಹ ಮೂರು ವರ್ಷಗಳ ಕಾಲವಾದರೂ ಬಾಳಿಕೆ ಬರುವಂತಿರಬೇಕು. ನಮ್ಮ ತುಮಕೂರು ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ಅತಿ ಕಡಿಮೆ ಪ್ರಮಾಣದಲ್ಲಿ ಕೆಲಸಗಳನ್ನು ಈ ಸಲ ಸೇರಿಸಿದ್ದಾರೆ. ಹೋದ ಸಲ ನಾನು ಇದೇ ಸದನದಲ್ಲಿ ಸುಮಾರು ೫೦೦ ಎಕರೆಗಳಿಗೆ ನೀರಾವರಿಯಾಗುವಂತಹ ದೊಡ್ಡಬಾಣಾಕೆರೆ ಲಿಫ್ಟ್-ಇರಿಗೇಷನ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದಾಗ, ಅದನ್ನು ಮಾಡಿಕೊಡುವುದಾಗಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಆ ಕೆಲಸವನ್ನು ಈ ಸಲದ ಬಡ್ಜೆಟ್‌ನಲ್ಲಿ ಸಹ ಸೇರಿಸಿಲ್ಲ. ಆ ಭಾಗದಲ್ಲಿ ನೆಲದೊಳಗಡೆ ನೀರು ಇದೆ ಎಂದು ಜಿಯಲಾಜಿಸ್ಟ್ ಅವರು ವರದಿ ಕೊಟ್ಟಿದ್ದರೂ ಸಹ ಈ ಕೆಲಸವನ್ನು ಸೇರಿಸದಿರುವುದು ದುರ್ದೈವದ ಸಂಗತಿ. ಈ ವರ್ಷವೇ ಈ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಂತರ್‌ರಾಜ್ಯ ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ತುಮಕೂರು ಜಿಲ್ಲೆಯ ಶಿರಾ ಮತ್ತು ಅಮರಾಪುರ ನಡುವಿನ ರಸ್ತೆ ಅತಿ ಮುಖ್ಯವಾದ ರಸ್ತೆಯಾಗಿದೆ. ಅಮರಾಪುರ ಆಂಧ್ರ ರಾಜ್ಯಕ್ಕೆ ಸೇರಿದೆ. ಇದೊಂದು ಲಿಂಕ್ ರೋಡ್ ಆಗಿದೆ. ಸುಮಾರು ೭೦-೮೦ ಬಸ್‌ಗಳು ಈ ರಸ್ತೆಯಲ್ಲಿ ಓಡಾಡುತ್ತವೆ. ಪಾವಗಡದಿಂದ ಆಂಧ್ರಕ್ಕೆ ಹೋಗುವ ಬಸ್‌ಗಳು ಮತ್ತು ಬಳ್ಳಾರಿ ಮತ್ತು ರಾಯಚೂರು ನಡುವೆ ಓಡಾಡುವ ಬಸ್ಸುಗಳು ಸಹ ಈ ರಸ್ತೆಯ ಮೂಲಕ ಹೋಗಬೇಕಾದ ಕಾರಣ ಜಾಗ್ರತೆ ಆಸ್‌ಫಾಲ್ಟ್ ಮಾಡಬೇಕು. ಈ ರಸ್ತೆಯನ್ನು ಇಲ್ಲಿಯವರೆಗೆ ಆಸ್‌ಫಾಲ್ಟ್ ಮಾಡದ ಕಾರಣ ಖಾಸಗಿ ಬಸ್ ಮಾಲೀಕರಿಗೂ ತೊಂದರೆಯಾಗಿದೆ ಈ ಕೆಲಸವನ್ನು ಈ ಸಲದ ಬಜೆಟ್‌ನಲ್ಲಿ ಸೇರಿಸಿದ್ದರೂ ಸಹ

ಇದಕ್ಕೆ ಕೇವಲ ಹತ್ತು ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಹತ್ತು ಸಾವಿರ ರೂಪಾಯಿಗಳಲ್ಲಿ ಈ ಕೆಲಸ ಆಗುತ್ತದೋ ಅಥವಾ ಇಲ್ಲವೋ ಎಂಬ ಅನುಮಾನ ಕಾಣುತ್ತಿದೆ, ಆದ್ದರಿಂದ ಇದಕ್ಕೆ ಹೆಚ್ಚಿನ ಹಣ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಗಾಯಿತ್ರಿ ಜಲಾಶಯದ ಮೇಲೆ ಕಾಮನಗುಡ್ಡ ಇದೆ. ಇಲ್ಲಿ ಒಂದು ಅಣೆಕಟ್ಟನ್ನು ಕಟ್ಟಿಸಿದರೆ ಶಿರಾ ಮತ್ತು ಎಡಿಯೂರಿನ ಸುಮಾರು ಒಂದು ಸಾವಿರ ಎಕರೆಗಳಿಗೆ ನೀರಾವರಿಯಾಗುತ್ತದೆ. ಈ ಕೆಲಸದ ಬಗ್ಗೆ ಎಸ್ಟಿಮೇಟ್ ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೂ ಸಹ ಮತ್ತು ಇದರಿಂದ ಎರಡು ತಾಲ್ಲೂಕ್‌ಗಳಿಗೆ ಅನುಕೂಲವಾಗುತ್ತಿದ್ದರೂ ಸಹ ಇದನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ. ತುಮಕೂರು ಜಿಲ್ಲೆಯ ಶಿರಾ, ಮಧುಗಿರಿ, ಪಾವಗಡ, ಕೊರಟಗೆರೆ ತಾಲ್ಲೂಕ್‌ಗಳು ಯಾವಾಗಲೂ ಬರಗಾಲದಿಂದ ಬಳಲುತ್ತಿರುವಾಗ, ಈ ತಾಲ್ಲೂಕ್‌ಗಳಲ್ಲಿ ಶಾಶ್ವತವಾದಂಥ ಕೆಲಸಗಳನ್ನು ತೆಗೆದುಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ ಶಾಶ್ವತವಾದಂಥ ನೀರಾವರಿ ಯೋಜನೆಗಳ ಕೆಲಸಗಳನ್ನು ತೆಗೆದುಕೊಳ್ಳುವುದರ ಮೂಲಕ ಬರಗಾಲ ಎಂಬ ಪದವನ್ನು ಹೋಗಲಾಡಿಸಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ತಾಲ್ಲೂಕ್‌ನಲ್ಲಿ ಸುಮಾರು ಕೆರೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳು ಇರುವ ಪ್ರಯುಕ್ತ ಶಿರಾ ತಾಲ್ಲೂಕ್‌ನಲ್ಲಿ ಒಂದು ಸಬ್-ಡಿವಿಜನ್ ಕಛೇರಿ ಸ್ಥಾಪನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಅಪ್ಪರ್-ಭದ್ರಾ ಪ್ರಾಜೆಕ್ಟ್ ಕೆಲಸ ತೆಗೆದುಕೊಳ್ಳುವ ಬಗ್ಗೆ ಫೀಜಿಬಿಲಿಟಿ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಆದರೆ ಹಂತಹಂತವಾಗಿ ಈ ಕೆಲಸ ಮಾಡಿದರೆ ಫೀಜಿಬಿಲಿಟಿ ಬರುತ್ತದೆಂದು ತಜ್ಞರು ಹೇಳುತ್ತಾರೆ. ಈ ಯೋಜನೆಯಿಂದ ಸುಮಾರು ೧೩ ಲಕ್ಷ ಎಕರೆ ಪ್ರದೇಶ ನೀರಾವರಿಗೆ ಒಳಪಡುತ್ತದೆಂದು ಹೇಳಿರುವುದರಿಂದ ಇದನ್ನು ಹಂತಹಂತವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಬೇಗನೆ ಮುಗಿಸಿ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಮುಖ್ಯವಾಗಿ ನಮ್ಮ ಬರಗಾಲ ಪೀಡಿತ ಪ್ರದೇಶಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಈ ದೇಶದ ಬೆನ್ನುಮೂಳೆಯಾದರೆ, ನೀರು ವ್ಯವಸಾಯಕ್ಕೆ ಜೀವನಾಡಿ ಇದ್ದಂತೆ. ವ್ಯವಸಾಯವನ್ನೇ ಹೆಚ್ಚಾಗಿ ಈ ರಾಜ್ಯದಲ್ಲಿ ಹಾಗೂ ಈ ರಾಷ್ಟ್ರದಲ್ಲಿ ಅವಲಂಬಿಸಿರತಕ್ಕಂಥ ರೈತಾಪಿ ಜನರು ಏನಿದ್ದಾರೆ, ಅವರಿಗೆ ಈ ಉದ್ಯೋಗದಲ್ಲಿ ಸರಿಯಾದಂಥ ಪ್ರತಿಫಲ ಸಿಗಬೇಕಾದರೆ ನಾವು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತವೆ. ನಾವು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಏತಕ್ಕೆ ಕೊಡಬೇಕಾಗುತ್ತದೆಂದರೆ, ರೈತರಿಗೆ ಬೇಕಾದ ಸಮಯದಲ್ಲಿ ಮಳೆ ಬರುವುದಿಲ್ಲ. ರೈತರು ಬಯಸಿದಾಗ ಮಳೆ ಬರುವುದಿಲ್ಲ ಮತ್ತು ವರ್ಷದಲ್ಲಿ ಒಂದೇರೀತಿಯ ಮಳೆ ಈ ರಾಜ್ಯದ ಎಲ್ಲ ಕಡೆಗಳಲ್ಲಿಯೂ ಆಗುವುದಿಲ್ಲ. ನಾವು ಹಿಂದಿನಿಂದ ನೋಡುತಾ ಬಂದಿರುವ ಪ್ರಕಾರ ನಮ್ಮಲ್ಲಿರುವ ಎಲ್ಲಾ ಹಳ್ಳಗಳು ಮತ್ತು ನದಿಗಳು ತುಂಬಿ ಹರಿಯುವಷ್ಟು ಮಳೆ ಆಗುತ್ತಿಲ್ಲ. ವರ್ಷದಲ್ಲಿ ೩-೪ ಮಳೆಗಳಾದಾಗ ಮಾತ್ರ ಎಲ್ಲ ನದಿಗಳು ಮತ್ತು ಹಳ್ಳಗಳು ತುಂಬಿ ಹರಿಯುವುದನ್ನು ಕಾಣುತ್ತೇವೆ. ಈ ರೀತಿ ಹರಿದುಹೋಗುವಂತಹ ನೀರನ್ನು ತಡೆಗಟ್ಟುವ ಸಲುವಾಗಿ ಅಲ್ಲಲ್ಲಿ ಕೆರೆಕಟ್ಟೆಗಳನ್ನು ಕಟ್ಟಬೇಕಾಗುತ್ತದೆ.

ಹಳ್ಳಗಳಿಗೆ ಅಡ್ಡಲಾಗಿ ಕೆರೆಕಟ್ಟೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಣೆ ಮಾಡಿ ಜಮೀನುಗಳಿಗೆ ನೀರು ಸಿಗುವಂತೆ ಮಾಡಬೇಕು. ನಮ್ಮ ರಾಜ್ಯದಲ್ಲಿ ನೀರಾವರಿಗೆ ಒಳಪಡುವಂತಹ ಜಮೀನು ಬೇಕಾದಷ್ಟು ಇದೆ. ಆದರೆ ಇದುವರೆಗೆ ಆ ಕೆಲಸವನ್ನು ಪೂರ್ಣವಾಗಿ ಮಾಡಲಾಗಿಲ್ಲ. ನೀರಾವರಿ ಯೋಜನೆಗಳನ್ನು ಸರಿಯಾಗಿ ಮಾಡದೇ ಇದ್ದರೆ ರಾಜ್ಯದಲ್ಲಿ ವ್ಯವಸಾಯ ಹಿಂದೆ ಬೀಳುತ್ತದೆ. ಅಗತ್ಯವಾಗಿ ನಮಗೆ ಬೇಕಾಗಿರತಕ್ಕಂಥ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೊಳ್ಳದೇ ಇರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಆಂಧ್ರ ಪ್ರದೇಶದ ಸರ್ಕಾರ ತೆಲುಗು ಗಂಗಾ ಯೋಜನೆಗೆ ಸುಮಾರು ೩೦೦ ಕೋಟಿ ರೂಪಾಯಿಗಳನ್ನು ಒದಗಿಸಿ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಮಾಡುವ ಗುರಿಯುತ್ತ ಇದ್ದಾರೆ. ಆದರೆ ನಮ್ಮ ಸರ್ಕಾರ ನೀರಾವರಿ ಯೋಜನೆಗೆ ಮಹತ್ವವನ್ನೇ ಕೊಡುತ್ತಿಲ್ಲ. ಅಪ್ಪರ್ ಭದ್ರ ಮತ್ತು ನೇತ್ರಾವತಿ ನದಿಗಳು ಏನು ಇವೆ. ಈ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳಲು

ಸರಿಯಾದ ಯೋಜನೆಗಳನ್ನು ಕೈಗೆತ್ತಿಕೊಳ್ಳದೇ ಇರುವುದು ನಿಜಕ್ಕೂ ರೈತರಿಗೆ ಅನ್ಯಾಯ ಮಾಡಿದಂತಾಗುತ್ತದೆ. ನಮ್ಮ ತುಮಕೂರು ಜಿಲ್ಲೆಯಲ್ಲಿ, ಮಾನ್ಯ ಸಹ ಸದಸ್ಯರಾದ ಮುದ್ದುಗಿರಿಯಪ್ಪನವರು ಹೇಳಿದ ಹಾಗೆ ಯಾವ ನೀರಾವರಿ ಯೋಜನೆಗಳನ್ನೂ ಕೈಗೊಂಡಿಲ್ಲ. ಅಪ್ಪರ್ ಭದ್ರ ಮತ್ತು ನೇತ್ರಾವತಿ ನದಿಯನ್ನು ಬಿಟ್ಟರೆ ನಮಗೆ ಬೇರೆ ನದಿಗಳಿಂದ ನೀರನ್ನು ತುಮಕೂರು ಜಿಲ್ಲೆಗೆ ತರುವುದಕ್ಕಾಗುವುದಿಲ್ಲ. ಈ ಯೋಜನೆಗಳನ್ನು ಕೈಗೆತ್ತಿಕೊಳ್ಳದೇ ಹೋದರೆ ನಮ್ಮ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಸಹ ಬರಗಾಲ ಪೀಡಿತ ಪ್ರದೇಶಗಳಾಗೇ ಉಳಿಯುತ್ತವೆ. ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರವು ಅಪ್ಪರ್ ಭದ್ರ ನದಿಯಿಂದ ನೀರನ್ನು ತುಮಕೂರಿಗೆ ಒದಗಿಸುವುದಕ್ಕೆ ಬೇಕಾಗುವ ಹಣದ ಬಗ್ಗೆ ಎಸ್ಟಿಮೇಟನ್ನು ತಯಾರಿಸಿ ಅದನ್ನು ೭ನೇ ಯೋಜನೆಯಲ್ಲಿ ಕೈಗೊಳ್ಳುವುದಕ್ಕೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ. ಈ ಎಸ್ಟಿಮೇಟಿನಲ್ಲಿ ಈ ಯೋಜನೆಯಿಂದ ಸುಮಾರು ೫ ಲಕ್ಷ ಎಕರೆಗೆ ನೀರಾವರಿ ಅನುಕೂಲ ಸಿಗುತ್ತದೆ ಎಂದು ತಿಳಿಸಲಾಗಿದೆ. ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಮಾಡಿದರೆ ಮೊದಲನೇ ಹಂತದಲ್ಲಿ ಸುಮಾರು ೧೩ ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಸಿಗುತ್ತದೆ. ಎರಡನೇ ಹಂತದಲ್ಲಿ ಸುಮಾರು ೨೦ ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಸಿಗುತ್ತದೆ. ಈ ಯೋಜನೆಯನ್ನು ಕೈಗೊಂಡರೆ, ಬರೀ ತುಮಕೂರು ಜಿಲ್ಲೆಗೆ ಮಾತ್ರ ಅನುಕೂಲವಾಗದೆ, ಚಿತ್ರದುರ್ಗ, ಧಾರವಾಡ, ಬಳ್ಳಾರಿ ಮುಂತಾದ ೬ ಜಿಲ್ಲೆಗಳಿಗೆ ಇದರಿಂದ ಅನುಕೂಲವಾಗುತ್ತದೆ. ಇದರಲ್ಲಿ ಸಾಕಷ್ಟು ನೀರಿನ ಅನುಕೂಲ ಸಿಗುತ್ತದೆ ಎಂಬ ವಿಷಯವನ್ನು ಬಹಳಷ್ಟು ತಜ್ಞರು ಹೇಳಿದ್ದಾರೆ. ಈ ಯೋಜನೆಯಿಂದ ಸುಮಾರು ೧೫೦ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಸಿಗುತ್ತದೆ. ಇಷ್ಟೊಂದು ನೀರು ಸಿಗುವಾಗ ಕೇವಲ ೫ ಲಕ್ಷ ಎಕರೆಗೆ ಮಾತ್ರ ನೀರಾವರಿ ಸೌಲಭ್ಯ ಸಿಗುತ್ತದೆ ಎಂದು ಎಸ್ಟಿಮೇಟನ್ನು ತಯಾರು ಮಾಡಿರುವುದು ಸರಿಯಲ್ಲ. ತುಮಕೂರು ಜಿಲ್ಲೆಯ ಜನರಿಗೆ ಕೇವಲ ಸಮಾಧಾನ ಮಾಡುವುದಕ್ಕೋಸ್ಕರ ಈ ಎಸ್ಟಿಮೇಟನ್ನು ತಯಾರು ಮಾಡಿ ಕಳುಹಿಸಿರಬಹುದು. ಬರೀ ಯೋಜನೆ ತಯಾರು ಮಾಡಿ ಸುಮ್ಮನೆ ಇದ್ದರೆ ಜನರ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಅಲ್ಲದೇ ಇವರ ಎಸ್ಟಿಮೇಟನ್ನು ಕೇಂದ್ರ ಸರ್ಕಾರವು, ಇದು ಸರಿಯಾದ ಎಸ್ಟಿಮೇಟಲ್ಲ ಎಂದು ವಾಪಸ್ ಕಳುಹಿಸಿದೆ ಎಂಬುದೂ ನಮಗೆ ತಿಳಿದು ಬಂದಿದೆ. ಈ ಯೋಜನೆಯಿಂದ ಬರೀ ತುಮಕೂರು ಜಿಲ್ಲೆಗೆ ಮಾತ್ರ ಅನುಕೂಲವಾಗದೆ ಮಾನ್ಯ ಲೋಕೋಪಯೋಗಿ ಸಚಿವರ ಜಿಲ್ಲೆಯಾದ ಹಾಸನಕ್ಕೂ ಸಹ ಇದರಿಂದ ಅನುಕೂಲವಾಗುತ್ತದೆ. ಅರಸೀಕೆರೆ ತಾಲ್ಲೂಕಿಗೂ ಸಹ ಪೂರ್ಣವಾಗಿ ನೀರಾವರಿ ಅನುಕೂಲವಾಗುತ್ತದೆ. ನೇತ್ರಾವತಿ ನದಿಯಿಂದ ಸುಮಾರು ೪೫ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ವ್ಯವಸಾಯಕ್ಕೆ ಇದರಿಂದ ಪಡೆಯುವುದಕ್ಕೆ ಸಾಧ್ಯತೆ ಇದೆ. ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸುಮಾರು ೧೦ ಟಿ.ಎಂ.ಸಿ.ಎಫ್.ಟಿ. ಯಷ್ಟು ಸಿಗುತ್ತದೆ. ಗ್ರಾವಿಟಿಯಲ್ಲಿ ಸುಮಾರು ೩೦ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಬರುತ್ತದೆ. ಈ ನೀರಿನಿಂದಲೇ ಸುಮಾರು ೪ ಲಕ್ಷ ಎಕರೆಯಷ್ಟು ನೀರಾವರಿಗೆ ಅನುಕೂಲವಾಗುತ್ತದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಯಾವುದೇ ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ಸಹ ಇಲ್ಲ. ತುಮಕೂರು ಜಿಲ್ಲೆಯ ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರ ದಯಮಾಡಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ನನ್ನ ತಾಲ್ಲೂಕಿನನಲ್ಲಿ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕೆಲವು ಸಣ್ಣ ಪುಟ್ಟ ಕೆರೆಗಳನ್ನು ನಮ್ಮ ತಾಲ್ಲೂಕಿನಲ್ಲಿ ಬಿಟ್ಟರೆ, ಬೇರೆ ನೀರಾವರಿ ಸೌಲಭ್ಯ ಇಲ್ಲವಾಗಿದೆ. ರೈತರುಗಳು ಮಳೆ ಇಲ್ಲದೆ ಹಾಗೂ ಸರಿಯಾದ ನೀರಾವರಿ ಯೋಜನೆಗಳು ಇಲ್ಲದೇ ಬಹಳ ಹಿಂದೆ ಉಳಿಸಿದ್ದಾರೆ. ವರ್ಲ್ಡ್ ಬ್ಯಾಂಕಿನ ಸಹಾಯನ್ನು ಪಡೆದು ಈ ಯೋಜನೆಯನ್ನು ಶೀಘ್ರಗತಿಯಿಂದ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಗ ಮುಕ್ತಾಯ ಮಾಡಿ.

ಶ್ರೀ ಕೆ. ಲಕ್ಕಪ್ಪ.—ಕೆರೆಗಳಲ್ಲಿ ನೀರನ್ನು ಹೇಗೆ ನೀರಗಂಟಿಯವರು ಸರಿಯಾದ ಪ್ರಮಾಣದಲ್ಲಿ ಬಿಡುತ್ತಾರೋ, ಹಾಗೆಯೇ ಈ ಯೋಜನೆಯಿಂದ ಬರುವ ನೀರನ್ನು ಸಹ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ನೀರಗಂಟಿಯವರನ್ನು ನೇಮಕ ಮಾಡಬಹುದು. ಈ ಯೋಜನೆಗಳು ಕಾರ್ಯಗತವಾಗದೇ ಇರುವುದರಿಂದ ತುಮಕೂರಿನ ಜಿಲ್ಲೆಯ ಎಲ್ಲ ರೈತರೂ ಸಹ ನೀರಿನ ಸೌಲಭ್ಯ ಇಲ್ಲದೆ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ರೈತರುಗಳಿಗೆ ನೀರಿನ ಸೌಲಭ್ಯವನ್ನು ಕೊಟ್ಟು, ವ್ಯವಸಾಯಕ್ಕೆ ಯಾವುದೇ ರೀತಿಯಲ್ಲಿ ಅನಾನುಕೂಲವಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನ್ನು ಕೆಲವಾರು ದೃಷ್ಟಿಯಲ್ಲಿ ಪೊಲೀಟಿಶಿಯನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಕರೆಯಬಹುದು. ಈ ಇಲಾಖೆಗೆ ಬಹಳ ಕೆಟ್ಟ ಹೆಸರು ಇದೆ. ಈ ಇಲಾಖೆಯಲ್ಲಿ ಸರಿಯಾಗಿ ಜನರಿಗೆ ಅನುಕೂಲವಾಗುವಂತಹ ಕೆಲಸವನ್ನು ಮಾಡಬೇಕು. ಆದರೆ ಈ ಇಲಾಖೆ ಆ ರೀತಿಯಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿಲ್ಲ ಎನ್ನುವ ವಿಷಯವನ್ನು ಯಾರೂ ಅಲ್ಲಗಳೆಯುತ್ತಿಲ್ಲ. ಈಗ ಮಂಡಿಸಿರತಕ್ಕಂಥ ಲೋಕೋಪಯೋಗಿ ಇಲಾಖೆಯ ಆಯವ್ಯಯ ಪಟ್ಟಿಯ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಮುಖ್ಯ ವಿಷಯವೆಂದರೆ, ರೂರಲ್ ಲ್ಯಾಂಡ್ ಲೆಸ್ ಗ್ಯಾರಂಟಿ ಸ್ಕೀಮ್‌ನಲ್ಲಿ ಹಣವನ್ನು ಈ ಇಲಾಖೆಯಲ್ಲಿ ಹೆಚ್ಚು ಇಡಬೇಕಾಗಿತ್ತು. ಆದರೆ ಈ ಸಾರಿಯ ಬಜೆಟ್‌ನಲ್ಲಿ ಒಂದು ಪೈಸೆಯೂ ಇಟ್ಟಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸರಿಯಾಗಿ ನೋಡಿ.

ಶ್ರೀ ಯು. ಭೂಪತಿ.—ನೋಡುತ್ತೇನೆ. (ಆಯವ್ಯಯ ಪಟ್ಟಿಯನ್ನು ಮತ್ತೆ ನೋಡಿ) ೧೯೮೩-೮೪ರಲ್ಲಿ ಲ್ಯಾಂಡ್ ಲೆಸ್ ಸ್ಕೀಮಿಗೆ ೪೦ ಲಕ್ಷವನ್ನು ಒದಗಿಸಲಾಗಿದೆ. ೧೯೮೪-೮೫ರಲ್ಲಿ ೮.೨ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ೧೯೮೫-೮೬ರಲ್ಲಿ ೮ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ೧೯೮೪-೮೫ರಲ್ಲಿ ಒದಗಿಸಿರುವ ಹಣಕ್ಕಿಂತ ಕಡಿಮೆ ಹಣವನ್ನು ೧೯೮೫-೮೬ರಲ್ಲಿ ಒದಗಿಸಿದ್ದಾರೆ. ಜಾಸ್ತಿ ಮಾಡಬೇಕಾಗಿತ್ತು. ಆದರೆ ಕಡಿಮೆ ಏಕೆ ಮಾಡಿದರು? ಇನ್ನು ರಸ್ತೆಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅದರ ಬಗ್ಗೆ ಈಗಾಗಲೇ ಬಹಳಷ್ಟು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮುಖ್ಯವಾಗಿ ತುಂಗಭದ್ರ ರಿಸರ್‌ವಾಯರ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ತುಂಗಭದ್ರ ಅಣೆಕಟ್ಟಿನಲ್ಲಿ ವರ್ಷೇ ವರ್ಷೇ ಹೆಚ್ಚು ಹೂಳು ತುಂಬಿಕೊಳ್ಳುತ್ತಿದೆ ಎಂದು ಚೀಫ್ ಇಂಜಿನೀಯರ್‌ರವರ ಒಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅಂದರೆ, ಪ್ರತಿ ವರ್ಷ ಎಷ್ಟು ಪ್ರಮಾಣದಲ್ಲಿ ಹೂಳು ತುಂಬಿಕೊಳ್ಳುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ನೀರು ಶೇಖರಣೆ ಆಗುವುದೂ ಕಡಿಮೆಯಾಗುತ್ತದೆ ಎಂದಾಯಿತು. ಈ ಹೂಳು ತೆಗೆಯುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಆ ಮೇಲೆ ವಿಶ್ವ ಬ್ಯಾಂಕ್ ನೆರವಿನಿಂದ ರಾಜ್ಯದಲ್ಲಿ ೧೬೦ ಯೋಜನೆಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ ನಾವು ೭೯ ಯೋಜನೆಗಳನ್ನು ಕೈಗೊಂಡಿದ್ದೇವೆ. ಈ ೭೯ ಯೋಜನೆಗಳಲ್ಲಿ ಒಂದು ಯೋಜನೆ ಮಾತ್ರ ಪೂರ್ಣಗೊಂಡಿದೆ. ಇನ್ನೂ ೭೮ ಯೋಜನೆಗಳು ಮುಗಿಯಬೇಕಾಗಿದೆ. ಉಳಿದ ೮೧ ಯೋಜನೆಗಳನ್ನು ಏಕೆ ಕೈಗೆತ್ತಿಕೊಳ್ಳಲಿಲ್ಲ ಎಂಬುದನ್ನೂ ತಿಳಿಯಬಯಸುತ್ತೇನೆ.

೪—೦೦ ಪಿ. ಎಂ.

ಇನ್ನು ನೀರಾವರಿ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಎಲ್ಲಾ ಇಲಾಖೆಗಳಲ್ಲಿ ಬರೆ ಹಣಕಾಸು ಮಾತ್ರ ಸೋರಿದರೆ, ನೀರಾವರಿ ಇಲಾಖೆಯಲ್ಲಿ ನೀರು ಮತ್ತು ಹಣಕಾಸು ಎರಡು ಸೋರಿ ಹೋಗುತ್ತಿದೆ. ಏಕೆ ಅಂದರೆ ಸೂಂಡೂರು ತಾಲೂಕಿನ ತೋರಣಗಲ್ಲು ಗ್ರಾಮದ ಪಕ್ಕದಲ್ಲಿರುವಂತಹ ತುಂಗಭದ್ರಾ ಹೈಲೆವೆಲ್ ಕ್ಯಾನಲ್ ಏನು ಇದೆ. ಅದು ಎರಡು-ಮೂರು ಬಾರಿ ಒಡೆದುಹೋಯಿತು. ಅದು ಒಡೆದುದರಿಂದ ಲಕ್ಷಾಂತರ ರೂಪಾಯಿಗಳ ನಷ್ಟ ಆಯಿತು. ಹೀಗೆ ಅದು ಏಕೆ ಒಡೆಯುತ್ತದೆ ಅಂದರೆ ಕಾಲುವೆಗಳನ್ನು ಕಟ್ಟುವಾಗ ಸುಭದ್ರವಾಗಿ ಕಟ್ಟದಿದ್ದರೆ, ಅವರಿಗೆ ಕೊಟ್ಟಂತಹ, ನಿಗದಿ ಮಾಡಿದಂತಹ ಹಣವನ್ನು ಸರಿಯಾಗಿ ಉಪಯೋಗಿಸದಿದ್ದರೆ, ಕಾಲುವೆಗಳು ಒಡೆಯುತ್ತವೆ. ಅದಕ್ಕೆ ಸರಿಯಾದಂತಹ ತಾಂತ್ರಿಕ ಸಲಹೆಗಳನ್ನು ತೆಗೆದುಕೊಂಡು ಸರಿಯಾಗಿ ಕಟ್ಟುವಂತಹ ವ್ಯವಸ್ಥೆಯನ್ನು ಮಾಡಬೇಕು. ಅದೇ ರೀತಿಯಾಗಿ ಕಾಲುವೆಗಳ ಸೈಫನ್‌ಗಳ ಮೇಲ್ಭಾಗದಲ್ಲಿ ತೂತಾಗಿ ಅಲ್ಲಿ ನೀರು ಹೊರಗಡೆ ಬಂದು ಸೋರುತ್ತಾ ಇದೆ. ಅದು ಅನಾವಶ್ಯಕವಾಗಿ ವೇಸ್ಟ್ ಆಗುತ್ತಾ ಇದೆ ಎನ್ನುವಂತಹ ಮಾತನ್ನು ನಾನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಈ ರೀತಿಯಾದಂತಹ ಕಳಪೆ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಒಳ್ಳೆಯ ರೀತಿಯಲ್ಲಿ ಇಲಾಖೆಯು ಕೆಲಸವನ್ನು ನಿರ್ವಹಿಸಬೇಕೆಂದು, ಈ ದಿಶೆಯಲ್ಲಿ ಮಾನ್ಯ ಸಚಿವರು ಗಮನಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಈ ಇಲಾಖೆಯ ಯಂತ್ರಗಳ ಬಗ್ಗೆ ಹೇಳುವುದಾದರೆ ಯಾವುದೇ ಜಿಲ್ಲೆಯ ಕಛೇರಿಗಳಲ್ಲಿ ಲಾರಿಗಳು, ಬುಲ್ಡೋಜರ್‌ಗಳು ಕೆಟ್ಟು ನಿಂತುದು ಕಾಣುತ್ತದೆ. ಅವುಗಳನ್ನು ಮೂಲೆಗೆ ಹಾಕಿರುತ್ತಾರೆ. ನಾನು ಬರಗಾಲ ಅಧ್ಯಯನ ತಂಡದ ಸದಸ್ಯನಾಗಿ ಬಿಜಾಪುರಕ್ಕೆ ಹೋದಾಗ ಅಲ್ಲಿಲ್ಲ ನೋಡಿದ್ದೇನೆ ಜಾಗವಿಲ್ಲದಷ್ಟು ಯಂತ್ರಗಳು ಕೆಟ್ಟು ನಿಂತುಹೋಗಿವೆ. ಅದೇ ರೀತಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ

ಹೀಗೆಯೇ ಪರಿಸ್ಥಿತಿ ಇದೆ. ಆದುದ ಇ ರಿಪೇರಿಗಾಗಿ ಸರಿಯಾಗಿ ಹಣವನ್ನು ಒದಗಿಸುತ್ತಿದ್ದಾರೋ ಅಥವಾ ಇಲ್ಲವೊ ಎ ನುಪ ನಮಗೆ ಬಂದಿದೆ. ಅಥವಾ ಒದಗಿಸಲ್ಪಟ್ಟ ಹಣದ ಉಪಯೋಗವನ್ನು ಅಧಿಕಾರಿ ವಗ ಬಳಸಿಕೊಳ್ಳುತ್ತಿಲ್ಲವೆ ಎಂಬ ಅನುಮಾನ ಇದೆ. ಇದರಿಂದ ಏನಾಗುತ್ತದೆ ಅಂದರೆ, ಉಪಕರಣಗಳನ್ನು ಬಾಡಿಗೆ ಪಡೆದು ಕೆಲಸವನ್ನು ಮಾಡತಕ್ಕಂತಹ ಪರಿಸ್ಥಿತಿಯು ಇಲಾಖೆಗೆ ತ್ತದೆ. ಇದನ್ನು ತಪ್ಪಿಸಬೇಕು. ಇದರ ಬಗ್ಗೆ ಮಾನ್ಯ ಸಚಿವರು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸೇತು ಬಂಧನ ವಿಚಾರದಲ್ಲಿ ಹೇಳುವುದಾದರೆ, ಅದಕ್ಕೆ ತಾವು ೭೫ ಲಕ್ಷ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ನಿಗದಿ ಮಾಡಿದ್ದೀರಿ. ಇದು ಬಹಳ ಮುಖ್ಯವಾದುದು. ಹಳ್ಳಿಗಾಡಿನಲ್ಲಿ ರಸ್ತೆ ಮಾಡಬೇಕಾಗಿದ್ದರೆ, ಅಲ್ಲಿ ಅಡ್ಡ ಬರತಕ್ಕಂತಹ ಹಳ್ಳಗಳಿಗೆ ಚಿಕ್ಕ ಚಿಕ್ಕ ಬ್ರಿಜ್‌ಗಳನ್ನು ಕಟ್ಟುವುದು ಅತ್ಯಾವಶ್ಯಕವಾಗಿರುತ್ತದೆ. ಆದಕಾರಣ ಈ ಸೇತು ಬಂಧನ ಕಾರ್ಯಕಾಗಿ ನಿಗದಿ ಮಾಡಿದ ಹಣಕಾಸು ಬಹಳ ಕಡಿಮೆಯಾಗಿದೆ, ಅದನ್ನು ಜಾಸ್ತಿ ಮಾಡಬೇಕು. ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮೂರು ಸಮಸ್ಯೆಗಳು ಇವೆ. ಬಹಳ ದಿನಗಳಿಂದ ಕೇಳುತ್ತಾ ಇದ್ದೇನೆ. ಆದರೆ ಅದಕ್ಕೆ ಪರಿಹಾರ ಸಿಗುತ್ತಾ ಇಲ್ಲ. ಬಾಗಲಕೋಟೆಯಲ್ಲಿನ ರಿಹೆಬಿಲಿಟೇಶನ್ ಯಾವ ರೀತಿಯಲ್ಲಿ ಇದೆಯೋ ಹಾಗೆಯೇ ನನ್ನ ಕ್ಷೇತ್ರದ ಸೊಂಡೂರು ತಾಲೂಕಿನ ಮಾದಾಪುರ ಗ್ರಾಮದಲ್ಲಿ ಅಲ್ಲಿ ಸುಮಾರು ೪೫೦—೫೦೦ ಕುಟುಂಬಗಳು ವಾಸ ಮಾಡುತ್ತಿವೆ. ಅಲ್ಲಿಗೆ ಬಳ್ಳಾರಿ ಜಿಲ್ಲೆಯ ದರೋಜಿ ಕೆರೆಯಿಂದ ಆಯಕಟ್ಟಿನ ಪ್ರದೇಶಗಳಲ್ಲಿ ಬರತಕ್ಕಂತಹ ನೀರಾವರಿ ಪ್ರದೇಶದ ಮಧ್ಯದಲ್ಲಿ ಆ ಊರು ಬರುತ್ತದೆ. ಅಲ್ಲಿ ಸೀಪೇಜ್ ವಾಟರ್ ಬಂದು ಆ ಊರಿನ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ಆಗುವುದು ನಿಂತು ಹೋಗಿದೆ. ಅಲ್ಲಿಯುವರಿಗೆ ಪುನರ್‌ವಸತಿ ಕಲ್ಪಿಸಿ ಅಂದರೆ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ, ನಾವು ೨೦ ಲಕ್ಷ ರೂಪಾಯಿಗಳ ನಿಗದಿಯನ್ನು ಅದಕ್ಕೆ ಮಾಡಿದ್ದೇನೆ, ರಿವೈಸ್ ಎಸ್ಟಿಮೇಟ್ ಮಾಡುತ್ತಾ ಇದ್ದೇವೆ, ಅದು ಸರಕಾರದ ಪರಿಶೀಲನೆಯಲ್ಲಿದೆ ಎಂದು ಹಲವಾರು ಬಾರಿ ಹೇಳಿದ್ದಾರೆ. ಆದರೆ ಅದನ್ನು ಯಾವಾಗ ಮಾಡುತ್ತೀರಿ ಎಂದು ನಿರ್ದಿಷ್ಟಪಡಿಸಿಕೊಳ್ಳಲು ತಮ್ಮನ್ನು ಒತ್ತಿ ಕೇಳಬೇಕಾಗುತ್ತದೆ. ಏಕೆಂದರೆ ಅಲ್ಲಿನ ಜನ ಲೋಕಸಭೆಯ ಚುನಾವಣೆಯನ್ನು ಕೂಡ ಬಹಿಷ್ಕರಿಸಿದ್ದಾರೆ. ಅವರು ಯಾರಿಗೂ ಓಟು ಹಾಕಲಿಲ್ಲ. ನಮ್ಮ ಊರು ಸ್ಥಳಾಂತರ ಆಗುವವರೆಗೆ ಓಟು ಹಾಕುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಒಂದು ಸ್ಥಳವನ್ನು ಕೂಡ ಆಕ್ರಮಿಸಿಕೊಂಡದ್ದು ಆಗಿದೆ. ಆದರೆ ಆ ಕಾರ್ಯ ಸ್ಥಗಿತವಾಗಿದೆ ಎಂಬ ಅನುಮಾನ ಬರುತ್ತಾ ಇದೆ. ಅದೇ ರೀತಿಯಲ್ಲಿ ನನ್ನ ಕ್ಷೇತ್ರದ ಕುರೇಕೊಪ್ಪ ಗ್ರಾಮದ ರೈತರು ತುಂಗಭದ್ರ ರಿಸರ್ವಾಯರ್‌ನಿಂದ ಬರತಕ್ಕಂತಹ ಎಚ್‌ಎಲ್‌ಜಿ ಕಾಲುವೆಯಿಂದ ನೀರು ಬೇಕೆಂದು ೧೫ ವರ್ಷಗಳಿಂದ ಹೋರಾಟ ಮಾಡುತ್ತಾ ಇದ್ದಾರೆ. ಈ ಮಾತನ್ನು ನಾನು ಸರಕಾರದ ಗಮನಕ್ಕೆ ತಂದಿದ್ದೇನೆ. ಇಲಾಖೆಯವರು ಬರಗಾಲದ ಬವಣೆಯನ್ನು ತಾಳಲಾರದೆ, ಮತ್ತು ಮಳೆಯು ವಿಫಲವಾದುದರಿಂದ ಕಾಲುವೆಯನ್ನು ಒಡೆಯುತಕ್ಕಂತಹ ಮಟ್ಟಕ್ಕೆ ಹೋದರು ಆಗ ಎಲ್ಲರೂ ಸೇರಿಕೊಂಡು ಅದನ್ನು ನಿಲ್ಲಿಸಿದ್ದಾಯಿತು. ಅಧಿಕಾರಿಗಳು ಆ ಸಂದರ್ಭದಲ್ಲಿ ಒಂದು ಭರವಸೆಯನ್ನು ಜನರಿಗೆ ಕೊಡಬೇಕಾಗಿ ಬಂತು. ಆ ಜನರು ಬರೆ ೭ ಕ್ಯೂಸೆಕ್ಸ್ ನೀರನ್ನು ಕೇಳುತ್ತಾ ಇದ್ದಾರೆ. ೬೦೦ ಎಕರೆ ಜಮೀನು ನೀರಾವರಿ ಆಗತಕ್ಕಂತಹ ಪರಿಸ್ಥಿತಿ ಅಲ್ಲಿ ಇದೆ. ದಯಮಾಡಿ ಮಾನ್ಯ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಆ ಜನತೆಗೆ ಉಪಕಾರವಾಡಜೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರ ೯೯ ಪರ್ಸೆಂಟ್ ಬಯಲು ಸೀಮೆಯ ಪ್ರದೇಶ. ಮಳೆಯ ಆಧಾರದ ಮೇಲೆ ಇರುವವರು. ಅಲ್ಲಿ ಅಂಡರ್‌ಗ್ರೌಂಡ್ ವಾಟರ್ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯತೆ ಇದೆ. ಆದರೆ ಅಲ್ಲಿ ಸೂಕ್ತವಾದ ಸೈಟ್ ಸಿಗುತ್ತಾ ಇಲ್ಲ ಎಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದು ಸರಿಯಲ್ಲ. ಮತ್ತೊಮ್ಮೆ ಸರ್ವೆ ಮಾಡಿಸಬೇಕು. ಅಲ್ಲಿ ಸಾಕಷ್ಟು ಅಂಡರ್‌ಗ್ರೌಂಡ್ ವಾಟರ್ ಸಿಗುವುದರಿಂದ ಈ ನಿಟ್ಟಿನಲ್ಲಿ ತಾವುಗಳು ಕಾರ್ಯಪ್ರವೃತ್ತರಾಗುವಂತೆ ಇಲಾಖೆಗೆ ಆದೇಶ ನೀಡಬೇಕು. ಇದು ಹಿಂದುಳಿದ ಮತ್ತು ಬರಗಾಲ ಪೀಡಿತ ಪ್ರದೇಶವಾದ ಕಾರಣ, ಅಲ್ಲಿಯ ಅಭಿವೃದ್ಧಿಗೆ ತಾವುಗಳು ವಿಶೇಷ ಗಮನವನ್ನು ಕೊಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಸಮಯಾವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯ ಆಯಿತು. ಮಾನ್ಯ ಮಂತ್ರಿಗಳವರಿಂದ ಉತ್ತರ ಸೋಮವಾರ ದಿವಸ. ಸಭೆಯನ್ನು ಸೋಮವಾರ ಬೆಳಿಗ್ಗೆ ೧೦ ಘಂಟೆಗೆ ಮುಂದೂಡಲಾಗಿದೆ.

(ಸಭೆಯು ೪-೨೦ ಗಂಟೆ ೧೦ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೩ನೇ ಮಾರ್ಚ್ ೧೯೮೬ರ ಸೋಮವಾರ ಬೆಳಿಗ್ಗೆ ೧೦ ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)

W, D. 3681